ಕಸ್ತೂರಿ

ಮೇ 1990 ರೂ. 3-00




ಇತರ ಎಲ್ಲಾ ಡೈಗಳನ್ನು
ಒಟ್ಟು ಬಳಸುವ ಜನಕ್ಕಿಂತ ಅಧಿಕ ಜನರು
ಗೋದ್ರೆಜ್ ಹೇರ್ ಡೈ ಬಳಸುತ್ತಿದ್ದಾರೆ
ಇಲ್ಲಿವೆ ಮೂರು ಕಾರಣಗಳು.
1 ತಂತಾನೆ-ಹರಡುವ ಗೋದ್ರೆಜ್ ಹೇರ್ ಡೈ ಕೂದಲಿಗೆ ಸ್ವಾಭಾವಿಕ ಬಣ್ಣವನ್ನು ಹಾಗೂ ನೋಟವನ್ನು ನೀಡುತ್ತದೆ. ಅದರಲ್ಲಿರುವ 'ಬಿಲ್ಟಿನ್ ಕಂಡಿಶನರ್' ಕೂದಲನ್ನು ಮೃದುವಾಗಿ ಹಾಗೂ ನಿಮಗೆ ಒಪ್ಪುವಂತೆ ಇಡುತ್ತದೆ. ನಿಜವಾಗಿಯೂ, ನೀವು ಹೇಳದಿದ್ದರೆ ಇತರರಿಗೆ ತಿಳಿಯುವುದಿಲ್ಲ.
2 ತಂತಾನೆ-ಹರಡುವ ಗೋದ್ರೆಜ್ ಹೇರ್ ಡೈ ಬಳಸಲು ಸುಲಭವಾಗಿದೆ ಹಾಗೂ ಅನುಕೂಲವಾಗಿದೆ. ಇತರ ಹೇರ್ ಡೈಗಳಂತೆ ಇಲ್ಲ. ಅಹುದು, ಇದು ಕೂದಲನ್ನು ಶಾಂಪೂಗೊಳಿಸುವಷ್ಟೇ ಸುಲಭ.
3 ತಂತಾನೆ-ಹರಡುವ ಗೋದ್ರೆಜ್ ಹೇರ್ ಡೈಯು ಉತ್ತಮ ಗುಣದ ಬಗ್ಗೆ ನೀವು ನಿಶ್ಚಿಂತರಾಗಿರಬಹುದು. ಕಾರಣ ನಿಮ್ಮ ಕೂದಲು ಹಾಗೂ ತ್ವಚೆಯ ರಕ್ಷಣೆಗಾಗಿ ಇದನ್ನು ವಿಶೇಷವಾಗಿ ಸೂತ್ರೀಕರಿಸಲಾಗಿದೆ. ಸಂಪೂರ್ಣ ಸುರಕ್ಷೆ - ಅದುವೇ ಗೋದ್ರೆಜ್ ವಾಗ್ದಾನ.
Godrej
SELF-SPREADING PERMANENT HAIR DYE
Natural Black
Just shampoo it in
Godrej
SELF-SPREADING PERMANENT HAIR DYE
DARK BROWN
Just shampoo it in
ಗೋದ್ರೆಜ್® ತಂತಾನೆ ಹರಡುವ ಪರ್ಮನೆಂಟ್ ಹೇರ್ ಡೈ
2 ಸ್ವಾಭಾವಿಕ ಬಣ್ಣಗಳಲ್ಲಿ ಲಭ್ಯ -
ನ್ಯಾಚುರಲ್ ಬ್ಲ್ಯಾಕ್ ಹಾಗೂ ಡಾರ್ಕ್ ಬ್ರೌನ್.

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ: 34

ಸಂಚಿಕೆ: 9

ಮೇ 1990

●

ವ್ಯವಸ್ಥಾಪಕ ಸಂಪಾದಕ:
ಕೆ.ಶಾಮರಾವ್

ಸಂಪಾದಕ:
ಆರ್.ಎ.ಉಪಾಧ್ಯ

●

ಮುಖಪುಟ:
ಸಿದ್ಧತೆ

ವರ್ಣಪಾರದರ್ಶಿಕೆ:
ದೇಬಜಾನಿ ಬ್ಯಾನರ್ಜಿ

●

ಕಸ್ತೂರಿ ಕಾರ್ಯಾಲಯ
ಕೊಪ್ಪೀಕರ ರಸ್ತೆ
ಹುಬ್ಬಳ್ಳಿ-580020

ಬೆಳಕಿಂಡಿ

★ ಪ್ರತಿಯೊಂದು ಮಗು ಹುಟ್ಟುವಾಗ ಪರಮಾತ್ಮ ಇನ್ನೂ ಮನುಷ್ಯ ಕುಲದ ಬಗ್ಗೆ ನಿರಾಶನಾಗಿಲ್ಲ ಎಂಬ ಸಂದೇಶ ತರುತ್ತದೆ.
- ಗುರುದೇವ ಠಾಕೂರ್

★ ಉದ್ಯೋಗದ ಪ್ರತ್ಯಕ್ಷ ಮಹಿಮೆಯನ್ನು ತಿಳಿಯಬಯಸುವಿಯಾದರೆ ಬಿದಿಗೆಯ ಚಂದ್ರನನ್ನು ನೋಡು, ನಿರಂತರ ಕಷ್ಟಪಡುತ್ತ ಅವನು ಹುಣ್ಣಿಮೆಯ ಪೂರ್ಣ ಚಂದ್ರನಾಗಿ ಬಿಡುವನು.
- ಮಣಿಮುಕ್ತದಿಂದ

★ ಒಬ್ಬ ಅಯೋಗ್ಯ ಉಮೇದುವಾರನನ್ನು ಚುನಾವಣೆಗೆ ನಿಲ್ಲಿಸಿ ಅದರಿಂದ ಜಯ ಪಡೆದರೆ ಏನೂ ಲಾಭವಿಲ್ಲ
- ನೆಹರೂ

★ ಎಷ್ಟೋ ರಾಜಕಾರಣಿಗಳು ಮಾಡುವ ದೊಡ್ಡ ತಪ್ಪೆಂದರೆ, ತಾವು ಜನರಿಂದ ನೇಮಕ ಹೊಂದಿದವರೆಂಬುದನ್ನು ಮರೆತು ದೇವರಿಂದ ನೇಮಕ ಹೊಂದಿದವರೆಂದು ಭಾವಿಸುವುದೇ ಆಗಿದೆ.
- ಶ್ರೀಮತಿ ಕಾಡ್ ಪೆಪರ್

★ ನರಕಕ್ಕೆ ಸದುದ್ದೇಶಗಳ ನೆಲಗಟ್ಟು ಇದೆ. ಮತ್ತು ಕಳೆದು ಹೋದ ಅವಕಾಶಗಳ ಚಪ್ಪರ ಇದೆ. - ಇಂಗ್ಲೀಷ್ ಗಾದೆ

ಚಂದಾ ದರಗಳು

ಬಿಡಿ ಸಂಚಿಕೆ	...	3=00
1 ವರ್ಷಕ್ಕೆ	ಅಂಚೆ ಸೇರಿ	34=00
2 ವರ್ಷಕ್ಕೆ	...	65=00
3 ವರ್ಷಕ್ಕೆ	...	100=00

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ 1ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳ 5ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಸಹಚಿಂತನ

'ಕ್ಷಣ'ದ ಮೂಲವೆಲ್ಲಿ?

ಕರಿಗಿರಿ ನರಸಿಂಹಮೂರ್ತಿಯವರು ತಮ್ಮ 'ಹಿಂದೂ ಕಾಲಗಣನ ಪದ್ಧತಿ' (ಕಸ್ತೂರಿ, ಎಪ್ರಿಲ್ 90) ಲೇಖನದಲ್ಲಿ ವಿವರಿಸಿದ್ದನ್ನು ಓದುತ್ತಿದ್ದಂತೆಯೇ ತುಂಬ ದಿನಗಳಿಂದ ನನ್ನ ಮನಸ್ಸಿನಲ್ಲಿ ಸುಳಿದಾಡುತ್ತಿದ್ದ 'ಕ್ಷಣ' ನನ್ನನ್ನು ಮತ್ತೊಮ್ಮೆ ಕಾಡತೊಡಗಿತು.

ಲೇಖಕರು ತಿಳಿಸುವಂತೆ 'ಕ್ಷಣ' ಸೆಕೆಂಡಿಗಿಂತಲೂ ತುಂಬ ಚಿಕ್ಕದು. (ಇದಕ್ಕೂ ಚಿಕ್ಕದಾದ 'ತ್ರುಟಿ'ಯ ಪರಿಮಾಣ -1/33,751 ಎಂದು ಓದಿದ್ದುಂಟು.) ಆದರೆ ಈ 'ಕ್ಷಣ'ದ ಮೂಲವೆಲ್ಲಿ? ಅಮರಕೋಶದಲ್ಲಿ ಕ್ಷಣದ ವಿವರಣೆಯಿದೆಯಾದರೂ ಅದು ಈ 'ಪುಟ್ಟ ಕ್ಷಣ'ವಲ್ಲ. 30 ಕಲೆ= 1 ಕ್ಷಣ ಎಂದು ಅಮರಕಾರನ ವಿವರಣೆ. ಅಮರಕೋಶದಲ್ಲಿ ''ಅಷ್ಟಾದಶ ನಿಮೇಷಾಸ್ತು ಕಾಷ್ಠಾ...'' ಎಂದು ಕಾಲಗಣನೆಯನ್ನು ಆರಂಭಿಸಿದ್ದು ಅದರ ಹಿಂದಿನ ಭಾಗದ ಬಗ್ಗೆ ಪ್ರಸ್ತಾಪವಿಲ್ಲ.

ವಿದ್ವಾನ್ ಎನ್.ರಂಗನಾಥ ಶರ್ಮರು 'ಅಮರಕೋಶ ವ್ಯಾಖ್ಯಾನ' (ಕಾವ್ಯಾಲಯ ಪ್ರಕಾಶನ, ಮೈಸೂರು)ದ ಪರಿಶಿಷ್ಟದಲ್ಲಿ ಚಿಕ್ಕ ಕ್ಷಣವನ್ನು ಉಲ್ಲೇಖಿಸಿ (ಕ್ಷಣ=1/270 ಸೆಕೆಂಡು) ಕ್ಷಣ ಶಬ್ದವು ಎರಡು ಬಗೆಯ ಕಾಲಪ್ರಮಾಣವನ್ನು ಸೂಚಿಸುತ್ತದೆ'' ಎಂದು ಅಡಿ ಟಿಪ್ಪಣಿ ಬರೆದಿರುತ್ತಾರೆ. ಆದರೆ ಇಲ್ಲೂ ಈ ಚಿಕ್ಕ ಕ್ಷಣದ ಮೂಲದ ಪ್ರಸ್ತಾಪವಿಲ್ಲ. ಉಳಿದ ಕೋಶಗಳಲ್ಲೂ ಇದೇ ಪರಿಸ್ಥಿತಿ.

ರಂಗನಾಥ ಶರ್ಮರ ಕಾಲಗಣನೆಯ ಪಟ್ಟಿ ಇಂತಿದೆ-

1 ಕ್ಷಣ =1/270 ಸೆಕೆಂಡ್
2 ಕ್ಷಣ= 1 ಲವ (1/135 ಸೆಕೆಂಡ್)
2 ಲವ = 1 ನಿಮೇಷ (2/135 ಸೆಕೆಂಡ್)
18 ನಿಮೇಷ = 1 ಕಾಷ್ಠಾ (4/15 ಸೆಕೆಂಡ್)
30 ಕಾಷ್ಠಾ = 1 ಕಲಾ (8 ಸೆಕೆಂಡ್)
30 ಕಲಾ = 1 ಕ್ಷಣ (240 ಸೆಕೆಂಡ್-4 ನಿಮಿಷ)

ಮುಂದುವರಿದ ಈ ಪಟ್ಟಿಯಲ್ಲಿ ಕರಿಗಿರಿ ನರಸಿಂಹಮೂರ್ತಿಯವರು ಲೇಖನದಲ್ಲಿ ವಿವರಿಸಿದ ವಿಘಳಿಗೆ -ಘಳಿಗೆ -(ಘಟಿಕಾ-ವಿಘಟಿಕಾ)ಗಳು ಸೇರುವುದಿಲ್ಲ.

ಅಲ್ಲದೇ ನರಸಿಂಹಮೂರ್ತಿಯವರು ಸೂಚಿಸುವ 'ಕ್ಷಣ'ಕ್ಕಿಂತಲೂ ರಂಗನಾಥ ಶರ್ಮರು ಪರಿಶಿಷ್ಟದಲ್ಲಿ ಸೂಚಿಸಿದ ಕ್ಷಣ ತುಂಬ ಚಿಕ್ಕದು.

ಹಾಗಾದರೆ ಈ ಪುಟ್ಟ ಕ್ಷಣದ ಮೂಲವೆಲ್ಲಿ? ತಿಳಿದವರು ವಿವರಿಸಿದರೆ ಉಪಕಾರವಾದೀತು.

ಬೆಂಗಳೂರು **ಜನಾರ್ದನ ದೇಪದಕೇರಿ**

★

ಕರಿಗಿರಿ ನರಸಿಂಹಮೂರ್ತಿಯವರು 'ಹಿಂದೂ ಕಾಲಗಣನ ಪದ್ಧತಿ'ಯನ್ನು ವಿವರಿಸುತ್ತ, ''ಕ್ಷಣವೆಂದರೆ ಕಣ್ಣು ರೆಪ್ಪೆ ಮುಚ್ಚಿ ತೆರೆಯುವಷ್ಟು ಕಾಲ, ಅಂದರೆ ಒಂದು ಸೆಕೆಂಡ್,'' ಎಂದು ಬರೆಯುತ್ತಾರೆ. ಹಾಗಾದರೆ ನಿಮಿಷವೆಂದರೇನು? ಕಣ್ಣುರೆಪ್ಪೆಯನ್ನು ಮುಚ್ಚಿ ತೆರೆಯುವ ಕ್ರಿಯೆ ಮತ್ತು ಅದಕ್ಕೆ ತಗಲುವ ಕಾಲ. (ದೇವತೆಗಳು ಅನಿಮಿಷರು ಅಥವಾ ಅನಿಮೇಷರು. ಅಂದರೆ ನಮ್ಮಂತೆ ಕಣ್ಣು ಮುಚ್ಚಿ ತೆರೆಯುವ ಅಭ್ಯಾಸ ಅಥವಾ ಅವಶ್ಯಕತೆಯಿಲ್ಲದವರು.)

ಈ ಭಾರತೀಯ ಕಾಲಮಾನ (ಕ್ಷಣ ಮತ್ತು

ನಿಮಿಷ)ಗಳಿಗಾಗಿ ಕೋಶಗಳನ್ನು ತಿರುವಿದರೆ ಒಂದೊಂದು ಬೇರೆ ಬೇರೆಯ ವಿವರಗಳನ್ನು ಹೇಳುತ್ತವೆ ಆದರೆ ಯಾವ ವಿವರದಲ್ಲೂ ಸರಿಯಾದ ಉತ್ತರ ಸಿಗುವುದಿಲ್ಲ.

ಒಂದು ಪಲ= 24 ಸೆಕೆಂಡುಗಳಿಗೆ ಸಮನಾದ ಕಾಲ.

ಒಂದು ನಿಮಿಷ= 1/4 ಪಲ (ಆರು ಸೆಕೆಂಡುಗಳಿಗೆ ಸಮನಾದ ಕಾಲ); ಒಂದು ಗಂಟೆ 1/60 ಭಾಗ; ಪಲ; ಕ್ಷಣ.

ಒಂದು ಕ್ಷಣ= 4/5 ಸೆಕೆಂಡಿಗೆ ಸಮಾನವಾದ ಕಾಲಮಾನ; 4 ನಿಮಿಷಗಳ ಕಾಲ; ಪಲದ 1/4 ಭಾಗ, 1/5 ಸೆಕೆಂಡು.

- ಹೀಗೆ ಒಬ್ಬೊಬ್ಬ ಕೋಶಕಾರನೂ ಒಂದೊಂದು ರೀತಿಯಲ್ಲಿ ಹೇಳುತ್ತಾನೆ.

ಸಂಖ್ಯಾಶಾಸ್ತ್ರದಲ್ಲಿಯೂ ಈ ರೀತಿಯ ಗೊಂದಲವಿದೆ. ವಿವಿಧ ಹೆಸರುಗಳಿಗೆ ವಿವಿಧ ವ್ಯಕ್ತಿಗಳು ಒಂದಕ್ಕೊಂದು ಹೊಂದಿಕೆಯಾಗದ ವಿವಿಧ ಸ್ಥಾನಗಳನ್ನು ಸೂಚಿಸಿರುವುದರ ಕುರಿತು ಹಿಂದೊಮ್ಮೆ ಇದೇ ಅಂಕಣದಲ್ಲಿ ಬಂದಿತ್ತು. ಆದರೆ ಈ ಗೊಂದಲವನ್ನು ಯಾವ ಪರಿಣತರೂ ಹೋಗಲಾಡಿಸುವ ಶ್ರಮವನ್ನು ತೆಗೆದುಕೊಳ್ಳಲಿಲ್ಲವೆನ್ನುವುದು ದುರದೃಷ್ಟ.

'ಹಿಂದೂ ಕಾಲಗಣನ ಪದ್ಧತಿ'ಯಲ್ಲಿರುವ ಗೊಂದಲವೂ ಹೀಗೆಯೇ ಪರಿಣತರ ಅವಜ್ಞೆಗೆ ಗುರಿಯಾಗಬಹುದು; ತಿಳಿದುಕೊಳ್ಳಬೇಕೆಂಬ ಆಸೆಯಿರುವ ನನ್ನಂಥವರಿಗೆ ನಿರಾಶೆಯೇ ಕಾದಿರಬಹುದು.

ಮಂಗಳೂರು **ಬಿ.ಎನ್.ಜೋಶಿ**

ವ್ಯಗ್ರ?

'ಕಸ್ತೂರಿ' ಫೆಬ್ರವರಿ 90ರ 'ನಿಮ್ಮ ಶಬ್ದ ಭಾಂಡಾರ ಬೆಳೆಯಲಿ'ದಲ್ಲಿ 'ವ್ಯಗ್ರ' ಎಂಬ ಶಬ್ದಕ್ಕೆ ಮಗ್ನ, ಒಂದು ವಿಷಯದಲ್ಲಿ ಪೂರ್ಣ ಮನಸ್ಸು ತೊಡಗಿಸಿದ, ಆಸಕ್ತ, ತಲ್ಲೀನ ಎಂದು ಅರ್ಥ ಕೊಟ್ಟು ಉದಾಹರಣೆಯಾಗಿ ವ್ಯಗ್ರ ಚಿತ್ತ ಎಂದು ವಿವರಿಸಲಾಗಿದೆ. ಆದರೆ ಆ ಅರ್ಥ ಸರಿಯಲ್ಲ. ವ್ಯಗ್ರ ಎಂದರೆ ದ್ವಂದ್ವ, ತುಮುಲಗಳಿಂದ ಅಶಾಂತನಾದ, ವ್ಯಗ್ರಚಿತ್ತನೆಂದರೆ ಅಸಹನೆಯಿಂದ ಗಲಿಬಿಲಿಗೊಂಡ, ಸರಿಯಾದ ನಿರ್ಣಯಕ್ಕೆ ಬರಲಾಗದ ಸ್ಥಿತಿ ಎನ್ನುವುದು ಸರಿಯಾದ ಅರ್ಥ ಅಲ್ಲವೆ?

ವ್ಯಗ್ರ- ಗಾಬರಿಯಾದ, ಕಳವಳಗೊಂಡ.

ವ್ಯಗ್ರತೆ- ಕ್ಷೋಭೆ, ತಳಮಳ (ಕನ್ನಡ ರತ್ನಕೋಶ)

ಕುಂದಾಪುರ **ವಿ.ರಮಾಕಾರಂತ**

ಕಠೋರ ವಜ್ರ

ಆಫ್ರಿಕಾ ವಜ್ರಗಳ ಗಣಿ. ನೆಲ್ಸನ್ ಮಂಡೇಲನಂಥ ಶ್ರೇಷ್ಠ ವಜ್ರಗಳು ದೊರೆತ ಈ ನಾಡಿನಲ್ಲಿ, ಮಾನವೀಯತೆಯನ್ನು ಚೂರು ಚೂರು ಮಾಡುವ ಹರಿತವಾದ ಕಠೋರ ವಜ್ರ, ಕ್ರೂರಿ ಜೀನ್ ಬೇಡಲ್ ಬೊಕಾಸಾನಂಥವರೂ ಇದ್ದಾರೆಂದು ಓದಿ ಎದೆ ನಡುಗಿತು.

ಸರ್ವಾಧಿಕಾರವೇ ಸಾಕ್ಷಾತ್ಕಾರ ಎನ್ನುವ ಹೆಗ್ಗಣಗಳ ಬದುಕು ಅಂತಿಮದಲ್ಲಿ ಹೀನ ಎನ್ನುವುದಕ್ಕೆ ಸಾಕ್ಷಿಯಂತಿದೆ ಟಿ.ಎಂ.ಸುಬ್ಬರಾಯರ ಲೇಖನ. (ಕಸ್ತೂರಿ, ಏಪ್ರಿಲ್ 90).

ಹನಸವಾಡಿ **ಪಾರ್ವತಿ ರಂಜನ**

ವಿಳಾಸವಿದ್ದರೆ...

ಸುಮಾರು 25 ವರ್ಷಗಳ ಹಿಂದೆ ಎಂದು ನೆನಪು. ಶ್ರೀ ಹೊಸಬಾಳೆ ಸೀತಾರಾಮರಾಯರ ಗಮಕದ ಒಂದು ತುಣುಕನ್ನು ಬೆಂಗಳೂರಿನ ಹವ್ಯಕ ಸಮಾಜದ ವಾರ್ಷಿಕ ಸಭೆಯಲ್ಲಿ ಕೇಳಿದ್ದೆ. ಇಂಥ ಎಲೆ ಮರೆಯ ಕಾಯಿಯಂಥ ಪ್ರತಿಭೆಯನ್ನು ಮೋಹನ ಹೆಗಡೆ, ಬಂಡಗದ್ದೆಯವರು ಪರಿಚಯಿಸಿದಾಗ (ಕಸ್ತೂರಿ, ಮಾರ್ಚ್ 90) ಸಂತಸವಾಯಿತು.

ಒಂದು ಸಲಹೆ: ಇಂಥ ಗಮಕಿಗಳ ವಿಳಾಸವನ್ನು ಲೇಖನದ ಕೊನೆಯಲ್ಲಿ ಕೊಟ್ಟರೆ ಅವರನ್ನು ಸಂಪರ್ಕಿಸುವವರಿಗೆ, ಅವರ ಧ್ವನಿ ಸುರುಳಿಗಳನ್ನು ಪಡೆಯಬಯಸುವವರಿಗೆ ಅನುಕೂಲ ಅಲ್ಲವೆ?

ಸಂಪಾಜೆ (ದ.ಕ.) **ಎಸ್.ರಾಮಭಟ್ಟ**

ಗುಪ್ತ ನಿಧಿ

ಸುಮಾರು 31 ವರ್ಷಗಳ ನಂತರ ಮತ್ತೆ ಪ್ರಕಟಿಸಿರುವ 'ಸರ್ಪಗಾವಲಿನ ಗುಪ್ತನಿಧಿ' (ಕಸ್ತೂರಿ, ಏಪ್ರಿಲ್ 90) ತುಂಬ ರೋಮಾಂಚಕಾರಿ.

ಆದರೆ ಕಳೆದ ಮೂರು ದಶಕಗಳಲ್ಲಿ ಈ ನಿಧಿಯ ಗತಿಯೇನಾಗಿದೆಯೋ?

ವಿಜಾಪುರ **ಎಸ್.ಪಿ.ಮುರುಡಿ**

ಈ ಸಂಚಿಕೆಯಲ್ಲಿ

ಸಾರ್ಥಕ ಜೀವನ

ಜಿ.ವಿ.ಪ್ರಭು

ಒಂಭತ್ತು ವರ್ಷದ ಪುಟ್ಟ ಬಾಲಕ ಆ ಊರಿನ ಹಾದಿ-ಬೀದಿ, ಗಲ್ಲಿಗಲ್ಲಿಗಳಲ್ಲಿ ಸುತ್ತುತ್ತಾ ಸಾಗುತ್ತಿದ್ದ. ಒಂದು ನಿರ್ದಿಷ್ಟ ಗಲ್ಲಿಯಲ್ಲಿ ಆ ಬಾಲಕ ಸಾಗುವಾಗ ಎರಡಂತಸ್ತಿನ ಮನೆಯ ಬಾಲ್ಕನಿಯಲ್ಲಿ ನಿಂತ ಮಹಿಳೆಯೊಬ್ಬಳು ತನ್ನ ಮನೆಯ ಕಸವನ್ನೆಲ್ಲಾ ಗುಡಿಸಿ ತಂದು ಆ ಬಾಲಕನ ತಲೆಯ ಮೇಲೆ ಅಲ್ಲಿಂದಲೇ ಸುರಿದು ಖುಷಿ ಪಡುತ್ತಾ ಒಳಕ್ಕೆ ಹೋಗುತ್ತಿದ್ದಳು. ಆ ಬಾಲಕನಿಗೆ ಆ ಮಹಿಳೆ ನಿತ್ಯವೂ ತನ್ನ ತಲೆಯ ಮೇಲೆ ಕಸ ಸುರಿಯುತ್ತಿದ್ದಾಳೆಂದು ತಿಳಿದಿದ್ದರೂ ಉದ್ದೇಶಪೂರ್ವಕವಾಗಿಯೇ ಆ ಹಾದಿಯ ಮೂಲಕವಾಗಿ ಆ ಮನೆಯ ಮುಂದೆಯೇ ಸಾಗಿ ಬರುತ್ತಿದ್ದ. ಇದೇ ರೀತಿ ಬಹಳ ದಿನಗಳವರೆಗೆ ಸಾಗಿತು.

ಒಂದು ದಿನ ಆ ಬಾಲಕ ಆ ಮನೆಯ ಮುಂದೆ ಬಂದು ನಿಂತು, ತುಸು ಸಮಯ ಕಾದು ನೋಡಿದ. ಕಸವೂ ತನ್ನ ಮೇಲೆ ಬೀಳಲಿಲ್ಲ, ಆ ಮಹಿಳೆಯ ದರ್ಶನವೂ ಆಗಲಿಲ್ಲ. ಸರಿ!.... ಬಾಲಕ ಮುಂದಕ್ಕೆ ಸಾಗಿದ.

ಮಾರನೆಯ ದಿನವೂ ಆ ಬಾಲಕ ಮನೆಯ ಮುಂದೆ ಬಂದು ನಿಂತ. ಕುತ್ತಿಗೆಯನ್ನು ಮೇಲಕ್ಕೆ ಮಾಡಿದ. ಮಹಿಳೆಯೂ ಕಾಣಲಿಲ್ಲ. ಕಸವೂ ಬೀಳಲಿಲ್ಲ! ಬಾಲಕ ಚಿಂತಾಕ್ರಾಂತನಾದ. "ಈ ಮಹಿಳೆಗೇನಾಗಿದೆ!? ನನ್ನ ಮೇಲೆ ಕಸವನ್ನೇಕೆ ಸುರಿಯುತ್ತಿಲ್ಲ!?" ಎಂದು ಆ ಮಹಿಳೆಯನ್ನು ಹುಡುಕುತ್ತಾ ಮನೆಯ ಮಹಡಿಗೆ ಹೊರಟ. ಆ ಮಹಿಳೆ ಬಾಲಕನ ದೃಷ್ಟಿಗೆ ಬಿದ್ದಳು. ಭಯಂಕರ ರೋಗವೊಂದಕ್ಕೆ ತುತ್ತಾಗಿ ಮಲಗಿದ್ದ ಆಕೆ ಬಾಲಕನನ್ನು ಕಂಡೊಡನೆಯೇ ಭಯಭೀತಳಾಗಿ, ದಿಗ್ಭ್ರಾಂತಿಯಿಂದ ಎದ್ದು ಕುಳಿತಳು. ಆಗ ಆ ಬಾಲಕ, "ಏಕೆ ತಾಯಿ!.... ಕಳೆದ ಎರಡು ದಿನಗಳಿಂದ ನನ್ನ ಮೇಲೆ ಕಸವನ್ನು ಸುರಿಯಲಿಲ್ಲ....!?" ಎಂದು ಕೇಳಿದ. ಆಕೆ ಮೂಕವಿಸ್ಮಿತಳಾಗಿ, ಪರಮಾಶ್ಚರ್ಯದಿಂದ, "ಏಕೆ ಮಗೂ!..... ನಿನ್ನ ಮೇಲೆ ನಿತ್ಯವೂ ಕಸ ಸುರಿಯುತ್ತಿದ್ದ ನನ್ನ ಕಂಡರೆ ನಿನಗೆ ಅಸಹ್ಯ, ದ್ವೇಷಗಳಾಗುತ್ತಿಲ್ಲವೇ?" ಎಂದಳು. ಅದಕ್ಕೆ ಆ ಬಾಲಕ, "ತಾಯಿ!.... ನೀವು ನಿತ್ಯವೂ ಕಸವನ್ನು ನನ್ನ ಮೇಲೆ ಸುರಿಯುವಾಗ ಅದೆಷ್ಟು ಖುಷಿಪಡುತ್ತಿದ್ದಿರಿ, ಆನಂದಭರಿತರಾಗುತ್ತಿದ್ದಿರಿ! ನಾನೊಬ್ಬ ಅಪ್ರಯೋಜಕ, ದನ ಕಾಯುವವನು, ನನ್ನಿಂದ ಯಾರಾದರೂ ಸಂತೋಷಪಡುವಂತಾದರೆ ನನ್ನ ಜೀವನವೇ ಸಾರ್ಥಕವಾದಂತೆ. ಪರರನ್ನು ಸಂತೋಷಪಡಿಸುವುದೇ ನನ್ನ ಧರ್ಮ, ಜೀವನೋದ್ದೇಶ, ಬಾಳಿನಗುರಿ. ದಯವಿಟ್ಟು ಬನ್ನಿ!.... ಕೆಳಗೆ ಹೋಗಿ ನಿಲ್ಲುತ್ತೇನೆ, ಕಸ ತಂದು ನನ್ನ ಮೇಲೆ ಸುರಿಯಿರಿ!" ಎಂದಾಗ ಆ ಮಹಿಳೆಗೆ ಮಾತು ಹೊರಡದೆ ಕಣ್ಣುಗಳಲ್ಲಿ ನೀರು ಮೂಡಿತು. "ಕಂದಾ....!!" ಎಂದು ಆತನನ್ನು ಎದೆಗವುಚಿ, "ನೀನೊಂದು ದಿನ ಮಹಾಪುರುಷನಾಗುವೆ. ಇಡೀ ಮಾನವ ಜನಾಂಗಕ್ಕೇ ದಾರಿದೀಪವಾಗುವೆ," ಎಂದು ಹರಸಿದಳಂತೆ. ಆ ಬಾಲಕ ಮತ್ತಾರೂ ಅಲ್ಲ; ಇಸ್ಲಾಂ ಧರ್ಮವನ್ನು ಬೋಧಿಸಿದ ಗುರು ಮಹಮದ್ ಪೈಗಂಬರ್. ●

(ಸಾಧಾರ)



ನೇಪಾಳದಲ್ಲಿ ನಡೆಯುತ್ತಿರುವುದೇನು?

ಟಿ. ಎಂ. ಸುಬ್ಬರಾಯ

147,141 ಚದರ ಕಿಲೋಮೀಟರ್ ವಿಸ್ತೀರ್ಣದ ನೇಪಾಳ ನಮ್ಮ ನೆರೆಯ ರಾಷ್ಟ್ರ. 1,61,07000 ಜನಸಂಖ್ಯೆಯಲ್ಲಿ ಬಹು ಸಂಖ್ಯಾತರು ಹಿಂದುಗಳು. ಆದ್ದರಿಂದ ನೇಪಾಳ ಹಿಂದೂ ರಾಷ್ಟ್ರ. ಎರಡನೆಯ ಸ್ಥಾನ ಬೌದ್ಧರದು. ನೇಪಾಳದ್ದು ರಾಜಪ್ರಭುತ್ವ. ದೊರೆ ಬೀರೇಂದ್ರ, ವೀರ ವಿಕ್ರಮ ಷಾ ದೇವರು ನೇಪಾಳದ ಈಗಿನ ಸಾರ್ವಭೌಮಾಧಿಕಾರಿ.

ಪ್ರಧಾನ ಮಂತ್ರಿ, ಜಂಗ್ ಬಹದ್ದೂರ್ ರಾಣಾ ನೇಪಾಳದ ದೊರೆಯನ್ನು 'ನಾಮಕಾವಾಸ್ತೆ' ದೊರೆಯನ್ನಾಗಿಸಿ ತಮ್ಮ ಕೈಯಲ್ಲಿ ಆಡಳಿತ ಸೂತ್ರ ಹಿಡಿದಂದಿನಿಂದ (1846) ನೇಪಾಳದ ಆಧುನಿಕ ಇತಿಹಾಸ ಆರಂಭವಾಗುತ್ತದೆ. ಅಲ್ಲಿಂದ ಸುಮಾರು 150 ವರ್ಷಗಳ ಕಾಲ ನೇಪಾಳದಲ್ಲಿ 'ರಾಣಾಧಿಪತ್ಯ' ನಡೆಯುತ್ತಾ ಬಂದಿದೆ.

ನೇಪಾಳೀ ಕಾಂಗ್ರೆಸ್ಸಿನಿಂದ ಮೊದಲ ಬಾರಿಗೆ, 1950ರಲ್ಲಿ ಪ್ರಜಾಪ್ರಭುತ್ವ ಪದ್ಧತಿ ಅಳವಡಿಸಿಕೊಳ್ಳಬೇಕೆಂಬ ಚಳವಳಿ ನಡೆಯಿತು. ದೊರೆ ತ್ರಿಭುವನರ ಅಧಿಕಾರ ಮೊಟಕಾಯಿತು. ಆದರೆ ಪಟ್ಟಭದ್ರ ಹಿತಾಸಕ್ತಿಗಳ ಕಾರಣದಿಂದಾಗಿ ಪ್ರಜಾಭುತ್ವ ಸ್ಥಾಪನೆಯಾಗಲಿಲ್ಲ.

ದೊರೆ ತ್ರಿಭುವನರ ಅವಸಾನದ ನಂತರ 1955ರಲ್ಲಿ ದೊರೆ ಮಹೇಂದ್ರರು ನೇಪಾಳದ ಸಾರ್ವಭೌಮರಾದರು. ಪ್ರಗತಿಪರ ಮನೋಭಾವದ ದೊರೆ ಮಹೇಂದ್ರ ಚುನಾವಣೆಯನ್ನು ಘೋಷಿಸಿದರು. 1959ರಲ್ಲಿ ನಡೆದ ನೇಪಾಳದ ಪ್ರಥಮ ಚುನಾವಣೆಯಲ್ಲಿ ನೇಪಾಳೀ ಕಾಂಗ್ರೆಸ್ ಜಯಭೇರಿ ಹೊಡೆಯಿತು. ನೇಪಾಳೀ ಕಾಂಗ್ರೆಸ್ಸಿನ ನಾಯಕ ಬಿ.ಪಿ.ಕೊಯಿರಾಲಾ ಪ್ರಧಾನಮಂತ್ರಿಯಾದರು.

ದೊರೆ ಮತ್ತು ಪ್ರಧಾನಿಯ ನಡುವೆ ಭಿನ್ನಾಭಿಪ್ರಾಯವುಂಟಾಗಿ ಮುಸುಕಿನಲ್ಲಿ ಗುದ್ದಾಟ ನಡೆಯತೊಡಗಿತು. ಅದು ತೀವ್ರ ಸ್ವರೂಪ

ತಳೆದದ್ದು 1960ರಲ್ಲಿ. ದೊರೆ ಮಹೇಂದ್ರರು ಸಂಸತ್ತನ್ನು ವಿಸರ್ಜಿಸಿದರು. ನೇಪಾಳೀ ಕಾಂಗ್ರೆಸ್ಸಿನ ಹಲವು ವರಿಷ್ಠರನ್ನು ಬಂಧಿಸಲಾಯಿತು. ಬಂಧನದ ಮುನ್ಸೂಚನೆ ದೊರೆತು, ಕೆಲವರು ತಪ್ಪಿಸಿಕೊಂಡು ಭಾರತದಲ್ಲಿ ನುಸುಳಿಕೊಂಡರು.

ಪಕ್ಷರಹಿತ ಮೂರು ಹಂತದ ಪಂಚಾಯತ ವ್ಯವಸ್ಥೆ, ದೊರೆಗೆ ಪರಮೋಚ್ಚ ಅಧಿಕಾರ ಸಹಿತ ರಾಜ ಪ್ರಭುತ್ವಕ್ಕೆ ಅನುಕೂಲಕರವಾದ ಹಲವು ಅಂಶಗಳನ್ನೊಳಗೊಂಡ ನೂತನ ಸಂವಿಧಾನವೊಂದನ್ನು ದೊರೆ ಮಹೇಂದ್ರ 1962ರಲ್ಲಿ ಜಾರಿಗೆ ತಂದರು. ಈ ಸಂವಿಧಾನದಲ್ಲಿ ನಿರೂಪಿತವಾಗಿ ಈಗ ಜಾರಿಯಲ್ಲಿರುವ ಪಕ್ಷರಹಿತ ಪಂಚಾಯತ ವ್ಯವಸ್ಥೆಯೇ ನೇಪಾಳದ ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಗೆ ಮೂಲ.

ಈ ಲೇಖನ ಪ್ರಕಟವಾಗುತ್ತಿದ್ದಂತೆಯೆ ದೊರೆ ವೀರೇಂದ್ರರು ಜನಾಭಿಪ್ರಾಯಕ್ಕೆ ಮಣಿದು ಪಂಚಾಯತ ವ್ಯವಸ್ಥೆಯನ್ನು ರದ್ದುಪಡಿಸುವುದಾಗಿಯೂ ಬಹುಪಕ್ಷಗಳ ಜನತಂತ್ರ ವ್ಯವಸ್ಥೆಯನ್ನು ಜಾರಿಗೆ ತರುವುದಾಗಿಯೂ ಘೋಷಿಸಿದ್ದಾರಲ್ಲದೆ ರಾಜಕೀಯ ಪಕ್ಷಗಳ ಮೇಲೆ ಹೇರಿದ್ದ ಪ್ರತಿಬಂಧವನ್ನು ತೆಗೆದುಹಾಕಿದ್ದಾರೆಂಬ ಸುದ್ದಿ ಬಂದಿದೆ. ಈ ಸಂಚಿಕೆ ಹೊರಬರುವ ಹೊತ್ತಿಗೆ ಅಲ್ಲಿನ ಸುಮಾರು ಎರಡುಸಾವಿರದಷ್ಟು ರಾಜಕೀಯ ಕೈದಿಗಳು ಸೆರೆಮನೆ ವಾಸದಿಂದ ಮುಕ್ತರಾಗಿರುತ್ತಾರೆ. ಈಗಿರುವ ಅವರ ಅಧಿಕಾರ ಕೊಂಚ ಮೊಟಕಾಗಿ ಮುಂದುವರೆಯುವುದೋ ಅಥವಾ ದೊರೆ ವೀರೇಂದ್ರರು ಕೇವಲ ಅಧಿಕಾರದ ಮುಕುಟಮಣಿಯಾಗಿ ಉಳಿಯುವರೋ ಎನ್ನುವುದನ್ನು ಮುಂಬರುವ ಘಟನೆಗಳೇ ಹೇಳಬೇಕು.

— ಸಂ.

ದೊರೆ ಮಹೇಂದ್ರರ ನಂತರ, 1972ರಲ್ಲಿ ಬೀರೇಂದ್ರ ನೇಪಾಳದ ದೊರೆಯಾದರು. 1960-63ರಲ್ಲಿ ನಡೆದಂತೆ ಪುನಃ ನೇಪಾಳದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಚಳುವಳಿ ಆರಂಭವಾಯಿತು. ಮೊದಮೊದಲು ಈ ಚಳವಳಿಯನ್ನು ಅಲಕ್ಷಿಸಿದ ದೊರೆ ಬೀರೇಂದ್ರರು ಅದು ಉಗ್ರವಾಗತೊಡಗಿದಾಗ ಅದನ್ನು ತಣಿಸಲು 1978-79ರಲ್ಲಿ 'ಜನಾಭಿಪ್ರಾಯ ಸಂಗ್ರಹಣೆ'ಗೆ ಮುಂದಾದರು. "ಈಗಿರುವ ಪಕ್ಷರಹಿತ ಪಂಚಾಯತ ವ್ಯವಸ್ಥೆ ಮುಂದುವರಿಯಬೇಕೇ ಅಥವಾ ಬಹುಪಕ್ಷೀಯ ಸಂಸತ್ ವ್ಯವಸ್ಥೆ ಬೇಕೇ? ಈ ಎರಡರಲ್ಲಿ ನಿಮಗೆ ಯಾವುದು ಹಿತ?" ಎಂದು ಕೇಳಲಾಯಿತು. ಶೇಕಡಾ ಹತ್ತರಷ್ಟು ಹೆಚ್ಚುವರಿ ಅಭಿಪ್ರಾಯ ಮೊದಲಿನ ಅಂಶದ ಪರವಾಗಿ ಬಂದಿತೆಂದು ಪ್ರಭುತ್ವ ಸಾರಿತು. ದೊರೆ ಬೀರೇಂದ್ರರು ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಂಡರು. ರಾಜಕೀಯ ಸುಧಾರಣೆಯ ಆಟವಾಡುತ್ತಾ, ನಿರಂಕುಶ ಅಧಿಕಾರ ನೇಪಾಳದಲ್ಲಿ ಮುಂದುವರಿಯಿತು.

ಆದರೆ ದೊರೆ ಬೀರೇಂದ್ರರು ಎಣಿಸಿದಂತೆಯೆ ಎಲ್ಲವೂ ನಡೆಯಲಿಲ್ಲ. 1985ರಲ್ಲಿ ನೇಪಾಳೀ ಕಾಂಗ್ರೆಸ್ ಸತ್ಯಾಗ್ರಹ ಪ್ರಾರಂಭಿಸಿತು. ಪ್ರಾರಂಭವಾದ ಎರಡೇ ದಿನದಲ್ಲಿ ಸತ್ಯಾಗ್ರಹ ಹಿಂಸಾಚಾರವಾಗಿ ಪರಿಣಮಿಸಿತು. ನೇಪಾಳೀ ಕಾಂಗ್ರೆಸ್ ಅನಿವಾರ್ಯವಾಗಿ ಸತ್ಯಾಗ್ರಹವನ್ನು ನಿಲ್ಲಿಸಬೇಕಾಗಿ ಬಂತು.

1990ರ ಫೆಬ್ರವರಿ 18ರಿಂದ ನೇಪಾಳದಲ್ಲಿ ಪುನಃ ಚಳುವಳಿ ಆರಂಭವಾಗಿದೆ. ಇಲ್ಲಿಯವರೆಗಿನ ಹೋರಾಟಕ್ಕಿಂತ ಈಗಿನದು ತೀರ ಭಿನ್ನ. ಅದು ಅಲ್ಲಿಯ ದೊರೆ ಹಾಗೂ ಜನತೆಯ ನಡುವಿನ ಹೋರಾಟವಾಗುವ ಲಕ್ಷಣ ತೋರುತ್ತಿದೆ. ಇದನ್ನು 'ಜನಾಂದೋಲನ' ಎಂದು ಕರೆಯಲಾಗಿದೆ. ಪ್ರಜಾಧಿಕಾರದ ಹೆಸರಿನಲ್ಲಿ ದೊರೆ ನಿರಂಕುಶಾಧಿಕಾರಿಯಾಗಿದ್ದಾರೆ

ಎಂಬುದಾಗಿ ಪ್ರಜಾಪಕ್ಷಗಳು ದೂರುತ್ತಿವೆ. ''ದೊರೆ ಇರಲಿ, ಬೇಡ ಎನ್ನುವುದಿಲ್ಲ, ಆದರೆ, ಅವರು ಸಾರ್ವಭೌಮಾಧಿಕಾರಿಯಾಗಿ ಇರುವುದು ಬೇಡ,'' ಎನ್ನುವುದು ಹೋರಾಟಗಾರರ ನಿಲುವು. ''ಶುದ್ಧ ಸಂಸತ್ ಪದ್ಧತಿ ಜಾರಿಗೆ ತರಬೇಕು; ನಿಷೇಧಿಸಲ್ಪಟ್ಟ ರಾಜಕೀಯ ಪಕ್ಷಗಳಿಗೆ ಮಾನ್ಯತೆ ಕಲ್ಪಿಸಿಕೊಡಬೇಕು; ಜಾರಿಯಲ್ಲಿರುವ ಪಂಚಾಯತ ವ್ಯವಸ್ಥೆಯನ್ನು ರದ್ದುಗೊಳಿಸಬೇಕು,'' ಎಂಬುದು ಹೋರಾಟಗಾರರ ಒತ್ತಾಯ.

ಈಗ ನೇಪಾಳದಲ್ಲಿರುವ ಸಂಸತ್ತು 'ರಾಷ್ಟ್ರೀಯ ಪಂಚಾಯತ'. ದೊರೆ ಹಾಗೂ ಪ್ರಜೆಗಳು ರಾಷ್ಟ್ರದ ಪ್ರಗತಿಯಲ್ಲಿ ಸಕ್ರಿಯ ಪಾಲುದಾರರಾಗಬೇಕು ಎನ್ನುವ ಆಶಯ ಹೊಂದಿ ರಚಿತವಾದದ್ದು ಈ ಪಂಚಾಯತ. ಗ್ರಾಮ-ನಗರ ಪಂಚಾಯತ, ಜಿಲ್ಲಾ ಪಂಚಾಯತ ಹಾಗೂ ರಾಷ್ಟ್ರೀಯ ಪಂಚಾಯತ ಹೀಗೆ ಮೂರು ಹಂತಗಳಲ್ಲಿ ಇವು ಸಂಘಟಿಸಲ್ಪಡುತ್ತವೆ. ಇವು ಪಕ್ಷರಹಿತ ಸಂಘಟನೆಗಳು. ನೇಪಾಳದ ಸಂಸತ್ ಎನ್ನಿಸಿರುವ ರಾಷ್ಟ್ರೀಯ ಪಂಚಾಯತದಲ್ಲಿ ಒಟ್ಟು 140 ಸದಸ್ಯರು ಇದ್ದಾರೆ. ಈ 140 ಸದಸ್ಯರಲ್ಲಿ 112 ಮಂದಿ ಚುನಾಯಿತ ಸದಸ್ಯರು. ಇವರ ಚುನಾವಣೆ ಪಕ್ಷಗಳನ್ನಾಧರಿಸಿ ಅಲ್ಲ: ಪ್ರಭುತ್ವ ಮಾನ್ಯ ಮಾಡಿರುವ ನೇಪಾಳದ ಆರು ಜನವರ್ಗ ಸಂಘಗಳ ಸದಸ್ಯತ್ವದ ಆಧಾರದಿಂದ. ಅಂಥ ಜನವರ್ಗ ಸಂಘಕ್ಕೆ ಪ್ರಭುತ್ವ ಮಾನ್ಯತೆ ರದ್ದುಪಡಿಸಿದರೆ, ಅದರ ಸದಸ್ಯತ್ವದ ಆಧಾರದಿಂದ ರಾಷ್ಟ್ರೀಯ ಪಂಚಾಯತದ ಸದಸ್ಯರಾದವರ ಸದಸ್ಯತ್ವ ನಷ್ಟವಾಗುತ್ತದೆ. 140 ಮಂದಿಯಲ್ಲಿ 112 ಮಂದಿ ಸದಸ್ಯರು ಹೀಗೆ ಪರೋಕ್ಷವಾಗಿ ಪ್ರಭುತ್ವದ ಹಿಡಿತಕ್ಕೊಳಪಡುತ್ತಾರೆ. ಇನ್ನುಳಿದ 28 ಮಂದಿ ದೊರೆಯಿಂದ ನಾಮಕರಣ ಹೊಂದುವ ಸದಸ್ಯರು. ರಾಷ್ಟ್ರೀಯ ಪಂಚಾಯತಕ್ಕೆ ಪ್ರಧಾನ ಮಂತ್ರಿಯನ್ನು



ಆಯ್ಕೆ ಮಾಡುವ ಅಧಿಕಾರವಿದೆ. ಆದರೆ ಪ್ರಧಾನಿಯಾಗಿ ಆಯ್ಕೆ ಹೊಂದಲು ರಾಷ್ಟ್ರೀಯ ಪಂಚಾಯತದ ಶೇಕಡಾ 60ರಷ್ಟು ಬೆಂಬಲ ಅಗತ್ಯ. ಅಂದರೆ, ದೊರೆಯಿಂದ ನಾಮಕರಣ ಹೊಂದಿರುವ ಸದಸ್ಯರ ಬೆಂಬಲವಿಲ್ಲದೆ ಶೇಕಡಾ 60ರಷ್ಟು ಬೆಂಬಲ ಸಾಧಿತವಾಗುವುದಿಲ್ಲ. ಪ್ರಧಾನ ಮಂತ್ರಿಯೂ ಪರೋಕ್ಷವಾಗಿ ದೊರೆಯ ಹಿಡಿತದಲ್ಲಿ ಎಂಬುದು ಇದರ ಅಂತರಾರ್ಥ. ಇದನ್ನು ವಿರೋಧಿಸಿಯೇ, ಜನಾಭಿಪ್ರಾಯ ಸಂಗ್ರಹಣೆಯ ಸಂದರ್ಭದಲ್ಲಿ, ಈಗಿನ ಶೇಕಡಾ 46ರ ಬದಲು ಶೇಕಡಾ 54ರಷ್ಟು ಚುನಾಯಿತ ಸದಸ್ಯರಿರಬೇಕು ಎನ್ನುವ ಅಭಿಪ್ರಾಯ ವ್ಯಕ್ತಪಟ್ಟಿತ್ತು.

ಕಳೆದ ಒಂದು ದಶಕದಲ್ಲಿ ಈ ಬಗ್ಗೆ ಸಾಕಷ್ಟು ವಾದವಿವಾದಗಳು ಆಗಿವೆ. ಆದರೆ, ಆಳುವ ವ್ಯವಸ್ಥೆ ಯಾವುದಕ್ಕೂ ಸೊಪ್ಪು ಹಾಕಿಲ್ಲ, ಅಳುಕಿಯೂ ಇಲ್ಲ. ಪಂಚಾಯತ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯನ್ನೂ ಮಾಡಿಲ್ಲ. ಹಾಗೆ ಬದಲಾವಣೆ ಮಾಡುವ ಅಪೇಕ್ಷೆಯೂ ಪ್ರಭುತ್ವಕ್ಕಿಲ್ಲ.



ಬಿ. ಪಿ. ಕೊಯಿರಾಲಾ

ಪಂಚಾಯತ ವ್ಯವಸ್ಥೆಯನ್ನು ವಿರೋಧಿಸುವ ಯಾವುದೇ ಕಾರ್ಯಕ್ರಮವನ್ನೂ ಬಗ್ಗು ಬಡಿಯಲು ಪ್ರಭುತ್ವ ನಿರಂತರವಾಗಿ ಪ್ರಯತ್ನಿಸುತ್ತಾ ಬಂದಿದೆ. ಆದರೆ ಪ್ರಭುತ್ವ ವಿರೋಧೀ ಹೋರಾಟಗಾರರಲ್ಲಿ ಇದುವರೆಗೆ ಒಗ್ಗಟ್ಟಿಲ್ಲವಾಗಿತ್ತು. ಇದು ಪ್ರಭುತ್ವದ ಪಾಲಿಗೆ ಅನುಕೂಲ ಸನ್ನಿವೇಶವಾಗಿತ್ತು.

ಆದರೆ, ಪರಿಸ್ಥಿತಿಯೀಗ ಬದಲಾಗಿದೆ. ಪ್ರಬಲ ರಾಜಕೀಯ ಪಕ್ಷಗಳಲ್ಲಿ ಒಂದು ಎನ್ನಿಸಿರುವ ನೇಪಾಳೀ ಕಾಂಗ್ರೆಸ್ ಹಾಗೂ ಎಳು ಪಕ್ಷಗಳು ಇಂದು ಒಂದಾಗಿವೆ. ತಮ್ಮಲ್ಲಿಯ ಪರಸ್ಪರ ಕಚ್ಚಾಟವನ್ನು ನಿಲ್ಲಿಸಿವೆ. ಭಿನ್ನತೆಯನ್ನು ಸದ್ಯಕ್ಕೆ ಮರೆತಿವೆ. ಸಮಾನ ಅಂಶಗಳ ಸಾಧನೆಯತ್ತ ಗಮನ ಹರಿಸಿವೆ. ಒಂದಾಗಿ ಪ್ರಭುತ್ವವಿರೋಧೀ ಕಾಳಗದ ಕಹಳೆ ಊದಿವೆ.

''ವಾಮ ಪಕ್ಷಗಳು ನಮ್ಮ ಜೊತೆ ಸೇರಿರುವುದರಿಂದ ಹೋರಾಟಕ್ಕೆ ನಿಜಕ್ಕೂ ಹೆಚ್ಚಿನ ಬಲ ಬಂದಿದೆ,'' ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ ನೇಪಾಳೀ ಕಾಂಗ್ರೆಸ್ಸಿನ ನಾಯಕ ಗಣೇಶ ಮಾನ್‌ಸಿಂಗ್.

ನೇಪಾಳೀ ಪ್ರಭುತ್ವ ಇದುವರೆಗೆ ನಡೆಸಿದ ರಾಜಕೀಯ ಸುಧಾರಣೆಯೆಲ್ಲಾ ಕೇವಲ ಕಣ್ಣಿಗೆ ಮಣ್ಣೆರಚುವ ಆಟ ಎಂಬುದು ಈಗ ಜನರಿಗೆ ಅರಿವಾಗಿದೆ. ಜನತೆ ಇದುವರೆಗೆ ಹೋರಾಟದಲ್ಲಿ ನೇರವಾಗಿ ಪಾಲ್ಗೊಂಡಿರಲಿಲ್ಲ. ಈಗ ನೇಪಾಳೀ ಜನತೆಯೂ ಪ್ರಭುತ್ವದ ವಿರುದ್ಧ ತಿರುಗಿ ಬಿದ್ದಿದೆ. ನಗರ ಪ್ರದೇಶಗಳಿಗೆ ಸೀಮಿತವಾಗಿದ್ದ ಹೋರಾಟ ಈಗ ಗ್ರಾಮಾಂತರ ಭಾಗಗಳಿಗೂ ವ್ಯಾಪಿಸಿದೆ. ವೈದ್ಯರು, ನ್ಯಾಯವಾದಿಗಳು, ಪ್ರಾಧ್ಯಾಪಕರು, ಸಾಹಿತಿಗಳು, ಪತ್ರಕರ್ತರು, ಸಮಾಜದ ವಿವಿಧ ವರ್ಗದವರು, ಬುದ್ಧಿಜೀವಿಗಳು ಈಗ ಹೋರಾಟಕ್ಕಿಳಿದಿದ್ದಾರೆ.

ತನ್ನ ವಿರುದ್ಧ ಧ್ವನಿ ಎತ್ತುವ ಪತ್ರಿಕೆಗಳನ್ನು ಪ್ರಭುತ್ವ ದಮನಗೊಳಿಸಲು ನಿರಂತರ ಪ್ರಯತ್ನ ನಡೆಸಿದೆ. ಹೋರಾಟದ ಪರವಾಗಿಯೂ, ಪ್ರಭುತ್ವದ ವಿರುದ್ಧವಾಗಿಯೂ ಬರೆಯದಂತೆ ಪತ್ರಿಕೆಗಳಿಗೆ ಎಚ್ಚರಿಕೆ ನೀಡಿದೆ. ಸುದ್ದಿಗಳ ಪ್ರಕಟಣಾ ಪೂರ್ವ ಪರಿಶೀಲನೆಯನ್ನು ಜಾರಿಗೊಳಿಸಿದೆ. ಹೀಗಾಗಿ ದೇಶದ ಆಂತರಿಕ ವಿದ್ಯಮಾನಗಳನ್ನು ಪ್ರಕಟಿಸದ ನೇಪಾಳೀ ಪತ್ರಿಕೆಗಳು ಪೂರ್ವ ಯುರೋಪಿನ ವಿದ್ಯಮಾನಗಳನ್ನು ಅವ್ಯಾಹತವಾಗಿ ಪ್ರಕಟಿಸುತ್ತಿವೆ. ಇದರಿಂದ ಅನ್ಯದೇಶಗಳ ವಿದ್ಯಮಾನಗಳು ನೇಪಾಳಿಯರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿವೆ. ಮುಖ್ಯವಾಗಿ ಪೂರ್ವ ಯುರೋಪಿನಲ್ಲಿ ದೀರ್ಘಕಾಲದಿಂದ ನಡೆದು ಬಂದ ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದ ಜನಬಲ ನೇಪಾಳಿಗರ ಕಣ್ಣು ತೆರೆಸಿದೆ. ನೇಪಾಳದಲ್ಲೀಗ 'ಜನಾಂದೋಲನ' ಆರಂಭವಾಗಿದೆ.

ಭಾರತದೊಂದಿಗಿನ ವ್ಯಾಪಾರ ವ್ಯವಸ್ಥೆ ಇತ್ತೀಚಿನ ದಿನಗಳಲ್ಲಿ ಕುಸಿದಿದ್ದು, ನೇಪಾಳದ ಆರ್ಥಿಕ ಸ್ಥಿತಿಯ ಮೇಲೆ ತೀವ್ರ ದುಷ್ಪರಿಣಾಮವನ್ನುಂಟು ಮಾಡಿದೆ. ಕಳೆದ ಒಂದು



ದೊರೆ ಮಹೇಂದ್ರ

ವರ್ಷದಿಂದೀಚೆ ನೇಪಾಳದಲ್ಲಿ ವಸ್ತುಗಳ ಬೆಲೆ 60 ರಿಂದ 110ರಷ್ಟು ಏರಿಕೆ ಕಂಡಿದೆ. ಅಕ್ಕಿಯ ಬೆಲೆ ಕೆ.ಜಿ.ಗೆ 22ರೂ.ಗಳಾಗಿವೆ. ಮಾಂಸದ ಬೆಲೆ ಕೆ.ಜಿ.ಗೆ 115 ರೂ., ಹಾಲು ಲೀಟರಿಗೆ 9ರೂ., ಪೆಟ್ರೋಲ್ ಬೆಲೆ ಲೀಟರಿಗೆ 20 ರೂ.ಗಳು. ಬೆಲೆ ಏರಿಕೆಯಿಂದ ಜನ ತತ್ತರಿಸುತ್ತಿದ್ದಾರೆ. ತಮ್ಮ ಇಂದಿನ ಸ್ಥಿತಿಗೆ ಪ್ರಭುತ್ವವೇ ಕಾರಣ ಎನ್ನುವ ನಿರ್ಣಯಕ್ಕೆ ಅವರು ಬಂದು ತಲುಪಿದ್ದಾರೆ.

1990, ಫೆಬ್ರವರಿ 18ರಂದು 'ಜನ ಜಾಗೃತಿ' ಆಂದೋಲನಕ್ಕೆ ನಾಂದಿ ಹಾಕಲಾಯಿತು. ನೇಪಾಳೀ ಕಾಂಗ್ರೆಸ್ ಹಾಗೂ ಏಳು ವಾಮ ಪಕ್ಷಗಳು ಜಂಟಿಯಾಗಿ ಪ್ರಭುತ್ವದ ವಿರುದ್ಧ ಸಂಘಟಿಸಿದ್ದ ಜನಾಂದೋಲನ ಕಾರ್ಯಕ್ರಮಕ್ಕೆ ವಿರುದ್ಧವಾಗಿ ಪಂಚಾಯತ ವ್ಯವಸ್ಥೆಯ ಮುಂದುವರಿಕೆಯ ಬಗ್ಗೆ ಪ್ರಭುತ್ವವೇ ಸಂಯೋಜಿಸಿದ್ದ ಸಾರ್ವಜನಿಕ ಹೆಸರಿನ ಸಭೆಯೂ ಅಂದು ನಡೆಯಿತು. ಜನಾಂದೋಲನ ಕಾರ್ಯಕ್ರಮಗಳು ನಡೆಯದಂತೆ ಮಾಡುವ ಎಲ್ಲಾ ಬಗೆಯ ಪ್ರಯತ್ನಗಳಿಗೂ ಪ್ರಭುತ್ವ ಒತ್ತು ಕೊಟ್ಟಿತ್ತು.

ಪಂಚಾಯತ ವ್ಯವಸ್ಥೆಯ ವಿರುದ್ಧ ಘೋಷಣೆ ಕೂಗುತ್ತಾ ಪಕ್ಷ ಧ್ವಜಗಳನ್ನು ಹಿಡಿದ ಸಾವಿರ-ಸಾವಿರ ನೇಪಾಳಿಗರು, ಫೆಬ್ರವರಿ 18 ರಂದು, ಕಠ್ಮಂಡುವಿನ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಹಲವು ಎಡೆಗಳಲ್ಲಿ ಪೋಲೀಸರು ಅಶ್ರುವಾಯು ಪ್ರಯೋಗಿಸಿದರು. ಲಾಠೀ ಪ್ರಹಾರ ನಡೆಸಿದರು. ಆಂದೋಲನಕಾರರನ್ನು ಚದುರಿಸಲು ಸರ್ವ ಪ್ರಯತ್ನ ನಡೆಸಿದರು. ರಾಷ್ಟ್ರೀಯ ಪಂಚಾಯತದ ಪದ್ಮರತ್ನ ತುಲಾಧರ್, ಡ್ರಾನ್ ಪ್ರಸಾದ್ ಆಚಾರ್ಯ, ಭೀಮ ಬಹಾದ್ದೂರ್ ಶ್ರೇಷ್ಠ, ಜಾಗೃತಿ ಪ್ರಸಾದ್ ಬೆಟ್ವಾಲ, ಸೋಮನಾಥ ಪ್ಯಾಸಿ- ಈ ಐವರು ಸದಸ್ಯರನ್ನೂ, ವಾಮ ಪಕ್ಷದ ನೇತಾರರಾದ ಮನ್ ಮೋಹನ್ ಅಧಿಕಾರಿ, ತುಳಸೀದಾಸ ಅಮಾತ್ಯರನ್ನೂ ದಸ್ತಗಿರಿ ಮಾಡಲಾಯಿತು. ನೇಪಾಳೀ ಕಾಂಗ್ರೆಸ್ಸಿನ ನಾಯಕ ಗಣೇಶ ಮಾನ್‌ಸಿಂಗ್‌ರನ್ನು ಗೃಹ ಬಂಧನದಲ್ಲಿ ಇರಿಸಲಾಯಿತು.

ಕಠ್ಮಂಡುವಿನ ದಕ್ಷಿಣದ ಪಟ್ಟಣಗಳಾದ ಭರತ್‌ಪುರ ಮತ್ತು ಹೆಡೌಟಾಗಳಲ್ಲಿ ನಿಶ್ಶಸ್ತ್ರರಾಗಿದ್ದ ಚಳವಳಿಕಾರರ ಮೇಲೆ ಪೋಲೀಸರು ಗುಂಡು ಹಾರಿಸಿದರು. ಇದರ ಪರಿಣಾಮವಾಗಿ ಭರತ್‌ಪುರದಲ್ಲಿ ನಾಲ್ವರು, ಹೆಡೌಟಾದಲ್ಲಿ ಒಬ್ಬ ಅಸು ನೀಗಿದರು. ಹಲವಾರು ಮಂದಿ ತೀವ್ರವಾಗಿ ಗಾಯಗೊಂಡರು. ಮರುದಿನ ಮತ್ತೆ ಭರತ್‌ಪುರದಲ್ಲಿ ಮೂವರು. ಆದರ ಮುಂದಿನ ದಿನ, ಜನಕಪುರದ ಸಮೀಪದ ಜಡುಕುಹಾ ಹಳ್ಳಿಯಲ್ಲಿ ಐವರೂ ಪೋಲಿಸರ ಗುಂಡಿಗೆ ಆಹುತಿಯಾದರು. ಪಾಲ್ವಾ, ನವಾಲ್ ಪರಸಿಗಳಲ್ಲಿಯೂ ಪೋಲೀಸರು ಗುಂಡು ಹಾರಿಸಿದ್ದರ ಪರಿಣಾಮವಾಗಿ ಹಲವರು ಗಾಯಗೊಂಡರು.

ಫೆಬ್ರವರಿ 19 ರಂದು ನೇಪಾಳ ಬಂದ್‌ಗೆ ಜನ ಜಾಗೃತಿ ಆಂದೋಲನ ಕರೆ ಕೊಟ್ಟಿತ್ತು. ಆದರೆ ಅಂಥ ಕರೆಯ ಅಗತ್ಯವೇ ಇಲ್ಲವೆನ್ನು

ವಂತೆ ಫೆಬ್ರವರಿ 18 ರಿಂದ ಫೆಬ್ರವರಿ 25ರ ವರೆಗೆ ನೇಪಾಳದ ಬಹುತೇಕ ಅಂಗಡಿ-ಮುಂಗಟ್ಟುಗಳು, ವಾಣಿಜ್ಯ ಸಂಕೀರ್ಣಗಳು ಮುಚ್ಚಿದ್ದವು. ವ್ಯಾಪಾರ-ವಾಣಿಜ್ಯ ವಹಿವಾಟು ಸಂಪೂರ್ಣ ನಿಂತು ಹೋಗಿತ್ತು.

ಮಾರ್ಚ್ 28ರಂದು, ಕಠ್ಮಂಡು ಕಣಿವೆಯ ಮೂರು ಜಿಲ್ಲೆಗಳ ಆರೋಗ್ಯ ಕೇಂದ್ರಗಳ ವೈದ್ಯರು, ದಾದಿಯರು, ವೈದ್ಯಕೀಯ ವಿದ್ಯಾರ್ಥಿಗಳು ಹೋರಾಟಕ್ಕೆ ತಮ್ಮ ಬೆಂಬಲ ಸಾರಿದರು. ನೇಪಾಳೀ ವೈದ್ಯಕೀಯ ಸಂಘದ (ಎನ್.ಎಂ.ಎ.) ಕರೆಯನ್ವಯ ನೇಪಾಳದ ವೈದ್ಯರು ಸಾಂಕೇತಿಕ ಚಳುವಳಿ ನಡೆಸಿದರು. ತುರ್ತು ಸೇವಾ ವಿಭಾಗವೊಂದನ್ನು ಹೊರತುಪಡಿಸಿ, ದೇಶದಾದ್ಯಂತ ಎಲ್ಲಾ ಆರೋಗ್ಯ ಕೇಂದ್ರಗಳೂ ಮುಚ್ಚಲ್ಪಟ್ಟವು. ವಿಶೇಷವೆಂದರೆ ನೇಪಾಳದ ಹಿಂದಿನ ಪ್ರಧಾನಿ ದಿವಂಗತ ಬಿ.ಪಿ.ಕೊಯಿರಾಲಾ ಅವರ ಪುತ್ರ ಕಠ್ಮಂಡುವಿನ ಆಸ್ಪತ್ರೆಯೊಂದರಲ್ಲಿ ವೈದ್ಯಕೀಯ ಉಪನ್ಯಾಸಕರಾಗಿರುವ ಡಾ. ಶಶಾಂಕ ಕೊಯಿರಾಲಾ ಈ ಹೋರಾಟದಲ್ಲಿ ಪಾಲ್ಗೊಂಡಿರುವುದು. ನೇಪಾಳದ ಬಾರ್ ಅಸೋಸಿಯೇಶನ್ ಹತ್ತು ಅಂಶಗಳ ಮನವಿಯೊಂದನ್ನು ಪ್ರಧಾನ ಮಂತ್ರಿ ಮಾರಿಚ್ ಮಾನ್‌ಸಿಂಗರಿಗೆ ಅರ್ಪಿಸಿದ್ದು, "ಪ್ರಭುತ್ವ ಅನುಸರಿಸುತ್ತಿರುವ ಅಮಾನವೀಯ ಕಾರ್ಯಾಚರಣೆಯನ್ನೂ ಪ್ರಜಾಪ್ರಭುತ್ವವಾದಿಗಳ ವಿರುದ್ಧ ನಡೆಸುತ್ತಿರುವ ದಬ್ಬಾಳಿಕೆಯನ್ನೂ ತಕ್ಷಣ ನಿಲ್ಲಿಸಬೇಕು," ಎಂದು ಒತ್ತಾಯಿಸಿದೆ.

ಪ್ರಭುತ್ವ ವಿರೋಧೀ ನಾಯಕರ ಹೇಳಿಕೆಯಂತೆ ಫೆಬ್ರವರಿ 18ರಿಂದ 25ರ ತನಕ ನಡೆದ ಘಟನೆಗಳಲ್ಲಿ 30 ಕ್ಕಿಂತ ಹೆಚ್ಚು ಮಂದಿ ಪೋಲೀಸರ ಗುಂಡಿಗಾಹುತಿಯಾಗಿ ಅಸುನೀಗಿದ್ದಾರೆ. ನಾಲ್ಕು ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರು (25), ನ್ಯಾಯವಾದಿಗಳು (57), ಪತ್ರಕರ್ತರು (22) ಒಳಗೊಂಡಂತೆ 8,000 ಮಂದಿಯನ್ನು ಪ್ರಭುತ್ವ ಬಂಧಿಸಿದೆ. ಹಲವು ಪತ್ರಿಕೆಗಳ ಸಂಪಾದಕರನ್ನೂ ವರದಿಗಾರರನ್ನೂ ಬಂಧಿಸಲಾಗಿದೆ. ಜನಪ್ರಿಯ ವಾರಪತ್ರಿಕೆ, ಕಠ್ಮಂಡುವಿನ 'ದೇಶಾಂತರ್'ದ ವರದಿಗಾರ ರಾಜೇಶ ಮಿಶ್ರಾರನ್ನು ಪೋಲೀಸರು ನಾಲ್ಕು ದಿನ ತಮ್ಮ ಅಧೀನದಲ್ಲಿರಿಸಿಕೊಂಡು ಚಿತ್ರಹಿಂಸೆ ನೀಡಿದ್ದಾರೆ.

ಜನಾಂದೋಲನದ ದಮನಕ್ಕಾಗಿ ಪ್ರಭುತ್ವ ಹಲವು ತಂತ್ರಗಳನ್ನು ಅನುಸರಿಸುತ್ತಿದೆ. ಸೆರೆಯಲ್ಲಿರುವ ತೀವ್ರಗಾಮಿ ನಾಯಕರನ್ನು ಬಂಧಮುಕ್ತರನ್ನಾಗಿಸುತ್ತಿದೆ. ಅವರು ಹಿಂಸಾಚಾರಕ್ಕೆ ತೊಡಗಿದರೆ ಆಗ ಆ ನೆವದಿಂದ ಚಳುವಳಿ ಹತ್ತಿಕ್ಕಬಹುದೆಂದು ಪ್ರಭುತ್ವದ ಲೆಕ್ಕಾಚಾರ. ಬಂದ್ ಹಾಗೂ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುವವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುತ್ತಿದೆ. ಪ್ರಭುತ್ವ ಚಳವಳಿಯ ಆರಂಭಕ್ಕೆ ಮುನ್ನ ಸೇರಿದ್ದ ಸಭೆಗೆ ಹೊರದೇಶಗಳ ಪ್ರತಿನಿಧಿಗಳು ಬಾರದಂತೆ ತಡೆಒಡ್ಡಿದೆ. ಪಂಚಾಯತ ವ್ಯವಸ್ಥೆಯಲ್ಲಿ ಅಧಿಕಾರ ಹೊಂದಿರುವವರ ಸಭೆ, ಸಮ್ಮೆಳನ ಏರ್ಪಡಿಸಿ ಅವೇ ನಿಜವಾದ ಜನಾಭಿಪ್ರಾಯ ಬಿಂಬಿಸುತ್ತಿವೆ ಎಂದು ನಂಬಿಸುವ ಯತ್ನವನ್ನು ನಡೆಸಲಾಗುತ್ತಿದೆ.

ಆದರೆ, ಚಳುವಳಿ ತಣ್ಣಗಾಗುವ ಸೂಚನೆ ಕಂಡುಬರುತ್ತಿಲ್ಲ. ಶಿಕ್ಷಣ ಸಂಸ್ಥೆಗಳ ಅಧ್ಯಾಪಕರು ಲೇಖನಿ ಮುಷ್ಕರ ನಡೆಸಿದ್ದಾರೆ. ನೇಪಾಳಿ ಸಾರಿಗೆ, ಅರಣ್ಯ, ವಾಯುಯಾನ ಇತ್ಯಾದಿ ಸೇವಾ ಇಲಾಖೆಗಳ ನೌಕರರು ಎಪ್ರಿಲ್ 5 ರಂದು ಎರಡು ಗಂಟೆಗಳ ಅವಧಿಯ ಸಾಂಕೇತಿಕ ಮುಷ್ಕರ ನಡೆಸಿ ಜನಾಂದೋಲನಕ್ಕೆ ತಮ್ಮ ಬೆಂಬಲ ಸೂಚಿಸಿದ್ದಾರೆ. ಪ್ರಭುತ್ವದ ನೇರ ನಿಯಂತ್ರಣಕ್ಕೆ ಒಳಪಟ್ಟಿರುವ ನ್ಯಾಶನಲ್ ಟ್ರೇಡಿಂಗ್ ಲಿಮಿಟೆಡ್, ನೇಪಾಳಿ ಟೆಲಿಕಮ್ಯುನಿಕೇಶನ್ ಕಾರ್ಪೊರೇ

ಶನ್, ನೇಪಾಳ ರಾಷ್ಟ್ರ ಬ್ಯಾಂಕು, ರಾಷ್ಟ್ರೀಯ ಬನಿಯಾ ಬ್ಯಾಂಕ್ ಇತ್ಯಾದಿ ಸಂಸ್ಥೆಗಳ ನೌಕರರೂ ಸಾಂಕೇತಿಕ ಚಳುವಳಿ ನಡೆಸುವುದರ ಮೂಲಕ ಪ್ರಭುತ್ವ ವಿರೋಧೀ ಆಂದೋಲನವನ್ನು ಬೆಂಬಲಿಸಿದ್ದಾರೆ. ನೇಪಾಳದ 'ಜನ ಆಂದೋಲನ ಸಮಾಚಾರ' ಹಾಗೂ 'ನವಯುಗ' ಪತ್ರಿಕೆಗಳು - ಸೆನ್ಸಾರಿನಡಿಯಲ್ಲಿಯೂ - ಗುಪ್ತವಾಗಿ ಜನಾಂದೋಲನ ಪ್ರಚಾರ ನಡೆಸಿವೆ.

ನೇಪಾಳದ ದೊರೆ ಬೀರೇಂದ್ರ, ಈಗ ನಿಜಕ್ಕೂ ಬಿಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ''ನೇಪಾಳದಲ್ಲಿ ನಡೆಯುತ್ತಿರುವುದು ಆ ದೇಶದ ಆಂತರಿಕ ವಿದ್ಯಮಾನ'' ಎಂಬುದಾಗಿ ಭಾರತದ ಪ್ರಧಾನಿ ವಿ.ಪಿ.ಸಿಂಗ್ ಹೇಳಿದ್ದುದು ದೊರೆ ಬೀರೇಂದ್ರರಿಗೆ ತುಸು ಸಮಾಧಾನವನ್ನುಂಟು ಮಾಡಿತ್ತು. ಆದರೆ ರಾಷ್ಟ್ರೀಯ ರಂಗದ ನೇತಾರರಲ್ಲೊಬ್ಬರಾದ ಚಂದ್ರಶೇಖರ್ ಇತ್ತೀಚೆ ನೀಡಿರುವ ಹೇಳಿಕೆಗಳು ದೊರೆ ಬೀರೇಂದ್ರರನ್ನು ಇರಿಸುಮುರಿಸಿಗೆ ನೂಕಿದೆ. ವಿಡಿಯೋ-ಆಡಿಯೋ ಕ್ಯಾಸೆಟ್‌ಗಳ ಮೂಲಕ ಚಂದ್ರಶೇಖರರ ಭಾಷಣ ನೇಪಾಳದಾದ್ಯಂತ ಪ್ರಸಾರವಾಗುತ್ತಿರುವುದು ದೊರೆಗೆ ನುಂಗಲಾರದ ತುತ್ತಾಗಿದೆ. ಈ ನಡುವೆ ಅಮೇರಿಕ ಸಂಯುಕ್ತ ಸಂಸ್ಥಾನದ ಸ್ಟೇಟ್ಸ್ ಡಿಪಾರ್ಟ್‌ಮೆಂಟ್, ನೇಪಾಳದಲ್ಲಿ ನಡೆಯುತ್ತಿರುವ ಚಳುವಳಿಗೆ ತನ್ನ ಸಹಾನುಭೂತಿ ಪ್ರಕಟಿಸಿದೆ. ಡೇನಿಯಲ್ ಪ್ಯಾಟ್ರಿಕ್ ಮೊಯ್ನಿಹಾನ್, ಎಡ್ವರ್ಡ್ ಕೆನಡಿಯರನ್ನೊಳಗೊಂಡಂತೆ ಆರು ಮಂದಿ ಸೆನೇಟರ್‌ಗಳು ದೊರೆ ಬೀರೇಂದ್ರರಿಗೆ ಪತ್ರವೊಂದನ್ನು ಬರೆದು, ''ಜನ ಜಾಗೃತಿ ಚಳವಳಿಯನ್ನು ದಮನಗೊಳಿಸಲು ಶಸ್ತ್ರಾಸ್ತ್ರ ಬಳಕೆ, ಬಲಪ್ರಯೋಗ ಮುಂತಾದ ಕ್ರಮಗಳನ್ನು ನಿಲ್ಲಿಸಿ ಚಳುವಳಿ ಶಾಂತಯುತವಾಗಿ ನಡೆಯಲು ಅವಕಾಶ ಮಾಡಿಕೊಡಿ-'' ಎಂದು ಮನವಿ ಮಾಡಿಕೊಂಡಿದ್ದಾರೆ.

ನೇಪಾಳ ಪ್ರಕ್ಷುಬ್ಧತೆಯಿಂದ ಕುದಿಯುತ್ತಿದೆ. ಪ್ರಭುತ್ವ ವಿರೋಧೀ ಸಂಘಟಿತ ಶಕ್ತಿಗಳೊಂದಿಗೆ ದೊರೆ ಬೀರೇಂದ್ರ ರಾಜಿ ಮಾಡಿಕೊಳ್ಳುವುದರ ಮೂಲಕ ರಾಜರಾಗಿಯೇ ಮುಂದುವರಿಯುತ್ತಾರೆಯೋ ಅಥವಾ ಪ್ರಜಾಪ್ರಭುತ್ವವಾದಿಗಳ ಈ ಹೋರಾಟದಿಂದಾಗಿ ತಮ್ಮ 'ದೊರೆತನ' ಕಳೆದುಕೊಳ್ಳುತ್ತಾರೆಯೋ....ಮುಂದಿನ ಕೆಲವು ದಿನಗಳಲ್ಲಿ ಇದಕ್ಕೆ ಉತ್ತರ ದೊರೆಯಲಿದೆ. ●

'ಫ್ರೆಂಚ್ ಬೀನ್ಸ್' ಭಾರತದಲ್ಲಿ ದೊರೆಯುತ್ತದೆಯೆ ಹೊರತು ಫ್ರಾನ್ಸಿನಲ್ಲಲ್ಲ.

'ಬ್ಲ್ಯಾಕ್ ಗಮ್' ಅರ್ಥಾತ್ 'ಕರಿ ಅಂಟು' ಎನ್ನುವುದು ಕರ್‍ರಗೂ ಇಲ್ಲ; ಅದು ಅಂಟೂ ಅಲ್ಲ. ಇದೊಂದು ಅತ್ಯಂತ ಬಿಳುಪಾಗಿರುವ ಮರ.

ಉಷ್ಟ್ರಪಕ್ಷಿಯ ಮೊಟ್ಟೆ ಬಹಳ ಗಟ್ಟಿಯಾಗಿರುತ್ತದೆ. ಪೂರ್ಣ ಪ್ರಮಾಣದಲ್ಲಿ ಬೆಳೆದ ಒಬ್ಬ ಮನುಷ್ಯ ಇದರ ಮೇಲೆ ನಿಂತರೂ ಇದು ಒಡೆಯುವುದಿಲ್ಲ. ಈ ಮೊಟ್ಟೆ 120 ಕಿಲೋಗ್ರಾಮುಗಳಷ್ಟು ಭಾರವನ್ನು ತಡೆದುಕೊಳ್ಳಬಹುದು.

ಪ್ರಪಂಚದಲ್ಲಿ ಅತ್ಯಂತ ವೇಗವಾಗಿ ಹಾರವುದು ಕೇವಲ ಒಂದು ಕೀಟ. ಇದು ಗಂಟೆಗೆ 818 ಮೈಲುಗಳ ವೇಗದಲ್ಲಿ (ಅಂದರೆ ಜೆಟ್ ಪ್ಲೇನಿಗಿಂತ ವೇಗವಾಗಿ) ಹಾರಬಲ್ಲದು. ಇದರ ಹೆಸರು 'ಡೀರ್ ಫ್ಲೈ' (ಜಿಂಕೆ ನೊಣ).

- ಟೇಕಲ್ ಗೋಪಾಲಕೃಷ್ಣ

ಔಷಧೋಪಾಖ್ಯಾನ

1935ರ ಮೊದಲು ಯಾವ ಡಾಕ್ಟರೂ ಔಷಧಿಗಳ ಬಗ್ಗೆ ಪ್ರಿಸ್ಕ್ರಿಪ್ಶನ್ ಬರೆಯುತ್ತಿರಲಿಲ್ಲ. ಏಕೆಂದರೆ ಅವರು ಸೂಚಿಸುತ್ತಿದ್ದ ಔಷಧಿಗಳು ಹೊರಗೆಲ್ಲೂ ಸಿಗುತ್ತಿರಲಿಲ್ಲ. ಮುಖ್ಯವಾಗಿ ಭಾರತದಲ್ಲಿ ಆಯುರ್ವೇದ ವ್ಯಾಪಿಸಿದ್ದ ದಿನಗಳಲ್ಲಿ ಔಷಧಿಗಳನ್ನು ತಯಾರಿಸುವವರೂ ಕೊಡುವವರೂ ಒಬ್ಬರೇ ಆಗಿದ್ದರು.

ಮೊದಲ ಮಹಾಯುದ್ಧದ ನಂತರ 'ಬ್ರಿಟಿಶ್ ಫಾರ್ಮಕೋಪಿಯಾ' ಬೆಳಕಿಗೆ ಬಂತು. ಆಸ್ಪಿರಿನ್, ಬಾರ್ಜಿಟೋನ್‌ಗಳಂಥ ಔಷಧಗಳು ಮಾತ್ರ ಈ ಪುಸ್ತಕದಲ್ಲಿದ್ದವು. ಮುಖ್ಯವಾದ ಔಷಧಗಳನ್ನು ಮೂಲಿಕೆಗಳಿಂದ ಪಡೆಯುತ್ತಿದ್ದರು. ಉದಾಹರಣೆಗೆ 'ಬೆಲ್ಲಾಡೋನಾ'ದಿಂದ 'ಅಟ್ರೋಪಿನ್', ಗಸಗಸೆಯಿಂದ 'ಮಾರ್ಫಿನ್' ತಯಾರಿಸುತ್ತಿದ್ದರು. ಆಯಾ ಊರುಗಳಲ್ಲಿಯೇ ಅಗತ್ಯಗಳಿಗೆ ತಕ್ಕ ಔಷಧಗಳನ್ನು ತಯಾರು ಮಾಡುತ್ತಿದ್ದರು.

ನೊಬೆಲ್ ಬಹುಮಾನ ಪಡೆದ ವಿಜ್ಞಾನಿ ಡಾಕ್ಟರ್ ಗೆರ್‌ಹರ್ಡ್ ಡೋಮೇಗ್ 1935ರಲ್ಲಿ ಮೊಟ್ಟ ಮೊದಲು 'ಸಲ್ಫಾನಿಲಮೈಡ್' ಅನ್ನು ಕಂಡುಹಿಡಿದ. ಅದುವರೆಗೂ ರೋಗಾಣುಗಳ ಮೇಲೆ ಈ ರೀತಿಯಾಗಿ ಕೆಲಸ ಮಾಡಿದ ಔಷಧಿ ಬೇರೆ ಯಾವುದೂ ಇರಲಿಲ್ಲವಾದ್ದರಿಂದ ಇದರ ಪ್ರಚಾರ ಅಬ್ಬರದಿಂದ ಸಾಗಿತ್ತು. ಇದರ ವ್ಯಾಪಾರಿ ಹೆಸರು 'ಪ್ರೋನ್‌ಟಾಸಿಲ್'.

ಆದರೆ ಈ ಪ್ರಚಾರ ಬಹುಕಾಲ ಸಾಗಲಿಲ್ಲ. ಪ್ರೋನ್‌ಟಾಸಿಲ್ ಎರಡು ವಸ್ತುಗಳಾಗಿ ವಿಭಜನೆ ಹೊಂದಿ 'ಪಿ ಅಮೈನೋ ಬೆಂಜೀನ್ ಸಲ್ಫೊನಮೈಡ್' ಎಂಬ ಭಾಗವು ತುಂಬಾ ಪ್ರಚಾರ ಪಡೆಯಿತು.

ಸಲ್ಫಾಥಯೋಜೋಲ್, ಸಲ್ಫಾಡಯೋಜನ್‌ಗಳು ರೋಗಾಣುಗಳ ಮೇಲೆ ಕೈಗೊಂಡ ಸಂಶೋಧನಾ ಔಷಧಿಗಳು. 'ಆಸ್ಪಿರಿನ್ನಿನ' ರಸಾಯನಿಕ ಹೆಸರು 'ಅಸಿಟಿಲ್ ಸಾಲಿಸ್ಯಾಲಿಸೈಕ್ಲಿಕ್ ಆ್ಯಸಿಡ್' ಜ್ವರ ನಿರ್ಮೂಲನಕ್ಕೆ ಇದು 1899ರಲ್ಲಿ ಕಂಡು ಹಿಡಿಯಲ್ಪಟ್ಟಿತು.

ಬೂಷ್ಟಿನಿಂದ ತಯಾರಾದ ಇನ್ನೊಂದು ಔಷಧ 'ಪೆನ್ಸಿಲಿನ್'. 1928ರಲ್ಲಿ ಅಲೆಗ್ಸಾಂಡರ್ ಫ್ಲಿಮಿಂಗ್ ಇದನ್ನು ಕಂಡು ಹಿಡಿದ. ಕ್ವಿನೈನ್, ಸಿಂಕೋನಾ ಮರಗಳಿಂದಲೂ ತಯಾರಿಸಬಹುದಾದ ಇದು ನ್ಯುಮೋನಿಯಾ, ಸಂಧಿವಾತ, ಡಿಫ್ತೀರಿಯಾ, ಧನುರ್ವಾಯುಗಳಿಗೆ ದಿವ್ಯ ಔಷಧ.


ಸ್ಟ್ರೆಪ್ಟೋಮೈಸಿನ್ ಜಾತಿಯ ಶಿಲೀಂಧ್ರದಿಂದ ತಯಾರಾದ ಈ ಔಷಧ ಟೈಫಾಯಿಡ್, ಪ್ಲೇಗುಗಳ ನಿವಾರಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

1930ರಲ್ಲಿ ಕಂಡು ಹಿಡಿಯಲ್ಪಟ್ಟ 'ಬಾರ್ಬಿಟುರೆಟ್ಸ್' ಅನ್ನು ಯೂರಿಯಾ ಮತ್ತು ಮೆಲಾನಿಕ್ ಆಮ್ಲದಿಂದ ತಯಾರಿಸಲಾಗಿದೆ. ನಿದ್ರಾರಾಹಿತ್ಯ ಮತ್ತು ವಿಷಣ್ಣಭಾವವನ್ನು ಹೋಗಲಾಡಿಸಲು ಇದರ ಬಳಕೆಯಾಗುತ್ತಿದೆ.

'ಕೋಡಿನ್' ಜ್ವರ ನಿರ್ಮೂಲನೆಗೆ ಬಳಸುತ್ತಿರುವ ಔಷಧಿ. ಮಾರ್ಫಿಯಾದಿಂದ ಇದು ತಯಾರಾಗುತ್ತಿದೆ.

(ಮೆಡಿಕಲ್ ಡೈಜೆಸ್ಟ್‌ನಿಂದ ಸಂಗ್ರಹ)

– ರಾಮನ್



ವ. ಉಮೇಶ ಕಾರಂತ

ಡೊಂಬಿವಿಲಿ ಉಪನಗರದ ನಾಲ್ಕಂತಸ್ತಿನ ಮನೆಯ ಒಂದು ಕೋಣೆಯಲ್ಲಿ ನಾನು ಕಿಟಕಿಯ ಸರಳ ಹಿಡಿದು ಹೊರಗೆ ನೋಡುತ್ತಿದ್ದೆ. ಎಷ್ಟೊಂದು ವಾಹನಗಳು ಒಂದರ ಹಿಂದೊಂದು ಮೈಲುಗಟ್ಟಲೆ... ಜನಗಳೂ ಪಕ್ಕದಲ್ಲಿ ಜಾತ್ರೆಗೆ ಹೊರಟಂತೆ. ಈ ನಡುವೆ ಹಣ್ಣು, ಕಡಲೆ, ಜೋಳ, ಪುರಿಗಡಲೆ ಮಾರುವವರು.... ವಾಹನಗಳ ಹಾರ್ನು, ಜನರ ಗುಜು ಗುಜು ಏನೋ ಎಲ್ಲರಿಗೂ ಗಡಿಬಿಡಿ. ಎಲ್ಲರೂ 'ಬ್ಯುಸಿ' (Busy). ಎಲ್ಲರೂ ಕಾರ್ಯನಿರತರೇ...... ತೊಟ್ಟಿದ್ದ ಜುಬ್ಬದ ಕೈಗಳನ್ನು ಮೇಲಕ್ಕೆ ಸರಿಸಿದೆ. ಆಗಲೇ ಗಂಟೆ ಆರು ಕಳೆದಿತ್ತು. ದೂರದಲ್ಲೆಲ್ಲೋ ಸಮುದ್ರ ತನ್ನ ಏಕತಾನತೆಯನ್ನು ಮುಂದುವರೆಸಿತ್ತು. ಇದನ್ನು ಬಿಟ್ಟರೆ ದಿನ ದಿನಕ್ಕೆ ಮೇಲೇರುವ ಕಟ್ಟಡಗಳು, ಬಂಗ್ಲೆಗಳು ಎಲ್ಲದರಲ್ಲಿಯೂ ಜನರೇ ಜನರು..... ಯೋಚಿಸುತ್ತಿದ್ದಂತೆ ಉಸಿರು ಕಟ್ಟಿದಂತಾಗಿತ್ತು.

ಅಬ್ಬಾ! ಎಷ್ಟೊಂದು ಸೆಖೆ. ಮನೆಯಲ್ಲಿ ಯಾವಾಗಲೂ ಫ್ಯಾನು ತಿರುಗುತ್ತಿದ್ದರೂ....; ಮತ್ತೆ ಹೊರಗೆ ನೋಟ ಹರಿಸಿದೆ. ಸಿಗ್ನಲ್ ದೀಪಗಳು, ರಸ್ತೆ ದೀಪಗಳೊಂದಿಗೆ ಚಕ್, ಚಕ್ ಎಂದು ಹೊತ್ತಿಕೊಂಡವು. ಭಾರವಾದ ಹೆಜ್ಜೆಯೊಂದಿಗೆ ಕಿಟಕಿ ಬಿಟ್ಟು ಒಳಗೆ ಬಂದೆ...

'ಇನ್ನೂ ಯಾಕೆ ಬರಲಿಲ್ಲ ಅವಳು.... ಹೋಗಿ ಎಷ್ಟು ಸಮಯವಾಯಿತು ಕೆಳಗೆ,' ಮತ್ತೊಮ್ಮೆ ವಾಚು ನೋಡಿಕೊಂಡೆ. ಆಗಲೇ ಏಳು ಸಮೀಪಿಸಿತು. ಕಿಟಕಿಯ ಬಳಿ ಹೋಗಬೇಕೆಂದುಕೊಂಡರೂ ಮನಸ್ಸು ತಡೆಯುತ್ತಿತ್ತು. 'ಅವಳಿನ್ನು ಬರಲಾರಳು.... ಹಾಗಾದರೆ ಎಲ್ಲಿಗ್ಹೋದಳು? ಐದರ ಸುಮಾರಿಗೆ ಕೆಳಗಿನ ಅಂಗಡಿಯಿಂದ ಹಣ್ಣು, ಅಯೋಡೆಕ್ಸ್ ತರುವೆನೆಂದು ಹೋದವಳು....'

ಅಡಿಗೆ ಮನೆ ಕಡೆ ನಡೆದೆ. ಪಾತ್ರೆಗಳೆಲ್ಲ ಬೀಕೋ ಎಂದು ಮೌನಗೀತೆ ಹಾಡಿದ್ದವು. ಬಾತ್‌ರೂಮಿಗೆ ಹೋದೆ. ತಣ್ಣೀರಿನಿಂದ ಮುಖ ತೊಳೆಯಲು ನಳ್ಳಿ ತಿರುಗಿಸಿದೆ. ಬಿಸಿ ನೀರು ಬರುತ್ತಿತ್ತು. ಆಶ್ಚರ್ಯ ಯಾವಾಗಲೂ ಈ ಹೊತ್ತಿಗೆ ತಣ್ಣೀರಿಗೂ ಅನುಮಾನ. ಹೊರಗೆ ಬಂದೆ. ಮುಖವನ್ನು ಅಲ್ಲೇ ಸೊಸೆ ಓರಣವಾಗಿಟ್ಟ ಟವೆಲ್‌ನಿಂದ ಒರೆಸಿ





ಕೊಂಡೆ.

'ನಿಜ, ಸೊಸೆ ತುಂಬಾ ಒಳ್ಳೆಯವಳು.' ಮನಸ್ಸಿಗೇನು? ಅಂದಿತು ಹಾಗೆ....; ಫ್ಯಾನ್ ಗಾಳಿ ಬಿಸಿಯುಸಿರು ಬಿಡುತ್ತಿತ್ತು. ಕತ್ತಿನ ಹತ್ತಿರದ ಗುಬ್ಬಿಯನ್ನು, ತಗೆದು ಗಾಳಿಗೆ ಮೈಯ್ಯೊಡ್ಡುತ್ತಾ ಸೋಫಾದ ಮೇಲೆ ಕುಕ್ಕುರಿಸಿದೆ.

ಮತ್ತೆ ಅದೇ ಯೋಚನೆ, 'ಬೇಗನೇ ಬರುತ್ತೇನೆಂದು ಹೋಗಿದ್ದಳು.....' ಬರಬಹುದು ಎಂದೆ. ಆ ಧ್ವನಿ ಇಡೀ ಕೋಣೆಯಲ್ಲಿ ಧುಮುಧುಮಿಸುತ್ತಿತ್ತು.

ಮಗ ಬಂದ. ಸೊಸೆಯೂ ಸ್ವಲ್ಪ ಹೊತ್ತಿನ ನಂತರ ಬಂದಳು. ಅವನು ಬರುತ್ತಾ ಈಸಿ ಚೇರ್‌ನ ಮೇಲೆ ಕುಳಿತ 'ಉಸ್ಸಪ್ಪಾ' ಎಂದು. ಕೇಳಬೇಕೆಂದುಕೊಂಡೆ, ''ಏನಪ್ಪಾ, ಅಮ್ಮ ಎಷ್ಟು ಹೊತ್ತಾಯ್ತು ಕೆಳಗೆ ಹೋಗಿದ್ದವಳು ಬರಲಿಲ್ಲ?'' - ಪಾಪ; ಅವನಲ್ಲಿ ಏಕೆ ಈ ಪ್ರಶ್ನೆ ಎತ್ತಬೇಕು? ಕಛೇರಿಯಲ್ಲಿ ಕೆಲಸ ಮಾಡಿ ಸುಸ್ತಾಗಿದ್ದಾನೆ ಎಂದುಕೊಂಡೆ ಮನಸ್ಸಿನೊಳಗೆ. ಸೊಸೆ ಬಂದವಳು ನೇರವಾಗಿ ಅಡಿಗೆ ಮನೆ ಹೊಕ್ಕಳು..... ಬೆಳಗಿನಿಂದ ಸಂಜೆಯವರೆಗೆ ಅವರದು ಯಾಂತ್ರಿಕ ಬದುಕು. ಆದರೆ, ಸೊಸೆ ಲತಾಳಿಗೂ ಅತ್ತೆಯ ಬಗ್ಗೆ ಕಾಳಜಿ ಇಲ್ಲವಲ್ಲ, ಯಾಕೆ ಇದೆಲ್ಲ....

ನನ್ನ ಮನಸ್ಸೇ ನನಗೆ ಅರ್ಥವಾಗ್ತಾ ಇಲ್ಲ. ಅಥವಾ ಅವರು ಅರ್ಥ ಮಾಡಿಕೊಳ್ಳಲ್ವಾ? ಕಿಟಕಿಯ ಕಂಬಿ ಹಿಡಿದೇ ನಿಂತೆ. ಉದ್ದುದ್ದನೆಯ ಸರಳುಗಳ ಹಿಂದೆ, ನಾನೊಬ್ಬ ಬಂದಿ ಎಂದೆಸಿತು. ಇವರಲ್ಲಿ ಹೇಗೆ ಕೇಳಲಿ......

ಲತಾ ಉಡುಪು ಬದಲಿಸಿ ಒಳಗಿನಿಂದ ಮೂರು ಕಪ್ ಚಹ ತಂದು ಟೀಪಾಯಿಯ ಮೇಲೆ ಇಟ್ಟಳು. ತಾನೂ ಒಂದನ್ನು ತೆಗೆದುಕೊಂಡಳು.

ನನಗೆ, 'ನನ್ನ ಹೆಂಡತಿ ನಾನು' ಬಿಟ್ಟರೆ, ಬೇರೆ ಯಾವುದೂ ಈ ಸಂಜೆಯಲ್ಲಿ ಹೊಳೆಯುತ್ತಿರಲಿಲ್ಲ. ಕಿಟಕಿಯಾಚೆಗೆ ಯಾವುದೋ ಹಕ್ಕಿ ಆರ್ತನಾದ ಮಾಡುತ್ತಾ ಮರಳಿಗೂಡಿಗೆ ಸಾಗುತ್ತಿತ್ತು.



'ಹಾಗಾದರೆ ಅವಳೆಲ್ಲಿ ಹೋದಳು.....'

"ಮಾವಾ" ಲತಾಳ ಧ್ವನಿಗೆ ಈ ಲೋಕಕ್ಕೆ ಬಂದೆ. ಬಹಳ ಹೊತ್ತು ಮೂವರ ನಡುವೆ ಮೌನ. ಅವರಿಬ್ಬರಿಗೆ ಸುಸ್ತು, ನನಗೆ ಯೋಚನೆ; ಅದೇ..... 'ಇಷ್ಟು ಹೊತ್ತಾದರೂ ಆಕೆ ಬರಲೇ ಇಲ್ಲ, ಯಾಕೆ?'

ಟೀಪಾಯಿಯ ಬಳಿಗೆ ಬಂದೆ. ಚಹದ ಕಪ್ಪನ್ನು ಹಿಡಿದು ಗುಟುಕರಿಸುವಂತೆಯೇ ಮನಸ್ಸು ಏನೇನೋ ಯೋಚನೆಗೈಯ್ಯುತ್ತಿತ್ತು. ನಾನೇ ಮಾತಿಗೆ ಆರಂಭಿಸಿದೆ,

"ಹೇಗಾಯ್ತು ಆಫೀಸು......"

"ಮಾಮೂಲು......." ಔದಾಸೀನ್ಯದ ಮಾತು ಇಬ್ಬರಿಂದಲೂ.

ತಕ್ಷಣವೇ ಕೇಳಬೇಕೆಂದುಕೊಂಡ ನನ್ನ ಮುಖ್ಯ ಪ್ರಶ್ನೆಯನ್ನು ತುಂಡರಿಸುವವನಂತೆ, ರವಿ ಹೇಳಿದ, "ಪಪ್ಪಾ, ನೀವು ಹೋಗಿ ಮಲಗಿ. ಆದಷ್ಟು ರೆಸ್ಟಲ್ಲಿರಬೇಕು. ಡಾಕ್ಟರ್ ಸಹ ಹೇಳಿದ್ದಾರೆ. ನಿಮ್ಮ ಮುಖ ನೋಡಿದ್ರೆ ಬಹಳ ಸುಸ್ತಾದ ಹಾಗಿದೆ. ಅಮ್ಮನೂ ಹೀಗೇ ಕಳೆದುಕೊಂಡ ಮಗನಿಗಾಗಿ, ಯೋಚಿಸುತ್ತಾ......"

"ಹಾಂ! ಅದೇ ಕೇಳಬೇಕೆಂದುಕೊಂಡಿದ್ದು. ಅಮ್ಮ ಎಲ್ಲಿ ಹೋದಳು?"

"ಹೋದಳು..... ನೀವೇ ನೋಡಿದ್ದೀರಲ್ಲ." ಎಂದ ರವಿ ಚುಟುಕಾಗಿ.

"ಎಲ್ಲಿಗೆ?" ಎಂಬ ನನ್ನ ಪ್ರಶ್ನೆಗೆ ಉತ್ತರ ಆದಾಗಿರಲಿಲ್ಲ. ಮನಸ್ಸಲ್ಲೇನೋ ಅದೇ ಅವಳದೇ ನೆನಪು.....

"ಯಾಕೆ ಹೋದಳು.....?"

ಒಳಗಿನಿಂದಲೇ ಲತಾಳ ಮಾತು ಕೇಳಿಬರುತ್ತಿತ್ತು- "ಅವರಿಗೆ ಅತ್ತೆ ಹೋದಂದಿನಿಂದ ಹೀಗೇ ಮರೆವು.... ವಿಪರೀತ, ಅದೇ ಒಂದು ಕಾಹಿಲೆಯಾಗುತ್ತದೋಂತ..."

"ಅಮ್ಮನಿಗೆ ಅಪಘಾತವಾಗಿದ್ದು, ಹೀಗೆ ಕೆಳಗೆ ಹೋದಾಗ ಅದನ್ನು ಮರೆತರೇ ಪಪ್ಪ, ಇಷ್ಟು ಬೇಗ....?" ರವಿ ಡ್ರೆಸ್ ಬದಲಾಯಿಸುತ್ತಾ ಉತ್ತರಿಸುತ್ತಿದ್ದ.

ಹೌದಲ್ಲ, ಅವಳಿಗಾಗಿ ದಿನವೂ ಕಾಯುತ್ತಿದ್ದೆ. ಇದೇ ಸಂಜೆಗೆ; ಮಲಗುತ್ತಾ ಹೊದಿಕೆಯನ್ನೂ ಮುಖಕ್ಕೆ ಸರಿಸಿಕೊಂಡೆ. ಫ್ಯಾನ್ ಗಾಳಿಗೆ ಅವರ ಮಾತುಗಳು ಕೇಳಿಸುತ್ತಿರಲಿಲ್ಲ. ಕೇಳಿಸಿದರೂ ಅರ್ಥವಾಗುತ್ತಿಲ್ಲ. ಅರ್ಥವಾದರೂ ಏನು ಪ್ರಯೋಜನ?

"ಅವರ ಕೋಣೆಯ ದೀಪ ಆರಿಸು. ನಂತರ ಊಟಕ್ಕೆ ಕರೆದರಾಯ್ತು." ರವಿ ಹೆಂಡತಿಗೆ ಹೇಳುತ್ತಿರುವುದನ್ನು ಕೇಳುತ್ತಲೇ ನನ್ನೊಳಗೆ ನಾನೇ ನಿದ್ದೆ ಹೋದೆ. ●

ಸಾಧುಗಳು ಬಡತನವನ್ನು ತಪ್ಪಿಸಿಕೊಳ್ಳಬಹುದು. ಆದರೆ ಬಡರಾಷ್ಟ್ರವು ಸಾಧುಗಳ ರಾಷ್ಟ್ರವಾಗಲಾರದು.

– ಸರ್ ಮೈಲ್ಸ್ ಥಾಮಸ್

ನಗುವವರಿಗೆ ಹೆಣ್ಣು, ಅಳುವವರಿಗೆ ಹೊನ್ನು, ಓದುವವರಿಗೆ ವಿದ್ಯೆ, ತ್ಯಾಗ ಮಾಡುವವರಿಗೆ ಕೀರ್ತಿ.

– ಸುಭಾಷಿತ

(ಸಂಗ್ರಹ) ಭೀಮಸೇನ ಪದಕಿ

ವೈಜ್ಞಾನಿಕ ವಿಧಾನಗಳಿಂದ

ಪಿತೃತ್ವ ನಿರ್ಧಾರ

ಎಂ. ಶಿವರಾಮ ಆಚಾರ್

ಆಧುನಿಕ ಯುಗದಲ್ಲಿ ಪಿತೃತ್ವವನ್ನು ನಿರ್ಧರಿಸಬೇಕಾದ ಪ್ರಮೇಯಗಳು ನ್ಯಾಯಾಲಯವನ್ನು ಪ್ರವೇಶಿಸುವುದುಂಟು. ಈಗಲೀಗ ನ್ಯಾಯಾಧೀಶರುಗಳು ಅಂತಹ ನ್ಯಾಯ ನಿರ್ಧಾರಕ್ಕಾಗಿ ವೈಜ್ಞಾನಿಕ ವಿಧಾನಗಳಿಗೆ ಮೊರೆ ಹೋಗುವುದುಂಟು. ಕೆಳಗೆ ವಿವರಿಸಲಾದ ಎರಡು ಉದಾಹರಣೆಗಳನ್ನು ನೋಡಿ:

ಕೇರಳದ ಆಲ್ಲೆಪ್ಪಿ ನಗರದಲ್ಲಿ ಭಿಕ್ಷುಕಿಯೊಬ್ಬಳು 20 ವರ್ಷದ ತನ್ನ ಅಂಧ ಮಗಳೊಂದಿಗೆ ಭಿಕ್ಷೆ ಬೇಡುತ್ತಿದ್ದುದನ್ನು ನೋಡಿದ ಕೆಲವರು ಆ ತರುಣಿ ಭಿಕ್ಷುಕಿ ಹನ್ನೆರಡು ವರ್ಷಗಳ ಹಿಂದೆ ಕಾಣೆಯಾದ ರಮ್ಲಾ ಎಂಬ ಹುಡುಗಿಯೆಂದು ಭಾವಿಸಿ, ರಮ್ಲಾನ ತಾಯಿ ಆಯಿಷಾ ಬೀವಿಗೆ ಈ ವಿಷಯ ತಿಳಿಸಿದರು. ಆಯಿಷಾ ಬೀವಿ ಕೂಡಲೇ ಮನೆಯಿಂದ ಓಡಿಬಂದು ಭಿಕ್ಷುಕಿ ತರುಣಿಯನ್ನು ತನ್ನ ಕಾಣೆಯಾದ ಮಗಳು ರಮ್ಲಾಳೆಂದೇ ಭಾವಿಸಿ ಬರಸೆಳೆದು ಅಪ್ಪಿಕೊಂಡಳು. ಇದನ್ನು ಭಿಕ್ಷುಕಿ ತಾಯಿ ಬಲವಾಗಿ ಆಕ್ಷೇಪಿಸಿ ತಾನು ಮುತ್ತಮ್ಮಳೆಂದೂ ಹುಡುಗಿ ತನ್ನ ಮಗಳು ರಮಣಮ್ಮಳೆಂದೂ ತೆಲುಗು ಭಾಷೆಯಲ್ಲಿ ಸಾರಿ ಸಾರಿ ಹೇಳತೊಡಗಿದಳು. ಆದರೆ ಹುಡುಗಿಯು ಮುಖ ಕಾಣೆಯಾದ ರಮ್ಲಾಳನ್ನು ಹೋಲುತ್ತಿದ್ದುದರಿಂದ ಹುಡುಗಿಯನ್ನು ಭಿಕ್ಷುಕಿಯಿಂದ ಬೇರ್ಪಡಿಸಿ ಆಯಿಷಾ ಬೀವಿಯ ಜತೆಗೆ ನೆರೆದ ಜನರು ಮನೆಗೆ ಕಳುಹಿಸಿದರು. ಈ ವಿಚಾರ ಪೋಲೀಸರಿಗೆ ತಿಳಿದು ಅವರು ಈ ಪ್ರಶ್ನೆಯನ್ನು ನ್ಯಾಯಾಲಯಕ್ಕೆ ಒಯ್ದರು. ಕಾರಣ ಮಲೆಯಾಳ ಭಾಷೆಯ ಹೊರತು ಬೇರೆ ಭಾಷೆ ತಿಳಿಯದ ಪೋಲೀಸರು ತೆಲುಗು ಮಾತ್ರ ಮಾತಾಡಬಲ್ಲ ಭಿಕ್ಷುಕಿ ತಾಯಿ- ಮಗಳಿಬ್ಬರನ್ನು ಎಷ್ಟು ಪ್ರಶ್ನಿಸಿದರೂ ಅವರಿಗೆ ಅರ್ಥವಾದುದು ತಾಯಿ-ಮಗಳ ಕಣ್ಣೀರು, ಚೀರಾಟ. ಭಿಕ್ಷುಕಿಯನ್ನು ಭಿಕ್ಷುಕಗೃಹಕ್ಕೂ ಮಗಳನ್ನು ಆಯಿಷಾ ಬೀವಿಯೊಂದಿಗೆ ಇರಲೂ ಕಳುಹಿಸಲಾಯಿತು. ಹುಡುಗಿಯ ನಿಜವಾದ ತಾಯಿ ಯಾರು ಎಂಬುದು ಇನ್ನೂ ತೀರ್ಮಾನವಾಗಬೇಕಾದ ವಿಷಯ. ಇದೂ

ಒಂದು ದಿನದ ಸಂಪಾದನೆ

ಪಂಡಿತ ಮೋತಿಲಾಲ ನೆಹರೂ ಅವರು ಸುಪ್ರಸಿದ್ಧ ವಕೀಲರೆಂದು ಹೆಸರು ಗಳಿಸಿದ್ದ ಕಾಲವದು. ಒಂದು ದಿನ ಅವರ ಅಲಹಾಬಾದಿನ "ಆನಂದ ಭವನ"ಕ್ಕೆ ಬಡವನೊಬ್ಬ ಬಂದು ತನ್ನ ಮಗಳ ಮದುವೆ ನಿಶ್ಚಯವಾಗಿರುವುದಾಗಿಯೂ ಬಡವನಾದ ತನ್ನಲ್ಲಿ ಹಣವಿಲ್ಲವೆಂದೂ ಹೇಳಿ ಮಗಳ ಮದುವೆಗೆ ಧನ ಸಹಾಯ ಮಾಡುವಂತೆ ಮೋತಿಲಾಲರನ್ನು ಅಂಗಲಾಚಿ ಬೇಡಿದ. "ಎಷ್ಟು ಹಣ ಬೇಕು?" ಎಂದು ಮೋತಿಲಾಲರು ಅವನನ್ನು ಕೇಳಿದರು.

"ಮೂನ್ನುರು ರೂಪಾಯಿ" ಬಡವ ದೀನನಾಗಿ ಹೇಳಿದ.

ಮೋತಿಲಾಲರು ತಮ್ಮ ಕಾರ್ಯದರ್ಶಿಯನ್ನು ಕರೆದು, "ನನ್ನ ಇಂದಿನ ವಕಾಲತ್ತಿನ ಸಂಪಾದನೆಯನ್ನೆಲ್ಲಾ ಸಂಜೆ ಈತನಿಗೆ ಕೊಡು" ಎಂದು ಆದೇಶ ನೀಡಿರು. ಅವರ ಈ ದಿನದ ಸಂಪಾದನೆ ಅಷ್ಟು ಆಗುತ್ತದೆಯೋ ಇಲ್ಲವೋ ಎಂದು ಆ ಬಡವನಿಗಾದರೋ ಮನಸ್ಸಿನಲ್ಲಿ ದುಗುಡ. ಅದನ್ನೇ ಮನಸ್ಸಿನಲ್ಲಿ ಚಿಂತಿಸುತ್ತ ಹಾಗೂ ಹೀಗೂ ಸಂಜೆಯಾದ ಬಳಿಕ ಕಾಲೆಳೆದುಕೊಂಡು ಮೋತಿಲಾಲರ ಮನೆಗೆ ಬಂದ.

ಮೋತಿಲಾಲರ ಕಾರ್ಯದರ್ಶಿಯೂ ಮೋತಿಲಾಲರ ಬಳಿ ಬಂದು, "ನಿಮ್ಮ ಇಂದಿನ ಗಳಿಕೆ ಸಾವಿರದ ಮುನ್ನೂರು ರೂಪಾಯಿಗಳಾಗಿವೆ. ಆ ಬಡವ ಕೇಳಿದ್ದು ಮುನ್ನೂರು ರೂಪಾಯಿ ಮಾತ್ರ, ಆತನಿಗೆ ಅಷ್ಟು ಹಣವನ್ನು ಕೊಟ್ಟು ಉಳಿದುದನ್ನು ನಿಮ್ಮ ಖಾತೆಗೆ ಸೇರಿಸಲೆ?" ಎಂದು ಕೇಳಿದ.

"ಇಲ್ಲ, ಇಲ್ಲ, ನನ್ನ ಇಂದಿನ ಸಂಪಾದನೆ ಎಷ್ಟಿದ್ದರೂ ಅಷ್ಟನ್ನೂ ಅವನಿಗೇ ಕೊಡುವುದಾಗಿ ಹೇಳಿದ್ದೇನೆ. ಅದರಲ್ಲಿ ಒಂದು ಪೈಸೆಯನ್ನೂ ಉಳಿಸಿಕೊಳ್ಳಲು ನಾನು ಇಚ್ಛಿಸುವುದಿಲ್ಲ" ಎಂದು ಹೇಳಿದ ಮೋತಿಲಾಲರು ಅಷ್ಟೂ ಹಣವನ್ನು ಆ ಬಡವನಿಗೆ ನೀಡಿದರು. ●

ಸಂಗ್ರಹ: ಮಮತಾ

ಅಲ್ಲದೆ ಈಗ ಭಿಕ್ಷಾಟನೆಗಾಗಿ ಹುಡುಗಿಯನ್ನು ಅಂಧಳನ್ನಾಗಿ ಮಾಡಲಾಗಿತ್ತೆ? ಎಂಬ ಪ್ರಶ್ನೆಯೂ ಉದ್ಭವಿಸಿತು. ಅಂಥೆ ರಮಣಮ್ಮಳ ಭಾಷೆ ಮೂಲವಾಗಿ ಮಲೆಯಾಳಿಯಾಗಿತ್ತೆ? ಎಂಬುದನ್ನು ಪರಿಶೀಲಿಸಲು ಪೋಲೀಸರು ಆಕೆಯ ಧ್ವನಿಮುದ್ರಣ ಮಾಡಿಸಿಕೊಂಡು ಆಗಾಗ್ಗೆ ಕೇಳಿಸಿಕೊಂಡರೂ ಒಂದೇ ಒಂದು ಮಲೆಯಾಳಿ ಪದ ಹೋಲುವ ಶಬ್ದ ಅವರಿಗೆ ಕೇಳಿ ಬರಲಿಲ್ಲ. ಹುಟ್ಟಿನಿಂದ ಕಲಿತ ಮಾತೃಭಾಷೆ 12 ವರ್ಷಗಳಲ್ಲಿ ಮರೆಯಲು ಸಾಧ್ಯವೆ? ಎಂಬ ಪ್ರಶ್ನೆಯು ಪೋಲೀಸರನ್ನು ಕಾಡಿತು. ಕೊನೆಗೆ ರಮಣಮ್ಮ ಅರ್ಥಾತ್ ರಮ್ಲಾಳನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿದರು. ಡಾ.ಪಿ.ವೇಣುಗೋಪಾಲ ಎಂಬವರು ಆಕೆಯನ್ನು ಪರೀಕ್ಷಿಸಿದಾಗ ಹುಡುಗಿಯ ಕಣ್ಣುಗಳಿಗೆ ಪೊರೆ ಬಂದು ಆಕೆ ಅಂಧಳಾದುದೆಂಬುದಾಗಿ ತಿಳಿಯಿತು. ಆಕೆಯ ಕಣ್ಣುಗೊಂಬೆಗಳೂ ಅಕ್ಷಿಪಟಲಗಳೂ ಆರೋಗ್ಯವಾಗಿರುವುದರಿಂದ ಬಲಾತ್ಕಾರದಿಂದ ಆಕೆಯನ್ನು ಕುರುಡಿಯಾಗಿಸಲಿಲ್ಲ ಎಂಬುದು ಗೊತ್ತಾಯಿತು. ಇನ್ನುಳಿದುದು ಆಕೆಯ ಪಿತೃತ್ವ ಪರೀಕ್ಷೆ. ಅದಕ್ಕಾಗಿ ಆಕೆಯ ರಕ್ತವನ್ನು ಆಯಿಷಾ ಬೀವಿ ಮತ್ತು ಆಕೆಯ ಪತಿ ಅಬ್ದುಲ್ ರಹಮಾನರವರ ರಕ್ತವನ್ನೂ ಪರೀಕ್ಷೆಗೊಳಪಡಿಸಲಾಯಿತು. ಇದರಿಂದ ರಮ್ಲಾ, ಆಯಿಷಾ ಬೀ ಮತ್ತು ಅಬ್ದುಲ್ ರಹಿಮಾನನವರಿಗೆ ಜನಿಸಿದ ಮಗಳಲ್ಲವೆಂಬುದು ಖಚಿತವಾಯಿತು. ರಮ್ಲಾಳ ಪ್ರಾಯವನ್ನು ತಿಳಿಯಲು ಆಕೆಯ ಎಲುಬಿನ ಪರೀಕ್ಷೆ ಜರುಗಿಸಲಾಯಿತು. ಅದರಿಂದ ಆಕೆ ಸಾಧಾರಣ 15ರಿಂದ 20ರವರೆಗಿನ ಪ್ರಾಯದವಳೆಂದು ಗೊತ್ತಾಯಿತು. ಬಾಲ್ಯದಲ್ಲಿ ಶಾಲೆಗೆ ಹೋಗುತ್ತಿದ್ದುದರಿಂದ ಶಾಲಾ ಸರ್ಟಿಫಿಕೇಟನ್ನೂ ಪರಿಶೀಲಿಸಲಾಯಿತು. ಆಗ ರಮ್ಲಾಳಿಗೆ ಈಗ 24 ವರ್ಷ ಎಂಬುದು ತಿಳಿದುಬಂತು. ಇವೆಲ್ಲ

ಪರೀಕ್ಷೆಗಳೂ ನ್ಯಾಯಾಲಯದ ಆಜ್ಞೆಯ ಮೇರೆಗೆ ಜರುಗಿಸಲ್ಪಟ್ಟು ರಮ್ಲಾಳು ಆಯಿಷಾ ಬೀವಿಯ ಮಗಳಲ್ಲವೆಂದು ಸಾಬೀತಾಯಿತು. ಈ ಮಧ್ಯೆ ಹುಡುಗಿಯ ಕಣ್ಣುಗಳನ್ನು ಶಸ್ತ್ರ ಚಿಕಿತ್ಸೆ ಮೂಲಕ ಗುಣಪಡಿಸಲಾಯಿತು. ಹುಡುಗಿ ಮಲೆಯಾಳಿ ಮಾತಾಡುವುದನ್ನೂ ಕಲಿತಳು.

ಕೊನೆಗೆ ನ್ಯಾಯಾಲಯವು ಈ ಎಲ್ಲಾ ವಿಷಯಗಳನ್ನೂ ಪರಿಶೀಲಿಸಿ ಇತ್ತ ತೀರ್ಮಾನವೇನು ಗೊತ್ತೇ? ಆಯಿಷಾ ಬೀವಿ ನಿಜವಾದ ತಾಯಿಯಲ್ಲವಾದರೂ ಹುಡುಗಿ ರಮ್ಲಾಳು ಈವರೆಗೆ ಹೊಸ ತಂದೆತಾಯಿಗಳೊಡನೆ ಹೊಂದಿಕೊಂಡು ಜೀವಿಸುವುದರಿಂದ ಈಗ ಆಕೆಯನ್ನು ಪುರಾವೆಗಳ ಆಧಾರದಲ್ಲಿ ಈಗಿನ ತಂದೆ ತಾಯಂದಿರಿಂದ ಬೇರ್ಪಡಿಸಿದಲ್ಲಿ ಆಕೆಗೆ ದೊಡ್ಡ ಮಾನಸಿಕ ಆಘಾತವಾಗಬಹುದು; ಆದ್ದರಿಂದ ಮಾನವೀಯತೆಯ ದೃಷ್ಟಿಯಿಂದ ಆಕೆ ಹೊಸ ತಂದೆ ತಾಯಂದಿರೊಂದಿಗೆ ಇರಬೇಕು ಎಂದು. ಆದರೆ ಹೊತ್ತು, ಹೆತ್ತ ನಿಜವಾದ ತಾಯಿ ಮುತ್ತಾನಮ್ಮನ ಅಳಲಿಗೆಲ್ಲಿದೆ ಸಾಂತ್ವನ? ಇಲ್ಲಿ ನ್ಯಾಯಾಧೀಶರು ಓರ್ವ ಮುಸ್ಲಿಮನಾದುದರಿಂದ ಈ ರೀತಿ ಪುರಾವೆಗಳಿಗೆ ವಿರೋಧವಾಗಿ ನ್ಯಾಯದಾನ ಮಾಡಿರಬಹುದೆ? ಎಂಬ ಸಂಶಯಕ್ಕೂ ಎಡೆ ಇದೆ.

ತಮಿಳುನಾಡಿನಿಂದ ಬಂದ ಇನ್ನೊಂದು ಉದಾಹರಣೆಯನ್ನು ನೋಡಿ. ತಮಿಳುನಾಡಿನ ಮಡಿಪಕ್ಕಂ ಎಂಬಲ್ಲಿ ಆದಿ ವೀರರಾಮ ಪಾಂಡ್ಯನೆಂಬಾತನು ಪತ್ನಿ ಕಣೆಯಮ್ಮಾಳ್ ಹಾಗೂ ಮಗು ಲಕ್ಷ್ಮಿಯೊಂದಿಗೆ ಜೀವಿಸುತ್ತಿದ್ದ. ಕಳೆದ ವರ್ಷ ಮೇ 15ರಂದು ತನ್ನ ಮಗಳು ಕಾಣೆಯಾದಳೆಂದು ತಾಯಿ ಕಣೆಯಮ್ಮಾಳಳು ಪಳವಂತಂಗಳ್ ಪೋಲೀಸು ಸ್ಟೇಶನ್ನಿಗೆ ದೂರಿತ್ತಳು. ಹತ್ತು ತಿಂಗಳ ಬಳಿಕ ತಂಜಾವೂರು ಜಿಲ್ಲೆಯ ನೀಲಪಡಿ ಗ್ರಾಮದ ದೊಂಬರಾಟ ಮಾಡಿ ಜೀವಿಸುವ ಪೆರುಮಾಳ್ ಮತ್ತು ಆತನ ಮಡದಿ ಕಾಳಿಯಾಮ್ಮಾಳ್‌ರ ಪರ ಪಲ್ಲಾವರಂನ ಬಳಿ ಮಗು ಇರುವುದನ್ನು ಕಂಡ ಕಣೆಯಮ್ಮಾಳಳು ಪೋಲೀಸರಿಗೆ ತಿಳಿಸಿದುದರಿಂದ ಅವರು ಮಗುವನ್ನು ತಂದು ಕಣೆಯಮ್ಮಾಳಳಿಗೇ ಒಪ್ಪಿಸಿದರು. ಆಗ ಕಾಳಿಯಮ್ಮಾಳ್ ದಂಪತಿಗಳು ಮದರಾಸಿನ ಸೈದಾಪೇಟೆಯ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟರಲ್ಲಿ ದೂರು ಸಲ್ಲಿಸಿ ತಮ್ಮ ಮಗಳು ಮೇರಿಯನ್ನು ತಮಗೆ ನೀಡಬೇಕೆಂದು ಕೇಳಿಕೊಂಡರು. ಆ ಪ್ರಕಾರ ಪೋಲೀಸರು ಮಗುವನ್ನು ತಮ್ಮ ವಶಪಡಿಸಿಕೊಂಡು ಆ ಮಗುವನ್ನು ಹಿಂದೆ ಪಡೆಯಬೇಕಾದರೆ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟರ ಆಜ್ಞೆ ಬೇಕೆಂದೂ ತಿಳಿಸಿದರು. ಇದರಿಂದ ನೊಂದ ಕಣೆಯಮ್ಮಾಳಳು ಮದ್ರಾಸು ಹೈಕೋರ್ಟಿನ ಮೊರೆಹೊಕ್ಕಳು. ಹೈಕೋರ್ಟಿನ ನ್ಯಾಯಾಧೀಶರಾದ ಟಿ.ಎಸ್.ಅರುಣಾಚಲಂರವರು ಇದನ್ನು ವಿಚಾರಣೆಗೆ ಎತ್ತಿಕೊಂಡಾಗ ಕೆಳ ನ್ಯಾಯಾಲಯದಲ್ಲಿಯೂ ಇದು ವಿಚಾರಣೆಯಾಗಿದ್ದುದನ್ನು ತಿಳಿದು ಈ ವಿವಾದ ಬಗೆಹರಿಯುವವರೆಗೆ ಯಾವ ತಾಯಿಯ ಬಳಿಯೂ ಮಗುವನ್ನು ಇರಗೊಡಿಸದೆ ತ್ರೈನಾಂ ಪೇಟೆಯ ಬಾಲ ಮಂದಿರದಲ್ಲಿರಿಸಬೇಕೆಂದೂ ಅದರ ಖರ್ಚನ್ನು ಪಳವಂತಂಗಳ್ ಪೋಲೀಸು ಸ್ಟೇಶನ್ನಿನವರು ವಹಿಸಬೇಕೆಂದೂ ಆಜ್ಞಾಪಿಸಿ, ಬಳಿಕ ಮಗುವಿನ ನಿಜವಾದ ತಾಯಿ ಯಾರೆಂದು ತಿಳಿಯಲು ಮದರಾಸಿನ ಫೊರೆನ್ಸಿಕ್ ವಿಜ್ಞಾನ ಪ್ರಯೋಗಾಲಯದ ನಿರ್ದೇಶಕರಿಗೆ ಪತ್ರ ಬರೆದು ಆಜ್ಞಾಪಿಸಿದರು. ಇದರ ನಿರ್ದೇಶಕರೂ, ತಾರಾಮಣಿಯ ವೈದ್ಯಕೀಯ ವಿಜ್ಞಾನದ ಸ್ನಾತಕೋತ್ತರ ಪದವಿ ಸಂಸ್ಥೆಯೂ ಸೇರಿ ಈ ಬಗೆಗೆ ಅನ್ವೇಷಣೆಗೆ ಆರಂಭಿಸಿದವು.

ಆದಿ ವೀರರಾಮ ಪಾಂಡ್ಯ ಮತ್ತು ಕಣೆಯಮ್ಮಾಳ್ ದಂಪತಿಗಳಿಗೆ ಬೇರೆ ಇಬ್ಬರು ಮಕ್ಕಳಿ



"ಸ್ವಾಮಿ ಇನ್ನೊಂದು ಬೀಡಿ ಕೊಡಿ. ಅಪ್ಪಾದೆ, ಸೂರಾಗತ್ತೆ. ಲೆಕ್ಕಕ್ಕೆ ಸುಲಭ ಅಲ್ವಾ?"

ದ್ದಾರೆ. ಪೆರುಮಾಳ್ ಮತ್ತು ಕಾಳಿಯಾಮ್ಮಾಳ್ ದಂಪತಿಗಳಿಗೆ ಕೂಡ ಮೇರಿಯಲ್ಲದೆ ಬೇರೊಂದು ಮಗುವೂ ಇದೆ. ಮೇಲಿನ ಸಂಸ್ಥೆಗಳು ಈ ಎರಡೂ ದಂಪತಿಗಳ ಹಾಗೂ ಮಕ್ಕಳ ರಕ್ತ ಹಾಗೂ ಜೊಲ್ಲುಗಳನ್ನು ಬೇರೆ ಬೇರೆಯಾಗಿ ಸಂಗ್ರಹಿಸಿ, ಅದನ್ನು ಹತ್ತು ಬಾರಿ ವಿವಿಧ ಪರೀಕ್ಷೆಗೊಳಪಡಿಸಲಾಯಿತೆಂದು ನಿರ್ದೇಶಕ ಚಂದ್ರಶೇಖರನ್ನರು ಹೇಳಿಕೆಯಿತ್ತರು. ಅಮೇರಿಕದ ಮೆಡಿಕಲ್ ಅಸೋಸಿಯೇಶನ್ನಿನವರು ಒಂದು ಮಗುವಿನ ಪಿತೃತ್ವ ಅಥವಾ ಮಾತೃತ್ವವನ್ನು ಸ್ಥಾಪಿಸುವ ಒಂದು ಅಂತಾರಾಷ್ಟ್ರೀಯ ಮಟ್ಟವನ್ನು ಸ್ಥಾಪಿಸಿರುವುದರಿಂದ ಈ ಇಬ್ಬರೂ ದಂಪತಿಗಳ ರಕ್ತ ಮತ್ತು ಜೊಲ್ಲಿನ ಪರೀಕ್ಷೆಯ ಫಲಿತಾಂಶಗಳು ಆ ಮಟ್ಟವನ್ನು ಸ್ಥಾಪಿಸಿರಲಿಲ್ಲವೆಂದೂ ಆದರೆ ಎಚ್.ಎಲ್.ಎ (Human Leucocyte Antigen-A) ಪರೀಕ್ಷೆಯಿಂದ ನಿಜವಾದ ಹೆತ್ತವರನ್ನು ನಿಸ್ಸಂದೇಹವಾಗಿ ನಿರ್ಧರಿಸಲು ಸ್ಪಷ್ಟವಾಗಿ ಸಾಧ್ಯವಾಯಿತೆಂದೂ ನಿರ್ದೇಶಕರಾದ ಚಂದ್ರಶೇಖರನ್ನರು ಹೇಳಿದ್ದಾರೆ. ಈ ಪರೀಕ್ಷೆಗೆ ಬೇಕಾದ ಎಂಟಿ ಸೆರಾ (Anti-Sera) ಎಂಬ ಅಗತ್ಯವಾದ ದುಬಾರಿ ವಸ್ತುವನ್ನು ವಿದೇಶದಿಂದ ಆಮದು ಮಾಡಲಾಯಿತು. ಈ ಎರಡೂ ದಂಪತಿಗಳ ರಕ್ತ-ಜೊಲ್ಲುಗಳನ್ನು ಈ ರೀತಿ ಪರೀಕ್ಷೆಗೊಳಪಡಿಸಿದಾಗ ನಿಖರವಾದ ಫಲಿತಾಂಶಗಳು ಬರಲಿಲ್ಲವೆಂದೂ (ಅಂದರೆ ಕಾಳಿಯಾಮ್ಮಾಳ್ ಮತ್ತು ಪೆರುಮಾಳ್ ದಂಪತಿಗಳ ಪರವಾಗಿ ಶೇಕಡಾ 99.999ರಷ್ಟು ಫಲಿತಾಂಶವೂ ಕಣಿಯಮ್ಮಾಳ್ ಮತ್ತು ಆದಿವೀರರಾಮ ಪಾಂಡ್ಯ ದಂಪತಿಗಳ ಪರ ಫಲಿತಾಂಶವು 99.8ರಷ್ಟೂ ದೊರಕಿತೆಂದೂ) ಆಗ ನಿರ್ಧಾರಾತ್ಮಕವಾಗಿ ನಡೆಸಿದ ಎಚ್.ಎಲ್.ಎ. ಪರೀಕ್ಷೆಯಿಂದಾಗಿ ಕಾಳಿಯಮ್ಮಾಳ್ ದಂಪತಿಗಳೇ ನಿಜವಾದ ಹೆತ್ತವರೆಂದು ನಿರ್ದೇಶಕರು ಅಭಿಪ್ರಾಯಪಟ್ಟಿದ್ದರು. ಈ ನಿರ್ಧಾರವನ್ನನುಸರಿಸಿ ನ್ಯಾಯಾಧೀಶ ಟಿ.ಎಸ್.ಅರುಣಾಚಲಂರವರು ಕಾಳಿಯಮ್ಮಾಳ್ ದಂಪತಿಗಳೇ ನಿಜವಾದ ಮಗುವಿನ ಹೆತ್ತವರೆಂದು ತೀರ್ಪು ನೀಡಿದರು. ಅದೇ ಪ್ರಕಾರ ಮಗುವನ್ನು ಕಾಳಿಯಮ್ಮಾಳಳ ವಶವಿತ್ತಾಗ ಅದು ಯಾವ ವಿರೋಧವನ್ನೂ ತೋರ್ಪಡಿಸದೆ ಆಕೆಯೊಂದಿಗೆ ಹೋಯಿತು. ಹೀಗೆ 45 ದಿನಗಳ ಬಳಿಕ ತಮ್ಮ ಮಗು ದೊರಕಿದುದರಿಂದ ಆನಂದತುಂದಿಲರಾದ ದೊಂಬರ ದಂಪತಿಗಳು ನ್ಯಾಯಾಧೀಶರಿಗೆ ಉದ್ದಂಡ ಪ್ರಣಾಮ ಮಾಡಿ ಪೋಲೀಸರ ರಕ್ಷಣೆಯಲ್ಲಿ ನ್ಯಾಯಾಲಯದಿಂದ ಹೊರ ನಡೆದರು.

ಇಲ್ಲಿ ಮೊದಲಿನ ಉದಾಹರಣೆಯಲ್ಲಿ ಸಂಬಂಧಪಟ್ಟ ವ್ಯಕ್ತಿಗಳ ರಕ್ತ ಪರೀಕ್ಷೆ, ಎಲುಬಿನ ಪರೀಕ್ಷೆಗಳಿಂದ ಪಿತೃತ್ವವನ್ನು ನಿರ್ಧರಿಸ

ಲಾಯಿತೆಂದು ತಿಳಿಯುತ್ತದೆ. ಎರಡನೆ ಉದಾಹರಣೆಯಲ್ಲಿ ರಕ್ತ ಮತ್ತು ಜೊಲ್ಲುಗಳ ಪರೀಕ್ಷೆ ನಡೆಸಿ ಪಿತೃತ್ವವನ್ನು ನಿರ್ಧರಿಸಲಾಯಿತಲ್ಲದೆ ಮದ್ರಾಸಿನ ಪಿತೃತ್ವ ಪರಿಶೀಲನಾ ಕೇಂದ್ರ, (Disputed Paternity Centre, Department of Forensic Service, Madras) ವು ಅಮೇರಿಕದ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಸಹಾಯದಿಂದ ಈ ಪರಿಶೀಲನೆಯನ್ನು ಕೈಗೊಂಡಿತೆಂಬುದು ಗೊತ್ತಾಗುತ್ತದೆ. ಈ ಪರೀಕ್ಷೆಗೆ ಮುಖ್ಯವಾಗಿ ಬೇಕಾದುದು ಪಿತೃಗಳ ವಂಶವಾಹಿಗಳು (genes). ರಕ್ತದಿಂದಲೂ, ಜೊಲ್ಲಿನಿಂದಲೂ ಇದನ್ನು ನಿರ್ಧರಿಸುತ್ತಾರಂತೆ. ಇವುಗಳನ್ನು ಹೆತ್ತವರಿಂದಲೂ, ಮಕ್ಕಳಿಂದಲೂ ಸಂಗ್ರಹಿಸಿ ಅನೇಕ ತರದ ಪ್ರಯೋಗಗಳಿಗೆ ಒಳಪಡಿಸುತ್ತಾರೆ. ಇದರಲ್ಲಿ x ಮತ್ತು y ವಂಶವಾಹಿಗಳನ್ನು ಪರಿಶೀಲಿಸಿ ಇದರಲ್ಲಿ ಸೇರದೆ ಹೊರಗುಳಿದುದು ಯಾವುದೆಂದು ನಿರ್ಧರಿಸುವರು. ಆ ಮೂಲಕ ಹೆತ್ತವರು ಯಾರೆಂಬುದನ್ನು, ಅಂದರೆ ಯಾರು ಅಲ್ಲವೆಂಬುದನ್ನು ನಿರ್ಧರಿಸಲಾಗುತ್ತದೆ. ಹೀಗೆ ನಿರ್ಧರಿಸಬೇಕಾದಲ್ಲಿ ಅದಕ್ಕೊಂದು ಅಂತಾರಾಷ್ಟ್ರೀಯ ಅಂಗೀಕೃತ ಮಟ್ಟವೊಂದಿದ್ದು ಅದನ್ನನುಸರಿಸಿ ಮಗುವಿನ ಪಿತೃತ್ವವನ್ನು ನಿರ್ಧರಿಸಲಾಗುತ್ತದೆ.

ವಾದಗ್ರಸ್ತ ಹೆತ್ತವರ ರಕ್ತವನ್ನೂ, ಮಕ್ಕಳ ರಕ್ತವನ್ನೂ ಸಂಗ್ರಹಿಸಿ ಅವನ್ನು ಅನೇಕ ಪರೀಕ್ಷೆಗೊಳಪಡಿಸುವ ಮೊದಲು ರಕ್ತದ ಗುಂಪನ್ನು A, B, O ಪಂಗಡಗಳಾಗಿ ವಿಭಾಗಿಸುವರು. ಇದನ್ನು ಎಂಟಿ-ಸೆರಾ ಎಂಬ ವಸ್ತುವಿನೊಂದಿಗೆ ಉಪಯೋಗಿಸಿ ಪರೀಕ್ಷೆ ಜರುಗಿಸಿ ಆತ ಮಗುವಿನ ತಂದೆ ಹೌದೋ ಅಲ್ಲವೋ ಎಂಬುದನ್ನು ಪರೀಕ್ಷಿಸುತ್ತಾರೆ.

ಇನ್ನು ರಕ್ತದ Rh ವಿಷಯ. ಇದರಲ್ಲಿ 64 ವಿಧಗಳಿದ್ದು ಇದರಿಂದ ಬಾಹ್ಯ ಲಕ್ಷಣಗಳು ಸಿಗುತ್ತವೆಯೆಂದೂ ಅವು ವಂಶವಾಹಿಗಳನ್ನೊಳಗೊಂಡಿದ್ದು ಇದರಿಂದ ಪಿತೃತ್ವವನ್ನು ಸ್ಥಾಪಿಸಬಹುದು ಇಲ್ಲವೆ ಅಲ್ಲಗಳೆಯಬಹುದು ಎಂದೂ ತಿಳಿಯಲಾಗಿದೆ.



"ರೀ! ನಿಮಗೆ ಮಾನಾ ಮರ್ಯಾದೆ ಏನಾದ್ರೂ ಇದೆಯೇನ್ರಿ? ಸಾಲ ಕೊಟ್ಟ ದಿನದಿಂದ್ಲೂ ಕಂಡಕಂಡಲ್ಲೆಲ್ಲ ಕೇಳ್ತಿದೀರಲ್ರೀ..."

ಮೂರನೆಯದಾಗಿ ಕಾಂಪ್ಲಿಮೆಂಟ್-2 ಪರೀಕ್ಷೆ. ಇದರಲ್ಲಿ ಸಿರಂನಲ್ಲಿ ಯಾವ ಪ್ರೋಟೀನುಗಳಿವೆಯೆಂದು ಕಂಡುಹಿಡಿದು ಅವನ್ನು ಶೀಘ್ರ (fast) ಹಾಗೂ ನಿಧಾನ (slow) ಮತ್ತು ಶೀಘ್ರ ಮತ್ತು ನಿಧಾನಗಳ ಪರೀಕ್ಷೆ ಮೂಲಕ ನಿರ್ಧರಿಸಲಾಗುವುದು. ಮತ್ತು MNS ವಂಶವಾಹಿಗಳನ್ನು ಕ್ಲಿಷ್ಟ ವಿಧಾನದ ಮೂಲಕ ನಿರ್ಣಯಿಸಲಾಗುವುದು. ಇನ್ನು ಕೆಂಪುಕಣದ ಎಂಜೈಮಿನಲ್ಲಿ Esdಯಲ್ಲಿ ಮೂರು ವಿಧದವುಗಳಿವೆಯಂತೆ. ಅಂತೆಯೇ GLO ರ ಪರೀಕ್ಷೆ ಕೂಡ-ನಡೆಸಿ ಅವುಗಳಿಂದ ಪ್ರತ್ಯೇಕವಾದವುಗಳನ್ನು ನಿರ್ಧರಿಸಲಾಗುತ್ತದೆ.

ಉದಾಹರಣೆಗೆ A, B, O ರಕ್ತದ ಗುಂಪಿನ ಕುರಿತು ಹೆತ್ತವರಿಬ್ಬರೂ 'O' ಗುಂಪಿಗೆ ಸೇರಿದವರಾಗಿದ್ದಲ್ಲಿ ಮಗು A, B ಅಥವಾ AB

ಗುಂಪಿಗೆ ಸೇರಿರಲಾಗದೆಂದೂ ಮಗುವಿನಲ್ಲಿ ಇಲ್ಲದ ವಂಶವಾಹಿಯು ತಂದೆ ತಾಯಿಗಳಲ್ಲಿ ಇದ್ದರೆ ಅದನ್ನು ಪ್ರತ್ಯೇಕಿಸಿ ಗಣನೆಗೆ ತೆಗೆದು ಕೊಳ್ಳದೆ ಹೊರಗಿಡಲಾಗುವುದು. ಅಮೇರಿಕದ ವೈದ್ಯಕೀಯ ಹಾಗೂ ಬಾರ್ ಅಸೋಸಿಯೇಶನ್ನಿನವರು ನಿರ್ಧರಿಸಿದ ಅಂತಾರಾಷ್ಟ್ರೀಯ ಮಟ್ಟದಂತೆ ಈ ವಿಷಯಗಳು ಶೇಕಡಾ 99.82ರಿಂದ 99.99ರಷ್ಟು ನಿಖರವಾಗಿ ಕಂಡುಬರಬೇಕಾಗಿದೆ. ಆದರೆ ಇದು ಶೇಕಡಾ 95.5ರಿಂದ 99.82 ಇಲ್ಲವೆ ಬಹು ಅಂಶ 92ರಿಂದ 95ರವರೆಗೆ ಸೇರಿರಬೇಕೆಂದೂ ಆಗಿದೆ.

ಈ ಪರೀಕ್ಷೆಗಳಿಗೆ ಬೇಕಾದ ಸೆರಾವನ್ನು ವಿದೇಶದಿಂದ ಆಮದು ಮಾಡಿಕೊಳ್ಳಬೇಕಾಗುತ್ತದೆಂದೂ ಅದರ ಒಂದು ಪ್ಲೇಟಿಗೆ ರೂ. 8500/- ರಷ್ಟು ಬೆಲೆ ಇರುವುದೆಂದೂ ಅಂತಹ ಸುಮಾರು ನಾಲ್ಕು ಅಥವಾ ಐದು ಪ್ಲೇಟುಗಳಷ್ಟು ಅಗತ್ಯ ಬೀಳುತ್ತದೆಂದೂ ಅದನ್ನು ಹಾಳಾಗದಂತೆ ಅತೀ ಶೀತಲ ಸ್ಥಿತಿಯಲ್ಲೇ ಇರಿಸಬೇಕೆಂದೂ ತಜ್ಞರು ಹೇಳುತ್ತಾರೆ. ಇಂತಹ ಎಪ್ಪತ್ತೆರಡು ಎಂಟಿ-ಸೆರಾ ಸೆಟ್ಟಿಗೆಗಳಿಗೆ ಆರು ಲಕ್ಷ ರೂಪಾಯಿಗಳಷ್ಟು ಖರ್ಚು ತಗಲುತ್ತದಂತೆ. ಪಶ್ಚಿಮ ಜರ್ಮನಿಯ ರಕ್ತದ ಗುಂಪುಗಳ ಸೆರೊಲಜಿ ಸಂಸ್ಥೆಯು ಇಂತಹ ಪ್ಲೇಟುಗಳನ್ನು ತಯಾರಿಸಿ ಒದಗಿಸುತ್ತದೆ.

ಆದುದರಿಂದ ಒಂದು ರೀತಿಯಲ್ಲಿ ನ್ಯಾಯ ಎನ್ನುವುದು ಅತಿ ದುಬಾರಿ ಅಲ್ಲವೆ? ●

ಶಿಕ್ಷಣವೋ ಶಿಕ್ಷೆಯೋ!?

ಎಚ್.ಪಾಂಡುರಂಗ ವಿಠಲ

ರಾಜೀವ ಗಾಂಧಿಯವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಜನತೆಗೆ ನೀಡಿದ ಹೊಸ ಭರವಸೆಗಳಲ್ಲಿ ಶಿಕ್ಷಣದ ಸುಧಾರಣೆಯೂ ಒಂದು. ದೇಶವ್ಯಾಪಿ ಚರ್ಚೆಗಾಗಿ ಶಿಕ್ಷಣದ ಸವಾಲು ಎಂಬ ಅನುಬಂಧಗಳನ್ನು ಹಂಚಲಾಯಿತು. ಅನೇಕ ಕಡೆ ಉಪಾಧ್ಯಯರ, ಶಿಕ್ಷಣ ತಜ್ಞರ ಸಭೆಗಳು ನಡೆದು, ನಿರ್ಣಯಗಳನ್ನು ಶಿಕ್ಷಣ ಖಾತೆಗೆ ಕಳಿಸಿಕೊಡಲಾಯಿತು. ಆದರೂ ಶಿಕ್ಷಣದ ಸುಧಾರಣೆ ಹೇಗೆ ನಡೆದೀತು ಎಂಬುದು ಇನ್ನೂ ಪ್ರಶ್ನೆಯಾಗಿಯೇ ಉಳಿದಿದೆ. ಶಿಕ್ಷಣದ ಸವಾಲಿನ ಮನೋಭಾವವನ್ನು ಗಮನಿಸಿದಾಗ, 1968ರ ರಾಷ್ಟ್ರೀಯ ಶಿಕ್ಷಣ ನೀತಿಯ ಮಾದರಿಯ ಒಂದು ಸರಕಾರೀ ಸುಧಾರಣೆಯೇ ಹೊಸ್ತಿಲಲ್ಲಿದೆ ಎನ್ನಿಸದಿರದು. ಆಗ ಗಾಂಧೀಜಿಯವರ ಮೂಲ ಶಿಕ್ಷಣದ ಕನಸನ್ನು +2 ವೃತ್ತಿ ಶಿಕ್ಷಣ ಎಂಬ ಹೆಸರಿನಲ್ಲಿ ಪ್ರಯೋಗಿಸಲು ಪ್ರಯತ್ನಿಸಿ 'ಶಿಕ್ಷಕರ ಹಾಗೂ ಹಣದ ಕೊರತೆ' ಯಿಂದ ಸೋಲೊಪ್ಪಲಾಯಿತು. (ಅಲ್ಲದೆ ಆ ವೃತ್ತಿ ಶಿಕ್ಷಣದಲ್ಲಿ ವ್ಯವಹಾರದಲ್ಲಿ ಉಪಯೋಗ ಬೀಳುವಷ್ಟು ಜ್ಞಾನ ಬರುವುದಿಲ್ಲ; ಅಲ್ಲದೆ ಕಾಲೇಜಿಗೆ ನುಗ್ಗುವ ಹುಮ್ಮಸ್ಸನ್ನು ಅದು ಕಡಿಮೆ ಮಾಡಲಿಲ್ಲ).

ನಿಜವಾಗಿ ಶಿಕ್ಷಣವು ಯಾಕೆ ಯಾರಿಗೆ, ಹೇಗೆ, ಎಷ್ಟು ಬೇಕು ಎಂಬುದು ಯಾವತ್ತೂ ಭಾರತದಲ್ಲಿ ಸಮಸ್ಯೆಯೇ. ಅದು ರಾಜ್ಯಕ್ಕೆ ಸಂಬಂಧಿಸಿದ್ದೋ- ಕೇಂದ್ರಕ್ಕೋ? ಅಥವಾ ಖಾಸಗಿ ವ್ಯಕ್ತಿ ಸಂಸ್ಥೆಗಳಿಗೆ ಬಿಡಬೇಕೋ? ಸರಕಾರದ ನೀತಿಪತ್ರವೇನೋ ಶಿಕ್ಷಣ ಸಾಮಾಜಿಕ ಬದಲಾವಣೆಯ ಸಾಧನವಾಗಬೇಕು ಎನ್ನುತ್ತದೆ. ಆದಕ್ಕೆ ಕೇಂದ್ರ, ಸರಕಾರ ಇನ್ನಷ್ಟು ಜವಾಬ್ದಾರಿ ತೋರುವ ಅಗತ್ಯ ಇದೆ.

ತಿರಸ್ಕಾರ: ನಮಗೀಗ ಕಾಣುತ್ತಿರುವುದು ಮುಕ್ಕಾಲಂಶ ಬಡಮಕ್ಕಳು ಶಾಲೆ ಬಿಡುವುದು, ಮಧ್ಯಮವರ್ಗದ ಮಕ್ಕಳು ಹೇಗೋ ಪಾರಾಗಿ ಡಿಗ್ರಿ ಮುಗಿಸಿ ಬಿಡುವುದು ಹಾಗೂ ಮೇಲ್ವರ್ಗದ ಸಾಹುಕಾರಿ ಸರಕಾರಿ ಅಧಿಕಾರಿಗಳ ಮಕ್ಕಳು ಬಡವರೇ ತೆರಿಗೆ ನೀಡಿ ಸಬ್ಸಿಡಿ ಕೊಡುವ ಆಮದು ಮಾಡಿದ ಸ್ವಚ್ಛ ಶಿಕ್ಷಣ ಪಡೆದು ಕಾದಿಟ್ಟ ಸ್ವರ್ಗತುಲ್ಯ ಸ್ಥಾನಗಳನ್ನು ಆಕ್ರಮಿಸಿಬಿಡುವುದು. ಈ ತೇಪೆ ಹಾಕಿದ ಮೆಕಾಲೆ ಮಾದರಿಯ ಶಿಕ್ಷಣ ಈಗ ನಿಜವಾಗಿ

ತನ್ನ ಮೊದಲಿನ 'ಗುಮಾಸ್ತರನ್ನು ಸೃಷ್ಟಿಸುವ' ಗುರಿಯನ್ನೂ ಕಳೆದುಕೊಂಡಿದೆ. ಜೀವನಕ್ಕೆ ಅರ್ಥ ನೀಡದೆ ಕೇವಲ ತಿರಸ್ಕಾರವನ್ನೂ ಸಿನಿಕ ತನವನ್ನೂ ಹುಡುಗರಲ್ಲಿ ಬಿತ್ತುತ್ತಿದೆ. ಇಂದು ಹಣ ಮಾಡುವ, ಉದ್ಯೋಗದ ರೇಸಿನಲ್ಲಿ ಗೆಲ್ಲುವುದೇ ಬಹು ಜನರ ಏಕೈಕ ಗುರಿ. ಕರ್ತವ್ಯ ನ್ಯಾಯಪರತೆ, ಜವಾಬ್ದಾರಿ ವ್ಯಕ್ತಿತ್ವ, ನಾಗರಿಕ ಪ್ರಜ್ಞೆ, ಸಾಮಾಜಿಕ ಏಕೋಭಾವ, ಸ್ನೇಹ ಇವನ್ನು ಅನಕ್ಷರಸ್ಥರಲ್ಲಿ ಕಾಣುವಷ್ಟು ವಿದ್ಯೆಯ ಅತ್ಯುನ್ನತ ದಾರಿದೀಪಗಳಿರುವ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ನಾವಿಂದು ಕಾಣಲಾರೆವು. ಬದಲು, ಇತರರನ್ನು ಅತ್ಯಂತ ಹೆಚ್ಚಿನ ತಿರಸ್ಕಾರದಿಂದ ಕಾಣುವ ಸ್ಥಿತಿಯೇ ಕಾಣುತ್ತದೆ. ಈ ದೃಷ್ಟಿಯಿಂದ ಶಿಕ್ಷಣ ಒಂದು ಮತಾಂತರ.

ಪರೀಕ್ಷೆಯೇ ಮೋಸವಾಗುವ ಈ ಲೌಕಿಕ ವಿದ್ಯೆ ಜೀವನಕ್ಕೆ ಆಧಾರವಾದ ಉದ್ಯೋಗ ನೀಡಿಕೆಯ ಕನಸಿನ ಸೀಸವನ್ನು ಮಿದುಳಿಗೆ ಗೊತ್ತಿಲ್ಲದಂತೆ ಹುಯ್ದು ಕುಲಕಸಬುಗಳ ಬಗ್ಗೆ ತಿರಸ್ಕಾರ ಬಿತ್ತಿ ಮರಗಟ್ಟಿಸಿದೆ.

ಗುಲಾಮಗಿರಿ: ಉದ್ಯೋಗಕ್ಕೆ ಡಿಗ್ರಿ ಅರ್ಹತೆಯಾಗುವ ಸ್ಥಿತಿ ತಪ್ಪಿ ವಿದೇಶಗಳಲ್ಲಿಯಂತೆ ಕೌಶಲ, ಯೋಗ್ಯತೆಗಳೇ ಮಾನದಂಡವಾಗಬೇಕು. ಆದರೆ ಸರಕಾರವೇ ಭಾರೀ ಉದ್ಯೋಗಪತಿಯಾಗಿರುವ ಭಾರತದಲ್ಲಿ ವಿವಿಧ ಬಗೆಯ ಮೀಸಲಾತಿಗಳ ನಡುವೆ ಈ ಪದ್ಧತಿ ಬರುವುದು ಕನಸೇ ಸರಿ.

ಮೀಸಲಾತಿ ಆತ್ಮಸಾಕ್ಷಿಯನ್ನು ಹೇಗೆ ಮಸಕುಗೊಳಿಸುತ್ತದೆಂಬುದಕ್ಕೆ ಒಂದು ಉದಾಹರಣೆ: ಶಾಲೆಗಳಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳನ್ನು ನಪಾಸು ಮಾಡಬಾರದೆಂದು ಅಲಿಖಿತ ಆಜ್ಞೆ ಜಾರಿಯಲ್ಲಿದೆ. ಹೀಗಾಗಿ ಅವರು ಫೇಲಾದರೆ ಶಿಕ್ಷಣಾಧಿಕಾರಿಗಳು ಹೆ.ಮಾ.ರನ್ನೂ, ಹೆ.ಮಾ.ರು ಅ.ಮಾ.ರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಇದನ್ನು ತಪ್ಪಿಸಲು ಅವರ ನವೀನ ಮಾದರಿ ಉತ್ತರಗಳನ್ನು ತಿದ್ದಿ ಮೇಲೆತ್ತುತ್ತಾರೆ. ಹೀಗೆ ಮಾಡುವಾಗ ಸಹಜವಾಗಿಯೇ ಉಳಿದವರು ಮಾಡಿದ ತಪ್ಪಾದರೂ ಏನು? ಎಂದು ಅವರಿಗೆ ಅನ್ನಿಸುತ್ತದೆ. ಪರೀಕ್ಷೆ ತನ್ನ ಬೆಲೆ ಕಳೆದುಕೊಳ್ಳುತ್ತದೆ.

ಇಲ್ಲಿ, ಉಪಾಧ್ಯಾಯರಲ್ಲಿ ಹಿಂದುಳಿದವರಿಗೆ ಇನ್ನಷ್ಟು ಪಾಠಹೇಳುವ ಸಾಮಾಜಿಕ ಕಳಕಳಿ, ರಾಷ್ಟ್ರ ಪ್ರೇಮದ ಅರಿವು ಇಲ್ಲವೆ? ನಮ್ಮ ಶಿಕ್ಷಣ ಪ್ರಯೋಗಗಳೆಲ್ಲ ವಾಸ್ತವದ ನೆಲೆ ಬಿಟ್ಟು ಎಷ್ಟೋ ಯುಗಗಳೇ ಆಗಿವೆ. ಯಾವುದೋ ಪ್ರಯೋಗಶಾಲೆಯ ಮಾದರಿ ವಾತಾವರಣದಲ್ಲಿ ನಡೆದದ್ದು ಕರಿಹಲಗೆಯೂ ಇಲ್ಲದ ಏಕೋಪಾಧ್ಯಾಯ ಶಾಲೆಯಲ್ಲೂ ನಡೆದೀತು ಎಂದು ಮೇಲಿನಿಂದ ಹೇರುವ ಹುಂಬತನ ನಮ್ಮ ಹಿರಿಯ ತಲೆಗಳದ್ದು, ಬೇರಿನಿಂದ ಬದಲಾವಣೆಗೆ ಆಸ್ಪದವಿಲ್ಲ. ಭಾರಿ ವೆಚ್ಚದಲ್ಲಿ ಎಲೆಗಳಿಗೆ ಬಣ್ಣ ಹೊಡೆಯಲಾಗುತ್ತದೆ. ಉತ್ಪಾದನೆ ಕಣ್ಣಿಗೆ ಬೀಳದ ಉದ್ಯಮವಾದ ಶಿಕ್ಷಣದಲ್ಲಿ ಗುಲಾಮಗಿರಿ ತಾಂಡವವಾಡುತ್ತಿದೆ. ಗುರುವಿನಿಂದ ಬರಬೇಕಾದ ಅರಿವು, ಸೃಜನಶೀಲತೆ ಗುಲಾಮನಿಂದ ಬರಲು ಎಂದಾದರೂ ಸಾಧ್ಯವೇ? ಮೇಷ್ಟರಿಗೆ ಸಮಾಜದಲ್ಲೂ ಬೆಲೆಯಿಲ್ಲ ಇಲಾಖೆಯಲ್ಲೂ ಬೆಲೆಯಿಲ್ಲ; ಎಲ್ಲೂ ಬೇರುಬಿಡಲಾಗದ ಸ್ವಂತಿಕೆಯಿಲ್ಲದ ಗೊಂಬೆ ಆತ. ಆತನೂ ಮಕ್ಕಳೂ ಶಿಕ್ಷಣದ ಗುರಿಯನ್ನು ಮರೆತು ಹಾದಿಯಲ್ಲಿ ಸಿಕ್ಕಿ ಹಾಕಿಕೊಳ್ಳಲು ಮೇಲಿಂದ ಬರುವ ಇಂಥ ಅರ್ಥಹೀನ ಒತ್ತಡಗಳೂ ಕಾರಣ.

ಪಿರಮಿಡ್ಡಿನ ಮೊದಲ ಹಂತ: ಹಣದ ಹಾಗೂ ಸಮರ್ಥ ನೀತಿಯ ಕೊರತೆ ಪ್ರಾಥಮಿಕ ಶಿಕ್ಷಣವನ್ನು ಆವರಿಸಿದೆ. ನಮ್ಮ ದೇಶ ಜಗತ್ತಿನಲ್ಲೆ ಅತಿ ಹೆಚ್ಚು ಅನಕ್ಷರಸ್ಥರನ್ನೂ ನಿರುದ್ಯೋಗಿಗಳನ್ನೂ ಹೊಂದಿ 21ನೆಯ ಶತಮಾನಕ್ಕೆ ಕಾಲಿ



''ಏನೋ, ಪಕ್ಕದ ಮನೆ ಲಲಿತಾಗೆ ಲೈನ್ ಹೊಡೀತಿದ್ದೀಯಂತೆ..''

''ಏನ್ಮಾಡ್ಲಿ, ಅವಳಪ್ಪ ಮದ್ವೇಗೊಂದು ಗೆರೆ ಹಾಕ್ಬಿಟ್ಟಿದ್ದಾನಲ್ಲ..''

ಪುತ್ತಿದೆ ಎಂಬುದು ಭೀಕರ ಸತ್ಯ. ಈ ಸಮಸ್ಯೆಗೆ ಶಿಕ್ಷಣದ ಸವಾಲಿನಲ್ಲಿ ಉತ್ತರವಿಲ್ಲವಾದರೂ ಸಿರಿವಂತರಿಗೇ ಅವಕಾಶವೀಯುವ ಈಗಿನ ಶಿಕ್ಷಣದ ಹರಾಜು ಪದ್ಧತಿಯನ್ನೇ ಮುಂದುವರೆಸುವಂತೆ ಮಾದರಿ ಶಾಲೆಗಳನ್ನು ಇನ್ನಷ್ಟು ಸ್ಥಾಪಿಸಲು ಸಲಹೆಯಿದೆ! ಸಂವಿಧಾನದಲ್ಲಿ ಹೇಳಿದ ಉಚಿತ ಕಡ್ಡಾಯ ಶಿಕ್ಷಣವನ್ನು ಸಾರ್ವತ್ರಿಕ ಶಿಕ್ಷಣವನ್ನಾಗಿಸಿ, ಕೆಲವರಿಗೆ ಮಾತ್ರ ಮೀಸಲಿಡುವ ಹಂಚಿಕೆ ಹೊಸ ನೀತಿಯಲ್ಲಿದೆ. ಆದರಲ್ಲಿ ಒಪ್ಪಿಕೊಳ್ಳುವಂತೆ 1990ರಲ್ಲಿ 4.67 ಕೋಟಿ ಮಕ್ಕಳು (ಈಗಿನ ಜನಸಂಖ್ಯೆ ಹೆಚ್ಚುವ ಪ್ರಮಾಣದಲ್ಲಿ 8 ಕೋಟಿ ಮಕ್ಕಳು) ಶಾಲೆಯನ್ನೇ ತಲುಪಲಾರರು. ಈಗಿರುವಂತೆ 300ಕ್ಕೂ ಹೆಚ್ಚು ಜನರಿರುವ ಶೇಕಡಾ 20 ಹಳ್ಳಿಗಳಲ್ಲಿ ಶಾಲೆಯಿಲ್ಲ, ಶಾಲೆ ಇರುವೆಡೆ ಶೇಕಡಾ 40 ಕಡೆ ಕಟ್ಟಡವಿಲ್ಲ, ಸುಮಾರು ಅಷ್ಟೆ ಶಾಲೆಗಳಲ್ಲಿ ಕರಿಹಲಗೆಯೂ ಇಲ್ಲ. ಶೇಕಡಾ 60ರಷ್ಟು ಶಾಲೆಗಳಲ್ಲಿ ಕುಡಿಯುವ ನೀರಿಲ್ಲ. 1978ರ ಅಂಕಿ ಅಂಶಗಳಂತೆ ಶೇಕಡಾ 34.7ರಷ್ಟು ಏಕೋಪಾಧ್ಯಾಯ ಶಾಲೆಗಳಿದ್ದು 2937 ಶಾಲೆಗಳಲ್ಲಿ ಶಿಕ್ಷಕರೇ ಇರಲಿಲ್ಲ! ಈಗ ಇಂಥ ಶಾಲೆಗಳು ಇನ್ನೆಷ್ಟಿರಬೇಕು!

'ಶಿಕ್ಷಣದ ಸವಾಲಿ'ನಲ್ಲಿ ''ಪ್ರತಿ ಯೋಜನೆಯಲ್ಲೂ ಶಿಕ್ಷಣಕ್ಕೆ ಮೀಸಲಿಟ್ಟ ಹಾಗೂ ಖರ್ಚು ಮಾಡಿದ ಹಣ ಆದರ ಹಿಂದಿನ ಪ್ರತಿ ಯೋಜನೆಗಳಿಗಿಂತ ಹೆಚ್ಚಾಗಿದೆ,'' ಎಂದದ್ದು ಸುಳ್ಳೆಂದು ಪಿ.ಸಾಯಿನಾಥ ತೋರಿಸುತ್ತಾರೆ. 1944ರ ಗಾಂಧೀ ಯೋಜನೆಯಲ್ಲಿ ಶಿಕ್ಷಣಕ್ಕೆ ಯೋಜನಾ ವೆಚ್ಚದಲ್ಲಿ ಶೇಕಡಾ 10ಕ್ಕಿಂತ ಕಡಿಮೆಯಿಲ್ಲದಂತೆ ನಿಗದಿಪಡಿಸಬೇಕೆಂದಿದ್ದರೆ ವಾಸ್ತವವಾಗಿ ಆದರ ಅರ್ಧವನ್ನು ಯಾವ ಯೋಜನೆಯಲ್ಲೂ ಖರ್ಚು ಮಾಡಲಿಲ್ಲ. 80-85ರಲ್ಲಿ ಶಿಕ್ಷಣಕ್ಕೆ ನಿಗದಿತವಾದ ಮೊತ್ತವೇ ಶೇಕಡಾ 2.2ಕ್ಕೆ ಇಳಿದಿದೆ. ಅದರಲ್ಲಿ ಹಳ್ಳಿ ಶಾಲೆಗಳಿಗೆ ಎಷ್ಟು ಖರ್ಚು ಮಾಡಿದರೋ ಮಾದರಿ ಶಾಲೆಗಳಿಗೆ, ಕಂಪ್ಯೂಟರುಗಳಿಗೆ ಎಷ್ಟು ಕೊಟ್ಟರೋ!

ಪ್ರಾಥಮಿಕ ಶಿಕ್ಷಣವು ಅತಿ ಮೂಲಭೂತವಾದ ಅಕ್ಷರ ಜ್ಞಾನವನ್ನು ನೀಡುತ್ತದೆ. ನಮ್ಮಲ್ಲಿ ಹೆಚ್ಚು ಜನರು ಜೀವನಕ್ಕೆ ಅಕ್ಷರ ಅವಶ್ಯವೆಂದು ಎಂದೂ ಭಾವಿಸಿರಲಿಲ್ಲ. ಈಗಲೂ ಇಲ್ಲ. ಆದರ ಪ್ರಚಾರ ಕಾರ್ಯಕ್ಕೇ ಹಣ ವ್ಯಯಮಾಡಬೇಕಾದ ಕಾಲ ಇನ್ನೂ ಇದೆ. 74-79ರ ಅವಧಿಯಲ್ಲಿ ಬರಿ 317 ಕೋಟಿ ರೂಪಾಯಿಗಳನ್ನು ಪ್ರಾಥಮಿಕ ಶಿಕ್ಷಣಕ್ಕೆ ವ್ಯಯ ಮಾಡಿದ ಸರಕಾರ ಇದರಲ್ಲಿ ಶೇಕಡಾ 95ರಷ್ಟನ್ನು ಉಪಾಧ್ಯಾಯರ ಸಂಬಳಕ್ಕೆ ತೊಡಗಿಸಿತು. ಈ ಹಿನ್ನೆಲೆಯಲ್ಲಿ ಬಾಲ ಕಾರ್ಮಿಕರ ದುಡಿತವನ್ನು ಕಾನೂನುಬದ್ಧಗೊಳಿಸಿ ಹತ್ತುವರ್ಷಕ್ಕೆ ಮೇಲ್ಪಟ್ಟ ಬಾಲಕರನ್ನು ಪೈಥಾನಿಕವಾಗಿ ಸರಳ ಕೆಲಸಗಳಲ್ಲಿ ತೊಡಗಿಸಬೇಕು, ಅವರಿಗೆ ಬೇಕಾದದ್ದು ಅಕ್ಷರ ಶಿಕ್ಷಣ

ವಲ್ಲ, ಶ್ರಮದ ಶಿಕ್ಷಣ ಎಂದು ಸುಕಂದ ಚೌಧರಿಯಂಥವರು ಹೇಳುವುದು ಕ್ರೂರವೆನಿಸಿದರೂ ಅರ್ಥಪೂರ್ಣ. ಪ್ರಪಂಚದಲ್ಲಿನ ಬಾಲಕಾರ್ಮಿಕರಲ್ಲಿ ಸುಮಾರು ಮೂರನೇ ಒಂದರಷ್ಟು ನಮ್ಮ ದೇಶದಲ್ಲಿದ್ದಾರೆ. ಶಾಲೆಯಲ್ಲಿರಲಿ, ದನಕಾಯುತ್ತಿರಲಿ ಎಳೆಯರನ್ನು ಅತಿ ಉದಾಸೀನ ತಿರಸ್ಕಾರದಿಂದ ನಡೆಸಿಕೊಳ್ಳುವ ದೇಶ ನಮ್ಮದೊಂದೇ.

'ಶಿಕ್ಷಣ ಸವಾಲು' ಪ್ರಾಥಮಿಕ ಶಿಕ್ಷಣ ಅಸಫಲವಾಗುವುದಕ್ಕೆ ಪಟ್ಟಿ ಮಾಡುವ ಕಾರಣಗಳಿವು: 1) ಹಣ 2) ಶಿಕ್ಷಕರ ಕೊರತೆ 3) ಮಕ್ಕಳು ಶಾಲೆ ಬಿಡುವುದು. ಅಂಕಿ ಅಂಶಗಳಿಂದ ಇವನ್ನು ವಿವರಿಸಲಾಗಿದೆ. ಜೀವನದಲ್ಲಿ ಶಿಕ್ಷಣದ ಅವಶ್ಯಕತೆಯ ಬಗ್ಗೆ ಜಾಗೃತಿ ಮೂಡಿದಾಗ ಮಾತ್ರ ಜನರೇ ಶಿಕ್ಷಣದ ಸಮಸ್ಯೆನ್ನು ಪರಿಹರಿಸಿಕೊಳ್ಳುತ್ತಾರೆ. ಶಿಕ್ಷಣದ ಶೇಕಡಾ 25ರಷ್ಟು ವೆಚ್ಚವನ್ನು ಮೊದಲು ಖಾಸಗಿ ಜನರ ದೇಣಿಗೆಯಿಂದಲೇ ಪಡೆಯಲಾಗುತ್ತಿತ್ತು. ಈಗ ಆ ಮೊತ್ತ ಶೇಕಡಾ 2ಕ್ಕೆ ಇಳಿದಿದೆ ಎಂಬುದು ಗಮನಾರ್ಹ. ಹಿಂದೆ ಊರಿನವರೇ ಆದ ಮಠಮಾನ್ಯಗಳನ್ನು ಜನರೇ ವಿಶ್ವಾಸದಿಂದ ಪೋಷಿಸುತ್ತಿದ್ದರು. ಈಗ ಕೆಲವೆಡೆ ಶಾಲೆಯನ್ನು ತೆರೆಯಲು ಮನಸ್ಸೇ ಇಲ್ಲದ, ಬೇರೆ ಕೆಲಸ ಸಿಗದೆ ಬಂದು ಸೇರಿದ ಒಲ್ಲದ ಉಪಾಧ್ಯಾಯರನ್ನು ಸರಕಾರ ಹೆಚ್ಚು ಸಂಬಳ ನೀಡಿ ಬಲವಂತವಾಗಿ ಹಳ್ಳಿಗೆ ನೂಕುತ್ತದೆ. ಆದರೂ ಶಿಕ್ಷಣ ಮೊದಲಿನಂತೆಯೇ ಆಯ್ದ ಕೆಲವರಿಗೆ ಸೀಮಿತವಾಗಿದೆ. ಇದರ ಬದಲು ಆಯಾ ಹಳ್ಳಿಯ ಒಬ್ಬೊಬ್ಬರನ್ನು ತರಬೇತಿಗೊಳಿಸಿ ಸ್ವಯಂ ಉದ್ಯೋಗದ ಅಡಿ ಖಾಸಗಿ ಶಾಲೆ ತೆಗೆಯಲು ಸಹಾಯ ಮಾಡಿದ್ದರೆ ಅಥವಾ ಎಸ್.ಎಸ್.ಎಲ್.ಸಿ. ಮಾಡಿದವರು ಕಡ್ಡಾಯವಾಗಿ ಒಂದು ವರ್ಷ ಇಂಥ ಶಾಲೆಗಳಲ್ಲಿ ''ಅಕ್ಷರ ಸೈನಿಕ''ರಾಗಿ ಕೆಲಸ ಮಾಡಿದ ಮೇಲೆಯೆ ಸರ್ಟಿಫಿಕೇಟು ನೀಡಬೇಕೆಂದು ನಿಗದಿ ಮಾಡಿದ್ದರೆ ಎಷ್ಟೋ ಉತ್ಸಾಹದಿಂದ ಶಿಕ್ಷಣದ ಕೆಲಸ ಮುಂದುವರೆದಿರುತ್ತಿತ್ತು. (ಆದರೆ T.C.H. B.Ed ಮಾಡಿದವರಿಗೂ ಇಂಥ ಅವಕಾಶ ಈಗ ಸಿಗುತ್ತಿಲ್ಲ! ಅವರ ಓದಿಗೆ ಸರಕಾರ ಸುರಿದ ಹಣ ವ್ಯರ್ಥ).

ಅದರ ಬದಲು ಮಧ್ಯಾಹ್ನ ಉಪಾಹಾರ ಯೋಜನೆ ಮಾಡಿ, ಮಕ್ಕಳು ಊಟದ ಹೊತ್ತಿಗೆ ಮಾತ್ರ ಶಾಲೆಗೆ ಬರುವಂತೆ ಮಾಡಿದೆವು- ಬಂದವರಾದರೂ ಉಳಿಯಲಿ ಎಂದು. ಎಲ್ಲರೂ ಪಾಸಾಗುವಂತೆ ಮಾಡಿ ಪರೀಕ್ಷೆಯೇ ಅರ್ಥಹೀನವಾಗುವಂತೆ ಮಾಡಿದೆವು. ತಂದೆ ತಾಯಿಗಳು ಮಕ್ಕಳನ್ನು ಕಳಿಸಲು ಏನು ಮಾಡಬೇಕು ಎಂಬುದನ್ನು ಬಿಟ್ಟು, ಅವರು ಶಾಲೆ ಬಿಡಲು ಕಾರಣಗಳೇನೆಂದು 'ಶಿಕ್ಷಣದ ಸವಾಲು' ಅಂಕಿ ಅಂಶಗಳನ್ನು ನೀಡುತ್ತದೆ. ಅವನ್ನು ಜಾರಿಗೊಳಿಸಲಾಗದಿದ್ದುದೇ ಹಿಂದಿನ ಶಿಕ್ಷಣ ನೀತಿಗಳು ವಿಫಲವಾಗಲು ಕಾರಣ. ಈ ಶಿಕ್ಷಣ ನೀತಿಯು ಕಾಲಮಿತಿಯನ್ನೇ ಹಾಕಿಕೊಂಡಿಲ್ಲ ಎಂಬುದು, ಹಣದ ಕೊರತೆಯನ್ನು ಹೇಗೆ ನಿಭಾಯಿಸುವುದೆಂಬುದಕ್ಕೆ ಏನೂ ಹೇಳದಿರುವುದು ಇದೂ ವೈಫಲ್ಯದ ಹಾದಿಯನ್ನೇ ಹಿಡಿದಿದೆ ಎಂಬುದಕ್ಕೆ ಕನ್ನಡಿಯಾಗಿದೆ. ಇದೂ ಅಲ್ಲದೆ ಅರ್ಧಕ್ಕಿಂತಲೂ ಹೆಚ್ಚು ಜನ ತೀವ್ರ ಅನಕ್ಷರತೆ, ಅಸಹಾಯಕತೆ, ಬಡತನದಲ್ಲಿ ಇರುವಾಗ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಅರ್ಥಹೀನ. ಆಹಾರವಿಲ್ಲದ ಕುಟುಂಬಕ್ಕೆ ಅಕ್ಷರದಿಂದ ಪ್ರಯೋಜನವೇನು?

ಸೆಕೆಂಡರಿ ಶಿಕ್ಷಣ: ಪಿರಮಿಡ್ಡಿನ ಮೊದಲ ಹಂತ ಭೂಮಿಯಡಿ ಕುಸಿದಿದ್ದರೆ ತ್ರಿಶಂಕುವಿನಂತೆ ಮೇಲೆ ತೇಲುತ್ತಿರುವ ಉನ್ನತ ಹಂತವನ್ನು ಅನುಕರಿಸುವುದೇ ಅಥವಾ ಕೆಳಗಿನ ಪ್ರಾಥಮಿಕ ಹಂತವನ್ನು ಅಂಟಿಕೊಳ್ಳುವುದೇ ಎನ್ನುವುದನ್ನು ನಿರ್ಧರಿಸಲಾಗದಷ್ಟು ಸೆಕೆಂಡರಿ



"ಏನ್ರಿ, 'ನಮ್ಮನೇಗೆ ಯಾರಾದ್ರೂ ಮುದ್ದಾಗಿ ಇರೋಳೊಬ್ಳು ಸಿಕ್ಕಿದ್ರೆ ಕೆಲಸಕ್ಕೆ ಬೇಕು' ಅಂತ ಪಕ್ಕದ ಮನೇಯವ್ರಿಗೆ ಹೇಳಿದಿರಂತೆ!"

ಹಂತ ದುರ್ಬಲವಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆಯೇ ಪಶ್ಚಿಮದಿಂದ ಕಡ ತಂದ ಋಣಾತ್ಮಕ ಮನೋಧರ್ಮದ್ದು ಎಂಬ ಆಪಾದನೆಯ ಸತ್ಯ ಇಲ್ಲಿ ಸ್ಪಷ್ಟ. ಪ್ರಾಥಮಿಕ ಶಿಕ್ಷಣ-ಅಕ್ಷರತೆಯನ್ನು ಉಂಟು ಮಾಡುವ 'ಮೂಲ ಭೂತ' ಅರ್ಥವನ್ನಾದರೂ ಹೊಂದಿದೆ. ಇಲ್ಲಿ ಅದೂ ಇಲ್ಲ. ಮಾನವನೊಳಗೆ ಸುಪ್ತವಾದ ದೈವತ್ವವನ್ನು ಹೊರತರುವುದೇ ಶಿಕ್ಷಣ ಎಂದರು ವಿವೇಕಾನಂದರು. ಅದು ಇರಲಿ, ಮನುಷ್ಯತ್ವವನ್ನೂ ಹೊರತರದೆ, ಠೇವಣಿ ರೂಪದ ವಿದ್ಯೆಯನ್ನು ತುರುಕುವ ಕೆಲಸಕ್ಕೆ ನಾಂದಿ ಇಲ್ಲಿದೆ. ಇಂಗ್ಲೀಷ್ ವಿದ್ಯೆಗಳಿಸಿದ ಭಾರತೀಯರ ಬುದ್ಧಿಸಾಮರ್ಥ್ಯ ಉನ್ನತವಾದರೂ ಅವರಲ್ಲಿ ಸೃಜನಶೀಲತೆ ತೀರಕಡಿಮೆ. ಅದಲ್ಲದೆ ವಿಶಾಲವಾಗಿ ಹರಡಿದ ಬಹುಸಂಖ್ಯೆಯ ಸಾಮಾನ್ಯರಿಂದ ಪರಕೀಯರಾಗಿಬಿಡುವರು. ಶ್ರೀಮತಿ ಇಂದಿರಾಗಾಂಧಿಯವರು ಒಮ್ಮೆ ನಮ್ಮ ವಿದ್ಯಾರ್ಥಿಗಳು ಸಾಮಾನ್ಯವಾಗಿ ಭಾರತೀಯರಾಗಿರುವುದಕ್ಕೆ ಹೆಮ್ಮೆ ಪಡುವುದಿಲ್ಲ ಎಂದು ಹೇಳಿದ್ದರು. ನಮ್ಮ ಹುಡುಗರ ವ್ಯಕ್ತಿತ್ವ ರೂಪುಗೊಳ್ಳುವಾಗಲೇ ಈ ವಿದೇಶಿ ಶಿಕ್ಷಣದಿಂದ ಒಡಕು ತಲೆದೋರಿ, ಅವುಗಳ ಅರ್ಥಹೀನತೆ ಗೊತ್ತಿದ್ದರೂ ಪರಕೀಯ ಸಂಸ್ಕೃತಿ, ಮೌಲ್ಯ ಆಚಾರಗಳನ್ನು ಅನುಕರಿಸ ತೊಡಗುವರು. ಮೌಲ್ಯಗಳಲ್ಲಿನ ಈ ಭಿನ್ನತೆಯಿಂದಾಗಿ ಸಾಮಾಜಿಕ ಗುಂಪುಗಳಲ್ಲಿ ಅಪನಂಬಿಕೆ, ಒಡುಕ ತಲೆದೋರುವುದು. ಈ ತಾಂತ್ರಿಕವಾದ ಶಿಕ್ಷಣದಿಂದ ಸುಖ ಉಣ್ಣುತ್ತಿರುವ ಸುಶಿಕ್ಷಿತರೇ ನಮ್ಮ ದೇಶದ ಮನೋಧರ್ಮಕ್ಕೆ, ಸಂಸ್ಕೃತಿಗೆ ಹೊಂದಬಲ್ಲ ಶಿಕ್ಷಣ ವ್ಯವಸ್ಥೆ ರೂಪಿಸಲು ಅಡ್ಡಿ. ಉಪಾಧ್ಯಾಯರು ರಚನಾತ್ಮಕವಾದ ಹೊಸ ಶಿಕ್ಷಣಕ್ಕಾಗಿ ಅಥವಾ ಇರುವುದನ್ನು ಅಭಿವೃದ್ಧಿಗೊಳಿಸುವ ನೀತಿಗಾಗಿ- ತಂತಮ್ಮ ಸೌಕರ್ಯ ಸಂಬಳಕ್ಕಾಗಿ ಒಟ್ಟಾದಂತೆ- ಎಂದಾದರೂ ಹೋರಾಡಿದ್ದುಂಟೆ? ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಾದರೂ ನಮ್ಮ ರಾಜಕಾರಣಿಗಳು ಎಂದಾದರೂ ನಮ್ಮದೇ ಆದ ಶಿಕ್ಷಣ ಬೇಕು ಎಂದು ಹೇಳಿದ್ದುಂಟೆ?

ಮಾನವ ಸಮಾಜ ಜೀವಿ. ಅವನ ಜೀವನ ಮಟ್ಟ ಆ ಸಮಾಜದ ನಾಯಕರ ಮಟ್ಟದಿಂದ ನಿರ್ಧಾರಿತ. ನಮ್ಮಲ್ಲಿ ಸಾಂಪ್ರದಾಯಿಕವಾಗಿ ಜನ ಸಾಮಾನ್ಯರು ಶಿಕ್ಷಿತರನ್ನು ಇಂಥ ನಾಯಕತ್ವಕ್ಕೆ ಎದುರು ನೋಡುವರು. ಆದರೆ ಶಿಕ್ಷಣದ ಮಟ್ಟ ಶಿಕ್ಷಿತರ ನೈತಿಕ ಬೌದ್ಧಿಕ ಮಟ್ಟ ಕಡಿಮೆಯಾದಾಗ ಸಹಜವಾಗಿಯೇ ನಾಯಕತ್ವವು ಬೇರೆಯವರ ಪಾಲಾಗುವುದು ಭಾರತದ ಈಗಿನ ಪರಿಸ್ಥಿತಿಗೆ ನಾಯಕತ್ವವು ನವಶ್ರೀಮಂತರ, ಶಕ್ತಿವಂತರ ಕೈಗೆ ಹೋಗಿರುವುದೇ ಕಾರಣ. ಹೀಗಾಗಿ ಹಣ ಮಾಡುವುದೊಂದೇ ಉನ್ನತ ಶಿಕ್ಷಣದ ಮೂಲಭೂತ ಪ್ರವರ್ತನೆಯಾಗಿದೆ! ವ್ಯಕ್ತಿತ್ವ ನಿರ್ಮಾಣ, ಸಮಾಜದ ಜತೆ ಬಾಳುವ ಶಕ್ತಿ, ಸಾಮಾಜಿಕ ಮೌಲ್ಯಗಳಿಗಾಗಿ ಬದುಕುವ ವಿಧಾನ, ನೈತಿಕ ನಾಯಕತ್ವಗಳು ಗುರಿಯಾಗದೆ, ಸೆಕೆಂಡರಿ ಹಂತದಿಂದ

ಮುಕ್ತ ವಿಶ್ವವಿದ್ಯಾಲಯ

ನಮ್ಮ ಬರಡು ಶಿಕ್ಷಣಕ್ಕಿಟ್ಟ ಕಿರೀಟ ಇದು. ನಮ್ಮಲ್ಲಿ ಬುದ್ಧಿಗೆ ಕೊರತೆ ಇಲ್ಲ; ಇಡೀ ಶಿಕ್ಷಣ ವ್ಯವಸ್ಥೆಯ ಹಂದರ ಅರ್ಥ ಹೀನ. ಉಪಾಧ್ಯಾಯರ ಅವಶ್ಯಕತೆಯೇ ಇಲ್ಲದೆ ಈ ಜ್ಞಾಪಕ ಪರೀಕ್ಷೆಗಳನ್ನು ಸಾಮಾನ್ಯರೂ ಪಾಸು ಮಾಡಬಹುದು ಎಂಬುದನ್ನು ಅಂಚೆ ಶಿಕ್ಷಣ ಎತ್ತಿ ತೋರಿಸುತ್ತದೆ. ಇದು ಮಾಧ್ಯಮಿಕ ಶಾಲೆಯ ಹಂತದಿಂದ ಪ್ರಾರಂಭವಾಗುವ ಶಾಲಾಗೈಡುಗಳ ಒಂದು ವಿಕಾಸ ಹೊಂದಿದ ರೂಪವೇ. ಇದನ್ನು ಬಿಟ್ಟರೆ ಶಾಲೆಯನ್ನು ತೊರೆದ ಕೆಳ ಮಧ್ಯಮ ಹಂತದ ಮಕ್ಕಳಿಗೆ ಇನ್ನೊಂದು ಹಾದಿಯಿದೆ. ಅದೆಂದರೆ ಟ್ಯುಟೋರಿಯಲ್ ಕಾಲೇಜುಗಳು- ಇದರ ವಿಕಾಸದ ರೂಪ ಸಂಜೆ ಕಾಲೇಜುಗಳು.

ಶಿಕ್ಷಣದ ಈ ಎರಡು ವಿಚಿತ್ರ ಹಾದಿಗಳನ್ನು ಬಿಟ್ಟರೆ ಮಧ್ಯಮ ವರ್ಗದವರ ಸರಕಾರೀ ಶಾಲೆ ಕಾಲೇಜುಗಳು (ಇಲ್ಲೂ ಹಣ ತೆರುವವರಿಗೆ ಶಾಲೆಯ ಹೊತ್ತಿನಲ್ಲೆ ಮನೆ ಪಾಠ ಹೇಳುತ್ತಾರೆ. ಹಿಂದುಳಿದವರಿಗೆ ಮನೆ ಪಾಠ ಹೇಳ[illegible] ಸಮ್ಮತಿಸುತ್ತದೆ, ಹಣವನ್ನು [illegible] ತ್ತವೆ!) ಆಯ್ದ ಸಿರಿವಂತರ ಪಬ್ಲಿಕ್ ಸ್ಕೂಲು, ಕಾಲೇಜುಗಳು ವಿಭಿನ್ನವಾಗಿ ನಿಲ್ಲುತ್ತವೆ. ಶಿಕ್ಷಣಕ್ಕಾಗಿ ಸಮಾನಾಂತರವಾದ ಐದಾರು ಹಾದಿಗಳಿರುವ ದೇಶ ಬಹುಶಃ ಭಾರತವೊಂದೇ. ಈಗಾಗಲೇ ನಾವು ತರಬೇತಿಗೊಳಿಸುತ್ತಿರುವ ಡಾಕ್ಟರರು, ಇಂಜನೀಯರರು ಹಾಗೂ ಮ್ಯಾನೇಜರುಗಳಿಗೆ ಇಲ್ಲಿ ಕೆಲಸಕ್ಕೆ ಅವಕಾಶವೇ ಇಲ್ಲ (ಕೃಷಿ ಪದವೀಧರರನ್ನು ಬಿಟ್ಟರೆ) ಡಿಗ್ರಿ ಹೊಂದಿದವರಿಗಂತೂ ಮುಕ್ತ ವಿಶ್ವವಿದ್ಯಾಲಯದ ಪದವೀಧರರು ಇರುವ ಅವಕಾಶಗಳನ್ನೂ ಕಡಿಮೆ ಮಾಡುತ್ತಾರೆ. ಹೀಗೆ ನಮ್ಮ ಪಿರಮಿಡ್ಡಿನ ತುದಿ ಸ್ಪಿಂಕ್ಸ್ ತಲೆಯಾಗಿದೆ. ಅವಕಾಶಕ್ಕೂ, ವಿದ್ಯಾವಂತರ ಲಭ್ಯತೆಗೂ ಸಂಬಂಧವಿಲ್ಲದ ದ್ವಂದ್ವ ಪರಿಸ್ಥಿತಿ. ಬೇಡಿಕೆಯಿಲ್ಲದ ಪೂರೈಕೆ ಶೋಷಣೆಗೆ, ಭ್ರಷ್ಟಾಚಾರಕ್ಕೆ ಹಾದಿ ಮಾಡಿ ಕೊಡುತ್ತದೆ.

*

ಮೇಲಕ್ಕೆ ಶಿಕ್ಷಣದ ಗುರಿ ಹಣವೆ! ಶ್ರೇಷ್ಠ ಮಟ್ಟದ ನಾಯಕರು ನಮ್ಮಲ್ಲಿ ಬೆಳೆದು ಬಾರದಿರಲು ಇರುವ ಕಾರಣ ಇದೆ. ನೀತಿ ಬದಲಾವಣೆಯಾದರೆ ಕೆಲವರಿಗೆ ಆಗುವ ಕಷ್ಟಗಳನ್ನೂ ಶಿಕ್ಷಣದ ಸವಾಲು ಗುರುತಿಸುತ್ತದೆ: 1) ಈ ಶಿಕ್ಷಣದ ಅವ್ಯವಸ್ಥೆಯಿಂದ ವಿಶಿಷ್ಟವಾದ ಅನ್ಯಾಯದ ಲಾಭ ಪಡೆದವರಿಗೆ ನಷ್ಟ- ಇವರೆಂದರೆ ಗೈಡು ಬರೆಯುವವರು, ಮನೆ ಪಾಠ ಹೇಳುವವರು, ಪ್ರಶ್ನೆಪತ್ರಿಕೆ ಮಾರುವವರು, ಕಾಪಿಗೆ ಅವಕಾಶ ನೀಡಿ, ಉತ್ತರ ಬರೆಸುವವರು, ಪರೀಕ್ಷಾ ವಿಧಾನ ಬದಲಾದರೆ ಇವರ ಗತಿ? ಸರಿಯಾಗಿ ಶಿಕ್ಷಣ ನೀಡಲು ಇವರೆಂದೂ ಒಪ್ಪಲಾರರು. 2) ನಮ್ಮ ಸಾಂಪ್ರದಾಯಿಕ ಪೂರ್ವಾಗ್ರಹಗಳಲ್ಲಿ ಬುದ್ಧಿಯ ಕೆಲಸ ದೈಹಿಕ ಶ್ರಮಕ್ಕಿಂತ ಮೇಲು ಎಂಬುದು ಒಂದು. ಬೇರೆ ದೇಶಗಳಲ್ಲಿ ಸೆಕೆಂಡರಿ ಹಂತದಲ್ಲೇ ಉದ್ಯೋಗಕ್ಕೆ ಬೇಕಾದ ತರಬೇತಿ ಸಿಕ್ಕು ಶಾಲೆ ಬಿಟ್ಟೊಡನೆ ಕೆಲಸ ಸಿಕ್ಕರೆ ನಮ್ಮಲ್ಲಿ ವಿಶೇಷವಾದ ಮಲ್ಟಿಪರ್ಪಸ್ ಶಾಲೆಗಳಲ್ಲೂ ಔದ್ಯೋಗಿಕ ತರಬೇತಿ ಸಿಕ್ಕದೆ ಬರೀ ಬುದ್ಧಿ ಬೆಳೆಸಿಕೊಳ್ಳುತ್ತಿರುತ್ತಾರೆ. ಈ ಪರಿಸ್ಥಿತಿಗೆ ಕಾರಣರಾರೆಂದು 'ಸವಾಲು' ತಿಳಿಸಿಲ್ಲ. ಈಗಿನ ಪಿಯುಸಿ ಹಂತದಲ್ಲಿ ಔದ್ಯೋಗಿಕ ಶಿಕ್ಷಣ ನೀಡಬೇಕು ಎಂದಷ್ಟೆ ಹೇಳಿದೆ.

ಪಿರಮಿಡ್ಡಿನ ಸ್ಪಿಂಕ್ಸ್ ತಲೆ ಉನ್ನತ ಶಿಕ್ಷಣ:

ಇದು ಭಾರತದ ಬಡತನದ ಕಲ್ಲುಗಳ ಮೇಲೆ ಅರಳಿದ ಹೂವು. 150 ವಿಶ್ವವಿದ್ಯಾಲಯಗಳಿಂದ ಎತ್ತಿಹಿಡಿಯಲ್ಪಟ್ಟ ಭಾರತೀಯ

ಉನ್ನತ ಶಿಕ್ಷಣವು ಶೋಷಣೆ, ಆರ್ಥಿಕ ಅಸಮತೋಲನದ ಆಯುಧವಾಗಿದ್ದು ಚರಿತ್ರೆಯಲ್ಲೇ ಅತಿ ಮೂರ್ಖತನದ ನಷ್ಟ ಎಂದು ತೋರಿಸುತ್ತಾರೆ ಶಿಕ್ಷಣ ತಜ್ಞ ಜೆ.ಡಿ.ಸೇರಿ. ಆದರೆ ಅದರಿಂದ ಅತ್ಯಧಿಕ ಲಾಭ ಗಳಿಸುವ ಅತಿ ಸಣ್ಣವರ್ಗದ ವರ್ಣರಂಜಿತ ಬದುಕು ಲಾಟರಿ ಬಹುಮಾನದಂತಿದ್ದು ಅಧಿಕ ಜನರ ಪಾಲಿಗೆ ಆಸೆಯ ಕಾಮನ ಬಿಲ್ಲಾಗಿದೆ.

ಪ್ರಾಥಮಿಕ-ಸೆಕೆಂಡರಿ ಮಟ್ಟದಲ್ಲಿನಂತೆಯೇ ಇಲ್ಲಿಯೂ ಶೇಕಡಾ 60ರಷ್ಟು ವಿದ್ಯಾರ್ಥಿಗಳು ಕಾಲೇಜು ಬಿಡುತ್ತಾರೆ. ಇಲ್ಲವೆ ಅನುತ್ತೀರ್ಣರಾಗುತ್ತಾರೆ. (ಉನ್ನತ, ಮಧ್ಯಮ ವರ್ಗದವರ ಗುತ್ತಿಗೆಯಾದ ಈ ಶಿಕ್ಷಣಕ್ಕೆ ಕೇವಲ ಶೇಕಡಾ 5ರಷ್ಟು ಮಕ್ಕಳು

ತಾಂತ್ರಿಕತೆಯ ಹುಚ್ಚು

ಗಾಂಧಿ ತತ್ವದ ಗ್ರಾಮೋದ್ಯೋಗಕ್ಕೆ ಸ್ವಾತಂತ್ರ್ಯದ ದಿನಗಳಲ್ಲೇ ಬೆಲೆ ಕೊಡದೆ ವಿದೇಶಿ ಕೈಗಾರಿಕಾಕರಣದ ಹುಚ್ಚು ನಮ್ಮವರಿಗೆ ತಗುಲಿತು. ಯೋಜನಾ ವೆಚ್ಚವನ್ನು ಹಂಚಿಕೊಂಡ ಅವೆಲ್ಲಕ್ಕೂ ವಿದೇಶಿ ಸಹಯೋಗ. ಶಿಕ್ಷಣದ ಮೂಲೋದ್ದೇಶ ಈ ಕೈಗಾರಿಕೆಗಳಿಗೆ ಕುಶಲ ಕೆಲಸಗಾರರನ್ನು ಒದಗಿಸುವುದಾಯಿತು. ಆದರೆ ನಮ್ಮ ಆರ್ಥಿಕ, ತಾಂತ್ರಿಕ ಸಂಸ್ಕೃತಿಯ ಜೊತೆ ಈ ಶಿಕ್ಷಣ ಮೇಳವಾಗುವಂತಿರಲಿಲ್ಲ. ಹೀಗೆ ಮಾನವ ನಿರ್ಮಾಣದ ಗುರಿಯಿಂದ ಶಿಕ್ಷಣ ದೂರ ಸರಿಯಿತು. ಸ್ವದೇಶಿಯವಾದದ್ದಲ್ಲದರ ಕಡೆ ತಿರಸ್ಕಾರ, ಉದಾಸೀನ ಮನೋಭಾವವನ್ನು ಬಿತ್ತತೊಡಗಿತು. ಇಡೀ ಶಿಕ್ಷಣ ವ್ಯವಸ್ಥೆಯೇ ತಾಂತ್ರಿಕ ತರಬೇತಿಯ ಬೃಹತ್ ಕಾರ್ಯಕ್ರಮವಾಗಿಬಿಟ್ಟಿತು.

ನಮ್ಮ ಹಳೆಯ ವಿಶ್ವವಿದ್ಯಾಲಯಗಳೂ ಸಂಶೋಧನೆಗೆ ಹಣವಿಲ್ಲದೆ ಪರದಾಡುವಾಗ, ಅಣುತಾಂತ್ರಿಕ, ಆಕಾಶ ಶಾಸ್ತ್ರದ, ಕೈಗಾರಿಕಾ ಸಂಶೋಧನೆಯ ಬಿಳಿಯಾನೆಗಳು ಮೀಸಲು ಹಣ ಸೂರೆಗೈದು ನಿಂತವು. ನಿಜವಾಗಿ ಈ ಶಿಕ್ಷಣ ವೈಜ್ಞಾನಿಕ ಮನೋಭಾವವನ್ನು ಬೆಳೆಸುತ್ತಿದೆಯೇ ಅಥವಾ ತಾಂತ್ರಿಕತೆಯ ಮನೋಭಾವವನ್ನೆ?

ವಿಜ್ಞಾನ-ತಾಂತ್ರಿಕತೆಯ ನಡುವೆ ತೀವ್ರ ಭಿನ್ನತೆಯಿದೆ. ವಿಜ್ಞಾನದಿಂದ ಮಾನವನಿಗೆ ಹಾನಿಯಿಲ್ಲ. ತಾಂತ್ರಿಕತೆ ಒಳಿತನ್ನಷ್ಟೆ ಅಲ್ಲದೇ ತೀವ್ರ ಹಾನಿಯನ್ನೂ ಉಂಟುಮಾಡಬಲ್ಲದು- ಅಣು ಬಾಂಬಿನ ತಾಂತ್ರಿಕತೆ ಒಂದು ಭೀಕರ ಉದಾಹರಣೆ. ನಮ್ಮಲ್ಲಿ ವಿಜ್ಞಾನಿಗಳಿಲ್ಲ; ಹಾಗೆ ಕರೆದುಕೊಳ್ಳುವ ತಂತಮ್ಮ ಕ್ಷೇತ್ರಕ್ಕೆ ಸೀಮಿತರಾದ ಅನುಕರಣಶೀಲರಾದ ತಂತ್ರಜ್ಞರೇ ಇರುವುದು.

ಮಾನವನ ಭಾವನೆ, ಜೀವನಕಲೆ, ಮನಸ್ಸು ಮುಂತಾದವುಗಳಿಗೆ ಯಾವ ಬೆಲೆಯನ್ನೂ ಕೊಡದ, ಸೀಮಿತ ದೃಷ್ಟಿಯ, ಪ್ರಕೃತಿಯನ್ನೇ ಬದಲಿಸುವವೆಂಬ ಅಹಂಕಾರದ ಪಶ್ಚಿಮದ ತಾಂತ್ರಿಕತೆ ನಮ್ಮಲ್ಲೂ ಹಬ್ಬುತ್ತಿದೆ. ತೀರ ಹೆಚ್ಚು ಹಣ ತಿನ್ನುತ್ತಿರುವ ನಮ್ಮ ಸಂಶೋಧನಾ ಕೇಂದ್ರಗಳ ಅತ್ಯಂತ ಕಳಪೆಯಾದ ನಿರ್ವಹಣೆಯು ನಾವು ವಿಜ್ಞಾನದ ತಿರುಳನ್ನು ಬಿಟ್ಟು ಕೇವಲ ಸಿಪ್ಪೆಯಾದ ತಾಂತ್ರಿಕತೆಯನ್ನು ಕುರುಡಾಗಿ ಅನುಕರಿಸುತ್ತಿರುವುದರ ಕುರುಹಾಗಿದೆ. ಬೇಗನೆ ಕೈಗಾರಿಕಾ ರಾಷ್ಟ್ರವಾಗಿ ಬಿಡಬೇಕೆಂದು ಭಾರಿ ಸಾಲಮಾಡಿ ಆಮದು ಮಾಡಿಕೊಂಡ ವಿದೇಶಿ ತಂತ್ರಜ್ಞಾನ ನಮ್ಮ ಗ್ರಾಮ ಕೈಗಾರಿಕೆಗಳ ಜೀವಹರಣ ಮಾಡುತ್ತಿದೆ. ಇನ್ನಾದರೂ ಆಯ್ದ ಕೆಲವರನ್ನು ಮಾತ್ರ 21ನೆಯ ಶತಮಾನಕ್ಕೆ ಕಳುಹಿಸುವುದಕ್ಕಿಂತ ಬದುಕಿರುವವರಿಗೆ ಅನ್ನಬಟ್ಟೆ, ಮನೆಗಳನ್ನು ಪೂರೈಸುವುದಕ್ಕೆ ಪ್ರಾಮುಖ್ಯ ನೀಡಬೇಕು.

★

ಮಾತ್ರ ಸೇರುತ್ತಾರೆಂಬುದು ಗಮನಾರ್ಹ) ಸುಮಾರು ಶೇಕಡಾ 20ರಷ್ಟು ಕಾಲೇಜುಗಳು ನಿರರ್ಥಕ ದೊಡ್ಡಿಗಳು. ಬೇರಾವ ಪ್ರಜಾಪ್ರಭುತ್ವದಲ್ಲೂ ಕಾಲೇಜು ಶಿಕ್ಷಣ ಇಷ್ಟು ಬೃಹತ್ಪ್ರಮಾಣದ ಸರಕಾರೀ ಸಬ್ಸಿಡಿಯಿಂದ ನಡೆಯುತ್ತಿಲ್ಲ. ಆದರೆ ಇಲ್ಲಿ ಕಾಲೇಜು ಹುಡುಗರಿಗೆ ತಾವು ಪಡೆಯುತ್ತಿರುವ ಶಿಕ್ಷಣ ಸಾಮಾನ್ಯನ ಬೆವರಿನದು. ಅದಕ್ಕಾಗಿ ಆತ ಅಪರೋಕ್ಷ ತೆರಿಗೆ ಕಟ್ಟಿ, ತನ್ನ ಶ್ರಮವನ್ನು ಸಮಾಜಕ್ಕಾಗಿ ಕಡಿಮೆ ಹಣ ಪಡೆದು ನೀಡುತ್ತಿದ್ದಾನೆ ಎಂಬ ಅರಿವಿಲ್ಲ. (ಚೀನದಲ್ಲಿ ಎರಡನೇ ಮಹಾಯುದ್ಧದ ಕಾಲದಲ್ಲಿ ಒಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದಲ್ಲಿ ಓದಿಸಲು ಮೂವತ್ತು ಜನ ರೈತರು ಶ್ರಮಪಡಬೇಕು ಎಂದು ಲೆಕ್ಕಾಚಾರ ಹಾಕಿದ್ದರು) ತಮ್ಮ ಜ್ಞಾನಕ್ಕಾಗಿ ಬಡವರ ಶ್ರಮ ಹೇಗೆ ಆಧಾರ ನೀಡಿದೆ ಎಂಬ ಅರಿವಿನಿಂದ ಸೇವಾ ಮನೋಭಾವ ತಾಳದೆ ದೇಶದ ದಾರಿದ್ರ್ಯ ನಿರ್ಮೂಲನ ಹೇಗೆ ಸಾಧ್ಯ?

ಇನ್ನೂ ವಿಚಿತ್ರವೆಂದರೆ ಬಡವರ ಹಣ, ತಮ್ಮ ಅಮೂಲ್ಯ ಆಯುಷ್ಯವನ್ನು ಖರ್ಚು ಮಾಡಿ ಡಿಗ್ರಿಪಡೆದು ಇವರಲ್ಲಿ ಬಹುಜನ ನಿರುದ್ಯೋಗಿಗಳಾಗುವುದು, ಒಂದು ಅತಿ ಸಣ್ಣ ವರ್ಗದಿಂದ ಮತ್ತು ಆ ವರ್ಗಕ್ಕಾಗಿ ಇಡೀ ಶಿಕ್ಷಣವೇ ಶಿಥಿಲವಾಗಿ, ವಕ್ರವಾಗಿ ರಚಿತವಾಗಿರುವುದೇ ಈ ಪರಿಸ್ಥಿತಿಗೆ ಕಾರಣ. ನಮ್ಮಲ್ಲಿ ಡಾಕ್ಟರರು, ಇಂಜನೀಯರರು ವಿಜ್ಞಾನಿಗಳು ಮೊದಲಾದ ಉನ್ನತ ಶಿಕ್ಷಿತರೂ

ಜಪಾನೀ ಮಾದರಿ

ಶಿಕ್ಷಣಕ್ಕೆ ಜಪಾನೀಯರು ಹೆಚ್ಚು ಮಹತ್ವ ನೀಡಿದ್ದಾರೆ. ಅಲ್ಲಿನ ಸಾಮಾನ್ಯ ಕೆಲಸಗಾರನೂ ಚಾರ್ಟ್, ಗ್ರಾಫ್, ಕ್ಲಿಷ್ಟ ಅಂಕಗಣಿತ ಎಲ್ಲವನ್ನೂ ಒಳಗೊಂಡು ಕಾರ್ಖಾನೆಯ ಉತ್ಪಾದನಾ ಸಮಸ್ಯೆಯನ್ನು ಗ್ರಹಿಸಬಲ್ಲ.

ಒಂದೇ ಸಂಸ್ಕೃತಿ, ಜೀವನಮಟ್ಟ, ತಕ್ಷಣ ದೊರೆಯುವ ಉದ್ಯೋಗ, ಕೌಶಲ್ಯವನ್ನು ಆಧರಿಸಿದ ಬಡ್ತಿ, ಏಕರೂಪದ ಶಿಕ್ಷಣ, ತುಂಬ ಸಂಬಳ ಪಡೆದ ಸುಶಿಕ್ಷಿತ ಉಪಾಧ್ಯಾಯರು, ಮಕ್ಕಳ ಅಭಿವೃದ್ಧಿಯಲ್ಲಿ ಆಸಕ್ತ ಕುಟುಂಬ- ಈ ಹಿನ್ನೆಲೆಯಲ್ಲಿ ಬಂದ ಮಕ್ಕಳು ವರ್ಷಕ್ಕೆ ಸುಮಾರು 240 ದಿನ ಶಾಲೆಯಲ್ಲಿ ಓದುವರು. ತಮ್ಮ ವಿರಾಮ ವೇಳೆಯಲ್ಲೂ ಪ್ರವೇಶ ಪರೀಕ್ಷೆಗಳಿಗೆ ಖಾಸಗಿ ಶಿಕ್ಷಣ ನೀಡುವ 'ಜುಕು'ಗಳಿಗೆ ಹೋಗಲೂ ಇಷ್ಟಪಡುವರು. ಮೊದಲ ತರಗತಿಯಿಂದಲೇ ಹೋಂವರ್ಕ್ ಆರಂಭಿಸುವ ಜಪಾನೀ ಮಕ್ಕಳು ಮನೆಯಲ್ಲೂ ಹೆಚ್ಚು ಕಾಲ ಓದುವರು. ಮಕ್ಕಳ ವೈಯಕ್ತಿಕ ಬೆಳವಣಗೆಗೆ ಅನುಗುಣವಾದ ತಾರ್ಕಿಕ ಪದ್ಧತಿಯ ಶಿಕ್ಷಣವನ್ನು ಅವರಿಗೆ ಇಷ್ಟವಾಗುವ ರೀತಿಯಲ್ಲಿ ರೂಪಿಸಲಾಗಿದೆ.

ಕಂಪ್ಯೂಟರ್ ಮತ್ತಿತರ ತಾಂತ್ರಿಕತೆ ಇಲ್ಲಿನ ಶಾಲೆಗಳಲ್ಲಿ ಮುಖ್ಯಪಾತ್ರವಹಿಸದು. ಎಣಿಕೆ ಮಣಿ ಅಲ್ಲಿ ಇನ್ನೂ ಜನಪ್ರಿಯವಾಗಿದೆ. ತಾಂತ್ರಿಕ ಕುಶಲತೆ ಬೆಳೆಸಲು ಯಾವುದೇ ಕಾರ್ಯಕ್ರಮವಿಲ್ಲ. ಶಾಲೆಯ ವಿಜ್ಞಾನ, ತಂತ್ರಜ್ಞಾನ ಪರಿಕರಕ್ಕೆ ಅಮೇರಿಕನ್ನರು ಹೆಚ್ಚು ಹಣ ಸುರಿದರೆ, ಜಪಾನೀಯರು ಶಿಕ್ಷಕರ ಶಿಕ್ಷಣ ಹಾಗೂ ಸಂಬಳ ಸಾರಿಗೆಗೆ ಹೆಚ್ಚು ಖರ್ಚು ಮಾಡುತ್ತಾರೆ. ರಾಷ್ಟ್ರೀಯ ಆದಾಯದ ಶೇಕಡಾ 8.6ರಷ್ಟು ಹಣವನ್ನು ಕೇಂದ್ರೀಕೃತ ಶಿಕ್ಷಣ ಯೋಜನೆಗೆ ಪ್ರತಿವರ್ಷ ಮೀಸಲಿಡುವರು. ಅಲ್ಲಿನ ಶಿಕ್ಷಕರು ಗೌರವಾನ್ವಿತರು, ಸ್ನಾತಕ ಪದವಿ ಪಡೆದವರು (ಅಮೇರಿಕದ ಶಿಕ್ಷಕರಿಗಿಂತ) ಹೆಚ್ಚು ಸಂಬಳ ಸೌಲಭ್ಯ ಪಡೆಯುವ ಸ್ವಾಧ್ಯಾಯ ನಿರತರು. ಇವರಿಗೆ ಅರ್ಹತಾನುಸಾರ 'ಮಾಸ್ಟರ್ ಟೀಚರ್'ಗಳಾಗಿ ಬಡ್ತಿ

ಮಿಡತೆಗಳಂತೆ ನಿರ್ಮಾಣಗೊಂಡು ಬಡವರ ಖರ್ಚಿನಲ್ಲಿ ರಫ್ತಾಗುತ್ತಿದ್ದಾರೆ. ಇವರಿಗೂ ನಮ್ಮಲ್ಲಿ ಕೆಲಸಗಳ ನಿರ್ಮಾಣವಾಗಿಲ್ಲ, ಅವಶ್ಯಕತೆ ಇರುವ ಹಳ್ಳಿಗಳತ್ತ ಇವರು ಹೋಗಲು ತಯಾರಿಲ್ಲ. ಹಳ್ಳಿಗಳಿಗೆ ಬೇಕಾದ ಬರಿಗಾಲ, ವೈದ್ಯರು ಗ್ರಾಮ ಕೈಗಾರಿಕೆಗಳನ್ನು ನಡೆಸಬಲ್ಲ ಸಾಮಾನ್ಯ ತಂತ್ರಜ್ಞರು ಅಲ್ಲದೆ ನರ್ಸರಿಯಿಂದ ಡಿಗ್ರಿಯವರೆಗಿನ ಸಾಮಾನ್ಯ ಶಿಕ್ಷಣದಲ್ಲಿ ಬಡವರ್ಗ ಆಳುವವರ್ಗಗಳಿಗೆ ದೊರೆಯುವ ಅತಿ ಭಿನ್ನ, ದ್ವಂದ್ವ ಮಾದರಿಗಳು ಈ ವೃತ್ತಿ ಶಿಕ್ಷಣಗಳಲ್ಲಿಲ್ಲ. ಕೇವಲ ಆಳುವ ವರ್ಗದವರಿಗೇ ಇವು ಸೀಮಿತ. ಉಳಿದವರು ಪ್ರವೇಶಿಸಲಾರರು. ಆದರೆ ಇಲ್ಲೂ ಬೇರೆಲ್ಲ ಶಿಕ್ಷಣದಂತೆಯೇ 80ರಿಂದ 90ರವರೆಗಿನ ಸರಕಾರೀ ಸಬ್ಸಿಡಿ ಇದೆ! ಶಿಕ್ಷಣಕ್ಕಿರುವ ಅತ್ಯಲ್ಪ ಹಣವೂ ಈ ದುಂದಿನಲ್ಲೇ ಸೋರಿಹೋಗುತ್ತದೆ.

ಸರಕಾರೀ ಶಾಲೆಗಳಲ್ಲೂ ಬಡವರಿಗೆ ವಿದ್ಯೆ ಸಿಕ್ಕದು. ಕೆಲಸ ಸಿಕ್ಕಂದಿನಿಂದ ಸಂಬಳದ 'ಮೂಲಭೂತ' ಹಕ್ಕನ್ನು ಪಡೆದು ಬಿಡುವ ಉಪಾಧ್ಯಾಯರಿಗೆ ಹಣ ಸಂಪಾದನೆಯೇ ಧ್ಯೇಯವಾಗಿ ಸಿರಿವಂತ ಮಕ್ಕಳಿಗೆ ಒಳದಾರಿಗಳನ್ನೇ ನಿರ್ಮಿಸುವರು. ಬೇಡಿಕೆ ಪೂರೈಕೆಗಳ ಸ್ಪರ್ಧೆಯಲ್ಲೂ ಹಣದ ಮೇಲೆ ನಿಂತ ಖಾಸಗಿ ಶಿಕ್ಷಣದ ಮಟ್ಟವೇ ಮೇಲ್ಗೈ ಪಡೆಯುತ್ತದೆ. ಹೀಗೆ ನಿಜವಾಗಿಯೂ ಸರಕಾರಕ್ಕೆ ಬಡವರ

ಸಿಕ್ಕು. ಉಳಿದವರ ಪಾಠ ಕೇಳಿ ಪ್ರವಚನ ಕೌಶಲವನ್ನು ಹೇಳಿಕೊಡಲು ಭತ್ಯ ಸಿಕ್ಕುತ್ತದೆ. ಸಾಮಾನ್ಯವಾಗಿ ಎಲ್ಲರೂ ವೃತ್ತಿ ಶಿಕ್ಷಕ ಸಂಘಗಳ ಸದಸ್ಯರಾಗಿದ್ದು, ಶಿಕ್ಷಣ ವಿಧಾನಗಳ ಬಗ್ಗೆ ಮುಕ್ತ ಚರ್ಚೆ ನಡೆಸುವರು. ಶಾಲೆ ಬಿಟ್ಟು ದಿನದ ಉಳಿದ ಸಮಯದಲ್ಲೂ ಕರ್ತವ್ಯ ನಿರತರು. ರಜೆಯಲ್ಲೂ ರಜಾಕಾಲದ ಆಟ ಪಾಠಗಳನ್ನು ಪರೀಕ್ಷಿಸುವರು. ವಿದ್ಯಾರ್ಥಿಗಳ ಮನೆಯವರ ಜತೆ ನಿಕಟ ಸಂಪರ್ಕ ಹೊಂದಿ ತಂದೆತಾಯಿಗಳ ಆತಂಕ, ಪ್ರಶ್ನೆಗಳಿಗೆ ಸಮಾಧಾನ ನೀಡುವರು.

ಅಲ್ಲದೆ, ಇಲ್ಲಿನ ಉದ್ಯೋಗ ವ್ಯವಸ್ಥೆ ಶಿಕ್ಷಣ ವ್ಯವಸ್ಥೆಗೆ ಬಲವಾದ ನೈತಿಕ ಸಾಂಸ್ಥಿಕ ಆಧಾರ ಒದಗಿಸಿದೆ. ಸಂಸ್ಥೆಗೆ ಬೇಕಾದ ಮಾದರಿ ಕೌಶಲ್ಯದ ಮೇಲೆ ಕೆಲಸ ಕೊಡದೆ ಅಭ್ಯರ್ಥಿಯ ವ್ಯಕ್ತಿತ್ವದ ಬೆಳವಣಿಗೆ, ಸಾಮಾನ್ಯ ಶಿಕ್ಷಣಗಳನ್ನು ಗಮನಿಸಿ ತೆಗೆದುಕೊಂಡು, ಅನಂತರ ತಮಗೆ ಬೇಕಾದ ರೀತಿಯಲ್ಲಿ ತರಬೇತಿ ನೀಡುತ್ತಾರೆ. ಜಪಾನೀ ತಾಯಂದಿರು ತಮ್ಮ ಮಗು ದೈವದತ್ತ ವರಗಳನ್ನೂ ಹಣೆ ಬರಹವನ್ನೂ ಹೊತ್ತು ಬಂದಿರದೆ, ಕಲಿಕೆಯಿಂದ ಬೆಳೆಯುತ್ತದೆ ಎಂದು ನಂಬಿ, ಪ್ರಾಥಮಿಕ ಶಿಕ್ಷಣ ನೀಡುತ್ತಾರೆ. ಹೀಗಾಗಿ ಎಲ್ಲ ಮಕ್ಕಳೂ ಶಿಕ್ಷಣವನ್ನು ವಿಶ್ವಾಸದಿಂದ ಇದಿರು ನೋಡುತ್ತಾರೆ.

ಮಕ್ಕಳಿಗೆ ತರಗತಿಯಯಲ್ಲಿ ಕೆಲಸ ನೀಡುವಾಗ, ಒಬ್ಬರಿಗೆ ಒಂದೊಂದು ಬೇರೆಯಾದ ಕೆಲಸ ಕೊಡದೆ ಗುಂಪುಗಳಿಗೆ ಕೊಡುತ್ತಾರೆ. ಇದರಿಂದ ಅವರಲ್ಲಿ ಸಾಮಾಜಿಕ ಭಾವನೆ ಬಲಿಯುತ್ತದೆ. ಮಗುವಿನ ಪ್ರಯತ್ನವೇ ಶಿಕ್ಷಣ ಸಾಧನೆಯ ಸೋಪಾನ ಎಂದು ಜಪಾನೀ ಶಿಕ್ಷಣ ನಂಬಿದೆ. ಕಷ್ಟಪಟ್ಟು ದುಡಿಯುವ ಕರ್ತವ್ಯ ಪರತೆಯನ್ನು ಎಳೆಯ ವಯಸ್ಸಿನಲ್ಲೆ ಮೂಡಿಸುವುದು ಶಿಕ್ಷಕನ ಗುರಿ. ಆತ ನಿಧಾನವಾಗಿ ಕಲಿಯುವ ಮಗುವನ್ನು ಮೇಲ್ಮಟ್ಟಕ್ಕೆ ಎತ್ತುವನೇ ವಿನಾ ತರಗತಿಯ ಮಟ್ಟವನ್ನು ಕೆಳಗಿಳಿಸುವುದಿಲ್ಲ ಅತಿ ಮುಖ್ಯವೆಂದರೆ ಪರೀಕ್ಷೆಗೆ ಸಿದ್ಧವಾಗುವ ಹಿಸ್ಟೀರಿಯವನ್ನು ಉಪಾಧ್ಯಾಯರು ಯಾವಾಗಲೂ ದೂರವಿಡುತ್ತಾರೆ. ●

ಶಿಕ್ಷಣದತ್ತ ಒಲವಿದ್ದರೆ, ಪ್ರೌಢ ಶಾಲಾ ಹಂತದಿಂದ ಬೇರೆಲ್ಲ ಸಂಸ್ಥೆಗಳಿಗೂ ಸಬ್ಸಿಡಿ ನಿಲ್ಲಿಸಿದರೆ, ಸಮರ್ಪಕವಾಗಿ ಸಾಕ್ಷರತೆಯನ್ನು ಪ್ರಸಾರ ಮಾಡಲಾಗದೆ ತನ್ನೆಲ್ಲ ಶಕ್ತಿಯನ್ನು ವಿನಿಯೋಗಿಸಿದರೆ ಆಗ ನಿಜವಾಗಿಯೂ ಅಕ್ಷರ ಕ್ರಾಂತಿ ಸಾಧ್ಯವಾಗುತ್ತದೆ. ಆದರೆ ಬಡವರ ಖರ್ಚಿನಲ್ಲಿ ವಿದೇಶಕ್ಕೆ ಹೋಗಬಲ್ಲಷ್ಟು ವಿದ್ಯೆಯನ್ನು ಪಡೆಯುವ ಅವಕಾಶವನ್ನು ಮೇಲು ವರ್ಗದವರು ಬಿಟ್ಟಾರೆಯೇ? (ಇವರ ಜತೆ ವಿದೇಶಿಯರೂ ಇಲ್ಲಿನ ಕಡಿಮೆ ವೆಚ್ಚದ ವೃತ್ತಿ ಶಿಕ್ಷಣ ಪಡೆಯಲು ನೂಕುನುಗ್ಗುತ್ತಿರುವುದು ಗಮನಾರ್ಹ).

ನಮ್ಮ ಪರಂಪರಾಗತ ಶಿಕ್ಷಣವೂ ಜ್ಞಾಪಕ ಶಕ್ತಿಯ ಸಂಪ್ರದಾಯವಾದಿ ಶಿಕ್ಷಣವೇ ಆಗಿತ್ತು, ಆಗಿದೆ. ಒಟ್ಟಿನಲ್ಲಿ ನಾವು ಹೆಮ್ಮೆಯಿಂದ ಹೇಳಿಕೊಳ್ಳಬಲ್ಲ ಗಾಂಧಿಯಂತಹ ಮೌಲ್ಯನಿಷ್ಠರು, ಆಲೋಚನೆಯ ಶಕ್ತಿಯನ್ನು ಬೆಳೆಸಿಕೊಂಡ ವಿಜ್ಞಾನಿಗಳು, ತಂತ್ರಜ್ಞರು, ಪ್ರಚಲಿತ ಶಿಕ್ಷಣದ ಕೊಡುಗೆಗಳಲ್ಲ- ಇಂಥ ಶಿಕ್ಷಣವಿತ್ತರೂ ಸ್ವಶಕ್ತಿಯಿಂದ ಹೇಗೋ ಮೇಲೆದ್ದು ಬಂದವರು. ಬಡತನ ನಿವಾರಿಸಲು ಈ ವಿದ್ಯೆ ಕೆಲಸ ಮಾಡುತ್ತದೋ ಇಲ್ಲವೋ, ಸಂಸ್ಕೃತಿಯ ಶಿಥಿಲತೆಯನ್ನಂತೂ ಇದು ನಿವಾರಿಸುತ್ತಿಲ್ಲ. ಜಾತ್ಯತೀತತೆಯ ಹೆಸರಿನಲ್ಲಿ ರಾಮಾಯಣ-ಮಹಾಭಾರತಗಳಂಥ ಯಾವ ಧರ್ಮಕ್ಕೂ ಸೇರದ ನೈತಿಕ ಕತೆಗಳನ್ನೂ ಬಿಟ್ಟು ನಮ್ಮ ಹುಡುಗರಿಗೆ ಐತಿಹಾಸಿಕ ಪ್ರಜ್ಞೆಯೇ ಬಾರದಂತೆ ಮಾಡಿದ್ದೇವೆ. ನಮ್ಮಲ್ಲಿ ಏನೂ ಇಲ್ಲದವರಂತೆ ಪಶ್ಚಿಮದವರನ್ನು ಅನುಕರಿಸಲು ಹೊರಟಿದ್ದೇವೆ. ಕರಿಹಲಗೆಯೂ ಇಲ್ಲದೆ ಶಿಕ್ಷಣ ಕೊಡಬಲ್ಲ ಸರಳ ವಿಧಾನಗಳನ್ನು ಕಂಡು ಹಿಡಿಯದೆ, ಕಂಪ್ಯೂಟರುಗಳನ್ನು ಶಾಲೆಗಳಿಗೆ ಹಂಚಲು ಹಾತೊರೆಯುತ್ತಿದ್ದೇವೆ. ಜೀವನಕ್ಕೆ ಅತಿ ಅಗತ್ಯವಾಗಿ ಬೇಕಾದ ಮೂಲ ಶಿಕ್ಷಣವನ್ನಷ್ಟೇ ನಾವು ಕಡ್ಡಾಯವಾಗಿ ಎಲ್ಲ ಮಕ್ಕಳಿಗೂ ನೀಡಲು ಸಮರ್ಥರಾದಾಗ ಭಾರತ ತಾನಾಗಿಯೇ ಮೇಲೇಳುತ್ತದೆ. ಬೇರೆ ರಾಷ್ಟ್ರಗಳಲ್ಲಿ ಉತ್ಸಾಹೀ ಹುಡುಗರನ್ನು ಕಡ್ಡಾಯ ಸೈನಿಕ ಶಿಕ್ಷಣಕ್ಕಾಗಿ ಬಳಸುವಂತೆ ನಾವು ಕಡ್ಡಾಯ ಅಕ್ಷರ ಶಿಕ್ಷಣಕ್ಕಾಗಿ ಬಳಸಿ, ಅಕ್ಷರತೆಯ ಚಳುವಳಿ ಆರಂಭಿಸೋಣ. ●

ತೊಂದರೆಗಳೆಂಬುವು ನಮ್ಮ ಪ್ರಗತಿಯನ್ನು ಕುಂಠಿತಗೊಳಿಸಲು ಬರುವುದಿಲ್ಲ, ನಮ್ಮ ವ್ಯಕ್ತಿತ್ವ ನಿರ್ಮಾಣ ಮಾಡಲು ಬರುತ್ತವೆ.

– ಧೂಮಕೇತು

ಕಷ್ಟಕಾಲದಲ್ಲಿ ಯಾರು ನಿಮ್ಮ ಜೊತೆ ಬಂದಾರು? ಕತ್ತಲೆಯಲ್ಲಿ ನೆರಳು ಕೂಡಾ ನಿಮ್ಮನ್ನು ಬಿಟ್ಟುಹೋಗುವುದಿಲ್ಲವೇ?

– ಸುಭಾಷಿತ

ಈ ಪ್ರಪಂಚದಲ್ಲಿ ಯಾರು ಒಳ್ಳೆಯದನ್ನು ಮಾಡಬೇಕೆಂದು ಸ್ವಯಂ ಪ್ರೇರಣೆಯಿಂದ ಪ್ರಯತ್ನಿಸುತ್ತಾರೋ ಅಂಥಹವರ ಶತ್ರುಗಳ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತ ಹೋಗುತ್ತದೆ.

– ಶರಚ್ಚಂದ್ರ



ದ್ಜೂನಾಳ ಅದ್ಭುತ ಸ್ಪರ್ಶ

ಅರುಣ

ಆಕೆಯ ಬಳಿ ಅಸಾಧಾರಣ ಮಾದರಿಯ ಪಾಸ್‌ಪೋರ್ಟ್ ಇದೆ. ''ಈ ಪಾಸ್‌ಪೋರ್ಟ್ ಹೊಂದಿರುವ ವ್ಯಕ್ತಿಗೆ ಎಲ್ಲ ರಾಜತಾಂತ್ರಿಕ ತಜ್ಞರು, ಸರಕಾರಿ ಅಧಿಕಾರಿಗಳು, ಮಿಲಿಟರಿ ಅಧಿಕಾರಿಗಳು ಗೌರವ ವ್ಯಕ್ತಪಡಿಸಬೇಕು, ಆಕೆಯ ಚಟುವಟಿಕೆಗಳಿಗೆ ಯಾವುದೇ ಅಡ್ಡಿ ಆತಂಕ ಎದುರಾಗದಿರಲು ಎಲ್ಲ ಕಾನೂನು ಅವಕಾಶಗಳನ್ನು ಬಳಸಿಕೊಂಡು ಆಕೆಗೆ ನೆರವಾಗಬೇಕು, ಎಂದು ರಾಜತಾಂತ್ರಿಕ ಪ್ರತಿನಿಧಿಗಳ ಅಂತಾರಾಷ್ಟ್ರೀಯ ಸಂಸ್ಥೆ 'ಒರ್ಬಿಸ್'* ನ ಅಧ್ಯಕ್ಷರು ಎಲ್ಲ ರಾಜತಾಂತ್ರಿಕತಜ್ಞರಿಗೆ, ಮಿಲಿಟರಿ ಅಧಿಕಾರಿಗಳಿಗೆ, ಸರಕಾರಿ ಅಧಿಕಾರಿಗಳಿಗೆ ಈ ಮೂಲಕ ಮನವಿ ಮಾಡುತ್ತಾರೆ,'' ಎಂದು ಅದರಲ್ಲಿ ಬರೆದಿದೆ. ಇಂದು ರಶಿಯದಾದ್ಯಂತ ಜನಪ್ರಿಯಳಾಗಿರುವ ನಾಟಿ ವೈದ್ಯೆ ದ್ಜೂನಾ ದಾವಿತಾಶ್ವಿಲಿಯೇ ಈ ವಿಶಿಷ್ಟ ಪಾಸ್‌ಪೋರ್ಟ್ ಹೊಂದಿರುವ ಮಹಿಳೆ.

ಇಂದಿನ ಯುಗದಲ್ಲಿ, ಅಸಾಧಾರಣ ಸ್ವರೂಪದ ವೈಜ್ಞಾನಿಕ ಹಾಗೂ ತಾಂತ್ರಿಕ ಪ್ರಗತಿಯ ಕಾಲದಲ್ಲಿ ನಮ್ಮ ಬುದ್ಧಿಗೆ ನಿಲುಕದ ಕೆಲವೊಂದು ನಿಗೂಢ ಶಕ್ತಿಗಳಿವೆ ಎಂದರೆ ಕೆಲವರು ನಂಬುತ್ತಿಲ್ಲ. ಭೂಮಂಡಲದ ಉದ್ದಗಲಕ್ಕೂ ಒಂದು ತುಣುಕು ಸ್ಥಳವನ್ನೂ ಬಿಡದೆ ವಿಜ್ಞಾನಿಗಳು ಅನ್ವೇಷಣೆ ನಡೆಸಿಯಾಗಿರುವುದರಿಂದ ಯಾವ ರಹಸ್ಯವೂ ಉಳಿ

*ಒರ್ಬಿಸ್: 1963ರಲ್ಲಿ ಸ್ಥಾಪಿಸಲ್ಪಟ್ಟಿತು. ಶಾಂತಿ ಸ್ಥಾಪನೆಯ ಕಾರ್ಯಗಳಲ್ಲಿ ತೊಡಗಿರುವವರಿಗೆ ನೆರವಾಗುವುದು ಈ ಸಂಸ್ಥೆಯ ಮುಖ್ಯ ಕಾರ್ಯ.

(ಆಧಾರ: 'ಏಶಿಯಾ ಮತ್ತು ಆಫ್ರಿಕಾ')

ದಿಲ್ಲ ಎಂದು ಕೆಲವರು ಭಾವಿಸಿರಬಹುದಾದರೂ ಕೆಲ ಅಭೇದ್ಯ ರಹಸ್ಯಗಳು ಉಳಿದಿವೆ. ಬ್ರಹ್ಮಾಂಡದ ವೈಶಾಲ್ಯದಲ್ಲೂ ನಕ್ಷತ್ರಖಚಿತ ತಾರಾಮಂಡಲದಲ್ಲಿಯೂ ನಿಗೂಢ ವಿದ್ಯಮಾನಗಳು ಜರಗುತ್ತಿವೆ.

''ನಿಮ್ಮ ಕೈಗಳನ್ನು ಸ್ವಲ್ಪ ಮುಂದೆ-ಚಾಚಿ,'' ಎಂದು ದ್ಜೂನಾ ಹೇಳುತ್ತಾಳೆ. ನಾವು ಕೈಗಳನ್ನು ಆಕೆಯ ಮುಂದೆ ಚಾಚಿದಾಗ ಆಕೆ ತನ್ನ ಕೈಗಳಿಂದ ಗಾಳಿಯಲ್ಲಿ ನಾಲ್ಕೈದು ಬಾರಿ ವರ್ತುಲಾಕಾರದ ಸನ್ನೆ ಮಾಡುತ್ತಾಳೆ. ಆ ಕ್ಷಣದಲ್ಲಿ ನಮ್ಮ ಅಂಗೈಯಲ್ಲಿ ವಿದ್ಯುತ್ ಪ್ರವಾಹ ಹರಿದಂತೆ, ಸೂಜಿ ಚುಚ್ಚಿದಂತೆ ಅನಿಸುತ್ತದೆ. ಅನಂತರ ಆಕೆ ನಮ್ಮಿಂದ ಎರಡು ಮೂರು ಹೆಜ್ಜೆ ಹಿಂದೆ ಸರಿದು, ಮತ್ತೆ ತನ್ನ ಕೈಗಳಿಂದ ಗಾಳಿಯಲ್ಲಿ ಎರಡು ಮೂರು ಬಾರಿ ಅದೇ ರೀತಿಯ ಸನ್ನೆ ಮಾಡುತ್ತಾಳೆ. ಆಗ ನಮ್ಮ ಎದೆಯಲ್ಲಿ ಮುಳ್ಳು ಬೇಲಿಯ ಮೇಲೆ ಬಿದ್ದಾಗ ಆಗುವಂಥ ಅನುಭವವಾಗುತ್ತದೆ.

''ಈಗ ದಯವಿಟ್ಟು ಇಲ್ಲಿ ಕುಳಿತು-ಕೊಳ್ಳಿ,'' ಎಂದು ದ್ಜೂನಾ ಆತನೆದುರು ಸಣ್ಣ ಬೆಂಚನ್ನು ಬೊಟ್ಟು ಮಾಡಿ ತೋರಿಸಿ ಹೇಳುತ್ತಾಳೆ. ಕುಳಿತ ಮೇಲೆ ಆತನ ಬೆನ್ನ ಹಿಂದೆ ನಿಂತು, ''ನಿಮಗೆ ತೀಕ್ಷ್ಣ ತಲೆ ನೋವು ಕಾಡುತ್ತಿದೆ. ಆ ನೋವು ನಿಮ್ಮ ತಲೆಯ ಹಿಂಭಾಗದಿಂದ ಉದ್ಭವಿಸಿದೆ ಅಲ್ಲವೆ?'' ಎಂದು ಕೇಳುತ್ತಾಳೆ. ''ನಿಜ, ಕೆಲವು ದಿನಗಳಿಂದ ತಲೆನೋವು ನನ್ನನ್ನು ಸತಾಯಿಸುತ್ತಿತ್ತು. ಅದು ತೀವ್ರ ಯಾತನೆ ನೀಡದಿದ್ದರೂ ಏಕಾಗ್ರತೆಯಿಂದ ಕೆಲಸ ಮಾಡಲು ಅಡ್ಡಿಯಾಗಿತ್ತು,'' ಎಂಬ ಉತ್ತರ ಬರುತ್ತದೆ ಬಂದಾತನಿಂದ. ದ್ಜೂನಾಳ ಹಸ್ತಗಳು ಆತನ ತಲೆಯ ಮೇಲೆ ವರ್ತುಲಾಕಾರವಾಗಿ ಚಲಿಸತೊಡಗುತ್ತವೆ. ಆ ಮೃದುವಾದ ನೀಳ ಬೆರಳುಗಳಿಂದ ತಲೆಯನ್ನು ಸ್ವಲ್ಪ ಹೊತ್ತು ತಿಕ್ಕಿದ ತರುವಾಯ, ''ಏನಾದರೂ ಬದಲಾವಣೆ ಅನಿಸುತ್ತಿದೆಯೇ?'' ಎಂದು ಕೇಳುತ್ತಾಳೆ. ''ಹೌದು, ತಂಪು ಗಾಳಿ ನನ್ನ ತಲೆಯ ಹಿಂಭಾಗದಲ್ಲಿ ಬೀಸುತ್ತಿದೆ ಅನಿಸುತ್ತಿದೆ. ನೋವು ತಲೆಯ ಹಿಂಭಾಗದಿಂದ ಮೇಲ್ಭಾಗಕ್ಕೆ ಚಲಿಸುತ್ತಿರುವ ಅನುಭವವಾಗುತ್ತಿದೆ'' ಎನ್ನುತ್ತಾನೆ ಆತ. ದ್ಜೂನಾ ಮತ್ತೆ ನಾಲ್ಕೈದು ಬಾರಿ ಆತನ ತಲೆಯ ಮೇಲೆ ಅಂಗೈಯಿಂದ ವರ್ತುಲಾಕಾರವಾಗಿ ಸಂಜ್ಞೆಮಾಡಿ ಮೃದುವಾಗಿ ಸವರುತ್ತಾಳೆ. ಕ್ರಮೇಣ ತಲೆ ಹಗುರವಾಗುತ್ತಿರುವ ಅನುಭವ. ಶರೀರದಲ್ಲಿ ಹೊಸ ಶಕ್ತಿ, ಚೈತನ್ಯ ಉಕ್ಕುತ್ತಿದೆ ಎಂಬ ಅನಿಸಿಕೆಯುಂಟಾಗುತ್ತದೆ.

ದ್ಜೂನಾ ದಾವಿತಾಶ್ವಿಲಿಯ ಅದ್ಭುತ ಕೈಗಳು ಕೆಲಸ ಮಾಡುವ ವಿಧಾನವಿದು. ರಶಿಯದ ಪತ್ರಕರ್ತರ ತಂಡವೊಂದು ಈಚೆಗೆ ಆಕೆಯನ್ನು ಭೇಟಿಯಾದಾಗ ಆಕೆಯ ಅಸಾಧಾರಣ ಸಾಮರ್ಥ್ಯವನ್ನು ಅವರು ಕಣ್ಣಾರೆ ಕಂಡರು. ಮೇಲಿನ ಉದಾಹರಣೆ ಆ ಪತ್ರಕರ್ತರಲ್ಲೊಬ್ಬನ ಅನುಭವ.

ವೈವಿಧ್ಯಮಯ ಸಂವೇದನೆ

ಇನ್ನೊಂದು ಉದಾಹರಣೆ. ತಾಂತ್ರಿಕ ವಿಜ್ಞಾನ ಅಧ್ಯಯನ ಸಂಸ್ಥೆಯ ವಿದ್ಯಾರ್ಥಿಯೊಬ್ಬ ತೀಕ್ಷ್ಣವಾದ ಹೊಟ್ಟೆನೋವಿನಿಂದ ಬಳಲುತ್ತಿದ್ದ. ಆಸ್ಪತ್ರೆಯಲ್ಲಿ ಆತ ಎರಡೆರಡು ಬಾರಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದರೂ ಯಾವ ಪ್ರಯೋಜನವೂ ಆಗಿರಲಿಲ್ಲ. ಅನಂತರ ಆತ ದ್ಜೂನಾಳಿಂದ ಚಿಕಿತ್ಸೆ ಪಡೆಯಲು ನಿರ್ಧರಿಸಿ ಆಕೆಯ ಬಳಿ ಬಂದ ಆತ ತನ್ನ ಕಾಯಿಲೆಯ ಬಗ್ಗೆ ವಿವರವಾಗಿ ಏನೂ ಹೇಳಲಿಲ್ಲ. ''ಹೊಟ್ಟೆಯಲ್ಲಿ ಒಂದು ಥರ ಅನುಭವವಾಗುತ್ತದೆ,'' ಅಂದ. ಅನಂತರ ಏನಾಯಿತು ಎಂಬುದನ್ನು ಆತನ ಮಾತುಗಳಲ್ಲಿಯೇ ಓದಿ:

''ನಾನು ದ್ಜೂನಾಳಿಂದ ಒಂದೂವರೆ

ಅಥವಾ ಎರಡು ಮೀಟರ್ ದೂರದಲ್ಲಿ ನಿಂತಿದ್ದೆ. ಆಕೆ ತನ್ನ ಬಲಗೈಯನ್ನು ಹೊಟ್ಟೆಯ ದಿಶೆಯಲ್ಲಿ ಮೇಲ್ಭಾಗಕ್ಕೆ ಚಾಚಿದಳು. ಅನಂತರ ವರ್ತುಲಾಕಾರವಾಗಿ ಗಾಳಿಯಲ್ಲಿ ಕೈ ಸನ್ನೆ ಮಾಡತೊಡಗಿದಳು. ತನ್ನ ಅಂಗೈಯನ್ನಾಕೆ ಪ್ರೊಜೆಕ್ಟರಿನಂತೆ ಬಳಸುತ್ತಿರುವಳೋ ಏನೋ ಅನಿಸಿತು. ಮೊದಮೊದಲು ನನಗೆ ಯಾವ ಸಂವೇದನೆಯೂ ಆಗಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ನನ್ನ ಹೊಟ್ಟೆಯ ಮೇಲೆ ಯಾರೋ ಬಲವಾಗಿ ಒತ್ತಡ ಹಾಕಿದಂತಾಗಿ ಅದು ಹೆಚ್ಚುತ್ತಾ ಹೋಯಿತು. ಹೊಟ್ಟೆಯ ಕುಳಿ ಅಗಲವಾಗುತ್ತಿದೆಯೋ ಅನಿಸಿತು. ಆಕೆಯ ಬಲಗೈ ನನ್ನ ಹೊಟ್ಟೆಯ ಭಾಗದಿಂದ ಒಂದು ಮೀಟರು ದೂರದಲ್ಲಿದ್ದರೂ ಅದರಿಂದ ಹೊಮ್ಮುವ ಶಕ್ತಿಯನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. 'ನೀವು ಕ್ರೀಡೆಗಳಲ್ಲಿ ಹೆಚ್ಚು ಭಾಗವಹಿಸಬಾರದು. ಹಲವು ವರ್ಷಗಳಿಂದ ನೀವು ಹೊಟ್ಟೆ ಹುಣ್ಣಿನಿಂದ ನರಳುತ್ತಿದ್ದೀರಿ,' ಎಂದು ಹೇಳಿದ ದ್ಜೂನಾ ಎಡ ಅಂಗೈಯಿಂದ ನನ್ನ ಬೆನ್ನು ಸವರುತ್ತಾ ಬಲ ಅಂಗೈಯನ್ನು ನನ್ನ ದೇಹದಿಂದ ಹತ್ತು ಹದಿನೈದು ಸೆಂಟಿಮೀಟರ್ ದೂರದಲ್ಲಿ ಗಾಳಿಯಲ್ಲಿ ಆಡಿಸತೊಡಗಿದಳು. ಆಕೆಯ ಅಂಗೈಯಿಂದ ಬೆಚ್ಚನೆಯ ಶಾಖ ಹೊರ ಹೊಮ್ಮುತ್ತಿರುವ ಮತ್ತು ಬಿಸಿಯಾದ ಕಬ್ಬಿಣದ ಸರಳು ನನ್ನ ಹೊಟ್ಟೆಯ ಮೇಲೆ ಉರುಳಿದ ಅನುಭವವಾಯಿತು. ಶಾಖ ನನ್ನ ಹೊಟ್ಟೆಯ ಆಳಕ್ಕೆ ಪ್ರವೇಶಿಸುತ್ತಿದೆ ಅನಿಸಿತು. ನನ್ನ ಹೊಟ್ಟೆಯ ಭಾಗ ವಿದ್ಯುತ್ ಆಘಾತಕ್ಕೆ ಸಿಲುಕಿದಂತೆ ಕಂಪಿಸಿತು.''

ಈ ವಿದ್ಯಾರ್ಥಿ ಐದು ಬಾರಿ ದ್ಜೂನಾಳಿಂದ ಚಿಕಿತ್ಸೆ ಪಡೆದ. ಕೊನೆಯ ಹಂತದ ಚಿಕಿತ್ಸೆ ಒಂದೂವರೆ ವರ್ಷದ ಹಿಂದೆಯಷ್ಟೇ ನಡೆಯಿತು. ನಂತರ ಆತನಿಗೆ ಹೊಟ್ಟೆಯ ತೊಂದರೆ, ನೋವು ಕಾಣಿಸಿಕೊಳ್ಳಲಿಲ್ಲ.

ದ್ಜೂನಾಳ ಪವಾಡಸದೃಶ ಹಸ್ತದಿಂದ



ಚಿಕಿತ್ಸೆ ಪಡೆದು ಕಾಯಿಲೆ ವಾಸಿಮಾಡಿಕೊಂಡವರ ಶ್ರೇಣಿಯಲ್ಲಿ ರಶಿಯದ ಕವಿ ರಾಸುಲ್ ಗಮ್ಜ್ತೋವ್ ಅವರೂ ಒಬ್ಬರು. ಗಮ್ಜ್ತೋವ್‌ರಿಗೆ ಹೃದಯವ್ಯಾಧಿ, ರಕ್ತದ ಒತ್ತಡಗಳ ತೊಂದರೆಯಿತ್ತು.

ದ್ಜೂನಾಳ ಕೈಗಳ ಅದ್ಭುತ ಶಕ್ತಿಗೆ ಇಂತಹ ಅನೇಕ ನಿದರ್ಶನಗಳನ್ನು ನೀಡಬಹುದು. ಅವಳಿಂದ ಚಿಕಿತ್ಸೆ ಪಡೆದು ಕಾಯಿಲೆಯಿಂದ ಮುಕ್ತರಾದವರು ಆಕೆಯ ಶಕ್ತಿಯನ್ನು ಹೊಗಳಿ ಬರೆದ ಪತ್ರಗಳು ನಿತ್ಯವೂ ಪತ್ರಿಕಾ ಕಾರ್ಯಾಲಯಗಳಿಗೆ ತಲುಪುತ್ತಿವೆ. ಕೆಲವು ಪತ್ರಿಕೆಗಳು ಆಕೆಯನ್ನು ಬಾಹ್ಯಾಂತರಿಕ್ಷದಿಂದಲೊ ಅನ್ಯಗ್ರಹದಿಂದಲೊ ಭೂಮಿಗಿಳಿದ ವ್ಯಕ್ತಿ ಎಂದು ವರ್ಣಿಸಿದ್ದೂ ಇದೆ.

ತೀರ ಚಿಕ್ಕ ಹುಡುಗಿಯಾಗಿದ್ದಾಗಲೇ ದ್ಜೂನಾಳಿಗೆ ಇತರರಲ್ಲಿ ಇಲ್ಲದ ಅಸಾಧಾರಣ ಶಕ್ತಿ ತನ್ನಲ್ಲಿದೆ ಎಂದು ಗೊತ್ತಿತ್ತು. ಮನೆಯಲ್ಲಿ ಆಕೆಯ ಕುಟುಂಬದವರಿಗೆ ಸಣ್ಣಪುಟ್ಟ ತರಚಿದ ಗಾಯವಾದರೆ, ಸ್ಪರ್ಶ ಮಾತ್ರದಿಂದಲೇ ವಾಸಿಮಾಡುವುದು ಅವಳಿಗೆ ಗೊತ್ತಾಗಿತ್ತು. ರಕ್ತಸ್ರಾವವಾದರೆ ಅದನ್ನು ನಿಲ್ಲಿಸಲೂ ಗೊತ್ತಿತ್ತು. ಗಾಳಿಯಲ್ಲಿ ಅಂಗೈಯಿಂದ ವರ್ತುಲಾಕಾರವಾಗಿ ಭಾವಗರ್ಭಿತ ಸಂಜ್ಞೆ ಮಾಡುವ ಮೂಲಕ ಸಣ್ಣ ಪುಟ್ಟ ಗಾಯಗಳನ್ನು ಆಕೆ ವಾಸಿಮಾಡುತ್ತಿದ್ದಳು.


ಮುತ್ತಜ್ಜಿಯ ಪ್ರಭಾವ

ದ್ಜೂನಾಳ ಬಾಲ್ಯ ಕುಬಾನ್ ನದಿ ಸಮೀಪ ಕ್ರಾಸ್ನೊದಾರ್ ಪಟ್ಟಣದಲ್ಲಿ ಕಳೆಯಿತು. ಆಕೆ ಅಸ್ಸೀರಿಯಾ ಜನಾಂಗದವಳು. ಆಕೆಯ ಪೂರ್ವಜರು 1914-1918ರ ಒಟ್ಟೊಮಾನ್ ತುರ್ಕರ ವಿರುದ್ಧ ಬಂಡಾಯದಲ್ಲಿ ಭಾಗವಹಿಸಿದ್ದರು. ಅಂದಿನ ಕಾಲದಲ್ಲಿ ಅವರು ಜೀವ ಉಳಿಸಿಕೊಳ್ಳಲು ಇರಾನಿನಿಂದ ಪಲಾಯನ ಮಾಡಿ ರಶಿಯದಲ್ಲಿ ಆಶ್ರಯ ಪಡೆದರು. ಪೈಕಿ ಕೆಲವರು ಕುಬಾನ್ ನದಿ ಪರಿಸರದ ಉರ್ಮಿಯ ಗ್ರಾಮದಲ್ಲಿ ನೆಲೆಸಿದರು.

ಬಾಲ್ಯದ ದಿನಗಳು ಕಳೆದು ಆಕೆ ತಾರುಣ್ಯಕ್ಕೆ ಕಾಲಿರಿಸಿದಾಗ ನಿಸರ್ಗ ತನಗೆ ವಿಶೇಷ ಸಾಮರ್ಥ್ಯವನ್ನು ದಯಪಾಲಿಸಿದೆ ಎಂಬ ಅರಿವು ದ್ಜೂನಾಳಿಗೆ ಆಗತೊಡಗಿತು. ಅಂಥ ತಿಳುವಳಿಕೆ ತನ್ನಲ್ಲಿ ಮೂಡಿದ್ದು ಯಾವ ದಿನವೆಂದು ದ್ಜೂನಾಳಿಗೆ ಚೆನ್ನಾಗಿ ಜ್ಞಾಪಕವಿದೆ. ಆಕೆಯ ಮುತ್ತಜ್ಜಿ ನೂರು ವರ್ಷ ಬದುಕಿದ್ದಳು. ಮುತ್ತಜ್ಜ 130 ವರ್ಷಗಳವರೆಗೆ ಬದುಕಿದ್ದ. ಆತ ಸಾಯುವ ಕೆಲವು ತಿಂಗಳ ಮೊದಲು ಆತನ ಬಾಯಲ್ಲಿ ಹೊಸ ಹಲ್ಲು ಚಿಗುರತೊಡಗಿತ್ತಂತೆ. ದ್ಜೂನಾಳ ಮುತ್ತಜ್ಜಿಗೆ ನಾಟಿ ವೈದ್ಯ ಗೊತ್ತಿತ್ತು. ಆಕೆಯೂ ಅಂಗೈ ಶಕ್ತಿಯಿಂದಲೇ ರೋಗವಾಸಿ ಮಾಡುತ್ತಿದ್ದಳು. ಇದು ಅಸ್ಸೀರಿಯನ್ನರಿಗೆ ಹೊಸದೇನೂ ಅಲ್ಲ. ಅಸ್ಸೀರಿಯಾ ಬ್ಯಾಬಿಲೋನಿಯಾ ಪುರಾಣದಲ್ಲಿ ಬಾವು ಎಂಬ ದೇವತೆ ಹಸ್ತಸ್ಪರ್ಶದಿಂದಲೇ ರೋಗಗಳನ್ನು ವಾಸಿ ಮಾಡುತ್ತಿದ್ದಳು ಎಂಬ ಉಲ್ಲೇಖವಿದೆ. ನಮ್ಮ ಶರೀರದೊಳಗಿರುವ ಶಕ್ತಿ ಬಿಡುಗಡೆಯಾಗಲು ಚರ್ಮದಲ್ಲಿ ಅನೇಕ ದ್ವಾರಗಳಿವೆ ಎಂದು ಪ್ರಾಚೀನ ಭಾರತ, ಚೀನಾ ಹಾಗೂ ಟಿಬೇಟಿನ ನಾಟಿ ವೈದ್ಯರು ನಂಬಿದ್ದರು. ಚರ್ಮದಲ್ಲಿನ ಅಂತಹ ದ್ವಾರಗಳನ್ನು ಅಥವಾ ರಂಧ್ರಗಳನ್ನು ಇಂದು ನಾವು ಅಕ್ಯುಪಂಕ್ಚರ್ ಬಿಂದುಗಳೆಂದು ಕರೆಯುತ್ತೇವೆ. ಶರೀರದಲ್ಲಿ ಸ್ವಾಭಾವಿಕವಾಗಿರುವ ರಕ್ಷಣಾ ವ್ಯವಸ್ಥೆಯನ್ನು ಉದ್ದೀಪನಗೊಳಿಸಲು ಅಕ್ಯುಪಂಕ್ಚರ್ ವೈದ್ಯರು ಈ ಬಿಂದುಗಳನ್ನು ಪ್ರಚೋದಿಸುತ್ತಾರೆ.

ಬಾಲ್ಯದಲ್ಲಿ ದ್ಜೂನಾ ತನ್ನ ಮುತ್ತಜ್ಜಿ ಅಂಗೈ ಸ್ಪರ್ಶದಿಂದ ರೋಗಿಗಳಿಗೆ ಚಿಕಿತ್ಸೆ ನೀಡಿ ಅವರ ಕಾಯಿಲೆಯನ್ನು ವಾಸಿಮಾಡುವುದನ್ನು ನಿತ್ಯವೂ ಗಮನಿಸುತ್ತಿದ್ದಳು.

ಮುತ್ತಜ್ಜಿ ರೋಗಿಯ ದೇಹದ ಸುತ್ತ ಅಂಗೈಯಿಂದ ಭಾವಗರ್ಭಿತ ಸನ್ನೆ ಮಾಡುತ್ತಿ



ದ್ದುದೂ ಅದರಲ್ಲಿ ಒಂದು ವಿಧದ ನಿರ್ದಿಷ್ಟ ವಿಧಾನದಲ್ಲಿ ಭರವಸೆ ಮೂಡಿತು. ಅನಂತರ ಡ್ಜೂನಾ ವೈದ್ಯಕೀಯ ಶಿಕ್ಷಣ ಪಡೆಯಲು ಹೊರಟಳು. ಅಲ್ಲಿ ಆಕೆ ಗಳಿಸಿದ ಜ್ಞಾನ ಮುಂದಿನ ಚಿಕಿತ್ಸಾ ವ್ಯವಸ್ಥೆಗೆ ಭದ್ರ ತಳಪಾಯವಾಯಿತು. ಮಾನವ ಶರೀರದ ಅಂಗ ರಚನಾ ಶಾಸ್ತ್ರಕ್ಕೆ ಸಂಬಂಧಿಸಿದ ನಾಲ್ಕು ಸಂಪುಟಗಳ ಬೃಹತ್ ಕೃತಿಯೊಂದು ಆಕೆಯ ಸತತ ಸಂಗಾತಿಯಾಗಿದೆ. ಒಬ್ಬ ರೋಗಿಯನ್ನು ನೋಡಿದಾಕ್ಷಣವೇ ಆತನನ್ನು ಯಾವ ಕಾಯಿಲೆ ಕಾಡುತ್ತಿದೆ? ಅದನ್ನು ವಾಸಿ ಮಾಡಲು ಸಾಧ್ಯವೆ? ಇಲ್ಲವೆ? ಎಂಬುದು ಆಕೆಗೆ ಖಾತರಿಯಾಗುತ್ತದೆ. ''ನನ್ನಿಂದ ಅದು ಹೇಗೆ ರೋಗತಪಾಸಣೆ ಸಾಧ್ಯವಾಗುತ್ತದೆ ಎಂಬುದನ್ನು ವಿವರಿಸಲು ಆಗುತ್ತಿಲ್ಲ. ಹೊರ ನೋಟಕ್ಕೆ ಎಲ್ಲವೂ ಸರಳ, ಸುಲಭ ಅನಿಸುತ್ತದೆ. ರೋಗಿಯ ಶರೀರದ ಒಳಗೆ ಯಾವ ಅಂಗ ರೋಗಗ್ರಸ್ತವಾಗಿದೆ ಎಂಬುದನ್ನು ಪತ್ತೆ ಮಾಡಲು ನನ್ನ ಅಂಗೈಗಳಿಂದ ರೋಗಿಯ ಶರೀರದ ಭಾಗವನ್ನು ಸವರುತ್ತೇನೆ. ಆ ಸಂದರ್ಭದಲ್ಲಿ ಎಲ್ಲ ವಿಧದ ಸಂಕೇತಗಳನ್ನು ಸ್ವೀಕರಿಸಿದ ಸಂವೇದನೆಯಾಗುತ್ತದೆ. ಕೆಲವು ಬೆಚ್ಚಗಿನ ಸಂಕೇತಗಳು, ಮತ್ತೆ ಕೆಲವು ಶೀತಲ, ಇನ್ನು ಕೆಲವು ದುರ್ಬಲ. ವಿವಿಧ ರೋಗಗಳು ನನ್ನ ಅಂಗೈಯಲ್ಲಿ ವಿವಿಧ ಸಂವೇದನೆಯನ್ನು ಉಂಟು ಮಾಡುತ್ತವೆ. ಕೆಲವು ರೋಗಗಳು ಅಂಗೈಗೆ ಸೂಜಿ ಚುಚ್ಚಿದ ಸಂವೇದನೆ ಉಂಟುಮಾಡಿದರೆ, ಮತ್ತೆ ಕೆಲವು ಬಿಸಿ ಗಾಳಿ ಬೀಸಿದ ಸಂವೇದನೆ ಉಂಟುಮಾಡುತ್ತವೆ. ಗಾಳಿಯಲ್ಲಿ ನನ್ನ ಅಂಗೈ ಓಲಾಡುವ ಶೈಲಿಯನ್ನು ಗಮನಿಸಿ ಅಲ್ಸರ್ ರೋಗಿಯಲ್ಲಿ ಹೊಟ್ಟೆಹುಣ್ಣನ್ನು ಗುರುತಿಸುತ್ತೇನೆ,'' ಎಂದು ಡ್ಜೂನಾ ಹೇಳುತ್ತಾಳೆ. ನಾನಾ ವಿಧದ ಸಂವೇದನೆಗಳು ರೋಗ ತಪಾಸಣೆಯಲ್ಲಿ ಆಕೆಗೆ ನೆರವಾಗಿವೆ.

ಡ್ಜೂನಾಳ ಕೈಗಳ ಅದ್ಭುತ ಶಕ್ತಿಯನ್ನು ಅರ್ಥಮಾಡಿಕೊಳ್ಳಲು, ವಿವರಣೆ ನೀಡಲು ಅನುಭವಿ ವೈದ್ಯಕೀಯ ತಜ್ಞರೂ ಅಸಮರ್ಥರಾಗಿದ್ದಾರೆ. ಆದುದರಿಂದಲೇ ಅವಳ ಸುತ್ತ ಅನೇಕ ದಂತ ಕತೆಗಳು, ಊಹಾಪೋಹಗಳು ಹರಡಿವೆ. ಕೆಲವರು ಆಕೆಯನ್ನು ಮಾಟಗಾತಿ ಎಂದು ಕರೆದದ್ದೂ ಇದೆ. ವೈದ್ಯಕೀಯ ತಜ್ಞರು ಆಕೆಯ ಚಿಕಿತ್ಸಾ ವಿಧಾನವನ್ನು ಕಟುವಾಗಿ ಟೀಕಿಸಿದ್ದೂ ಇದೆ. ದೀರ್ಘಕಾಲದವರೆಗೆ ಸೋವಿಯತ್ ಸಾರ್ವಜನಿಕ ಆರೋಗ್ಯ ಸಚಿವಾಲಯ ಡ್ಜೂನಾಳ ಚಿಕಿತ್ಸಾ ವಿಧಾನವನ್ನು ಮಾನ್ಯ ಮಾಡಿರಲಿಲ್ಲ.

ಈ ನಾಟಿ ವೈದ್ಯೆ ''ನನ್ನ ಕೈಗಳ ಧ್ವನಿ'' ಎಂಬ ಪುಸ್ತಕ ಬರೆದಿದ್ದಾಳೆ. 190 ಪುಟಗಳ ಈ ಪುಸ್ತಕ ಕಳೆದ ವರ್ಷ ಮಾಸ್ಕೋದಲ್ಲಿ ಪ್ರಕಟವಾಯಿತು. ಈ ಪುಸ್ತಕದಲ್ಲಿ ಆಕೆಯಿಂದ ಚಿಕಿತ್ಸೆ ಪಡೆದ ಅನೇಕ ರೋಗಿಗಳ ರೋಗ ಪ್ರಕರಣಗಳ ವಿವರಣೆಯಿದೆ. ಡ್ಜೂನಾಳ ಹಸ್ತ ಚಿಕಿತ್ಸೆಯನ್ನು ವಿವರಿಸುವ ಹಲವಾರು ಪುಸ್ತಕಗಳು ವಿದೇಶಗಳಲ್ಲಿ ಪ್ರಕಟವಾಗಿವೆ.

ನಿಗೂಢ ಜೈವಿಕ ಕ್ಷೇತ್ರ

ಎಲ್ಲ ಜೀವಿಗಳಲ್ಲಿಯೂ ಅವುಗಳದೇ ಆದ ನಿರ್ದಿಷ್ಟ ಜೈವಿಕ ಕ್ಷೇತ್ರ (BIOLOGI

CAL FIELD) ವಿರುತ್ತದೆ. ಅದು ಎಂಥ ಕ್ಷೇತ್ರ ಲಯವಿರುವುದೂ ದ್ಯೂನಾಳಿಗೆ ಅರಿವಾಯಿತು. ಆದರೂ ಹುಡುಗು ಬುದ್ಧಿಯ ಆಕೆ ಮುತ್ತಜ್ಜಿಯ ಅಂಗೈ ಚಲನೆಯನ್ನು ಅನುಕರಿಸಿ ತನ್ನ ಗೆಳತಿಯರ ಎದುರು ಗೇಲಿ ಮಾಡುತ್ತಿದ್ದಳು. ಆ ಮೇಲೆ ದ್ಯೂನಾ ನಿಧಾನವಾಗಿ ಸಣ್ಣ ಪುಟ್ಟ ಗಾಯಗಳಿಗೆ ಚಿಕಿತ್ಸೆ ನೀಡಲು ತೊಡಗಿದಳು.

ದ್ಯೂನಾ ಹನ್ನೊಂದರ ಹರೆಯದಲ್ಲಿದ್ದಾಗ ಆಕೆಯ ತಾಯಿಯ ಗೆಳತಿಯೊಬ್ಬಳ ಮಗಳು ನಿದ್ರಾಹೀನತೆಯಿಂದ ಬಳಲುತ್ತಿದ್ದಳು. ಆಗಾಗ ಕೆಟ್ಟ ತಲೆನೋವು ಆಕೆಯನ್ನು ಕಾಡುತ್ತಿತ್ತು. ಅವಳ ರೋಗ ವಾಸಿಮಾಡಬೇಕೆಂದು ಮಹಿಳೆ ದ್ಯೂನಾಳನ್ನು ಬೇಡಿಕೊಂಡಳು. ಈಗ ದ್ಯೂನಾಳಿಗೆ ನಿಜವಾಗಿಯೂ ಭಯವಾಯಿತು. ಈವರೆಗೆ ಆಕೆ ಸಣ್ಣ ಪುಟ್ಟ ತರಚಿದ ಗಾಯಗಳಿಗೆ ಮಾತ್ರ ಹಸ್ತಸ್ಪರ್ಶದಿಂದ ಚಿಕಿತ್ಸೆ ನೀಡಿದ್ದಳು. ನಿದ್ರಾಹೀನತೆಯಂಥ ಗಂಭೀರ ಸ್ವರೂಪದ ಕಾಯಿಲೆ ಹಸ್ತಸ್ಪರ್ಶದಿಂದ ಗುಣವಾದೀತು ಎಂದು ನಂಬಿಕೆಯಿರಲಿಲ್ಲ. ಆದರೆ ಆ ಮಹಿಳೆ ಪಟ್ಟು ಹಿಡಿದು ಒತ್ತಾಯಿಸಿದ ಬಳಿಕ ದ್ಯೂನಾ ಒಪ್ಪಲೇಬೇಕಾಯಿತು. ಆಗಾಕೆ ತನ್ನ ಮುತ್ತಜ್ಜಿ ಚಿಕಿತ್ಸೆ ಮಾಡುತ್ತಿದ್ದ ದೃಶ್ಯವನ್ನೇ ಜ್ಞಾಪಿಸಿಕೊಂಡು ಆ ಹುಡುಗಿಯ ತಲೆಯನ್ನು ದ್ಯೂನಾ ನವಿರಾಗಿ ನಾಲ್ಕೈದು ಬಾರಿ ತಿಕ್ಕಿದಳು. ಆಗಾಕೆ ತನ್ನ ಮುತ್ತಜ್ಜಿ ಚಿಕಿತ್ಸೆ ಮಾಡುತ್ತಿದ್ದ ದೃಶ್ಯವನ್ನೇ ಜ್ಞಾಪಿಸಿಕೊಳ್ಳುತ್ತಿದ್ದಳು. ಹೀಗೆ ನಾಲ್ಕೈದು ಬಾರಿ ಚಿಕಿತ್ಸೆಯಾದ ಮೇಲೆ ಹುಡುಗಿಯಲ್ಲಿ ನಿದ್ರಾಹೀನತೆ ಕಾಯಿಲೆ ಹೇಳಹೆಸರಿಲ್ಲದಂತೆ ಕಣ್ಮರೆಯಾಯಿತು.

ತನ್ನ ತಂದೆ ಮರಣೋನ್ಮುಖ ಸ್ಥಿತಿಯಲ್ಲಿದ್ದಾಗ ಆತನಿಗೆ ಚಿಕಿತ್ಸೆ ನೀಡಿದುದನ್ನು ದ್ಯೂನಾ ಇಂದಿಗೂ ಜ್ಞಾಪಿಸಿಕೊಳ್ಳುತ್ತಾಳೆ. ಆಕೆಯ ತಂದೆ ಗ್ರಾಮದ ಸರಕು ದಾಸ್ತಾನು ಮಳಿಗೆಯೊಂದರ ಕಾವಲುಗಾರನಾಗಿದ್ದ. ಒಂದು ಮಳೆಗಾಲದ ರಾತ್ರಿ ಆತನಿಗೆ ತಕ್ಷಣ ಎಚ್ಚರವಾಗಿ ಅವಸರದಲ್ಲಿ ಉಡುಪು ಧರಿಸಿ ಮಳಿಗೆಗೆ ಹೋಗಲು ಸಿದ್ಧನಾದ. "ಮಳಿಗೆಯಲ್ಲಿ ಏನೋ ಅಚಾತುರ್ಯ ಸಂಭವಿಸಿದೆ," ಎಂದು ಉದ್ಗರಿಸುತ್ತಾ ಹೊರಗೆ ಧಾವಿಸಿದ. ಮರುದಿನ ಮುಂಜಾನೆ ಆಸುಪಾಸಿನ ಜನ ಆತ ಮಳಿಗೆಯ ಸಮೀಪ ಪ್ರಜ್ಞೆ ತಪ್ಪಿ ಬಿದ್ದಿರುವುದನ್ನು ನೋಡಿ ಅವನ ಕುಟುಂಬಕ್ಕೆ ಸುದ್ದಿ ಮುಟ್ಟಿಸಿದರು. ಹಿಂದಿನ ರಾತ್ರಿ ಮಳಿಗೆಯಲ್ಲಿ ದರೋಡೆ ನಡೆದಿತ್ತು. ತಮ್ಮ ಯತ್ನದಲ್ಲಿ ಅಡ್ಡ ಬಂದ ಈತನಿಗೆ ದರೋಡೆಕೋರರು ತಲೆಯ ಮೇಲೆ ಭಾರವಾದ ಆಯುಧದಿಂದ ಹೊಡೆದಿದ್ದ ಪರಿಣಾಮವಾಗಿ ಪ್ರಜ್ಞೆ ತಪ್ಪಿತ್ತು. ದ್ಯೂನಾ ತಂದೆಯ ನಿಶ್ಚೇಷ್ಟಿತ ದೇಹದ ಬಳಿ ಕುಳಿತು ಅಂಗೈಯಿಂದ ಆತನ ತಲೆಯನ್ನು ಸವರುತ್ತಾ, "ಅಪ್ಪಾ, ನೀವಿಲ್ಲದೆ ನಾವು ಹೇಗೆ ಬದುಕುವುದು?" ಎಂದು ರೋದಿಸತೊಡಗಿದಳು. ಇದ್ದಕ್ಕಿದ್ದಂತೆಯೇ ಕಣ್ಣು ತೆರೆದು ನೋಡಿದ ತಂದೆ, "ಮಗೂ, ನೀನು ಇದೇನು ಮಾಡುತ್ತಿದ್ದಿಯಾ?" ಎಂದು ಪ್ರಶ್ನಿಸಿದ. ದ್ಯೂನಾಳ ಮೃದು ಅಂಗೈಗಳ ಸ್ಪರ್ಶದಿಂದ ಆತನಿಗೆ ಪ್ರಜ್ಞೆ ಮರಳಿತ್ತು.

ದಿನ ಕಳೆದಂತೆ ಆಕೆಗೆ ಈ ಬಗೆಯ ಚಿಕಿತ್ಸಾ ಪಟ್ಟುವದು ಈವರೆಗೂ ಸ್ಪಷ್ಟವಾಗಿಲ್ಲ. ಕೆಲವು ವಿಜ್ಞಾನಿಗಳು ಮಾನವ ದೇಹದಲ್ಲಿ ಜೈವಿಕ ಕ್ಷೇತ್ರದ ಅಸ್ತಿತ್ವವನ್ನೇ ಅಲ್ಲಗಳೆಯುತ್ತಾರೆ. ಆದರೆ ದ್ಯೂನಾ ಜೈವಿಕ ಕ್ಷೇತ್ರವಿದೆ ಎಂದು ಹೇಳುತ್ತಾಳೆ. ರೋಗ ತಪಾಸಣೆ ಮಾಡುವಾಗ ರೋಗಿಗಳ ಆ ಕ್ಷೇತ್ರ ಅವಳ ಒಳಗಣ್ಣಿಗೆ ಗೋಚರಿಸುತ್ತದೆ. ಈ ಕ್ಷೇತ್ರ ಬೇರೆ ಬೇರೆ ಬಣ್ಣಗಳಿಂದ ಕೂಡಿದ್ದು ವ್ಯಕ್ತಿಗೆ ವಿಶಿಷ್ಟವಾದ ಗುಣಲಕ್ಷಣಗಳನ್ನೂ ಹೊಂದಿರುತ್ತದೆ. ಅತೀಂದ್ರಿಯ ಶಕ್ತಿ ಇರುವ ಕೆಲವರು ಇತರರ ದೇಹದಲ್ಲಿರುವ ಜೈವಿಕ ಶಕ್ತಿಯನ್ನು



"ಪರೀಕ್ಷೆಯಲ್ಲಿ ಕಾಪಿ ಮಾಡಿ ಜೈಲಿಗೆ ಹೋಗಿ ನಮ್ಮ ಮನೆತನದ ಗೌರವ ಕಳೆದೆಯಲ್ಲೋ ಕತ್ತೆ!"

ಜೈವಿಕ ಕ್ಷೇತ್ರವನ್ನು, ಗ್ರಹಿಸಲು ಸಮರ್ಥರಾಗಿದ್ದಾರೆ. ಇತರರ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರುವ ಸಾಮರ್ಥ್ಯವೂ ಅವರಿಗಿದೆ. ನಾವು ಕಾಯಿಲೆಯಿಂದ ನರಳುವಾಗ ನಮ್ಮ ಜೈವಿಕ ಕ್ಷೇತ್ರದಲ್ಲಿ ಬದಲಾವಣೆಯಾಗುತ್ತದೆ. ನಮ್ಮ ಮನಸ್ಸು ಸರಿಯಾಗಿದ್ದಾಗ ಜೈವಿಕ ಕ್ಷೇತ್ರದ ಮೇಲೆ ಅದರ ಪ್ರಭಾವ ಉಂಟಾಗುತ್ತದೆ. ಆಗ ಅದು ಸಂಕೇತಗಳನ್ನು ಕಳುಹಿಸುತ್ತದೆ. ಡ್ಜೂನಾ ದಾವಿತಾಶ್ವಿಲಿಯ ಕೈಗಳ ಅಸಾಧಾರಣ ಸಾಮರ್ಥ್ಯವನ್ನು ಈ ವಿಚಾರಗಳ ಹಿನ್ನೆಲೆಯಲ್ಲಿ ನಾವು ವಿಶ್ಲೇಷಿಸಬೇಕು. ರೋಗಿಯ ದೇಹದಲ್ಲಿ ಸ್ವಾಭಾವಿಕ ರಕ್ಷಣಾ ವ್ಯವಸ್ಥೆಯನ್ನು ಉದ್ದೀಪಿಸಲು ಆಕೆ ತನ್ನ ಜೈವಿಕ ಶಕ್ತಿಯನ್ನು ಬಳಸುತ್ತಾಳೆ. ಒಬ್ಬ ವ್ಯಕ್ತಿಯ ಜೈವಿಕ ಶಕ್ತಿ ಇತರರ ಮೇಲೆ ಪ್ರಭಾವ ಬೀರುವುದು ಹೇಗೆ? ವೈದ್ಯರು, ಜೀವವಿಜ್ಞಾನಿಗಳು ಮನಃಶ್ಶಾಸ್ತ್ರಜ್ಞರು ಈ ಪ್ರಶ್ನೆಗೆ ಉತ್ತರ ಹುಡುಕುತ್ತಿದ್ದಾರೆ. ಎಲ್ಲ ಜೀವಿಗಳ ಶಾರೀರಿಕ ಮತ್ತು ರಾಸಾಯನಿಕ ಗುಣಲಕ್ಷಣಗಳ ಅಧ್ಯಯನದಿಂದ ಗಾಢ ಸಂಶೋಧನೆಯಿಂದ ಈ ವಿದ್ಯಮಾನವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿದೆ.

ನಮ್ಮ ದೇಹ ಅಪಾರ ಶಕ್ತಿ ಸಂಚಯವನ್ನು ಒಳಗೊಂಡಿದೆ. ಅತ್ಯಂತ ಉತ್ಕಟವಾದ, ಪ್ರತಿಕೂಲ ಹವಾಗುಣ ಪರಿಸ್ಥಿತಿಯಲ್ಲಿಯೂ ಅದು ಕಾರ್ಯನಿರ್ವಹಿಸಬಲ್ಲದು. ಉದಾಹರಣೆಯಾಗಿ ಬಾಹ್ಯಾಂತರಿಕ್ಷದ ಶೂನ್ಯ ಗುರುತ್ವಾಕರ್ಷಣೆಯ ಸ್ಥಿತಿಯಲ್ಲಿ ಸಂಶೋಧನೆ ನಡೆಸುವ ಗಗನಯಾನಿಗಳು, ಉತ್ತರ ಮತ್ತು ದಕ್ಷಿಣ ಧ್ರುವ ವಲಯದ ಸಂಶೋಧಕರು, ಅತಿಶೈತ್ಯ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಪ್ರಕೃತಿದತ್ತವಾಗಿ ನಮಗೆ ದೊರೆತಿರುವ ಜೈವಿಕ ಶಕ್ತಿ ನಮಗೆ ಸುಖ ನೆಮ್ಮದಿಗೆ ನೆರವಾಗುತ್ತದೆ. ಆದರೆ ದುರದೃಷ್ಟವಶಾತ್ ಅದರ ಬಗ್ಗೆ ನಾವು ತಿಳಿದಿರುವುದು ತೀರ ಅಲ್ಪ.

19ನೆಯ ಶತಮಾನದ ಮಧ್ಯಭಾಗದಲ್ಲಿ ಯುರೋಪಿನ ಪತ್ರಿಕೆಗಳು ಅಸಾಧಾರಣ ಸಾಮರ್ಥ್ಯದ ಹೊಂದಿರುವ ವ್ಯಕ್ತಿಗಳ ಬಗ್ಗೆ ವರದಿ ಮಾಡಿದವು. ಕೈಯಿಂದ ಸ್ಪರ್ಶಿಸದೆಯೇ ನೋಟ ಮಾತ್ರದಿಂದ ವಸ್ತುಗಳನ್ನು ದೂರಚಲಿಸುವಂತೆ ಮಾಡುವ ಶಕ್ತಿ ಅವರಿಗಿತ್ತು. ಇಂದು ಈ ಶಕ್ತಿಯನ್ನು PSYCHO-KINESIS ಎಂದು ಕರೆಯುತ್ತೇವೆ. ಇಂತಹ ಪ್ರಯೋಗಗಳನ್ನು ಮಾಡುತ್ತಿದ್ದ ವ್ಯಕ್ತಿಯೊಬ್ಬ 1892ರಲ್ಲಿ ಇಂಗ್ಲೆಂಡಿನಲ್ಲಿ ಮನೋವೈಜ್ಞಾನಿಕ ವಿಶ್ಲೇಷಣೆಯ ಸಲುವಾಗಿ ಸಂಸ್ಥೆಯೊಂದನ್ನು ಸ್ಥಾಪಿಸಿದ. ಈ ಸಂಸ್ಥೆ ಇಂದಿಗೂ ಅಸ್ತಿತ್ವದಲ್ಲಿದೆ. ನೋಬೆಲ್ ಬಹುಮಾನ ಗಳಿಸಿದ ಮೂವರು ವಿಜ್ಞಾನಿಗಳು ಮತ್ತು 'ರಾಯಲ್ ಸೈಂಟಿಫಿಕ್ ಸೊಸೈಟಿ'ಯ ಹತ್ತು ಸದಸ್ಯರು ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಎರಡನೆಯ ಮಹಾಯುದ್ಧದ ತರುವಾಯ ಅಮೇರಿಕದಲ್ಲಿ ಅಂತಾರಾಷ್ಟ್ರೀಯ ಪಾರಾಸೈ

ಕಾಲಜಿ (ಪರಮಾನಸ ಶಾಸ್ತ್ರ) ಸಂಸ್ಥೆ ಸ್ಥಾಪನೆಯಾಯಿತು. ಈ ಸಂಸ್ಥೆಯ ತಜ್ಞರ-ಅತೀಂದ್ರಿಯ ಶಕ್ತಿಯಿರುವವರ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದಾರೆ.

ದ್ಜೂನಾ ದಾವಿತಾಶ್ವಿಲಿ ತನಗಿರುವ ಅಸಾಧಾರಣ ಶಕ್ತಿಯನ್ನು ನಿಧಿ ಶೋಧನೆಗೆ, ಗೂಢಚರ್ಯೆಗೆ ಬಳಸಿಕೊಳ್ಳಲು ತಯಾರಿಲ್ಲ. ತನ್ನ ಚಟುವಟಿಕೆಗಳೆಲ್ಲವೂ ರೋಗಿಯನ್ನು ರೋಗದಿಂದ ಮುಕ್ತಗೊಳಿಸಲು, ಅವನ ಯಾತನೆಯನ್ನು ನಿವಾರಿಸಲು ಒಟ್ಟಿನಲ್ಲಿ ಮಾನವ ಕುಲದ ಒಳಿತಿಗೆ ಮೀಸಲಾಗಿದೆ ಎಂದು ಆಕೆ ಹೇಳುತ್ತಾಳೆ. ತನ್ನ ಚಿಕಿತ್ಸಾ ವಿಧಾನದಲ್ಲಿ ಅದ್ಭುತ ಪವಾಡವೇನೂ ಇಲ್ಲ ಎಂದು ಆಕೆಯ ಅಭಿಪ್ರಾಯ. ದೀರ್ಘ ಕಾಲದ ಕಠಿಣ ಪರಿಶ್ರಮ ಅದಕ್ಕೆ ಅಗತ್ಯ ಎಂದು ಆಕೆ ಹೇಳುತ್ತಾಳೆ.

ಕಳೆದ ವರ್ಷ ಸೋವಿಯೆತ್ ಸಾರ್ವಜನಿಕ ಆರೋಗ್ಯ ಸಚಿವಾಲಯದ ನಿರ್ಣಯದ ಮೇರೆಗೆ ದ್ಜೂನಾಳ ಚಿಕಿತ್ಸಾ ವಿಧಾನಕ್ಕೆ ಅಧಿಕೃತ ಮನ್ನಣೆ ನೀಡಲಾಯಿತು. ಇಂದು ಆ ಚಿಕಿತ್ಸಾ ವಿಧಾನವನ್ನು ಬಳಸಿಕೊಳ್ಳಲು, ಅನ್ವಯಿಸಿಕೊಳ್ಳಲು ಇತರರು ಲೈಸೆನ್ಸ್ ಪಡೆಯಬೇಕಾಗುತ್ತದೆ.

ದ್ಜೂನಾ ವಿವಿಧ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿದ್ದಾಳೆ. ಅನೇಕ ವೈದ್ಯಕೀಯ ಸಂಸ್ಥೆಯ ತಜ್ಞರು ರೋಗ ಚಿಕಿತ್ಸೆಯಲ್ಲಿ ಅವಳ ಸಹಾಯ ಯಾಚಿಸುತ್ತಿದ್ದಾರೆ. ವಿಶ್ವಸಂಸ್ಥೆಯ ರಾಜತಾಂತ್ರಿಕ ಅಕಾಡೆಮಿಯ ಸ್ವರ್ಣ ಪದಕ ಆಕೆಗೆ ದೊರೆತಿದೆ. 1988ರಲ್ಲಿ ಅಥೆನ್ಸ್‌ನಲ್ಲಿ ಜರುಗಿದ ಅಸಾಂಪ್ರದಾಯಿಕವಾದ ಇತರ ಬಗೆಯ ಚಿಕಿತ್ಸಾ ವಿಧಾನಗಳಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ದ್ಜೂನಾಳಿಗೆ 'ಡಾಕ್ಟರ್ ಆಫ್ ಮೆಡಿಸಿನ್' ಸ್ವರ್ಣ ಪದಕ ನೀಡಿ ಗೌರವಿಸಲಾಯಿತು. ಅಂಗೈ ಸ್ಪರ್ಶದಿಂದ ರೋಗ ವಾಸಿ ಮಾಡುವ ವಿಧಾನವನ್ನು ವೈಜ್ಞಾನಿಕ ತಳಹದಿಯ ಮೇಲೆ ಅಧ್ಯಯನ ಮಾಡಲು ನಿರ್ಧರಿಸಲಾಯಿತು.

ದ್ಜೂನಾಳ ಅಸಾಧಾರಣ ಸಾಮರ್ಥ್ಯದ ಬಗ್ಗೆ ವಿವರಣೆ ನೀಡುವುದು, ಜೀವಿಗಳ ಮೇಲೆ ಅವಳ ಅಂಗೈ ಶಕ್ತಿಯ ಪ್ರಭಾವವನ್ನು ವಿಶ್ಲೇಷಿಸಿ ಅದನ್ನು ನಿತ್ಯದ ರೋಗ ಚಿಕಿತ್ಸೆಯಲ್ಲಿ ಬಳಸಿಕೊಳ್ಳುವುದು ವಿಜ್ಞಾನಿಗಳ, ಸಂಶೋಧಕರ ಹೊಣೆಯಾಗಿದೆ. ಮಾಸ್ಕೋದ ಕೆಲವು ಪ್ರಯೋಗಾಲಯಗಳು, ಸಂಶೋಧನಾಲಯಗಳು ಈ ದಿಶೆಯಲ್ಲಿ ಕಾರ್ಯೋನ್ಮುಖವಾಗಿವೆ.

●

ಮಿದುಳು ಉದರವಿದ್ದಂತೆ, ನೀವು ಅದರೊಳಗೆ ಎಷ್ಟು ತುರುಕುತ್ತೀರೆಂಬುದು ಮುಖ್ಯವಲ್ಲ, ಅದು ಎಷ್ಟನ್ನು ಜೀರ್ಣಿಸಿಕೊಳ್ಳುತ್ತದೆಂಬುದು ಮುಖ್ಯ.

– ಜಿ.ಕೆ.ನಾಡಿಗ್

ನಾಲಿಗೆ ಅಡವಿಯ ಕ್ರೂರ ಮೃಗದಂತಿರುತ್ತದೆ. ಅದನ್ನು ಅಂಕೆಯಲ್ಲಿಟ್ಟುಕೊಂಡರೆ ಕಠಿಣ ಪ್ರಸಂಗದಲ್ಲಿ ನಿಮ್ಮನ್ನು ರಕ್ಷಿಸುವುದು. ಅದನ್ನು ಸ್ವತಂತ್ರವಾಗಲು ಬಿಟ್ಟರೆ ನಿಮ್ಮನ್ನದು ಹರಿದು ತಿಂದೀತು.

– ಸಂಸ್ಕೃತದಿಂದ

ಒಂದು ಹೆಣ್ಣು ಇನ್ನೊಂದಕ್ಕಿಂತ ವಿಶೇಷವಾಗಿರುತ್ತದೆಂಬ ಭ್ರಮೆಗೆ ಪ್ರೇಮವೆಂದು ಹೆಸರು.

– ಎಚ್.ಎಲ್.ಮೆಂಕೆನ್

ಅಪರಾಧ ಪತ್ತೆಗೆ
ಬಯೋ ಮೆಟ್ರಿಕ್

ಎಸ್. ರವಿಕುಮಾರ, ಮಾಗಳ

(ಆಧಾರ: ಸ್ಪಾನ್ ಹಾಗೂ ಫ್ರಂಟ್ ಲೈನ್)

ನ್ಯೂಯಾರ್ಕ್‌ನ ಯಾವುದೇ ಪ್ರಸಿದ್ಧ ಜವಳಿ ಅಂಗಡಿಗೆ ಹೋಗಿ ನೋಡಿದರೆ ವಿಶಾಲ ಭವನದಲ್ಲಿ ಲಕ್ಷಾಂತರ ರೆಡಿಮೇಡ್ ಬಟ್ಟೆಗಳನ್ನು ಶಿಸ್ತಾಗಿ ಜೋಡಿಸಿರುತ್ತಾರೆ. ಯಾವುದನ್ನಾದರೂ ಎತ್ತಿಕೊಂಡು ಅಲ್ಲಲ್ಲಿ ಇಟ್ಟಿರುವ ಕನ್ನಡಿ ಗೂಡಿನೊಳಕ್ಕೆ ಹೊಕ್ಕು ಆ ಹೊಸ ಬಟ್ಟೆ ತೊಟ್ಟು ನೋಡಬಹುದು. ಬನೀನು, ಬ್ರಾ, ಒಳಚಡ್ಡಿ ಕೂಡಾ.

ಯಾರೂ ನೋಡುತ್ತಿಲ್ಲವೆಂದು ಅಂಥ ಒಂದು ಬನೀನ್ ತೊಟ್ಟು ಅದರ ಮೇಲೆ ನಿಮ್ಮ ಮಾಮೂಲು ಹಳೇ ಶರ್ಟ್ ಧರಿಸಿ ಹಣ ಕೊಡದೆ ಹೊರಗೆ ಹೊರಡಲು ಸಿದ್ಧರಾದರೆ ಹೊರ ದ್ವಾರದ ಗಾಜಿನ ಬಾಗಿಲ ಬಳಿ ನೀವು ಬರುತ್ತಲೇ ಅಲಾರಾಂ ಕಿರುಚಿಕೊಳ್ಳುತ್ತದೆ. ನೀವು ಓಡಿ ಹೋಗದಂತೆ ಬಾಗಿಲು ಭದ್ರವಾಗಿ ತಂತಾನೇ ಹಾಕಿಕೊಳ್ಳುತ್ತದೆ.

ಇದಕ್ಕೆ ಕಾರಣವೇನು? ಏಕೆ ಹೀಗಾಯಿತು?

ಆ ಅಂಗಡಿಯ ಪ್ರತಿಯೊಂದು ಸರಕಿನ ಮೇಲೂ ಅಯಸ್ಕಾಂತದ ಚಿಕ್ಕ ಲೇಬಲ್ ಅಥವಾ ಪಿನ್ ಸಿಕ್ಕಿಸಿರುತ್ತಾರೆ. ನೀವು ಪ್ರಾಮಾಣಿಕವಾಗಿ ತೊಟ್ಟ ಹೊಸ ಬನೀನ್ ಕಳಚಿ ಪ್ಯಾಕ್ ಮಾಡಿಸಿ ಬಿಲ್ ಕೊಟ್ಟಿದ್ದರೆ, ಹಣ ಪಾವತಿ ಮಾಡುವಾಗ ಅಂಗಡಿಕಾರ ಆ ಪಿನ್ನನ್ನು ತೆಗೆದು ಹಾಕುತ್ತಾನೆ. ಗಟ್ಟಿ ಪ್ಲಾಸ್ಟಿಕ್‌ನ ಅಯಸ್ಕಾಂತದ ಚೀಟಿ ತೆಗೆಯಲು ವಿಶೇಷ ಉಪಕರಣವೇ ಬೇಕಾಗುತ್ತದೆ. ಅಲ್ಲದೆ ಆ ಪಿನ್ನನ್ನು ಎಲ್ಲಿಟ್ಟಿದ್ದಾರೆ ಎಂಬುದೂ ತಿಳಿಯುವುದಿಲ್ಲ.

ಇದೆಲ್ಲಾ ನಿಮ್ಮ ಪ್ರಾಮಾಣಿಕತೆಯ ಪರೀಕ್ಷೆಗಾಗಿ ನಡೆದರೆ, ಹಲವಾರು ಬಾರಿ ನೀವು ನೀವೇ ಹೌದೋ ಅಲ್ಲವೋ ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ. ಉದಾಹರಣೆಗೆ ಅಮೇರಿಕದ ಲಾಸ್ ಏಂಜಲೀಸ್ ನಗರದ



''ದಯವಿಟ್ಟು ಎಲ್ರೂ ಚಪ್ಪಲಿ ಹೊರಗೆ ಇಟ್ಟು ಬರಬೇಕು.. ಮಂತ್ರಿಗಳ ಭಾಷಣ ಇದೆ ಇವತ್ತು..''

ಬ್ಯಾಂಕ್ ಒಂದರಲ್ಲಿ ನೀವು ಕಂಪ್ಯೂಟರ್ ಮೂಲಕ ಹಣದ ಬಟವಾಡೆ ಮಾಡುತ್ತೀರಿ. ಹಣದ ಬಟವಾಡೆಯ ರಹಸ್ಯಗಳೆಲ್ಲ ನಿಮ್ಮ ಬೆರಳ ತುದಿಯಲ್ಲೇ ಇದೆ. ನಿಮ್ಮ ಹೆಸರು ಪರಿಚಯ ಹೇಳಿ ಬೇರೊಬ್ಬ ಅಲ್ಲಿ ಹೊಕ್ಕರೆ? ಅದರಿಂದೇನೂ ಹಾನಿಯಿಲ್ಲ. ಏಕೆಂದರೆ ಆ ಕಂಪ್ಯೂಟರ್ ರೂಮಿನ ಬೀಗ ತೆಗೆಯುವ ಮುನ್ನ ಅಲ್ಲೇ ಪಕ್ಕದಲ್ಲಿದ್ದ ಒಂದು ಬೆಳಕಿನ ಗೂಡಿನೊಳಕ್ಕೆ ನೀವು ನಿಮ್ಮ ತೋಳನ್ನು ತೂರಿಸಬೇಕು! ಕಂಪ್ಯೂಟರ್ ತನ್ನ ಎಲೆಕ್ಟ್ರಾನಿಕ್ ಕಣ್ಣುಗಳ ಮೂಲಕ ಇಡೀ ಕೈಯನ್ನು ಅಳೆಯುತ್ತದೆ. ತಕ್ಷಣ ಅದು ನಿಮ್ಮದೇ ಕೈ ಆಗಿದ್ದರೆ ಮಾತ್ರ ರೂಮಿನೊಳಕ್ಕೆ ಹೋಗಲು ಬಾಗಿಲು ತೆರೆಯುತ್ತದೆ.

ಇನ್ನೊಂದು ಅಂತಹುದೇ ಉದಾಹರಣೆಯೆಂದರೆ ನಿಮ್ಮ ಚಿನ್ನಾಭರಣಗಳನ್ನೆಲ್ಲಾ ನೀವು ಡಲ್ಲಾಸ್ ನಗರದ ಒಂದು ಬ್ಯಾಂಕ್‌ನ ಸುರಕ್ಷಾ ಪೆಟ್ಟಿಗೆಯಲ್ಲಿ ಇಟ್ಟಿದ್ದೀರಿ. ಒಂದು ದಿನ ನೀವೇ ಆಭರಣ ತೆಗೆಯಲೆಂದು ಕೀಲಿ ಕೈ ಹಿಡಿದು ಹೋಗುತ್ತೀರಿ. ಆಗ ನೀವು ಅಲ್ಲಿ ಒಂದು ಬಟನ್ ಒತ್ತಬೇಕು. ಟಾರ್ಚ್ ಮೂಲಕ ಮಂದವಾದ ಬೆಳಕು ನಿಮ್ಮ ಕಣ್ಣಿನ ಮೇಲೆ ಬೀಳುತ್ತದೆ. ನೇತ್ರ ವೈದ್ಯರ ಹಾಗೆ ನಿಮ್ಮ ಬಲಗಣ್ಣಿನ ಅಕ್ಷಿಪಟಲದ ಮೇಲಿರುವ ರಕ್ತನಾಳಗಳ ಜಾಲವನ್ನು ಒಂದು ಕಂಪ್ಯೂಟರ್ ಸೂಕ್ಷ್ಮವಾಗಿ ಪರೀಕ್ಷಿಸುತ್ತದೆ. ಅದು ನಿಮ್ಮದೇ ಕಣ್ಣು ಎಂಬುದು ಖಾತ್ರಿಯಾದರೆ ಮಾತ್ರ ನಿಮ್ಮ ಆಭರಣ ಹೊರ ತೆಗೆಯಬಹುದು.

ನೆಬ್ರಾಸ್ಕಾದ ಮಹಿಳೆಯರು ಕೆಲಸಕ್ಕೆ ಹೋಗುವ ಮುಂಚೆ ತಮ್ಮ ಚಿಕ್ಕ ಮಕ್ಕಳನ್ನು 'ಡೇ ಕೇರ್ ಸೆಂಟರ್'ನಲ್ಲಿ ಬಿಟ್ಟು ಹೋಗುತ್ತಾರೆ. ಮಗುವಿನ ಅಜ್ಜ-ಅಜ್ಜಿ ಅಥವಾ ಅಪ್ಪ ಕೂಡಾ ಕೆಲ ಕಾಲದ ನಂತರ ಮಗುವನ್ನು ಕರೆತರಬಹುದು. ಆದರೆ ಹಾಗೆಲ್ಲ ಆ ಮಗು ತಮ್ಮದೆಂದು ಹೇಳುವ ಮುಂಚೆ, ಅಲ್ಲಿಡಲಾದ ಗಾಜಿನ ಹಾಳೆಯ ಮೇಲೆ ಪಾಲಕರು ಬೆರಳನ್ನು ಒತ್ತಬೇಕು. ತಕ್ಷಣ ಕಂಪ್ಯೂಟರ್ ತನ್ನಲ್ಲಿದ್ದ ಬೆರಳಚ್ಚುಗಳೊಂದಿಗೆ ಹೋಲಿಸಿ ನೋಡಿ, ಅದು ನಿಮ್ಮದೇ ಮಗುವೆಂದು ಖಾತ್ರಿಯಾದಾಗ ಬಾಗಿಲನ್ನು ತೆರೆಯುತ್ತದೆ.

ಬೆರಳಚ್ಚಿನ ತಂತ್ರ ಹಳೆಯದು. ಆದರೆ ಅದನ್ನು ಕ್ಷಿಪ್ರವಾಗಿ ಓದಿ ತಕ್ಷಣ ಹೋಲಿಸಿ ನೋಡಿ ತೀರ್ಪು ನೀಡುವ ತಂತ್ರ ಮಾತ್ರ ಹೊಸದು.

ದೇಹದ ವಿವಿಧ ಭಾಗಗಳನ್ನು ಪರೀಕ್ಷಿಸಿ ಹೋಲಿಸಿ ನೋಡುವ ಈ ಎಲ್ಲಾ ವಿಧಾನಗಳಿಗೆ ''ಬಯೋ ಮೆಟ್ರಿಕ್ಸ್'' ಎನ್ನುತ್ತಾರೆ. ಅಂದರೆ ನಿಮ್ಮ ದೇಹದ ಅಥವಾ ವ್ಯಕ್ತಿತ್ವದ ಎಂದೂ ಬದಲಾಗದಂಥ; ಯಾರೂ ನಕಲು ಮಾಡದಂಥ ಲಕ್ಷಣಗಳನ್ನು ಅಳೆಯುವುದು.

ಬೆರಳಚ್ಚು ಬದಲಾಗುವುದಿಲ್ಲ, ಯಾರ ಬೆರಳಚ್ಚು ಇನ್ನೊಬ್ಬರ ಬೆರಳಚ್ಚಿನ ಹಾಗೆ ಇರುವುದಿಲ್ಲ. ಇದು ಎಲ್ಲರಿಗೂ ಗೊತ್ತು. ಕಣ್ಣಿನ ಅಕ್ಷಿಪಟಲದಲ್ಲಿ ಕಾಣುವ ರಕ್ತನಾಳಗಳೂ ಹಾಗೆಯೇ. ತಾಯಿಯ ಗರ್ಭದಲ್ಲಿದ್ದಾಗಲೇ ಈ ನಾಳಗಳು ಒಂದು ವಿಶಿಷ್ಟ

ವಿನ್ಯಾಸದಲ್ಲಿ ಬೆಸೆದುಕೊಳ್ಳುತ್ತವೆ. ಎಂದೂ ಬದಲಾಗುವುದಿಲ್ಲ. ಒಂದರ ಹಾಗೆ ಇನ್ನೊಂದು ಇರುವುದಿಲ್ಲ. ಅಂಗೈ ಮೇಲಿನ ಕೂಡು ಗೆರೆಗಳೂ, ತೋರು ಗೆರೆಗಳೂ ಹಾಗೇ ಇವೆ, ಗಾಯಗೊಂಡು ಇಲ್ಲವೇ ಸುಟ್ಟುಕೊಂಡು ಮಾಸಿಹೋಗುವವು. ಆದರೆ ಎಂದೂ ಬದಲಾಗುವುದಿಲ್ಲ.

ಇವುಗಳನ್ನು ಗುರುತಿಸಿ, ಹೋಲಿಸುವ ಕೆಲಸ ಈಗ ಸುಲಭವಾಗಿದೆ. ಉದಾಹರಣೆಗೆ ಬೆಂಗಳೂರಿನಲ್ಲಿರುವ ಪೋಲೀಸ್ ಕಂಪ್ಯೂಟರ್‌ನ ಸ್ಮರಣಶಕ್ತಿ ಎಷ್ಟು ಚುರುಕೆಂದರೆ, ನಿಮ್ಮ ಬೆರಳಚ್ಚನ್ನು ಅದಕ್ಕೆ ತೋರಿಸಿದರೆ ಸಾಕು. ರಾಜ್ಯದ ಎಲ್ಲಾ ಕುಖ್ಯಾತ ದರೋಡೆಕೋರರ, ಕಿಸೆಗಳ್ಳರ ಜೈಲಿನಿಂದ ಪರಾರಿ ಆದವರ ಹಾಗೂ ಕೊಲೆ ಮಾಡಿ ತಲೆ ತಪ್ಪಿಸಿಕೊಂಡವರ ಸಾವಿರಾರು ಬೆರಳಚ್ಚುಗಳ ಜೊತೆ ಅದು ನಿಮ್ಮದನ್ನು ಹೋಲಿಸಿ ನೋಡುತ್ತದೆ.

ಬೆಂಗಳೂರಿನ ಈ ಪೋಲೀಸ್ ಕಂಪ್ಯೂಟರ್ ಪೋಲೀಸರ ಹಾಗೆ ನೇರ ಕ್ರಮಕ್ಕಿಳಿಯುವುದಿಲ್ಲ. ನೀವು ಅಪರಾಧಿಯೇ ಆಗಿದ್ದರೆ, ನಿಮ್ಮ ಪೂರ್ವಾಪರಗಳನ್ನು ಹೇಳಿ ಮೌನಿಯಾಗುತ್ತದೆ. ಇನ್ನು ಕೆಲವು ಕಂಪ್ಯೂಟರ್‌ಗಳು ಹಾಗಲ್ಲ, ಭೌಂಪೆಂದು ಕಿರುಚಾಡಿ ಭದ್ರತಾ ಸಿಬ್ಬಂದಿಯನ್ನು ಎಚ್ಚರಿಸಬಹುದು. ನೀವು ಎಲ್ಲೂ ಓಡಿ ಹೋಗದಂತೆ ಬಾಗಿಲು ಮುಚ್ಚಿಬಿಡಬಹುದು.

ಕೆಲವು ಪೋರ್ಟಬಲ್ ಕಂಪ್ಯೂಟರ್‌ಗಳ ಸಾದಾ ವ್ಯವಸ್ಥೆ ಇರುತ್ತದೆ. ಉದಾಹರಣೆಗೆ ಬಾಲವಾಡಿಯಲ್ಲಿ ಇಟ್ಟ ಅಂಥ ಯಂತ್ರಕ್ಕೆ ಅತಿ ಚುರುಕಿನ ಸ್ಮರಣ ಸಾಮರ್ಥ್ಯ ಬೇಕಾಗುವುದಿಲ್ಲ. ಐದಾರು ಜನರ ಬೆರಳಚ್ಚಿನ ಗುರ್ತನ್ನು ನೆನಪಿಟ್ಟುಕೊಂಡರೆ ಸಾಕು. ನಿಮ್ಮ ಖಾಸಗೀ ವೈಯಕ್ತಿಕ ಕಂಪ್ಯೂಟರ್‌ಗೆ ನಿಮ್ಮ ಬೆರಳಚ್ಚು ಗೊತ್ತಿದ್ದರೆ ಸಾಕು. ಬೇರೆ ಯಾರೂ ಬಂದು ಬೆರಳಾಡಿಸಿದರೂ ಅದು ಕೆಲಸ ಪ್ರಾರಂಭಿಸುವುದಿಲ್ಲ.

ಕೈ ತೋರಿಸಿದ ತಕ್ಷಣ ಭವಿಷ್ಯ ಹೇಳುವ ಇಂತಹ ಬಯೋ ಮೆಟ್ರಿಕ್ ಸಾಧನಗಳಿಗೆ ಪಾಶ್ಚಾತ್ಯ ದೇಶಗಳಲ್ಲಿ ಅಪಾರ ಬೇಡಿಕೆಯಿದೆ. ●

ಬ್ರಹ್ಮಜ್ಞರೆಂದು ಪ್ರಸಿದ್ಧರಾದ ಮಹರ್ಷಿಗಳಲ್ಲಿ ಶುಕರೊಬ್ಬರ ಹೊರತು ಆಜನ್ಮ ವಿರಕ್ತರಾದವರು ಯಾರಿದ್ದರೋ ಅವರ ಹೆಸರು ಪ್ರಸಿದ್ಧಿಗೆ ಬಂದಿಲ್ಲ. ವ್ಯಾಸರೂ ಪರಾಶರರೂ ವಶಿಷ್ಠರೂ ಅಷ್ಟೋ ಇಷ್ಟೋ ಸಂಸಾರಗಳನ್ನು ಕಟ್ಟಿಕೊಂಡಿದ್ದವರೇ.

ಬೃಹದಾರಣ್ಯಕದ ಯಾಜ್ಞವಲ್ಕ್ಯರಿಗೆ ಇಬ್ಬರು ಹೆಂಡಿರು. ಆದರ್ಶವೀರರುಗಳಲ್ಲಿ ಅಹಲ್ಯೋದ್ಧಾರಿ ರಾಮನು ಸೀತೆ ಕಣ್ಣಿಗೆ ಕಾಣದೆ ಹೋದಾಗ ಗೋಳಾಡದಿದ್ದವನಲ್ಲ. ಗೀತಾಚಾರ್ಯನಂತೂ ಸತ್ಯಭಾಮೆಯ ಮೋಹವನ್ನು ಸಲ್ಲದೆಂದಿದ್ದವನಲ್ಲ. ಇನ್ನು ದೇವತಾರೂಪಗಳಲ್ಲಿ ವೈರಾಗ್ಯಮೂರ್ತಿಯೆಂದು ಉಪಾಸ್ಯನಾದ ಪರಶಿವನ ಒಡಲಿನಲ್ಲಿ ಅರ್ಧದಷ್ಟು ಮಡದಿ. ಹೀಗೆ ನಮ್ಮ ಪುರಾತನರ ಭಾವನೆಯಲ್ಲಿ ವೈರಾಗ್ಯಕ್ಕೆ ಸಂಸಾರ ಸಹಕಾರಿಯೆಂದೇ ಗಣ್ಯವಾಗಿದ್ದಂತೆ ತೋರುತ್ತದೆ.

(ಡಿ.ವಿ.ಜಿ.ಯವರ 'ಉಮರನ ಒಸಗೆ'ಯ ಮುನ್ನುಡಿ ಉಮರನ ಉಪದೇಶದ ಭಾಗದಿಂದ ಪುಟ 73-74)

ಸಂಗ್ರಹ: ***ಟಿ.ಆರ್. ವೆಂಕಟೇಶಮೂರ್ತಿ***

ಇದುವೆ ಜೀವ ಇದು ಜೀವನ

ನಮ್ಮ ಪರಿಚಿತರೊಬ್ಬರು ತೀರಿ ಹೋದಾಗ ಅವರಿಗೆ ನಡು ವಯಸ್ಸು ದಾಟಿತ್ತಷ್ಟೆ. ಮುಂಬಯಿಯ ಆರು ಅಂತಸ್ತುಗಳ ಕಟ್ಟಡದ ಮೂರನೇ ಮಹಡಿಯಲ್ಲಿ ವಾಸಿಸುತ್ತಿದ್ದ ಅವರದು ತುಂಬು ಸಂಸಾರ. ಮಕ್ಕಳೆಲ್ಲಾ ಮದುವೆ ಯಾಗಿ ಅವರವರ ಸಂಸಾರದಲ್ಲಿ ನೆಮ್ಮದಿಯಿಂದ ಇದ್ದು ಕೊನೆಯ ಮಗಳೊಬ್ಬಳು ಮಾತ್ರ ಮದುವೆಗೆ ಬಾಕಿಯಿದ್ದಳು.

ಅವರ ಕರ್ಮಗಳು ನಡೆಯುವ ದಿನ ದಂದು ಅಪರೂಪದ ಘಟನೆಯೊಂದು ಜರುಗಿತು. ಅಂದಿನ ಶಾಸ್ತ್ರವಿಧಿಗಳೆಲ್ಲಾ ಮುಗಿದು ಮನೆಯ ಮಂದಿ ಹೊರ ಕೋಣೆಯಲ್ಲಿ ಮಾತನಾಡುತ್ತ ಕುಳಿತಿದ್ದಂತೆ, ಮೇಲ್ಮಹಡಿಯ ಮೆಟ್ಟಿಲುಗಳನ್ನು ಒಂದೊಂದಾಗಿ ಇಳಿದು ಬರುತ್ತಿದ್ದ ಒಂದು ಕಾಗೆಯತ್ತ ಎಲ್ಲರ ದೃಷ್ಟಿ ಹರಿಯಿತು. ಅದು ಅಕ್ಕಪಕ್ಕದ ಯಾವ ಮನೆಯೊಳಗೂ ನುಗ್ಗದೇ ನೆಟ್ಟಗೆ ಇವರ ಮನೆಯೊಳಗೇ ಹೊಕ್ಕಿತು. ಮನೆಯವರು ಮೊದಲು ಅದನ್ನು ಓಡಿಸಲು ಪ್ರಯತ್ನಿಸಿದರು. ಅವರತ್ತ ಒಂದಿಷ್ಟೂ ಗಮನವಿಯದೇ ಆ ಕಾಗೆ ಮೃತರು ಯಾವಾಗಲೂ ಮಲಗಿ ಕೊಂಡಿರುತ್ತಿದ್ದ ಸೋಫಾದ ಅಡಿ ಕುಳಿತಿತು. ಮುಂದೇನಾಗುವುದೊ ಎಂದು ಎಲ್ಲರೂ ಭಯ ಕುತೂಹಲ ಆಶ್ಚರ್ಯಗಳಿಂದ ನೋಡುತ್ತಿದ್ದಂತೆ ಅಲ್ಲಿಂದ ಸ್ಟೂಲಿನ ಮೇಲಿರಿಸಿದ ದಿವಂಗತರ ಫೋಟೋದ ಹಾರದ ನಡುವೆ ವಿರಮಿಸಿತು. ಅಷ್ಟರಲ್ಲಿ ಮನೆಯ ಹೆಂಗಸೊಬ್ಬರು ತಟ್ಟೆಯಲ್ಲಿ ಹಾಲು ಸಕ್ಕರೆಗಳನ್ನಿರಿಸಿ ಲಗುಬಗೆಯಿಂದ ಅದರ ಮುಂದಿಟ್ಟರು. ಮೌನವಾಗಿ ಅದನ್ನು ಸ್ವೀಕರಿಸಿದ ಕಾಗೆ ಮತ್ತೆ ಕೆಲವು ನಿಮಿಷಗಳವರೆಗೆ ಅಲ್ಲಿದ್ದು, ಬಂದ ದಾರಿಯಿಂದಲೇ ಹಿಂದಿರುಗಿ ಮೂರು ಮಾಳಿಗೆಯ ಮೆಟ್ಟಿಲುಗಳನ್ನು ಹತ್ತಿ ಟೆರೇಸನ್ನೇರಿ ಹಾರಿ ಹೋಯಿತು.

ಪ್ರತಿಭಾ ಭಟ್

ನವರಾತ್ರಿ ಹಬ್ಬದ ಸಂದರ್ಭದಲ್ಲಿ ಬಟ್ಟೆ ಖರೀದಿಸಿದರೆ ಆಕರ್ಷಕ ಬಹುಮಾನ ನೀಡುವ ಬಟ್ಟೆ ಕಂಪನಿಗಳ ಜಾಹೀರಾತುಗಳಿಗೆ ಎಲ್ಲರಂತೆ ನಾನೂ ಮರುಳಾಗದಿರಲಿಲ್ಲ. ಎಂ.ಜಿ. ರಸ್ತೆಯ (ಬೆಂಗಳೂರಿನ) ಅಂಗಡಿಯೊಂದಕ್ಕೆ ಮಗ ಮತ್ತು ಯಜಮಾನರೊಂದಿಗೆ ಹೋದೆ. ನನಗೊಂದು ಸೀರೆ, ಮಗುಗಷ್ಟು ಡ್ರೆಸ್ ಮತ್ತು ಇವರಿಗೆ ಪ್ಯಾಂಟ್-ಶರ್ಟ್ ಬಟ್ಟೆ ಖರೀದಿಸಿದಾಗ 250-00ರೂ.ಗಳ ಬಹುಮಾನದ ಎರಡು ಕೂಪನ್‌ಗಳನ್ನು ಅಂಗಡಿಯಾತ ಕೊಟ್ಟ. ನಾವು ಖರೀದಿಸಿದ ಬಟ್ಟೆ 600 ರೂ. ಮೊತ್ತದ್ದು.

ಅಂಗಡಿಯ ಜಾಹಿರಾತಿರುವ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ನಲ್ಲಿ ಬಟ್ಟೆಗಳನ್ನಿರಿಸಿಕೊಂಡು ಸ್ಕೂಟರಿನಲ್ಲಿ ಮನೆ ಸೇರುವವರೆಗೂ ನನಗೆ ದೊಡ್ಡ ಬಹುಮಾನ ಬಂದಂತೆ ಕನಸು. ಬಹುಮಾನದ ಕಾಂಟೆಸಾ ಕಾರಿನಲ್ಲಿಯೇ ನಾನು ಓಡಾಡಿದಂತೆ ಅನಿಸಿಕೆ.

ಮನೆ ಬಂದಾಗ ಕ್ಯಾರಿ ಬ್ಯಾಗ್ ಹಗುರವಾದಂತೆನಿಸಿ ಗಾಬರಿಯಾಗಿ ನೋಡಿದರೆ ಅದರ ತಳದ ಸೀಲ್ ಕಿತ್ತು ಬಟ್ಟೆ

ಗಳೂ ಕೂಪನ್ನುಗಳೂ ದಾರಿಯಲ್ಲೆಲ್ಲೋ ಬಿದ್ದು ಹೋಗಿವೆ! ಅಯ್ಯೋ, ಇಷ್ಟಪಟ್ಟು ಅದೃಷ್ಟ ಪರೀಕ್ಷೆಗೆಂದು ಹೋದರೆ ಇದೆಂಥ ದುರಾದೃಷ್ಟ! ಇವರು ಹುಡುಕಿಕೊಂಡು ಬರುತ್ತೇನೆಂದು ಸ್ಕೂಟರಿನಲ್ಲಿ ನಾವು ಬಂದ ದಾರಿಯುದ್ದಕ್ಕೂ ಹೋಗಿ ನೋಡಿದರೂ ಪ್ರಯೋಜನವಾಗಲಿಲ್ಲ. ಪೋಲೀಸ್ ಠಾಣೆಗೆ ಹೋಗಿ ದೂರು ಸಲ್ಲಿಸಿ ಬಂದರು. ಕೊನೆಗೆ ಅಂಥ ಕಳಪೆ ಕ್ಯಾರಿ ಬ್ಯಾಗ್‌ನಲ್ಲಿ ಬಟ್ಟೆ ಹಾಕಿಕೊಟ್ಟಿದ್ದು ನಿನ್ನದೇ ತಪ್ಪು ಎಂದು ಅಂಗಡಿಯವನಿಗೂ ಹೇಳಿ ಬಂದರು.

ಅಂಗಡಿಯಾತ, "ನೋಡೋಣ ಸಾರ್, ಮದ್ರಾಸಲ್ಲಿರುವ ಆ ಬ್ಯಾಗ್ ತಯಾರಕನಿಗೆ ಬರೆಯುತ್ತೇನೆ," ಎಂದು ಸಮಾಧಾನ ಹೇಳಿ ಕಳಿಸಿದ ನಂತೆ. ಮುಂದೆ ಅಂಗಡಿಯಾತ ಬರೆದ ಕಾಗದದ ಒಂದು ಪ್ರತಿ ನಮಗೂ ಬಂತೆನ್ನಿ.

ದಿನಗಳೆದಂತೆ ಆ ವಿಷಯವನ್ನು ನಾವು ಮರೆತೆವು. ಒಂದು ತಿಂಗಳಿನ ನಂತರ ಆ ಅಂಗಡಿಯ ಮಾಲಿಕನಿಂದ ಪತ್ರ ಬಂತು. "ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ತಯಾರಕ ತನ್ನ ಕಂಪನಿಯಲ್ಲಿ ತಯಾರಾದ ಕಳಪೆ ಬ್ಯಾಗಿನ ಜವಾಬ್ದಾರಿಯನ್ನು ತಾನೇ ಹೊತ್ತುಕೊಂಡು, ಕ್ಷಮೆ ಕೋರಿ, ನಿಮಗಾದ ನಷ್ಟವನ್ನು ತುಂಬಿಕೊಡಲೊಪ್ಪಿ ಆರುನೂರು ರೂಪಾಯಿಗಳ ಚೆಕ್ ಕಳಿಸಿದ್ದಾನೆ. ನೀವು ಬೇಕಾದಾಗ ಬಂದು ಆ ಮೊತ್ತಕ್ಕೆ ಬಟ್ಟೆಯನ್ನು ನಮ್ಮ ಅಂಗಡಿಯಿಂದ ಪಡೆಯಬಹುದು," ಎಂದು ಅಂಗಡಿಯಾತ ಬರೆದಿದ್ದ.

ವಿಜಯ

ಹಾಸ್ಯ ಪ್ರಜ್ಞೆಯು ಎಂಥ ಬಿಗುವಿನಿಂದ ಕೂಡಿದ ಬಿಸಿ ವಾತಾವರಣವನ್ನೂ ತಿಳಿಯಾಗಿರಿಸಬಲ್ಲದೆಂಬುದಕ್ಕೆ ಇಲ್ಲಿ ಒಂದು ಉದಾಹರಣೆಯಿದೆ. ಐದು ವರ್ಷಗಳ ಹಿಂದೆ, ನನ್ನ ತಮ್ಮನಿಗೆ ಬೆಂಗಳೂರಿನ ಒಂದು ಸುಪ್ರಸಿದ್ಧ ಇಲೆಕ್ಟ್ರಾನಿಕ್ ಕಂಪನಿಯಲ್ಲಿ ಒಳ್ಳೆಯ ಉದ್ಯೋಗ ದೊರಕಿತ್ತು. ಇದಕ್ಕೆ ಮೊದಲೇ ಕೆಲಸಕ್ಕಾಗಿ ಅಲೆದು ಅಲೆದು ಬೇಸತ್ತಿದ್ದ. ಅಲೆಯದ ಬೀದಿಗಳಿರಲಿಲ್ಲ; ಅರ್ಜಿಗುಜರಾಯಿಸದ ಕಂಪನಿಗಳಿರಲಿಲ್ಲ. ಕೈ ಮುಗಿಯದ ದೇವರುಗಳೇ ಉಳಿದಿರಲಿಲ್ಲ. ಅಂಥ ಪ್ರಸಂಗದಲ್ಲಿ ಅಷ್ಟು ಒಳ್ಳೆಯ ಕೆಲಸ ದೊರಕಿದ್ದು, ಅವನಿಗೆ ಕಾಣದ ಶಕ್ತಿಯಲ್ಲಿ ನಂಬಿಕೆ ಬರುವಂತಾಯಿತು.

ಕೆಲಸದಲ್ಲಿ ಶ್ರದ್ಧೆ ಸಹೋದ್ಯೋಗಿಗಳಲ್ಲಿ ವಿಶ್ವಾಸಗಳನ್ನು ಬೆಳೆಸಿಕೊಂಡು ತಮ್ಮನು ಧಣಿಗೆ ವಿಧೇಯನಾಗಿ ದುಡಿಯತೊಡಗಿ, ಎಲ್ಲರಿಗೂ ಪ್ರೀತಿಪಾತ್ರನಾಗಿದ್ದನು.

ಒಮ್ಮೆ ಅಂಗಡಿಯಲ್ಲಿ ಗಿರಾಕಿಗಳಿಗೆ ಬೆಲೆ ಬಾಳುವ ಒಂದು ರೆಕಾರ್ಡ್ ಪ್ಲೇಯರ್‌ನ್ನು ತೋರಿಸಿ ವಿವರಿಸಿ ಅದನ್ನು ಪ್ರದರ್ಶಿಸುತ್ತಿದ್ದಾಗ, ಅಕಸ್ಮಾತ್ ಅವನ ಕೈಯಿಂದ ಜಾರಿ ಕೆಳಗೆ ಬಿದ್ದು ಪುಡಿ ಪುಡಿಯಾಯಿತು. ಆ ಶಬ್ದವನ್ನು ಕೇಳಿ ಆತನ ಯಜಮಾನನು ಸಿಟ್ಟಿನಿಂದ ತನ್ನ ಕೋಣೆಯಿಂದಲೇ "ಏನನ್ನು ಕೆಳಗೆ ಹಾಕಿದಿ?" ಎಂದು ವಿಚಾರಿಸಿದನು.

ಆಗ ನನ್ನ ತಮ್ಮನು, ಮುಂಬರುವ ಗಂಡಾಂತರವನ್ನು ಮನಗಂಡರೂ ವಿಚಲಿತನಾಗದೆ, ಶಾಂತಚಿತ್ತದಿಂದ, "ಸರ್, ಈ ಕಂಪನಿಯೊಂದಿಗಿರುವ ನನ್ನ ಅದೃಷ್ಟವನ್ನೇ ಕೆಳಗೆ ಹಾಕಿ ಪುಡಿ ಪುಡಿ ಮಾಡಿದೆ," ಎಂದನು. ಈ ಉತ್ತರವನ್ನು ಕೇಳಿದ ಆತನ ಧಣಿ ಪರಿಸ್ಥಿತಿಯನ್ನು ಅರ್ಥೈಸಿ ಸಿಟ್ಟಿಗೇಳುವುದರ ಬದಲು ತಿಳಿನಗೆ ತೇಲಿಸಿ, ಶಾಂತನಾಗಿ, ಆ ಬಗ್ಗೆ ಚಿಂತಿಸದಿರಲು ಸೂಚಿಸಿ ಆ ಗಿರಾಕಿಗಳಿಗೆ ಮತ್ತೊಂದು ರೆಕಾರ್ಡ್ ಪ್ಲೇಯರನ್ನು ತೋರಿಸಲು ಆದೇಶಿಸಿ ತನ್ನ ಫೈಲಿನಲ್ಲಿ ಮಗ್ನನಾದನು.

ಪಡುಬಿದ್ರಿ ಪ್ರಭಾಕರರಾಯ



ನನ್ನ ಜಯಾ

ಹಾಗೆ ನೋಡಿದರೆ, ಯಾರೂ ನನ್ನನ್ನು ತಪ್ಪಾಗಿ ಭಾವಿಸುವ ಸಂಭವವಿಲ್ಲ. ಆದರೂ ಮೊದಲಿಗೇ ಹೇಳಿಬಿಡುವುದು ಕ್ಷೇಮ. ಜಯಾ ಅಂದರೆ ನನ್ನ ಮಗಳು. ಸುಮಾರು ಎರಡು ವರುಷದಾಕೆ.

ಚಂಪಕ ಸಮ ಶುಭ್ರ ಧವಲ

ಮೈದಾ ಸಮ ಮೃದು ಕೋಮಲ

ಎಂದು ಯಾವ ಕವಿಯೂ ಅವಳನ್ನು ವರ್ಣಿಸಬಹುದಾಗಿತ್ತು. ಆ ಜಯಾ ಮೊನ್ನೆ ತಿರುಗಾಡಲಿಕ್ಕೆ ಹೋದಳು. ಮೊನ್ನೆ ಅನಂತ ಚತುರ್ದಶಿಯ ದಿನ ಗಣಪತಿ ವಿಸರ್ಜನವಾಯಿತಲ್ಲ, ಅದರ ಹಿಂದಿನ ದಿನವೇ: ಇನ್ನೂ ಅವಳು ಹಿಂದಿರುಗಿ ಬಂದೇ ಇಲ್ಲ. ಹೇಗೆ ಬಂದಾಳು? ನಾವಾದರೂ ಅವಳು ಹಿಂದಿರುಗಿ ಬರುವ ದಾರಿಯನ್ನೆಲ್ಲಿ ಕಾಯುತ್ತಿದ್ದೇವೆ? ಕಾರಣ, ಒಮ್ಮೆ ಹೋದವರು ತಿರುಗಿ ಬರಲಾರದ ನಾಡಿಗೇ ಅವಳು ಹೋಗಿಬಿಟ್ಟಿದ್ದಾಳೆ.

ನಮ್ಮ ಜಯಾ ಹೋಗುವಾಗಲೇ ತಿಳಿಸಿ ಹೋದಳು- ಅಲ್ಲ ನಾವೇ ಅವಳನ್ನು ಈ ದೂರದ ಪ್ರವಾಸಕ್ಕೆ ಕರೆ[illegible] ಊಹೂಂ.... ಅವಳಿಗೆ ನಮ್ಮ ಜೊತೆಯಲ್ಲಿ ಇರುವ ಮನಸ್ಸಿರಲಿಲ್ಲವೆಂದಲ್ಲ.... ಅಥವಾ ನಮಗೇ ಅವಳ ಸಹವಾಸ ಬೇಡವಾಗಿತ್ತೆಂದೂ ಅಲ್ಲ. ಚಂದ್ರನನ್ನು ಬೇಡಿ ಕಾಡುವ ಎಳೆ ಮಕ್ಕಳಂತೆ ಅವಳು ಹಟ ಹಿಡಿದಳೆಂದೂ ಅಲ್ಲ. ಆದರೆ ಯಾರು ಜಯಾಳನ್ನು ಈ ಮನೆಯಲ್ಲಿ ತಂದು ಬಿಟ್ಟಿದ್ದರೋ ಅವರೇ ಅವಳನ್ನು ಕೂಗಿ ಕರೆದ ನಂತರ..... ಪಾಪ..... ಅವಳಾದರೂ ಒಲ್ಲೆನೆಂದು ಹೇಳುವುದು ಹೇಗೆ? ನಾವಾದರೂ ಇಲ್ಲವೆನ್ನುವುದು ಹೇಗೆ?

ಜಯಾ ಯಾವ ದಿನ ನಮ್ಮ ಮನೆಗೆ ಬಂದಳೊ ಅದೇ ದಿನ ನಮ್ಮ ಮನೆಯಲ್ಲಿ ಒಬ್ಬ ಪರಮ ಸ್ವಕೀಯರ ಲಗ್ನ ಸಮಾರಂಭ

ವಹಿನೀಚ್ಯಾ ಬಾಂಗಡ್ಯಾ''ದ ಲೇಖಿಕನ ಮರಾಠಿ ಸಾಹಿತ್ಯದಲ್ಲೇ ಅತ್ಯಂತ ಹೃದಯಸ್ಪರ್ಶಿಯಾದ ನಿಬಂಧ

1962ರ ಎಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದದ್ದು

ತಿರುಗಾಡಲು ಹೋಗಿದ್ದಾಳೆ

ಕಸ್ತೂರಿ ನಡೆದು ಬಂದ ದಾರಿ

ಮೂಲ:
ಯ. ಗೋ. ಜೋಶಿ
ಅನುವಾದ:
ರಾಮಚಂದ್ರ ಕೊಟ್ಟಲಗಿ

ಪಿತ್ತು. ಅಂದು ಮನೆ ಮಂಗಲ ತೋರಣದಿಂದ ಸಿಂಗಾರವಾಗಿತ್ತು. ಅಂಗಳದಲ್ಲಿ ಥಳಿ-ರಂಗವಲ್ಲಿಯನ್ನು ಹಾಕಿತ್ತು. ಮಂಗಲವಾದ್ಯ ಬಾಗಿಲಲ್ಲಿ ಮೊಳಗುತ್ತಿದ್ದವು. ತನ್ನ ಆಗಮನ ಪ್ರೀತ್ಯರ್ಥ ಇದೆಲ್ಲ ನಡೆದಿದೆಯೆಂಬ ಭಾವನೆಯಿಂದಲೋ ಏನೋ ನಮ್ಮ ಜಯಾ ಅಂದು ನಮ್ಮ ಮನೆಯಲ್ಲಿ ಅವಸರವಸರವಾಗಿ ಪ್ರವೇಶಿಸಿದಳು.

ಧವಲ-ಶುಭ್ರ ಕಾಯಕಾಂತಿ, ಶನಿಯ ಹರಳಿನಂತಹ ''ನೀಲ'' ನಯನ-ಅದರ ವಿದ್ಯುದ್ದೀಪ್ತಿ-ಅದು ಕೇವಲ ಜಯಾಳಿಗೇ ದತ್ತವಾಗಿ ಬಂದಂತಿತ್ತು. ಯಾರೋ ಅಂದರು ''ವಾದ್ಯ ಘೋಷದ ಸಂಭ್ರಮದಲ್ಲಿ ಬಂದಿದ್ದಾಳೆ. ಜಯಶ್ರೀ ಎಂದು ನಾಮಕರಣ ಮಾಡಿ,'' ಎಂದು.

ಜಯಶ್ರೀ ನಮ್ಮ ಪರಿವಾರದವಳಾದಳು. ದಿನದುಂಬಿ ಬೆಳೆಯತೊಡಗಿದಳು. ಅವಳು ನಗುತ್ತಿದ್ದಳು - ಆಡುತ್ತಿದ್ದಳು - ಬೆಳೆಯುತ್ತಿ-ತ್ತಿದ್ದಳು. ಆನಂದದಿಂದ ಹುಂಕರಿಸುತ್ತಿದ್ದಳು. ಮನೆತುಂಬ ಗಾಳಿಯಂತೆ ಅಲೆಯುತ್ತಿದ್ದಳು. ಕೈಗೆ ಸಿಕ್ಕದ್ದನ್ನು ಎತ್ತಿ ಎಸೆಯುತ್ತಿದ್ದಳು. ಅವಳ ಕೈಗೆ ಎಟಕುವಂತೆ ಯಾವ ವಸ್ತು ಯಾವ ಸಾಮಾನನ್ನೂ ನೆಲದ ಮೇಲೆ ಇರಿಸುವ ಸಂಭವ ಉಳಿಯಲಿಲ್ಲ. ಅವಳ ನಗೆ-ಆಟಕ್ಕೆ ದಾಂಡಿಗತನಕ್ಕೆ ಸುಗ್ಗಿ ನೆರೆದಂತಾಗಿತ್ತು. ಅಕ್ಕಿ ಚೆಲ್ಲಿತು, ಕುಂಕುಮ ಕರಡಿಗೆ ಬೋರಲಾಯಿತು. ಚೆಲ್ಲಿದ ಕುಂಕುಮದಿಂದ ಜಯಾಳ ಮುಖಮಂಡಲ ಆರಕ್ತ ರಂಗವಾಯಿತು...... ಛೇ ಒಂದೇ..... ಎರಡೇ! ಈಗಂತೂ ಈ ''ಧ್ಯಾನ'' ಎದ್ದು ಓಡಾಡತೊಡಗಿತು. ಈ ಸರ್ವ ಬಾಲಲೀಲೆಯನ್ನು ನೋಡಿ ಅಂತರ್ಯಾಮದಲ್ಲಿ ಆನಂದ ಉಮ್ಮಳಿಸಿದ ನನ್ನ ''ಈಕೆ''- ಕುಳಿತೆಡೆಯಿಂದಲೇ ನಗು ನಗುತ್ತ-

''ಏ, ಒಂದಿಷ್ಟು ಯಾರಾದರೂ ಜಯಾಳನ್ನು ಸಂಭಾಳಿಸಿರಲ್ಲ,'' ಎಂದು ಹೇಳಬೇಕು.

ವಾಸ್ತವಿಕವಾಗಿ ಜಯಾ ನನ್ನ ಪತ್ನಿಯ ಆನಂದವಾಗಿದ್ದಳು, ಉಲ್ಲಾಸವಾಗಿದ್ದಳು. ಜಯಾಳ ಈ ಬಾಲಲೀಲೆಯನ್ನು ನೋಡಿ, ನನ್ನ ಪತ್ನಿಗೆ, ನಮ್ಮ ದೇವರ ಮನೆಯಲ್ಲಿ ಒಂದು ಸಣ್ಣ ದೇವರು ಬಾಲರೂಪ ಧಾರಣ ಮಾಡಿ ನಮ್ಮ ಮನೆಯಲ್ಲಿ ಲೀಲಾವಿಲೋಲನಾಗಿರಬೇಕೆಂದು ಅನಿಸುತ್ತಿರಬೇಕು. ಆದರೆ ಆನಂದದ ಉಲ್ಲಾಸದ ಸಹವಾಸವೂ ಮಾನವ

ನಿಗೆ ಸದಾಸರ್ವಕಾಲ ಸಹನವಾಗುವುದಿಲ್ಲ. ಇಂಥ ಆನಂದ ಸಮಯದಲ್ಲೂ, ಅವನಿಗೆ ಆಲಸ್ಯದ ನಿಃಶ್ವಾಸವನ್ನು ಬಿಡಬೇಕೆಂದೆನಿಸುತ್ತದೆ. ಅಂಥ ಭಯದಿಂದಲೇ ಇರಬೇಕು. ನನ್ನ ಪತ್ನಿ ಹೇಳುತ್ತಿದ್ದುದು:

"ಏ ಯಾರಾದರೂ ಒಂದಿಷ್ಟು ಜಯಾಳನ್ನು ಸಂಭಾಳಿಸಿರಲ್ಲ," ಎಂದು.

ಏನೋ ಯಾರಿಗೆ ಗೊತ್ತು? ನನಗೂ ಇಂಥ ಆಲಸ್ಯದ ನಿಃಶ್ವಾಸ ಬಿಡಬೇಕಾದೀತಲ್ಲ ಎಂದು ಇತ್ತೀಚೆಗೆ ಅನ್ನಿಸತೊಡಗಿತ್ತು.

ಒಬ್ಬರ ಸುಖ ಇನ್ನೊಬ್ಬರಿಗೆ ಸಹನವಾಗುವುದಿಲ್ಲವೆಂದು ನಾವು ಸದಾ ಹಾಡುತ್ತೇವೆ. ಆದರೆ ಒಮ್ಮೊಮ್ಮೆ ನಮ್ಮ ಸ್ವಂತದ ವೃತ್ತಿಯೇ ವಿಚಿತ್ರವಾಗಿ ನಮ್ಮ ಸುಖವೇ ನಮಗೆ ಅಸಹನೀಯವಾಗಿಬಿಡುತ್ತದೆ. ಹೇಳಬೇಕಾದುದನ್ನು ಸ್ಪಷ್ಟವಾಗಿ ತಿಳಿಯುವಂತೆ ಹೇಳಿದೆನೋ ಇಲ್ಲವೋ ನಾನೇ ಅರಿಯೆ. ಆದರೆ ಹೇಗೆ ಆಗುವುದು ಅನಿಸುವುದು ಶಕ್ಯವಿದೆ ಎನ್ನುವುದನ್ನು ಸರ್ವರೂ ಮಾನ್ಯ ಮಾಡುವುದು ಖಚಿತ.

ಜ್ಞಾನೇಶ್ವರಿಯನ್ನು ಪ್ರಕಟಿಸುವಲ್ಲಿ ನಾನು ತುಂಬ ಸಾಹಸ ಮಾಡಿದ್ದೆ. ಅದಕ್ಕೆ ಯಶ ಬಂದಿತ್ತು. ಇಪ್ಪತ್ತೈದು ವರುಷಗಳ ಹಿಂದೆ ಬರೆದ "ವಹಿನೀಚ್ಯಾ ಬಾಂಗಡ್ಯಾ" ಕಥೆ ಚಿತ್ರರೂಪಿತವಾಗಿ, ಆರ್ಥಿಕ ದೃಷ್ಟಿಯಲ್ಲಿ ಕೂಡ ಲೋಕಪ್ರಿಯವಾಗಿತ್ತು. ಈ ಆಕಸ್ಮಿಕ ಘಟನೆಯಿಂದ ನಾನೇ ಅಚ್ಚರಿಪಡುವಂತಾದೆ. ಮನಸ್ಸಿಗೆ ಏನೋ ಒಂದು ಬಗೆಯ ಹುರುಹುರು ಎನಿಸತೊಡಗಿತು. ಆಲಸ್ಯದ ಸ್ವಾಸ್ಥ್ಯದ ಅಲ್ಪ ವಿರಾಮದಂತೆ, ತೀರ ಚಿಕ್ಕ ಒಂದು ಆಕಳಿಕೆಯನ್ನು ಬಿಡಬೇಕಾಗಬಹುದು ಎಂದೆನಿಸತೊಡಗಿತು.

-ಮತ್ತೆ ಮನಸ್ಸಿನ ಈ ಹುರುಹುರಿಕೆ-ನನ್ನ ಜಯಾ ದೂರದ ಪ್ರಯಾಣ ಬೆಳೆಸಿದಾಗ-ಆಕಸ್ಮಿಕವಾಗಿ ಹೊರಟು ನಡೆದಾಗ-ತಂತಾನೇ ನಿಂತಿತು. ಈಗ ನನ್ನ ಜಯಾ ತಿರುಗಾಡಲಿಕ್ಕೆ ಹೋಗಿದ್ದಾಳೆ.

ನಾನು ಸ್ವಭಾವತಃ ಮಾತುಗಾರ. ಆದರೆ ಈಚೆಗೆ ಒಂದು ಬಗೆಯ ಮೌನ ಅದನ್ನು ಆವರಿಸಿತ್ತು. ಅದನ್ನು ನೋಡಿ ನನ್ನ ಅನೇಕ ಜನ ಸ್ನೇಹಿತರು-

"ವಹಿನೀಚ್ಯಾ ಬಾಂಗಡ್ಯಾದಿಂದ ಜೋಶಿ ಜೀವಾ ಅವರಿಗೆ ಒಂದಿಷ್ಟು ಅಮಲು ಬಂದಿದೆ" ಎಂದರು.

ಆಗುತ್ತಿರುವುದು ನಡೆದಿರುವುದು ಒಂದು-ಅದರ ಬಗ್ಗೆ ಇತರರಿಗೆ ಆಗುವ- ಬರುವ ಭಾವನೆ ಇನ್ನೊಂದು. ಏನು? ನನಗೆ ಯಶದ ಅಮಲು ತುಡುಕಿದೆಯಂತೆ. ಆದರೆ ನಾನೆಂತಹ ಭಾಗ್ಯವಂತನೆಂಬುದು ಅನ್ಯರಿಗೆಲ್ಲಿ ಗೊತ್ತಿದೆ. ಪರಮೇಶ್ವರ ಎಂದಿನಿಂದಲೂ ನನ್ನ ಪಕ್ಷವನ್ನು ಆವರಿಸುತ್ತ ಬಂದಿದ್ದಾನೆ. ನಾನು ಅಮಲೇರಿದಂತೆ ಮಾಡಬೇಕೆಂದು ಭಾವಿಸಿದರೂ ಅವನು ನನ್ನನ್ನು ಉಚ್ಛೃಂಖಲನಾಗಗೊಡಲಾರ. ಈ ಪ್ರಸಂಗದಲ್ಲಿ ಅದು ಮತ್ತೆ ಸಿದ್ಧವಾದಂತಾಯಿತು. ನನಗೆ ಯಶದ ಅಮಲು ಬಂದೀತೆಂಬ ಕಲ್ಪನೆ ದೇವರಿಗೆ ಬಂದಿರಬೇಕು- ಅಂತೇ ಈ ವೇಳೆಯಲ್ಲಿ-

ನನ್ನ ಜಯಾ ತಿರುಗಾಡಲು ಹೋದಳು.

ನನ್ನ ಮನೆಯ ಮುಂದಿನ- ಹಿಂದಿನ ಅಂಗಳದಲ್ಲಿ ಪಾರಿಜಾತದ ಗಿಡಗಳಿವೆ. ಆ ಹೂವಿನಿಂದ ಥಳಿ ಹಾಕಿದಂತೆ ಹೂ ಹಾಸುತ್ತದೆ.

ಅಲ್ಲಿ ನನ್ನ ಜಯಾ ನಿತ್ಯವೂ ಆಡುತ್ತಿದ್ದಳು. ಇತ್ತೀಚೆ ಹೂವನ್ನಾರಿಸುತ್ತಲಿದ್ದಳು.

ಅಮೃತ ಸರೋವರ। ಕುಬೇರ
ಭಾಂಡಾರ।
ನಿನ್ನ ರೂಪದಲ್ಲಿ ಬಂದ। ಚಿನ್ನ ನನ್ನ
ವಿಶ್ವಂಭರ।

ನನ್ನ ಜಯಾನ ಬಾಲಲೀಲೆಯಿಂದ ಮುಗ್ಧ ಮೋಹಿತಳಾಗಿ, ನನ್ನ ಹೆಂಡತಿ ಹಾಡುತ್ತಿ

ವ್ವಳು.

ಜಾಗರಿಸುವ ತನ್ನ ಕಂದಮ್ಮನನ್ನು ಕಂಡು ಯಾವ ತಾಯಿಗೆ ಹೀಗೆ ಅನಿಸಿದ್ದೀತು?

ಅಂಗಳದಲ್ಲಿಯ ಪಾರಿಜಾತ।
ಮಾಡಬೇಡ ಒಣ ದಿಮಾಕು।
ನೋಡು ನನ್ನ ಕಣ್ಣ ಮಣಿಯು।
ಬಣ್ಣಕೆಂತು ಶುಭ್ರ ಥಳಕು।।

ನಾನು ಸುರುವಾತಿನಲ್ಲೇ ಹೇಳಿಲ್ಲವೇನು? ನನ್ನ ಜಯಾ ತಿರುಗಾಡಲು ಹೋಗಿದ್ದಾಳೆಂದು-

ಕಂಣೆಗಿಡುವೆ ಕಾಡಿಗೆ। ಮಾಡದಿರು
ಹುಂಬತನ।।
ಲಕ್ಷ ನಕ್ಷತ್ರದ ದೃಷ್ಟಿ। ಕಂದಾ। ನಿನಗೆ
ತಾಕೀತು।।

ಬಚ್ಚ ಬತ್ತಲೆ ಸದಾ ಸರ್ವದಾ।
ನೀಲಗಗನದಂತೆ ಸುಂದರ।
ಹಾಗೇ ಆಡುತಲಿರುವನು ಮುಕುಂದ
ಇರದೆ ಅರಿವೆಯ ಪರಿವೆಯು।
ವದ್ಯ ಪಕ್ಷದ ಚಂದ್ರಮ। ಯಾಕವ್ವ
ನನ್ನ ಬಾಗಿಲಿಗೆ ಬಂದ।
ನೋಡು, ಬೇಡುತಲಿರುವ ಕಡವಾಗಿ।
ನನ್ನ ಕಂದಮ್ಮನ ಮುಖಪ್ರಭಾ।।

ಯಾಕೆ? ನಗುವಿರೇಕೆ? ನನ್ನ ''ಪಹಿನೀಚ್ಯಾ ಬಾಂಗಡ್ಯಾ'' ಚಿತ್ರಪಟದಲ್ಲಿಯ ಶಾಂತಾರಾಮ ಅಠವಲೆ ಅವರ ಓವಿಯನ್ನು ಇಲ್ಲಿ ಉದ್ಧರಿಸಿದ್ದೇನೆಂದು ನಗುವಿರೇನು? ಛೇ.... ಈ ಓವಿ ಪಹಿನೀಚ್ಯಾ ಬಾಂಗಡ್ಯಾದಲ್ಲಿಯದೂ ಅಲ್ಲ- ಶಾಂತಾರಾಮ ಅಠವಲೇ ವಿರಚಿತವೂ ಅಲ್ಲ.

ಈ ಓವಿ ನನ್ನ- ಖಾಸಾ ನನ್ನ ಮನೆಯದು. ಶಾಂತಾರಾಮ ಅಠವಲೆ ಅವರ ಪರಿಚಯ ನಿಮಗಿರಬಹುದು. ಅವರನ್ನು ನಾನು ಚಿಕ್ಕಂದಿನಿಂದಲೂ ಬಲ್ಲೆ. ಆದರೆ ಅವರು ಇಂಥಾ ''ಎಬ್ಬಿಸುವ ಗಿರಾಕಿ'' ಇದ್ದಾರೆಂದು ನಿನ್ನೆ ಮೊನ್ನೆಯವರೆಗೂ ಕಲ್ಪನೆ ಇರಲಿಲ್ಲ. ನನಗೆ ಸಂಶಯ ಬರಬಾರದೆಂದು ಅವರು ಈ ಓವಿಯಲ್ಲಿಯ ಜಯಶ್ರೀಯನ್ನು ಬದಿಗೆ ಸರಿಸಿ, ಮುಕುಂದ ಕಂದಮ್ಮ ಶಬ್ದ ಸೇರಿಸಿ, ಕವಿತೆ ತಮ್ಮದೇ ಎಂದು ದಬಾಯಿಸಿಬಿಟ್ಟಿದ್ದಾರೆ ಅಷ್ಟೇ! ನಾನಾದರೂ ಎಂಥಾ ಸಾಧು ಭೋಳೆ ನೀವೇ ನೋಡಿರಿ. ಮೊನ್ನಿನವರೆಗೂ ಈ ಕವಿತೆ ಶಾಂತಾರಾಮರದೆಂದೇ ನನ್ನ ಕಲ್ಪನೆಯಾಗಿತ್ತು. ಅದು ನನ್ನ ಮನೆಯದು ಎಂಬುದು ಎಂದು ಲಕ್ಷ್ಯಕ್ಕೆ ಬಂದಿತೆಂದಿರಿ-

ಎಂದು ನನ್ನ ಜಯಾ ತಿರುಗಾಡಲಿಕ್ಕೆ ಹೋದಳೋ ಅಂದು.

ಅವಳ ಸಹವಾಸದಿಂದ ಜೀವಂತವಾಗಿದ್ದ ಈ ವಸ್ತುಗಳ ಕಡೆಗೆ ನೋಡತೊಡಗಿದೆ- ಇನ್ನೂ ಆನಂದದಿಂದ ನೋಡುತ್ತೇನೆ. ಆ ಸಂಪಿಗೆ ಆ ಪಾರಿಜಾತ ಆ ಜಾಜಿಮಲ್ಲಿಗೆ ಆ ಚಂದ್ರಮ ಆ ಅಂಗಳ.... ಈ ಎಲ್ಲ... ಎಲ್ಲ



''ನಿಮ್ಮಲ್ಲಿ ಒಂದು ವಿನಂತಿ..''
''ಏನೂಂತ?''
''ಸ್ವಲ್ಪ ಆಚೆ ಮುಖ ಮಾಡಿ ಮಾತಾಡಿ. ನೀವು ಸ್ಪ್ರೇ ಪೇಂಟ್ ಮಾಡೋದ್ರಲ್ಲಿ ತುಂಬ ಜಾಣರಿರಬಹುದು..''

ವಸ್ತುಗಳೂ ನನಗೆ ತೇಜಸ್ವಿಯೆಂದು ಸುಗಂಧಿತವೆಂದು ಅನ್ನಿಸತೊಡಗುತ್ತವೆ. ನನ್ನ ಜಯಾ ತನ್ನ ಮೈಗಂಪು ತನ್ನ ತೇಜ ತನ್ನ ಸೌಂದರ್ಯವನ್ನು, ಹೋಗುವಾಗ ಕದಾಚಿತ್ ಈ ಜತೆಯ ಗೆಳೆಯರಿಗೆ ಬಿಟ್ಟು ಹೋಗಿರಬೇಕು ಇವೆಲ್ಲವನ್ನೂ ನೋಡಿ ನನಗೆ ನಿರತಿಶಯ ಆನಂದವಾಗುತ್ತದೆ.

ನನ್ನ ಜಯಾ ಇನ್ನು ಪುನಃ ಅಲ್ಲಿ ಕಾಣಲಾರಳು- ಎಂದು.

ಅಲ್ಲಿ ಮೊದಲು ಕಾಣುತ್ತಿದ್ದಳೆಂದು.

ನನ್ನ ಮನೆಯ ಈ ಗದ್ಯ ಕಾವ್ಯವನ್ನು ಇದ್ದಂತೆ ಎತ್ತಿ ಅದರಲ್ಲಿ ಕೇವಲ ತಮ್ಮ ಚರಣರೇಖೆ ಎಳೆದು ಇಂದು ಶಾಂತಾರಾಮ ಅಥವಲೆ ವಹಿನೀಚ್ಯಾ ಬಾಂಗಡ್ಯಾದ ಪದ್ಯ ಲೇಖಕನೆಂದು ಮೆರೆಯತೊಡಗಿದ್ದಾನೆ. ನಾನು ಅವನನ್ನು ಮನಸಾ ಕ್ಷಮಿಸಿದ್ದೇನೆ. ಕಾರಣ ಅವನು ನನ್ನ ಪರಮ ಸ್ನೇಹಿತ.

ಆನಂದ ಸಂಭ್ರಮದಲ್ಲಿದ್ದಾಗ ಮನುಷ್ಯನಿಗೆ ಖಚಿತವಾಗಿ ತಾನು ಇಂಥದೇ ಆನಂದದಲ್ಲಿರುವೆನೆಂಬುದು ತಿಳಿಯುವುದಿಲ್ಲ. ಸುಖ ಸಮಯದಲ್ಲಿ- ಸುಖದ ಆಸ್ವಾದ ಮಾಡುವುದಕ್ಕಿಂತ ಇನ್ನೂ ಏನೇನು ಕೊರತೆ ಇದೆ ಎನ್ನುವುದನ್ನು ಅಳೆಯುತ್ತಲೇ ಮನುಷ್ಯ ಕಳವಳಿಸುತ್ತಿರುತ್ತಾನೆ. ಆಗ ಪರಮೇಶ್ವರ ಏನಾದರೂ ಆಕಸ್ಮಿಕ- ಅಗಮ್ಯ ಕೃತಿಯನ್ನು ಮಾಡಬೇಕಾಗುತ್ತದೆ. ಆಗ ಚುಟಕಿ ಹೊಡೆದಂತಾಗಿ ನಾವೇ ಅನ್ನುತ್ತೇವೆ- ''ನಮ್ಮ ಲಕ್ಷ್ಯದಲ್ಲಿಯೇ ಬಂದಿರಲಿಲ್ಲ- ನಾವು ಆನಂದದಲ್ಲಿದ್ದೆವೆಂಬುದು,'' ಎಂದು.

ಜಯಾಳ ರೂಪದಲ್ಲಿ ಬಾಲ ವೈಭವ ನನ್ನ ಮನೆಯಲ್ಲಿ ಲೀಲಾ ವಿಹಾರಿಯಾದಾಗ- ಆಯುಷ್ಯವೆಂಬುದು ಪ್ರತಿನಿತ್ಯ ತಾರೀಖಿನ ಕಾಗದವನ್ನು ಹರಿಯುವ ಕ್ಯಾಲೆಂಡರಿನಂತೆ ಇದೆ. ನನಗನಿಸುತ್ತಿತ್ತು. ಅದು ಅಪ್ರಾಪ್ಯ ಆನಂದವಾಗಿತ್ತೆಂದು ಈಗ ಅನ್ನಿಸತೊಡಗಿದೆ.

ಅದೇ ನನ್ನ ವೈಭವವಾಗಿತ್ತು. ಹುಡುಗರನ್ನು ಸಿನೇಮಾ, ನಾಟಕಕ್ಕೆ ಕರೆದುಕೊಂಡು ಹೋಗುವ ಷೋಕು ನನಗಿಲ್ಲ. ಅರಿವೆ-ಅಂಚಡಿಯಲ್ಲಿ ಅವರನ್ನು ಮೆರೆಯಿಸುವ ಷೋಕು ನನಗಿಲ್ಲ. ಆದರೆ ಒಂದೇ ಒಂದು ಷೋಕಿದೆ. ನಾಕೆಂಟು ದಿನಗಳಲ್ಲಿ ಒಮ್ಮೆಯಾದರೂ ಸ್ವಹಸ್ತದಿಂದ ನನ್ನ ಹುಡುಗನಿಗೆ ಸ್ನಾನಕ್ಕೆ ಹಾಕುವುದು. ಅದರಲ್ಲಿ ನನಗೆ ಅಲೌಕಿಕ ಆನಂದವೆನಿಸುತ್ತದೆ.

ಜಯಾ ನನಗೆ ಎಷ್ಟು ಆನಂದದಾಯಿಯಾಗಿದ್ದಳೆಂಬುದು ಈ ಪ್ರಸಂಗದಿಂದ ನನಗೀಗ ತಿಳಿಯತೊಡಗಿದೆ. ಈ ಅಲೌಕಿಕ ಕಿವಿಮಾತನ್ನು ಇದೇ ಮೊದಲು ಪರಮೇಶ್ವರ ನನ್ನ ಕಿವಿಯಲ್ಲಿ ಊದಲಿಲ್ಲ. ಬಹಳ ಜನರಿಗೆ ಇದನ್ನು ಅವನು ಹೇಳಿರಬೇಕು. ಅದರ ಸುಖವನ್ನು ನಾನು ಇದೀಗ ಅನುಭವಿಸುತ್ತಿದ್ದೇನೆ.

ದೀಪಾವಳಿಯ ಸುರುವಾತಿಗೆ ಅಭ್ಯಂಗ ಸ್ನಾನವಾಗುತ್ತದೆ. ದೀಪಾವಳಿಯ ಈ ಶುಭ ಸಮಯದಲ್ಲಿ ನಾನು ನನ್ನ ಅನುಭವ ಕಥನ ಮಾಡುತ್ತಿದ್ದೇನೆ. ಕಾರಣ ಅದರಿಂದ ಅನೇಕರ ಗತನೆನಪುಗಳು ಜಾಗರಿಸುವ ಸಂಭವವಿದೆ. ಆ ನೆನಪುಗಳಿಂದ ಅವರು ಅಭ್ಯಂಗ ಸ್ನಾತರಾಗಬಹುದಾಗಿದೆ. ಇಂಥ ವಿರಹದ ಅಭ್ಯಂಗ ಸ್ನಾನವಿಲ್ಲದೆ ಸಂಸಾರಕ್ಕೆ ಖಚಿತ ರುಚಿಯೇ ಬರಲಾರದು. ಇಂಥ ಅಭ್ಯಂಗ ಸ್ನಾನದಿಂದ ನವಕ್ಷಿತದ ದರ್ಶನ ಘಟಿಸುತ್ತದೆ. ಬಳಕೆಯಿಂದ ಮ್ಲಾನ ಮಲಿನವಾದ ಆನಂದಕ್ಕೂ ನವ-ನವ್ಯತೆ ಬರುತ್ತದೆ.

ಅದೇಕೆ? ನನ್ನ ವಿಷಯವನ್ನೇ ತೆಗೆದುಕೊಳ್ಳಿರಲ್ಲ. ನನ್ನ ಆಯುಷ್ಯ ತೀರ ಗದ್ಯ ಸ್ವರೂಪಿಯಾಗಿದೆ. ನಾನು ನನ್ನ ಹೆಂಡತಿಯನ್ನು ಪ್ರೀತಿಸುತ್ತಿರಲಿಕ್ಕಿಲ್ಲ- ಕೇವಲ ಸನಾತನೀ ಪದ್ಧತಿಯ ರೂಕ್ಷ ಸಂಸಾರ ಜೀವನ ಸಾಗಿಸುತ್ತಿರಬೇಕು- ಎಂದು ನನ್ನ ಅನೇಕ ಮಿತ್ರರ ಕಲ್ಪನೆಯಾಗಿದೆ; ಒಮ್ಮೊಮ್ಮೆ ನನಗೂ, ಅಂಥ ಶಂಕೆ



"ನಮ್ ಯಜಮಾನ್ರಿಗೆ ಆರ್‌ಬಿಐನಲ್ಲಿ ಕೆಲ್ಸ!"
"ನಮ್ ಯಜಮಾನ್ರಿಗೆ ಸಿಬಿಐಯಲ್ಲಿ ಕೆಲ್ಸ!"
"ಪರವಾಗಿಲ್ವೆ ಇಬ್ರಿಗೂ ಬ್ಯಾಂಕ್‌ನಲ್ಲೆ ಗಂಡಂದ್ರು."

ಬರುತ್ತದೆ. ಕಾರಣವೆಂದರೆ ನಾನು ಎಂದೂ ಹೆಂಡತಿಯನ್ನು ಕಟ್ಟಿಕೊಂಡು ಅಲೆದಾಟಕ್ಕೆ ಹೋಗಿಲ್ಲ. ಸಿನಿಮಾ- ನಾಟಕಕ್ಕೆ ಹೋಗಿಲ್ಲ. ಕಾರಣ ತಿರುಗಾಟದ- ಸಿನೇಮಾ ನಾಟಕದ- ಒಗ್ಗರಣೆಯನ್ನು ಕೊಡದಿದ್ದರೂ ನಮ್ಮ ಸಂಸಾರ ಅರುಚಿಯಾದೀತೆಯೆಂದು ನನಗಾಗಲೀ ನನ್ನ ಹೆಂಡತಿಗಾಗಲೀ ಅನಿಸೇ ಇಲ್ಲ.

ಈಗ ತಮಾಷೆ ಹೇಗಿದೆ ನೋಡಿರಲ್ಲ- ನನ್ನ ಜಯಾ ತಿರುಗಾಡಲಿಕ್ಕೆ ಹೋಗಿಬಿಟ್ಟಳು. ನಾವು ಉಭಯತರೂ ದೃಷ್ಟಾದೃಷ್ಟಿಯಾಗುವುದನ್ನು ತಪ್ಪಿಸತೊಡಗಿದೆವು. ನಂತರ ನೋಡತೊಡಗಿದೆವು. ಇನ್ನೂ ಒಂದು ಚಮತ್ಕಾರ- ನನ್ನ ಕಣ್ಣು ಒದ್ದೆಯಾಗಬಾರದೆಂದು ಇವಳು ಅಟ್ಟಹಾಸದಿಂದ ತನ್ನ ಕಣ್ಣನ್ನು ಒಣಗಿಸಿಬಿಟ್ಟಿದ್ದಾಳೆ.

ಇತ್ತ ನಾನೂ ಅದೇ ಪ್ರಯತ್ನದಲ್ಲಿಯೇ ಇದ್ದೆ. ಜಯಶ್ರೀಯ ವಿಷಯವನ್ನು ನಾವು ತೆಗೆಯುವುದೇ ಇಲ್ಲ- ಆಕೆ ಎಂದೂ ನಮ್ಮವಳಾಗಿರಲಿಲ್ಲವೆಂಬ ಭಾವನೆಯಿಂದ. ಅವಳು ನಮ್ಮ ಮನೆಯಲ್ಲಿಯೇ ಇದ್ದಳೆಂಬ ನೆನಪೂ ನಮಗೆ ಬರುವುದಿಲ್ಲ- ಅವಳು ತಿರುಗಾಡಲಿಕ್ಕೆ ಹೋಗಿದ್ದೂ ಲಕ್ಷ್ಯದಲ್ಲಿ ಸುಳಿಯುವುದಿಲ್ಲ. ಸಂಭಾವಿತರಂತೆ ಹರಟೆ ಹೊಡೆಯುತ್ತ, "ಮಳೆ ಬೆಳೆ ಚೆನ್ನಾಗಿದೆ. ಕದಾಚಿತ್ ದೇಶ ನಿಂಗ್ ಹೋದೀತು," ಎಂದು ಮಾತನಾಡಿಕೊಳ್ಳುತ್ತೇವೆ.

ಅಂಗಳದಲ್ಲಿಯ ಸಂಪಿಗೆ ತರುವಿನ ಕಡೆಗೆ ನೋಡಿ, "ಇಂದು ಯಾರೂ ಹೂ ಕೊಯ್ಯಲೇ ಇಲ್ಲ. ಇದ್ದರೆ ಇರಲೊಲ್ಲವೇಕೆ ಗಿಡದಲ್ಲಿಯೇ!" ಎಂದು ಅವಳೆನ್ನುತ್ತಾಳೆ.

ಎಂಭತ್ತು ವರುಷ ದಾಟಿದ ನನ್ನ ತಾಯಿ ಮನೆಯಲ್ಲಿಯೇ ಇದ್ದಾಳೆ. ಬಹಳ ದಿನವಾಯಿತು ಅವಳಿಗೆ ಕಾಣೆಸದಂತಾಗಿ. ಕಂಣಾರೆ ಅವಳೆಂದೂ ನನ್ನ ಜಯಾಳನ್ನು ನೋಡಲಿಲ್ಲ. ಇಂದಂತೂ ಶಕ್ಯವೇ ಇಲ್ಲ. ಅವಳು ನೋಡದೆಯೂ ಜಯಾಳ ಆನಂದವನ್ನು ಅನುಭವಿಸಿದಳು. ಅದೇ ಅಂಥದೇ ಆನಂದವನ್ನು ನಾನಾದರೂ ಏಕೆ ಭೋಗಿಸಬಾರದು? ಭೋಗಿಸಲು ಶಕ್ತನಾಗಬಾರದು? ಆ ಅದೃಶ್ಯ ಆನಂದವೇ ಇಂದು ನನ್ನ ಪಾಲಿಗೆ ಉಳಿದಿದೆ. ಜಯಾಳ ಮಟ್ಟಿಗೆ- ನಾನು ನನ್ನ ತಾಯಿಯಂತೆ ಕುರುಡಾಗಿದ್ದೇನೆ. ಜಯಾ ಆಡಿದ ಜಾಗ, ಅವಳು ಆರಿಸಿದ ಹೂ ನನಗೆ ಕಂಡರೂ ನನ್ನ ಜಯಾ ಮಾತ್ರ ನನ್ನ ತಾಯಿಗೆ ಕಾಣದಂತೆ ನನಗೂ ಕಾಣದಾಗಿದ್ದಾಳೆ. ಅವಳು ಇನ್ನೂ ಇಲ್ಲಿಯೇ ಇರುವ ಆಭಾಸ ಮಾತ್ರ ಆಗುತ್ತದೆ.

ನನ್ನ ಜಯಾಳ ಆಯುಷ್ಯ ಒಂದೆರಡು ವರುಷದ್ದು ಅಷ್ಟೆ! ಹೂವಿನಂತೆ ಆ ಕೂಸು! ಅವಳು ನಮಗೆ ಇನ್ನೂ ಎಷ್ಟೋ ಸುಖ ಕೊಡಬೇಕಾಗಿತ್ತು. ಒಂದು ಸಣ್ಣ ಹೂವಿನಂದ ಕಲಶ ತುಂಬ ಅತ್ತರನ್ನು ಅಪೇಕ್ಷಿಸುವು

ದಾದರೂ ಹೇಗೆ? ಅತ್ತರ್ ಕೊಟ್ಟ ಮೇಲೂ ಹೂ ಎಲ್ಲಿದೆಯೆಂದು ಕಳವಳಿಸುವುದೇಕೆ?

ಮನುಷ್ಯನಿಗೆ ಆ ಅತ್ತರೂ ಬೇಕೆನ್ನಿಸುತ್ತದೆ, ಹೂವೂ ಬೇಕೆನ್ನಿಸುತ್ತದೆ.

ಒಮ್ಮೆ ನೆತ್ತಿಯ ಮೇಲೆ- ಮೇಲಿನ ನೀಲಾಕಾಶದಲ್ಲಿ, ಇಂದ್ರಧನು ಅಕಸ್ಮಾತ್ತಾಗಿ ಮೂಡುತ್ತದೆ; ಇಲ್ಲದಾಗುತ್ತದೆ. ನನ್ನಂಥವನ ಬದುಕಿನಲ್ಲಿ ಜಯಾ ಬರುತ್ತಾಳೆ, ಹೋಗುತ್ತಾಳೆ.

ಇಂಥ ಈ ಪ್ರಸಂಗದಿಂದ ನನ್ನ ಪಾಲಿಗೆ ಸುಖ ಬರಲಿಲ್ಲವೇನು? ಜಯಾ ಇನ್ನು ದೊಡ್ಡವಳಾಗಲಾರಳು. ಜಯಶ್ರೀಯ ಬಾಲರೂಪ ನನ್ನ ಕಂಣೆದುರು ಕಟ್ಟಿದ್ದು ಅದೆಂದೂ ದೊಡ್ಡದಾಗಲಾರದು. ಇನ್ನು ನನ್ನ ಜಯಾಳಿಗೆ ಚಿರಂತನ ಬಾಲ್ಯವೇ? ಅವಳು ದೊಡ್ಡವಳಾದ- ಲಗ್ನಕ್ಕೆ ನೆರೆದ- ಸಂಸಾರ ಮಾಡಬೇಕಾದ ಯಾವ ಚಿಂತೆಯೂ ನನಗಿಲ್ಲ. ಎಷ್ಟು ಚಿಂತೆಯಿಂದ ನಾನು ಅಕಸ್ಮಾತ್ತಾಗಿ ಮುಕ್ತನಾದೆ. ಇನ್ನು ಜಯಾಳ ಯಾವ ಚಿಂತೆಯೂ ನನಗುಳಿಯಲಿಲ್ಲ. ಉಳಿದದ್ದು ಬರೇ ಅವಳ ಸವಿ ನೆನಪು.

ನನ್ನ ಜಯಾ... ನನ್ನ ಕಂಣೆದುರು ದುಡುದುಡು ನಡೆದಾಡುತ್ತಿದ್ದರೂ ನನ್ನ ಉಳಿದ ಕಂದಮ್ಮಗಳಿರಾ..... ನಿಮಗೆ ತಪ್ಪದೆ ನಾಕೆಂಟು ದಿನಕ್ಕೆ ಸ್ನಾನಕ್ಕೆ ಹಾಕುವುದನ್ನು ನಾನು ಮರೆಯಲಾರೆ- ಬಿಡಲಾರೆ. ತಿಳಿಯಿತೇ!

ನಿಮ್ಮ ಪಾಲಿಗೆ ಮತ್ತೆ ನಾಲ್ಕು ತಂಬಿಗೆ ಜಾಸ್ತಿ ನೀರು.

ಮತ್ತೆ ಕೆಲವರೆನ್ನುತ್ತಾರೆ, ಅದು ಮಾತ್ರ ನಿಜ.

''ಜೋಶಿಬುವಾ- ನೀವಂತೂ ಜ್ಞಾನೇಶ್ವರಿಯನ್ನು ಪ್ರಕಟಿಸಿದ್ದೀರಿ''

ನಾನಾದರೂ ಏನು ಹೇಳುತ್ತಿದ್ದೇನೆ. ಜ್ಞಾನೇಶ್ವರಿಯನ್ನು ಮುದ್ರಿಸಿ ಪ್ರಕಟಿಸಿದ್ದು. ನನ್ನ ಲಕ್ಷ್ಯದಲ್ಲಿ ಇಲ್ಲವೇನು? ಅದನ್ನು ಓದುವುದೆಂದು ಖಚಿತವಾಗಿ ನಿರ್ಣಯಿಸಿಕೊಂಡಿದ್ದೇನೆ. ಇತ್ತಿತ್ತಲಾಗಿ ಏನಾಗುತ್ತಿತ್ತೆಂದಿರಿ- ನಾನು ಓದಲು ಬರೆಯಲು ಕುಳಿತರೆ ನನ್ನ ಜಯಾ ಬಂದು ತುಂಬ ತೊಂದರೆ ಕೊಡಬೇಕು. ಪುಸ್ತಕದ ಪುಟ ಹರಿಯಬೇಕು- ಹರಿಯಬೇಕು. ಈಗ ಆ ಜಯಾ ತಿರುಗಾಡಲಿಕ್ಕೆ ಹೋಗಿದ್ದಾಳೆ. ಜ್ಞಾನೇಶ್ವರಿಯನ್ನು ಓದುವಷ್ಟು ಶಾಂತ ಅವಕಾಶ ಆಯುಷ್ಯದಲ್ಲಿ ನನಗೆ ದೊರೆತಿದೆ. ಈಗ ಜ್ಞಾನೇಶ್ವರಿಯನ್ನು ಓದಲು ಮೊದಲು ಮಾಡುವುದು:

> ಓಂ ನಮೋಜೀ ಆದ್ಯಾ। ವೇದಪ್ರತಿ
> ಪಾದ್ಯಾ
> ಜಯಜಯಾಜಿ ಸ್ವಸಂವೇದ್ಯಾ। ಆತ್ಮ
> ರೂಪ

ಅಂದರೇನು?

ನನ್ನ ಜಯಾ, ದೂರ ದೂರ ಬಹಳ ದೂರ ತೀರ ಕ್ಷಿತಿಜದ ಆಚೆಗೆ ತಿರುಗಾಡಲೆಂದು ಹೊರಟು ಹೋಗಿದ್ದಾಳೆ. ●

ಜೀವನ

ಬದುಕು ದಿಟ, ಬದುಕು ನಿಜ

ಸಾವದರ ಗುರಿಯಲ್ಲ.

– ಲಾಂಗ್ ಫೆಲೋ

ಅರ್ಥಗಳ ಬೇರೀಜು

ಗುಲಾಬಿಯ ತೋಟ ನಿನ್ನ ಕಣ್ಣಲ್ಲಿ ಅರಳಿದ
ನೋಟ, ಕೈ ಸೋಕಿದರೆ ಹೊಳಪು ಮಾಸೀತು.
ಒಂದೊಂದೆಸಳ ಕಿತ್ತು ಹೂವಿನಾಳದ ಗೂಢ
ಹುಡುಕಿದರೆ, ಒಳ ನಿರಾಕಾರ ಹೊರಗಾಯಿತು.

ಗಾಳಿಯಲಿ ತೇಲಿ ಬಂದಂಥ ಕಸ್ತೂರಿ ಗಂಧ
ನಾಸಿಕವ ಹೊಕ್ಕದ್ದು ಕಾಕತಾಳೀಯ.
ಮೂಸುತ್ತ ಹೊರಟು ಮೃಗದ ಬೇಟೆಯಾಡಿದರೆ
ಮೂಲದ ಸನಿಹ ಘ್ರಾಣ ಶಕ್ತಿಯ ಮಾಯ.

ಪ್ರೇಮ ಉಸಿರಿನ ಒಂದೆ ಅವಿತಿಟ್ಟ ಗುಟ್ಟನು
ಮುಟ್ಟಿ ನೋಡುವುದಕ್ಕೆ ಯಾಕೆ ಆಸಕ್ತಿ?
ಪ್ರೀತಿ ನಂಬುವುದು ಬೇಷರತ್ತಾಗಿ; ಒಲಿದೆ-
ದೆಯಲಿಣುಕದಿರು. ಕಂಡೀತಲ್ಲಿ ವಿರಕ್ತಿ.

ಬಾಚಿ ತಬ್ಬುವುದೆಂತು ಬಾಚಿ ಹಬ್ಬಿದ ಬೆಳಕ?
ಕತ್ತಲಲಿ ಬೆತ್ತಲಾದರೆ ನೀನು ಬಯಲೆ?
ಇರು ದೂರ, ಅಂತರವಿರಲಿ ಉಸಿರಾಡುವೆಲ್ಲ
ಜೀವಗಳ ನಡುವೆ, ನಂಟು ಬಿಡುಗಡೆಯಲ್ಲೆ.

ಶುಷ್ಕ ಮಾಹಿತಿಯ ಗೀಳು ಮತ್ತ ಕುತೂಹಲಕೆ,
ಹನಿಹನಿಯೆಣಿಸಿ ಕಡಲಳತೆ ಬಾಯಿಪಾಠ
ಮಾಡಿದರು ಸೈ, ಲೆಕ್ಕಕ್ಕೆ ಸಿಗಬಹುದೆ ನೀರ
ವಹಿವಾಟು? ಬೇಕು ವಿಭಜಿಸದೊಂದೆ ನೋಟ.

ನಿವಂಕನರ್ಥ, ಅಂಕಿ-ಸಂಖ್ಯೆಯ ಸರಾಸರಿ
ತುಲನೆ ದಿನಚರಿಯ ಕಾರುಬಾರಿಗೆ ಅಗತ್ಯ.
ಸ್ವಾರ್ಥ ರೂಢಿಸಿದ ಲೆಕ್ಕಾಚಾರಗಳ ಸಹಿತ
ಸಕಲಾರ್ಥ ನುಂಗಿದೆ ನಿಷ್ಕಾಮ ಸತ್ಯ.

ಒಂದೆ ನೋಟ, ಸ್ಪರ್ಶ, ಒಂದೆ ಕೂಡಿ ಬರುವಂಥ
ಗಳಿಗೆ, ಒಮ್ಮೆಗಷ್ಟೇ ಪೂರ್ಣ ಪ್ರಜ್ಞೆ.
ತೆಕ್ಕೆಯ ತುಂಬಿದ್ದು, ಹೃದಯ ತುಳುಕಿದ್ದು ಅಳೆ-
ದಳೆದು ನೋಡಿದವಷ್ಟು ಬೇರೀಜು ಸೊನ್ನೆ.

ಜಯಸುದರ್ಶನ

ಮಲಯಾಳಂ ಕಥೆ

ಮೂಲ: ಒ.ವಿ.ವಿಜಯನ್
ಕನ್ನಡಕ್ಕೆ: ಡಾ. ಅಶೋಕಕುಮಾರ

ಕಡಲ ತೀರದಲ್ಲಿ

ವೆಳ್ಳಾಯಿಯಪ್ಪ ಯಾತ್ರೆಗೆ ಹೊರಡಲನುವಾದಾಗ ಮನೆಯಲ್ಲಿ ಗುಂಪು ರೋದನ ಆರಂಭವಾಯಿತು. ಪಕ್ಕದ ಅಮ್ಮಿಣಿಯ ಮನೆಯಲ್ಲೂ ಅದರ ಪಕ್ಕದ ಮುತ್ತು ರಾವುತನ ಮನೆಯಲ್ಲೂ ಜನರು ಶ್ರದ್ಧಾನ್ವಿತರಾದರು. ವಿಷಾದಹೃದಯರಾದರು. ಆ ಮನೆಗಳಿಂದಲೂ ಆಚೆಯಿದ್ದ ಪಾಳುಕಟ್ಟೆ ಹಳ್ಳಿಯ ಐವತ್ತಕ್ಕೂ ಮಿಕ್ಕಿದ ಗುಡಿಸಲುಗಳಲ್ಲೆಲ್ಲಾ ಈ ವಿಷಾದವೂ ಸಹಾನುಭೂತಿಯೂ ತುಂಬಿಕೊಂಡವು. ವೆಳ್ಳಾಯಿಯಪ್ಪ ಕಣ್ಣೂರಿಗೆ ಹೋಗಲಿದ್ದಾನೆ. ವೆಳ್ಳಾಯಿಯಪ್ಪನ ಬಳಿ ರೈಲು ಚಾರ್ಜಿಗೆ ಹಣವಿದ್ದಿದ್ದರೆ ಅಮ್ಮಿಣಿಯೂ, ಮುತ್ತಣ್ಣನೂ, ನಾಕೇಲಪ್ಪನೂ ಕೊಂಬಿಯಾಚಾರಿಯೂ ಮತ್ತು ಪಾಳುಕಟ್ಟೆಯಲ್ಲಿರುವವರೆಲ್ಲರೂ ಕಣ್ಣೂರಿಗೆ ಹೋಗುತ್ತಿದ್ದರು. ಕಣ್ಣೂರಿಗೆ ಹೋಗುವ ರೈಲು ಯಾತ್ರೆ, ಪಾಳುಕಟ್ಟೆ ಎಂಬ ಗ್ರಾಮದ ಸಲುವಾಗಿಯೇ ಆಗಿತ್ತು. ವೆಳ್ಳಾಯಿಯಪ್ಪನು ಒಕ್ಕಲಿರುವವರ ಗುಡಿಸಲುಗಳನ್ನು ದಾಟಿ ಬಯಲುಗದ್ದೆಗಳನ್ನು ಅಡ್ಡಕ್ಕೆ ಹಾದು ನಡೆದ. ಹಿಂದಿನ ರೋದನ ದೂರಾಗಿ ಕೇಳದಾಯಿತು. ಈಗ ಬಯಲನ್ನು ಹಿಂದೆ ಹಾಕಿ ತೋಟಕ್ಕೆ ಬಂದ ವೆಳ್ಳಾಯಿಯಪ್ಪ. ತೋಟದ ಹಳದಿ ಹುಲ್ಲಿನ ಮಧ್ಯೆ ಯಾರ್‍ಯಾರದೋ ದುಃಖದ ಹಾದಿಗಳ ಮಾಸಿದ ಬೊಕ್ಕೆ ಗುರುತುಗಳಂತೆ ಕಾಲು ಹಾದಿಯು ಉದ್ದಕ್ಕೆ ಸಾಗಿದೆ.

''ದ್ಯಾವ್ರೇ, ಪರುಮಾತುಮಾ,'' ವೆಳ್ಳಾಯಿಯಪ್ಪ ಜೋರಾಗಿಯೇ ಹೇಳಿಕೊಂಡ. ಕಾಲುದಾರಿಯ ಇಬ್ಬದಿಯಲ್ಲೂ ನಿಂತ ಈಚಲು ಮರಗಳಲ್ಲಿ ಗಾಳಿ ಸುಳಿಯಿತು. ಸೋಗೆಗಳಲ್ಲಿ ಗಾಳಿ ಗುಂಯನ್ನುವುದು ವೆಳ್ಳಾಯಿಯಪ್ಪನಿಗೆ ಅಂದು ಮೊದಲ ಬಾರಿಗೆ ಅಪರಿಚಿತವಾಗಿ ತೋರಿತು. ಈಚಲ ಸೋಗೆಗಳು ಮಾತನಾಡುತ್ತಿರುವಂತೆ- ಈಚಲ ಸೋಗೆಗಳಲ್ಲಿ ಬಲಿ ದೇವರುಗಳೂ, ಹಿರಿಯರ ಆತ್ಮಗಳೂ ಮಾತನಾಡುತ್ತಿರುವಂತೆ..... ಚೌಕದ ಬಟ್ಟೆಯಲ್ಲಿ ಕಟ್ಟಿದ್ದ ಬುತ್ತಿಯನ್ನದ ಗಂಜಿಯ ಅಂಶ ಕೈಯನ್ನು ನೆನೆಯಿಸಿತು. ತನ್ನ ಮಡದಿ ಈ ಬುತ್ತಿಯನ್ನು ಕಟ್ಟುವಾಗ ಬಹಳಷ್ಟು ಕಣ್ಣೀರನ್ನು ಸುರಿಸಿರಬೇಕು. ಕಣ್ಣೀರಿನ ಹರಿವು ಬಟ್ಟೆಯ ಗಂಟನ್ನು ತೋಯಿಸುತ್ತಿದೆ. ರೈಲು ನಿಲ್ದಾಣವನ್ನು ತಲುಪಲು ಇನ್ನೂ ನಾಲ್ಕು ಮೈಲಿ ಕಲ್ಲುಗಳನ್ನು ದಾಟಬೇಕು. ಸ್ವಲ್ಪ ನಡೆದಾಗ ಕುಟ್ಯಸ್ಸನ್ ಮಾಪ್ಪಿಳೆ ಎದುರಿಗೆ ಸಿಕ್ಕ. ಕುಟ್ಯಸ್ಸನ್ ಮಾಪ್ಪಿಳೆ ಆದರದಿಂದ ಪಕ್ಕಕ್ಕೆ ಸರಿದು ನಿಂತ.

''ವೆಳ್ಳಾಯೀ...'' ಮಾಪ್ಪಿಳೆ ಕೇಳಿದ.

''ಸಾಹೇಬಾ....'' ವೆಳ್ಳಾಯಿಯಪ್ಪ ಪ್ರತಿನುಡಿದ.

ಅಷ್ಟು ಮಾತ್ರ. ಎರಡು ಮಾತುಗಳು. ಹೆಸರುಗಳು. ಆದರೆ, ಆ ಮಾತುಗಳಲ್ಲಿ



ದೀರ್ಘತರವೂ ಸಂಪನ್ನವೂ ಆದ ಸಂಭಾಷಣಾ ಪರಂಪರೆಗಳು ಅಡಗಿರುವುದನ್ನು ವೆಳ್ಳಾಯಿಯಪ್ಪನೂ ಕುಟ್ಯಸ್ಸನ್ ಮಾಪ್ಪಿಳೆಯೂ ಅರಿತರು.

''ಸಾಹೇಬಾ, ನಿಮಗೆ ನಾನು ಹದಿನೈದು ರೂಪಾಯಿ ಸಾಲ ತೀರಿಸಬೇಕಿದೆ. ಅಲ್ಲ, ಹದಿನೈದು ರೂಪಾಯಿ ನಾಲ್ಕಾಣೆ.''

''ವೆಳ್ಳಾಯೀ, ಈ ಯಾತ್ರೆಯ ಸಮಯದಲ್ಲಿ ಅದನ್ನು ಕುರಿತು ಯೋಚಿಸಬೇಡಿ.''

''ಸಾಹೇಬಾ, ಇನ್ನೆಂದೂ ಆ ಸಾಲವನ್ನು ನಾನು ತೀರಿಸಲಾರೆನೇನೋ.''

''ತೀರದ ಸಾಲಗಳು ದೇವನ ರಕ್ಷಣೆಯಲ್ಲಿರುತ್ತವೆ. ಅದು ಹಾಗೇ ಇರಲಿ.''

''ನನ್ನ ಎದೆ ಬಿರಿಯುತ್ತಿದೆ. ನನ್ನ ಪ್ರಾಣ ಸಂಕಟಪಡುತ್ತಿದೆ.''

''ದೇವರು ಜೊತೆಗಿರಲಿ, ಮುತ್ತುನಬಿ ಜೊತೆಯಿರಲಿ, ನಿನ್ನಯ ಮತ್ತು ನನ್ನಯ ದೇವರುಗಳು ನಿನ್ನ ಜೊತೆಯಾಗಲಿ.''

ಈಚಲಮರದ ಸೋಗೆಗಳಲ್ಲಿ ಸುಳಿದ ಗಾಳಿ ದೈವಸಾಂದ್ರವಾಯಿತು. ಕುಟ್ಯಸ್ಸನ್ ಮಾಪ್ಪಿಳೆಯನ್ನು ಬೀಳ್ಕೊಟ್ಟು ನಂತರ ವೆಳ್ಳಾಯಿಯಪ್ಪ ಯಾತ್ರೆ ಮುಂದುವರಿಸಿದ. ಇನ್ನೂ ನಾಲ್ಕು ಮೈಲಿಕಲ್ಲು ನಡೆಯಬೇಕು. ದಾರಿಯಲ್ಲಿ ಇನ್ನೊಂದು ಭೇಟಿ. ಅಗಸಗಿತ್ತಿ ನೀಲಿ- ತೊಳೆದ ಬಟ್ಟೆಗಳ ಗಂಟನ್ನು ಹೆಗಲಲ್ಲಿ ಹಾಕಿ ತೂಗಾಡಿಸುತ್ತ ಎದುರಿಗೆ ಬಂದ ನೀಲಿ- ದಾರಿ ಬಿಟ್ಟಳು.

''ವೆಳ್ಳಾಯಿಯಪ್ಪೋ...''

''ನೀಲೀ.''

ಎರಡೇ ನುಡಿಗಳ ವಿನಿಮಯ. ಅವುಗ

ಳಲ್ಲೇ ಸಾಂತ್ವನದ ರಾಶಿ.

ವೆಳ್ಳಾಯಿಯಪ್ಪ ಮುಂದೆ ನಡೆದ. ಕಾಲು ಹಾದಿಯು ಮಣ್ಣಿನ ರಸ್ತೆಗೆ ಸೇರಿತು. ವೆಳ್ಳಾಯಿಯಪ್ಪ ಮಣ್ಣು ರಸ್ತೆಯಲ್ಲಿ ಸಾಗಿದ. ಮಣ್ಣು ಹಾದಿಯು ಹೊಳೆಗೆ ಸಾಗಿತು. ಹೊಳೆ ದಾಟಿ ಮೇಡನ್ನೇರಿದರೆ ಸಿಗುವುದೇ ರೈಲು ನಿಲ್ದಾಣದ ಹಾದಿ. ಹೊಳೆಯ ಮರಳ ಮೂಲಕ ವೆಳ್ಳಾಯಿಯಪ್ಪ ಹೊಳೆಯ ನೀರಿಗಿಳಿದ. ಕಾಲ ಮೀನ ಖಂಡಗಳನ್ನು ತಡವುತ್ತ ಸಣ್ಣ ಮೀನುಗಳನ್ನು ಹೊತ್ತು ಹೊಳೆ ನೀರು ಹರಿಯಿತು. ಹೊಳೆಯ ಮಧ್ಯೆ ತಲುಪಿದಾಗ ಮಿಂದ ಅನುಭವದಿಂದ ವೆಳ್ಳಾಯಿಯಪ್ಪ ದಣಿದ. ಅಪ್ಪನ ಶವವನ್ನು ಮೀಯಿಸಿದ್ದು, ಮಗನು ಸಣ್ಣವನಿದ್ದಾಗ ಅವನನ್ನು ಕೊಳದಲ್ಲಿ ಮೀಯಿಸಿದ್ದು, ಉಗುರು ಬೆಚ್ಚಗಿನ ನೀರು ಅವೆಲ್ಲವನ್ನೂ ಜ್ಞಾಪಿಸಿತು. ಹೊಳೆಯನ್ನು ದಾಟಿ ಆ ಕಡೆಯ ಮೇಡನ್ನು ಏರುವ ತನಕ ವೆಳ್ಳಾಯಿಯಪ್ಪ ಅಳುತ್ತಲಿದ್ದ.

''ರೈಲು ನಿಲ್ದಾಣವನ್ನು ತಲುಪಿದ ವೆಳ್ಳಾಯಿಯಪ್ಪ ಚೀಟಿ ಕೊಳ್ಳುವ ಸ್ಥಳದಲ್ಲಿ ಸಾಲಿನಲ್ಲಿ ನಿಂತ. ಉಟ್ಟಿದ್ದ ಪಂಚೆಯ ತುದಿಗಂಟಿನಲ್ಲಿದ್ದ ಹಣವನ್ನು ಹೊರತೆಗೆದ.

''ಕಣ್ಣೂರು,'' ವೆಳ್ಳಾಯಿಯಪ್ಪ ಹೇಳಿದ. ಗುಮಾಸ್ತ ಚೀಟಿ ತೆಗೆದು ಮುದ್ರೆಯೊತ್ತಿ ಕಿಟಕಿಯಿಂದ ಹೊರಕ್ಕೆ ಹಾಕಿದಾಗ ಯಾತ್ರೆಯ ಒಂದು ಹಂತವನ್ನು ದಾಟಿದಂತೆ ವೆಳ್ಳಾಯಿಯಪ್ಪನಿಗೆ ತೋರಿತು. ಚೀಟಿಯನ್ನು ಪಂಚೆಯ ತುದಿಯಲ್ಲಿ ಗಂಟು ಹಾಕಿರಿಸಿ ವೆಳ್ಳಾಯಿಯಪ್ಪ ಮೆಟ್ಟಿಲೇರಿ ಪ್ಲಾಟ್‌ಫಾರ್ಮ್ ತಲುಪಿ ಬೆಂಚಿನ ಮೇಲೆ ರೈಲಿಗಾಗಿ ಕಾದು ಕುಳಿತ. ದೂರದಲ್ಲಿ ಸೂರ್ಯ ಮುಳುಗುತ್ತಿದ್ದಾನೆ. ಕಪ್ಪಿಡುತ್ತಿರುವ ಈಚಲುಮರಗಳ ಮೇಲಿನಿಂದ ಹಕ್ಕಿಗಳು ಹಾರಿ ಗೂಡು ಸೇರುತ್ತಿವೆ. ಬಯಲು ಗದ್ದೆಯ ಬದಿಯಲ್ಲಿ ನಿಂತು ತನ್ನ ಕಿರುಬೆರಳನ್ನು ಹಿಡಿದುಕೊಂಡು ಅಸ್ತಮಾನದ ಪಕ್ಷಿಗಳನ್ನು ನೋಡಿ ಅಚ್ಚರಿಗೊಳ್ಳುತ್ತಿದ್ದ ಮಗನನ್ನು ವೆಳ್ಳಾಯಿಯಪ್ಪ ನೆನೆದ. ಅಸ್ತಮಾನದ ವೇಳೆಯಲ್ಲಿ ಗದ್ದೆಗೆ ಇಳಿದು ನಡೆಯುವ ತನ್ನ ಅಪ್ಪನನ್ನು ನೆನೆದ. ಎರಡು ಚಿತ್ರಗಳು; ಅವುಗಳ ನಡುವೆ, ಎರಡು ಹೆಸರುಗಳ ನಡುವೆಯೆಂಬಂತೆ ಎರಡು ಮಾತುಗಳ ಮಧ್ಯೆ ಎಂಬಂತೆ ಏನೇನೋ ತುಂಬಿವೆ. ಬೆಂಚಿನಲ್ಲಿ ತೆರವಿದ್ದ ಜಾಗದಲ್ಲಿ ಬಂದು ಕುಳಿತ ಒಬ್ಬ ಹಿರಿಯರು ಕೇಳಿದರು,

''ಕೋಯಂಬತ್ತೂರಿಗಾ?''

''ಕಣ್ಣೂರಿಗೆ,'' ಎಂದ ವೆಳ್ಳಾಯಿಯಪ್ಪ.

''ನಾನು ಕೋಯಂಬತ್ತೂರಿಗೆ.''

''ಓ.''

''ಕಣ್ಣೂರು ಗಾಡಿ ಹತ್ತು ಗಂಟೆಗೆ.''

''ಓ!''


''ಕಣ್ಣೂರಲ್ಲಿ ಏನು ಕೆಲಸ?''

''ವಿಶೇಷವಾದದ್ದೇನೂ ಇಲ್ಲ.''

''ಸುಮ್ನೇ ಹೋಗ್ತಿದೀರಾ?''

ಅಪರಿಚಿತನ ಸಂಭಾಷಣೆ ಒಂದು ಫಾಸಿ ಹಗ್ಗದಂತೆ ವೆಳ್ಳಾಯಿಯಪ್ಪನ ಕುತ್ತಿಗೆಯನ್ನು ಬಿಗಿಯಿತು. ಪಾಳುಕಟ್ಟೆಯ ಗದ್ದೆಯ ಹುಣಿಯನ್ನು ದಾಟಿದರೆ ಬಳಿಕ ಜಗತ್ತಿನಲ್ಲೆಲ್ಲ ಅಪರಿಚಿತರೇ ತುಂಬಿದ್ದಾರೆ. ಅಪರಿಚಿತರ ಆಸಕ್ತಿಯಿಲ್ಲದ ಲೆಕ್ಕವಿಲ್ಲದಷ್ಟು ಸಂಭಾಷಣೆಗಳು ಫಾಸಿ ಹಗ್ಗಗಳಾಗುತ್ತವೆ. ಕೋಯಂಬತ್ತೂರಿನ ಗಾಡಿ ಬೇಗ ಬಂದುದರಿಂದ ಬೆಂಚಿನಲ್ಲಿ ಸಮೀಪ ಕುಳಿತಿದ್ದ ಹಿರಿಯರು ಎದ್ದು ಹೋದರು. ವೆಳ್ಳಾಯಿಯಪ್ಪ ಒಬ್ಬಂಟಿಯಾದ. ಅನ್ನದ ಗಂಟನ್ನು ಬಿಚ್ಚಬೇಕೆಂದೆನಿಸಲಿಲ್ಲ. ಬಟ್ಟೆಯ ಮೂಲಕ ಹೊರಭಾಗಕ್ಕೊಸರಿದ ಅದರ ತೇವಾಂಶದಲ್ಲಿ ಕೈಯಿಟ್ಟು ವೆಳ್ಳಾಯಿಯಪ್ಪ ಕುಳಿತ. ಹಾಗೆ ಕುಳಿತು ನಿದ್ರಿಸಿದ. ನಿದ್ರೆಯಲ್ಲಿ ಕನಸು ಕಂಡ. ಕನಸು ಕಾಣುತ್ತಲೇ ವೆಳ್ಳಾಯಿಯಪ್ಪ ಹೇಳಿದ,

''ಕಂಡುಣ್ಣೇ, ಮಗನೇ.''



"ಮದುವೆಗೆ ಹೋಗಿದ್ದೆ ಮಾರಾಯಾ.... ನಾನು ಕೊಟ್ಟ ಉಡುಗೊರೆ ಮೊತ್ತಕ್ಕೆ ಸಮಾನವಾಗಬೇಕಲ್ಲ."

ರೈಲು ಗಾಡಿಯ ಸೀಟಿ ಮತ್ತು ಕಂಪನ ವೆಳ್ಳಾಯಿಯಪ್ಪನನ್ನು ಎಚ್ಚರಿಸಿದವು. ವೆಳ್ಳಾಯಿಯಪ್ಪ ತಟ್ಟನೆ ಗಡಬಡಿಸಿ ಮೇಲೆದ್ದ. ಪಂಚೆಯ ತುದಿಗಂಟಿನಲ್ಲಿರುವ ಚೀಟಿ ಅಲ್ಲೇ ಇದೆಯೋ ಎಂದು ನೋಡಿ ಖಾತರಿಪಡಿಸಿಕೊಂಡ. ನಿಧಾನವಾಗಿ ಗಾಡಿಯ ಕಡೆಗೆ ನಡೆದ. ಖಾಲಿ ಕಂಡಲ್ಲಿ ಹತ್ತಲು ಹೊರಟ.

"ಇದು ಒಂದನೇ ದರ್ಜೆ, ಯಜಮಾನ."

"ಔದಾ?"

"ಆ ಡಬ್ಬಿಯಾಗೆ?"

"ಅದು ರಿಸರ್ವ್ಡ್."

"ಔದ್ರಾ?"

"ಆ ಕಡೆ ನೋಡ್ಕೋ ಯಜಮಾನ."

ಅಪರಿಚಿತ ಸ್ವರಗಳು.

ಕೊನೆಗೆ ಒಂದು ಡಬ್ಬಿಯನ್ನೇರಿದ. ಕುಳಿತುಕೊಳ್ಳಲು ಸ್ಥಳವಿಲ್ಲ. ಹೇಗೋ ನಿಲ್ಲಬಹುದು. 'ನಾನು ನಿಂತುಕೊಳ್ಳುತ್ತೇನೆ. ನಾನು ನಿದ್ರಿಸೋಲ್ಲ. ಈ ರಾತ್ರಿ ನನ್ನ ಮಗ ನಿದ್ರೆ ಮಾಡನು. ರೈಲು ಗಾಡಿಯ ತಾಳ, ನೆಲದ ಗತಿಗೆ ತಕ್ಕ ಹಾಗೆ ಅದರ ತಾಳಭೇದಗಳು, ದಾರಿದೀಪಗಳು, ನದಿಯ ಮರಳ ದಂಡೆಗಳು, ಮರಗಳು. ಬಹಳ ಕಾಲದ ಹಿಂದೆ ಒಮ್ಮೆ ರೈಲು ಪ್ರಯಾಣ ಮಾಡಿದ್ದೆ- ಹಗಲಿನ ಬೆಳಕಿನಲ್ಲಿ. ಇದು ರಾತ್ರಿ ಬಂಡಿ. ಮಂಕಾದ ಚಿತ್ರಗಳನ್ನು ಅಳವಡಿಸಿದ್ದ ಗೋಡೆಗಳುಳ್ಳ ಸುರಂಗದ ಮೂಲಕ ಗಾಡಿ ಸಾಗುತ್ತಿದೆ.

ಕಣ್ಣೂರನ್ನು ತಲುಪಿದಾಗ ಬೆಳಕು ಹರಿದಿರಲಿಲ್ಲ. ಆಗಲೂ ಬುತ್ತಿಯ ಗಂಟು ಬಿಚ್ಚದೆ ಕೈಯಲ್ಲಿ ಹಾಗೇ ಇತ್ತು. ಗೇಟಿನಲ್ಲಿ ಚೀಟಿಯನ್ನು ಹಿಂತಿರುಗಿಸುತ್ತ ವೆಳ್ಳಾಯಿಯಪ್ಪ ಹೊರಕ್ಕೆ ಕಾಲಿರಿಸಿದ. ಆಕಾಶದ ಇರುಳಿನಲ್ಲಿ ದೂರದಲ್ಲೆಲ್ಲೋ ಅರಳುವ ಹಗಲಿನ ಸೂಚನೆ. ರೈಲು ನಿಲ್ದಾಣದ ಮುಂದೆ ಗುಂಪಾಗಿ ನಿಂತಿದ್ದ ಕುದುರೆ ಗಾಡಿಯೋಡಿಸುವವರು ಗಾಡಿ ಬೇಕೇ ಎಂದು ವೆಳ್ಳಾಯಿಯಪ್ಪನನ್ನು ಕೇಳಲಿಲ್ಲ. ವೆಳ್ಳಾಯಿಯಪ್ಪನೇ ಕೇಳಿದ,

"ಜೈಲ್‌ಗೆ ದಾರೀ ಎತ್ಕಡೀ ಬತ್ತದೆ?"

ಯಾರೋ ನಕ್ಕರು.

"ಇದೋ ಈ ಮುದುಕ ಹೊತ್ತು ಮೂಡುವ ಮುಂಚೆ ಜೈಲಿನ ದಾರಿ ಕೇಳುತ್ತಿದ್ದಾನೆ."

ಪುನಃ ಯಾರೋ ನಕ್ಕರು:

"ಯಜಮಾನ, ಕದ್ದರೆ ಸಾಕು, ಜೈಲನ್ನು ತಲುಪಿಸಬಹುದು,"


"ಅಪರಿಚಿತರ ಸ್ವರಗಳು ಕುತ್ತಿಗೆಯನ್ನು ಬಳಸಿ ಬಿಗಿಯಾದವು. ವೆಳ್ಳಾಯಿಯಪ್ಪನಿಗೆ ಉಸಿರು ಕಟ್ಟಿತು.

ಕೊನೆಗೆ ಯಾರೋ ದಾರಿ ತಿಳಿಸಿದರು. ವೆಳ್ಳಾಯಿಯಪ್ಪ ನಡೆದ. ಕಾಗೆಗಳ ರೋದನದೊಂದಿಗೆ ಮೇಲೆ ಮೆಲ್ಲಗೆ ಆಕಾಶಗಳು ಬೆಳಗಿದವು.

ಜೈಲಿನ ಹೊರಗೆ ಪಹರೆಯವನು ವೆಳ್ಳಾಯಿಯಪ್ಪನನ್ನು ತಡೆದ.

"ಈ ಬೆಳಿಗ್ಗೆ ಹೊತ್ತಲ್ಲಿ ಎಲ್ಲಿಗಪ್ಪಾ?"

"ವೆಳ್ಳಾಯಿಯಪ್ಪ ಬಿಕ್ಕಿದ. ಒಂದು ಮಗು



"ಅಪ್ಪಾ.. ನಮ್ಮ ಮೇಡಮ್ ಬಹಳ ಒಳ್ಳೆಯವ್ರು. ಆಟ ಶಾಲೆ ಮೇಷ್ಟ್ರು ಕೊಡುವ ಕಾಗದ ಕೊಟ್ಟ ಕೂಡಲೇ ನನಗೆ ಎರಡು ಚಾಕಲೇಟು - ಹಣ ಕೊಡ್ತಾರೆ."

ನನಂತೆ ನಿಸ್ಸಹಾಯನಾಗಿ ಆತ ಪಹರೆಯವನ ಎದುರು ನಿಂತ. ಆಮೇಲೆ ಮೆಲ್ಲಗೆ ಪಂಚೆಯ ಕೊನೆಯನ್ನು ಬಿಡಿಸಿ ಹಳದಿ ಬಣ್ಣದ ಒಂದು ಕಾಗದವನ್ನು ಹೊರ ತೆಗೆದ. ಕಾಗದ ಮುದುಡಿ ಮುದ್ದೆಯಾಗಿತ್ತು.

"ಏನದು?" ಪಹರೆಯವ ಕೇಳಿದ.

ವೆಳ್ಳಾಯಿಯಪ್ಪ ಕಾಗದವನ್ನು ಪಹರೆಯವನಿಗೆ ಒಪ್ಪಿಸಿದ. ಪಹರೆಯವನು ಕಾಗದವನ್ನು ನೋಡಲಿಲ್ಲ. ವೆಳ್ಳಾಯಿಯಪ್ಪ ಹೇಳಿದ: "ನನ್ ಕೂಸು ಇಲ್ಲವ್ನೇ."

"ಈ ನಸುಕಿನಲ್ಲಿ ಯಾರ್ ಬರೋಕೆ ಹೇಳಿದ್ದು?" ಪಹರೆಯವನು ಒರಟಾಗಿ ಹೇಳಿದ.

"ಆಫೀಸು ತೆರೀಲಿ."

ಯಾವುದೋ ಅಭ್ಯಾಸದ ಸ್ವಾಧೀನದಿಂದ ಪಹರೆಯವನು ಕಾಗದವನ್ನು ಬಿಡಿಸಿ ನೋಡಿದ. ಪಹರೆಗಾರನ ಮುಖ ತಕ್ಷಣ ಕನಿಕರದಿಂದ ತುಂಬಿಕೊಂಡಿತು.

"ನಾಳೆ ದಿನ, ಅಲ್ಲವೇ?" ಪಹರೆಗಾರ ಕೇಳಿದ.

"ನಂಗ್ ತಿಳೀದು," ವೆಳ್ಳಾಯಿಯಪ್ಪ ಹೇಳಿದ.

"ಕಾಗದ್‌ದಾಗ್ ಏನ್ ಬರ್‌ದವ್ರೋ ಏಳ್ತೀರಾ?"

ಪಹರೆಗಾರ ಕಾಗದದಲ್ಲಿನ ವಿವರಗಳನ್ನು ಇನ್ನೊಮ್ಮೆ ಗಮನವಿಟ್ಟು ಓದಿದ.

"ಹೌದು ನಾಳೆ ಬೆಳಿಗ್ಗೆ ಐದು ಗಂಟೆಗೆ." ಆತ ಹೇಳಿದ.

ವೆಳ್ಳಾಯಿಯಪ್ಪನ ಕಣ್ಣುಗಳು ವಿಶಾಲವಾಗಿ ತೆರೆದುಕೊಂಡವು. ಅವುಗಳಲ್ಲಿ ಅಂಧಕಾರ ನೆರಳಿಟ್ಟಿತು.

"ಔದ್ರಾ?" ವೆಳ್ಳಾಯಿಯಪ್ಪ ಹೇಳಿದ.

"ಇಲ್ ಕೂತ್ಕೋಳಿ ಹಿರಿಯರೇ."

"ಓ."

ಜೈಲಿನ ಅಂಗಳದ ಒರಗು ಕುರ್ಚಿಯಲ್ಲಿ ವೆಳ್ಳಾಯಿಯಪ್ಪ ಕುಳಿತ. ಗರ್ಭಗುಡಿಯ ಬಾಗಿಲು ತೆರೆಯುವುದಕ್ಕೆ ಕಾದು ಕುಳಿತ ಭಕ್ತನಂತೆ.

"ಚಹಾ-ಕಾಫಿ ಏನಾದ್ರೂ ಬೇಕಾ ಹಿರಿಯರೇ?"

"ಬೇಡ."

'ನನ್ನ ಮಗ ಈ ರಾತ್ರಿ ಪೂರಾ ನಿದ್ರೆ ಮಾಡಿರೋಲ್ಲ. ನಿದ್ರಿಸದೆ ಎಚ್ಚರಗೊಂಡಿರುವುದಿಲ್ಲ. ನಿದ್ರಿಸದೆ, ಎಚ್ಚರಾಗದೆ, ಅವನಿಗೆ ಚಹಾ ಕುಡಿಯಲು ಹೇಗೆ ಮನಸ್ಸು ಬಂದೀತು?' ವೆಳ್ಳಾಯಿಯಪ್ಪನ ಕೈಗಳು ಬುತ್ತಿಯ ಗಂಟನ್ನು ಬಿಗಿದವು. 'ಮಗನೇ, ಈ ಬುತ್ತಿಯ ಗಂಟನ್ನು ನಿನ್ನ ತಾಯಿ ನನಗೋಸ್ಕರ ಕಟ್ಟಿಕೊಟ್ಟಳು. ಯಾತ್ರೇಲ್ಲಿ ನಾನು ಅದನ್ನು ತಿನ್ನದೆ ಇಲ್ಲಿಯವರೆಗೆ ಬಂದೆ. ಇನ್ನು ನಿನಗೆ ಕೊಡುವುದಕ್ಕೆ ನನ್ನ ಬಳಿ ಇರುವುದು ಇದೊಂದೇ.' ಬಟ್ಟೆಯೊಳಗೆ ಗಂಟು ಬಿಚ್ಚದೆ ಉಳಿದ ಆಹಾರ ಹಳಸಿತು. ಮೆಲ್ಲಮೆಲ್ಲಗೆ ಹೊತ್ತು ಮೂಡಿತು. ಬೆಳಕಾಗಿ ಹೊತ್ತು ಮೇಲೇರಿತು.

ಆಫೀಸು ತೆರೆಯಿತು. ಜನ ಮೇಜುಗಳ

ಹಿಂದೆ ಸ್ಥಾನಗೊಂಡರು. ಪಹರೆಗಾರರು ಕವಾಯತು ನಡೆಸಿದರು. ಸೆರೆಮನೆ ಸಜೀವವಾಯಿತು.

ಅಧಿಕಾರಿಗಳು ಕಾಗದವನ್ನು ಪರಿಶೀಲಿಸಿದರು. ಆದೇಶ ನೀಡಿದರು. ಆದೇಶಗಳ ಅಪರಿಚಿತ ಸ್ವರಗಳು. ದ್ವೇಷ, ನಿಂದೆ, ಹಗೆತನಗಳಿಲ್ಲದ ಕುಣಿಕೆಗಳು. ಅವು ಸುತ್ತಿಕೊಂಡು ಉಸಿರುಕಟ್ಟಿಸುತ್ತಿವೆ. ಬಿಸಿಲಿನ ಶಾಖ ಹೆಚ್ಚುತ್ತಿದೆ.

"ಇಲ್ಲಿ ಕಾದು ನಿಲ್ಲಿ."

ವೆಳ್ಳಾಯಿಯಪ್ಪ ಕಾದು ನಿಲ್ಲುತ್ತಾನೆ.

ಅತೀವ ಕಾಯುವಿಕೆಯ ನಂತರ ಒಬ್ಬ ಪಹರೆಗಾರ ವೆಳ್ಳಾಯಿಯಪ್ಪನನ್ನು ಸೆರೆಮನೆಯ ಒಳಭಾಗಕ್ಕೆ ಕರೆದುಕೊಂಡು ಹೋದ. ಬಿಸಿಲಿನ ಬಿಸಿಯರಿಯದ ತಂಪಾದ ಒಳಾಂಗಣಗಳು. ಇದೋ, ಇಲ್ಲೇ ಕಬ್ಬಿಣದ ಸರಳುಗಳ ಹಿಂದೆ ಕಂಡುಣ್ಣಿ ನಿಂತಿದ್ದಾನೆ.

"ಅಪರಿಚಿತನಂತೆ ಕಂಡುಣ್ಣಿ ವೆಳ್ಳಾಯಿಯಪ್ಪನನ್ನು ನೋಡಿದ. ಸಾಂತ್ವನವನ್ನು ಕೊಡುವುದಾಗಲಿ, ಪಡೆಯುವುದಾಗಲಿ ಸಾಧ್ಯವಾಗದಂಥ ಮನಸ್ಸಿನ ಮಂಕುತನ. ಪಹರೆಗಾರ ಕಬ್ಬಿಣದ ಬಾಗಿಲನ್ನು ತೆರೆದು ವೆಳ್ಳಾಯಿಯಪ್ಪನನ್ನು ಒಳಗೆ ಕಳಿಸಿದ. ಅಪ್ಪ ಮತ್ತು ಮಗ ಎದುರುಬದುರಾಗಿ ಸ್ವಲ್ಪ ಹೊತ್ತು ನಿಂತರು. ಆಮೇಲೆ ವೆಳ್ಳಾಯಿಯಪ್ಪ ಮಗನನ್ನು ಆಲಿಂಗಿಸಿದ. ಕಂಡುಣ್ಣಿ ಶ್ರವಣಸಾಧ್ಯತೆ ಮೀರಿದ ಒಂದು ಸ್ಥಾಯಿಯಲ್ಲಿ ರೋದಿಸಿದ. ವೆಳ್ಳಾಯಿಯಪ್ಪ ಅತ್ತು ಕರೆದ: "ಮಗನೆ!"

ಕಂಡುಣ್ಣಿ ಅದೇ ಸ್ವರದಲ್ಲಿ ಕೂಗಿದ: "ಅಪ್ಪಾ!"

ಎರಡು ಮಾತುಗಳು ಮಾತ್ರ. ಆ ಎರಡು ಮಾತುಗಳ ನಡುವೆ ದುಃಖದಿಂದ, ಮೌನದಿಂದ ಅಪ್ಪನೂ ಮಗನೂ ವಿಚಾರ ವಿನಿಮಯ ನಡೆಸಿದರು.

"ಮಗನೇ ನೀನ್ ಏನ್ ಮಾಡ್ದೆ?"



"ನಮ್ಮೂರಲ್ಲಿ ನೀರಿಗೆ ಬರ ಬಂದ್ರೂ, ಇದಕ್ಕೆಂದೂ ಬರ ಬರೋಲ್ಲ."

"ನಂಗ್ ನೆನಪಿಲ್ಲ, ಅಪ್ಪಾ."

"ಮಗನೇ, ನೀನ್ ಕೊಲೆ ಮಾಡ್‌ದೆಯಾ?"

"ನಂಗ್ ನೆನಪಿಲ್ಲ."

"ಪರವಾಗಿಲ್ ಬಿಡು ಮಗನೇ. ಇನ್ನೇನು ನೆನಪ್ ಮಾಡ್‌ಕೊಳ್‌ಬೇಕಿಲ್ಲ."

"ಪಹರೆಗಾರರು ನೆನಪು ಮಾಡುವರೆ?"

"ಇಲ್ಲ ಮಗನೇ."


"ಅಪ್ಪಾ, ನನ್ ನೋವು ನೆನಪ್ ಮಾಡ್ಕೋತೀರಾ?"

ಉಚ್ಚಸ್ಥಾಯಿಯಲ್ಲಿ ನಿಶ್ಶಬ್ದವಾದ ರೋದನ: "ಅಪ್ಪಾ, ನನ್ನನ್ ನೇಣ್ ಹಾಕೋಕ್ ಬಿಡ್‌ಬೇಡೀ."

ಎರಡು ಮಾತುಗಳ ಮೂಲಕ ಇಷ್ಟೂ ವಿನಿಮಯವಾದವು.

"ಹಿರಿಯರೇ, ಬನ್ನಿ, ಹೊರಕ್ ಬನ್ನಿ ಹೊತ್ತಾಯ್ತು."

ವೆಳ್ಳಾಯಿಯಪ್ಪ ಹೊರಕ್ಕೆ ಬಂದ. ಆತನ ಹಿಂದಿನಿಂದ ಕಬ್ಬಿಣದ ಸಲಾಕೆ ಬಾಗಿಲು ಮುಚ್ಚಿಕೊಳ್ಳುತ್ತದೆ. ಚಲಿಸುತ್ತಿರುವ ರೈಲು ಗಾಡಿಯೊಳಗಿಂದ ಹೊರಕ್ಕೆ ನೋಡುವ ಹಾಗೆ, ಕಬ್ಬಿಣದ ಸರಳುಗಳೆಡೆಯಿಂದ



ಹೊರಕ್ಕೆ ನೋಡುತ್ತ ಅಪರಿಚಿತನಾಗಿ ಕಂಡುಣ್ಣಿ ನಿಂತ. ಕೊನೆಯ ಹಿನ್ನೋಟದ ಶ್ರದ್ಧಾಂಜಲಿಯೊಡನೆ ವೆಳ್ಳಾಯಿಯಪ್ಪ ನಡೆದು ದೂರಾದ.

ಜೈಲಿನ ಪರಿಸರದಲ್ಲಿ ಅತ್ತಿತ್ತ ಎಡತಾಕುತ್ತ ವೆಳ್ಳಾಯಿಯಪ್ಪ ಕಾದು ಕುಳಿತ. ಸೂರ್ಯನು ನೆತ್ತಿಯ ಮೇಲೇರಿದ. ಹೊತ್ತು ಜಾರಿತು. ಈ ರಾತ್ರಿ ಕಂಡುಣ್ಣಿ ನಿದ್ರಿಸುವನೆ? ರಾತ್ರಿ ಸರಿಯುತ್ತಿದೆ. ಗೋಡೆಗಳಾಚೆ ಕಂಡುಣ್ಣಿ ಬದುಕಿದ್ದಾನೆ.

ಮುಂಜಾವಿಗೂ ಮೊದಲೇ ಕೊಂಬುಕಹಳೆ ಮೊಳಗುವುದನ್ನು ವೆಳ್ಳಾಯಿಯಪ್ಪ ಕೇಳಿದ. ಅದು ನೇಣು ಶಿಕ್ಷೆಯ ಕಾರ್ಯಕ್ರಮವೆಂದು ವೆಳ್ಳಾಯಿಯಪ್ಪನಿಗೆ ತಿಳಿಯಲಿಲ್ಲ. ಬೆಳಿಗ್ಗೆ ಐದು ಗಂಟೆಗೆ ಎಂದು ಅವರು ಹೇಳಿದ್ದರು. ಕೈಯಲ್ಲಿ ಗಡಿಯಾರವಿಲ್ಲದಿದ್ದರೂ ಓರ್ವ ಬೇಸಾಯಗಾರನ ಜನ್ಮಸಿದ್ಧಿಯಿಂದ ವೆಳ್ಳಾಯಿಯಪ್ಪ ವೇಳೆಯಷ್ಟೆಂದರಿತ.

ಓರ್ವ ಸೂಲಗಿತ್ತಿಯ ಹಾಗೆ ತನ್ನ ಮಗನ ದೇಹವನ್ನು ವೆಳ್ಳಾಯಿಯಪ್ಪ ಪಹರೆಗಾರರಿಂದ ಪಡೆದ.

''ನಿಮಗೆ ಇಷ್ಟ ಬಂದಂತೆ ಶವಸಂಸ್ಕಾರ ಮಾಡಬಹುದು.''

''ಬೇಡ. ನಂಗೆ ಇಷ್ಟವಿಲ್ಲ.''

''ಶವದ ಜವಾಬ್ದಾರಿ ನೀವು ಹೊರೋದಿಲ್ವೇ?''

''ಯಜ್‌ಮಾನ್ರೇ, ನನ್ ಕೈಯಾಗ್ ಹಣ ಇಲ್ಲ.''

ತಳ್ಳುಗಾಡಿಯ ಹಿಂದೆ ಜಾಡಮಾಲಿಗಳ ಜೊತೆಗೆ ವೆಳ್ಳಾಯಿಯಪ್ಪ ನಡೆದ. ಪಟ್ಟಣದ ಹೊರಗಿದ್ದ ಪಾಳು ಭೂಮಿಯ ಮೇಲೆ ಹದ್ದುಗಳು ಸುತ್ತು ಹಾಕಿ ಹಾರಾಡುತ್ತಿದ್ದವು. ಮಣ್ಣು ಹಾಕಿ ಮುಚ್ಚುವ ಮುಂಚೆ ಕಂಡುಣ್ಣಿಯ ಮುಖವನ್ನು ವೆಳ್ಳಾಯಿಯಪ್ಪ ಕೊನೆಯ ಬಾರಿ ಒಮ್ಮೆ ನೋಡಿದ. ಆ ಹಣೆಯ ಮೇಲೆ ಕೈಯಿರಿಸಿ ಅನುಗ್ರಹಿಸಿದ.

ವೆಳ್ಳಾಯಿಯಪ್ಪ ಬಿಸಿಲಲ್ಲಿ ಅಲೆದಾಡಿ ಕಡಲ ತೀರವನ್ನು ತಲುಪಿದ; ಮೊದಲ ಸಲ ಕಡಲನ್ನು ಕಾಣುತ್ತಿದ್ದಾನೆ. ಕೈಯಡಿಯಲ್ಲಿ ಏನೋ ತೇವದ ಅನುಭವ. ಹೆಂಡತಿ ಕಟ್ಟಿಕೊಟ್ಟ ಬುತ್ತಿ ಗಂಟು. ವೆಳ್ಳಾಯಿಯಪ್ಪ ಗಂಟನ್ನು ಬಿಚ್ಚಿದ. ವೆಳ್ಳಾಯಿಯಪ್ಪ ಕರಗಿ ಹೋದ. ವೆಳ್ಳಾಯಿಯಪ್ಪ ಅನ್ನವನ್ನು ನೆಲಕ್ಕೆ ಎಸೆದ. ಬಿಸಿಲಿನ ಮಹಡಿಗಳ ಮೇಲಿಂದೆಲ್ಲಿಂದಲೋ ತಿಥಿಯ ಕಾಗೆಗಳು ಅನ್ನ ಕುಕ್ಕಲು ಕೆಳಕ್ಕಿಳಿದು ಬಂದವು. ●

ಆತ ಮನೆಯಲ್ಲೇ ಕುಳಿತು ಭೂಮಿಯ ಸುತ್ತಳತೆ ಲೆಕ್ಕ ಹಾಕಿದ

ಮಾನವನ ಪ್ರಚಂಡ ಬುದ್ಧಿಶಕ್ತಿಗೆ ಗ್ರೀಕ್ ನೆಲ ಹೆಸರುವಾಸಿಯಾಗಿದೆ. ಅಸಾಧಾರಣ ಇರಾಟೋಸ್ಥೆನಿಸ್ ಗ್ರೀಸ್ ದೇಶದ ಕೊಡುಗೆ. ವಿಜ್ಞಾನದ ವಿಕಾಸದ ಮೆಟ್ಟಲಿನತ್ತ ಸಾಗುತ್ತಿದ್ದ ಗ್ರೀಕ್ ಸಂಸ್ಕೃತಿಯ ಆ ಸುವರ್ಣ ಕಾಲದಲ್ಲಿ, ಆತ ಮನೆಯಲ್ಲಿಯೇ ಕುಳಿತು ಭೂಮಿಯ ಸುತ್ತಳತೆಯನ್ನು ಅಳೆದ.

ಭೂಮಿ ಗೋಲವಾಗಿದೆ ಎಂದು ಅರಿಸ್ಟಾಟಲ್ ಸಾರಿದ ಹೊಸತಿನಲ್ಲಿ (ಕ್ರಿಸ್ತ ಪೂರ್ವ ಮೂರನೇ ಶತಮಾನ) ಇರಾಟೋಸ್ಥೆನಿಸ್‌ನಿಗೆ ಒಂದು ಸಮಸ್ಯೆ ಕಾಡುತ್ತಿತ್ತು. ಆಗಿನ ಅರಬ್ ವ್ಯಾಪಾರಸ್ಥರು ''ಪ್ರತಿ ವರ್ಷದ ಜೂನ್ 22ರಂದು ಇಜಿಪ್ತಿನ ಸೈನದಲ್ಲಿ ಯಾವ ವಸ್ತುವಿಗೂ ಮಧ್ಯಾಹ್ನ ಹನ್ನೆರಡು ಗಂಟೆಗೆ ನೆರಳೇ ಇರುವುದಿಲ್ಲ. ಆಗ ಯಾವುದೇ ಬಾವಿಯಲ್ಲಿ ಇಣುಕಿದರೂ ಅದರ ತಳ- ಎಷ್ಟೇ ಆಳವಾಗಿದ್ದರೂ- ಸ್ಪಷ್ಟವಾಗಿ ಕಾಣುತ್ತದೆ'' ಎಂದು ಮಾತಾಡಿಕೊಳ್ಳುವುದು ಇರಾಟೋಸ್ಥೆನಿಸ್ಸನ ಕಿವಿಗೆ ಬಿತ್ತು. ಆದರೆ ಗ್ರೀಸ್ ದೇಶದ ಅಲಿಕ್ಝಾಂಡ್ರಿಯದಲ್ಲಿ ಅದೇ ದಿನ ನಡುಹಗಲಲ್ಲಿ ವಸ್ತುಗಳಿಗೆ ಅತ್ಯಂತ ಚಿಕ್ಕದಾದರೂ ಸರಿ ನೆರಳು ಇರುತ್ತಿದ್ದುದನ್ನು ಬಾವಿಗಳ ತಳ ಅಸ್ಪಷ್ಟವಾಗಿರುವುದನ್ನೂ ಆತ ಗಮನಿಸಿದ. ಯೋಚನೆಗೀಡಾದ.

ಈ ಸಮಸ್ಯೆಯನ್ನು ಬಗೆಹರಿಸಲು ಹೊರಟ ಆತ ಪೃಥ್ವಿಯ ಸುತ್ತಳತೆ ಹಾಗೂ ಗಾತ್ರಗಳನ್ನು ಕಂಡು ಹಿಡಿದು ಬಿಟ್ಟ! ಅವನ ತರ್ಕ ಈ ರೀತಿಯಾಗಿತ್ತು: ಜೂನ್ 22ರಂದು ಕರ್ಕವೃತ್ತದ ಮೇಲೆ ಸೂರ್ಯ ಬಂದಾಗ, ಕರ್ಕವೃತ್ತದ ಮೇಲಿರುವ ಸೈನದಲ್ಲಿ ನೆರಳಿಲ್ಲದಾಗುತ್ತಿತ್ತು. ಆದರೆ ಅದೇ ವೇಳೆ ಸೈನದಿಂದ 5000 ಸ್ಟೇಡಿಯಾ ದೂರದಲ್ಲಿರುವ (1 ಸ್ಟೇಡಿಯಾ=517 ಅಡಿಗಳು) ಅಲಿಕ್ಝಾಂಡ್ರಿಯದಲ್ಲಿ, ಪೃಥ್ವಿಯ ವಕ್ರತೆಯಿಂದಾಗಿ ನೆರಳು ಕಾಣುತ್ತಿತ್ತು. ಅಲಿಕ್ಝಾಂಡ್ರಿಯದಲ್ಲಿ ಸೂರ್ಯನನ್ನು ನಿಖರವಾಗಿ ಪರೀಕ್ಷಿಸಿದಾಗ ಆತ ನಡುನೆತ್ತಿಯಿಂದ 7 15' ದಕ್ಷಿಣಕ್ಕಿದ್ದ. ಸೂರ್ಯ ಕಿರಣಗಳು ನೇರವಾಗಿ ಬೀಳುತ್ತವೆ ಎಂದರೆ (ಚಿತ್ರ ನೋಡಿ) ಸೈನ್ ಹಾಗೂ ಅಲಿಕ್ಝಾಂಡ್ರಿಯ ನಡುವಿನ ಭೂಮಿ 7 15' ವಕ್ರವಾಗಿದೆ ಎಂದಂತಾಯಿತು. ಇದೇ ಲೆಕ್ಕದ ಪ್ರಕಾರ ಪೃಥ್ವಿಯ ಸುತ್ತಳತೆ ಒಂದು ವೃತ್ತವೆಂದು ತಿಳಿದರೆ, 360 ಕೋನಕ್ಕೆ 250,000 ಸ್ಟೇಡಿಯಾ ಆಯಿತು (=24,500 ಮೈಲುಗಳು). ಇದು ವಿಸ್ಮಯಕರವಾದರೂ ಭೂಮಿಯ ನಿಜವಾದ ಸುತ್ತಳತೆ. ಆ ದಿನಗಳಲ್ಲಿ ಇರಾಟೋಸ್ಥೆನಿಸ್ಸನ ಈ ಲೆಕ್ಕವನ್ನು ಯಾರೂ ಲೆಕ್ಕಕ್ಕೆ ತೆಗೆದುಕೊಳ್ಳದಿದ್ದರೂ ಇಂದು ಅದಕ್ಕೆ ಮಹತ್ವವಿದ್ದೇ ಇದೆ. ●

ಪ್ರೊ. ಎ.ಎ. ಹಿರೇಮಠ



ಅಪ್ರತಿಮ ಓಟಗಾರ

ಬಿಲ್ ಎಮರ್ಟನ್

ಶ್ರೀಕೃಷ್ಣ ಪ್ರಸಾದ್ ಕೆ.

ಫ್ಲಾರಿಡಾದ ಕೇಪ್ ಕೆನೆಡಿ ಬಳಿಯ ಹೆದ್ದಾರಿಯಲ್ಲಿ ಕುತೂಹಲ ಕೆರಳಿಸುವ ದೃಶ್ಯ. ರಸ್ತೆಯ ಬದಿಯಲ್ಲಿ ಒಂದು ಕಾರು ನಿಂತಿದೆ. ಕಾರಿನೊಳಗಿಂದ ಎರಡು ಕಾಲುಗಳು ಹೊರ ಚಾಚಿವೆ. ಪಾದದ ಬೆರಳುಗಳೆಲ್ಲ ನೀಲಿಬಣ್ಣಕ್ಕೆ ತಿರುಗಿವೆ. ಓರ್ವ ಮಹಿಳೆ ಪಾದಗಳನ್ನು ತೊಳೆದು ಟಾಲ್ಕಮ್ ಪೌಡರ್ ಹಾಕಿ ಪಾದರಕ್ಷೆ ತೊಡಿಸುತ್ತಿದ್ದಾಳೆ. ಕುತೂಹಲದಿಂದ ಸುತ್ತಲೂ ನೆರೆದಿದ್ದ ಜನರ ಪ್ರಶ್ನೆಗಳಿಗೆ ಆ ಹೆಂಗಸು ಉತ್ತರಿಸುತ್ತಿದ್ದಳು, ''ಈತ ನನ್ನ ಪತಿ. ಹೂಸ್ಟನ್ನಿನ ಟೆಕ್ಸಾಸ್ ನಗರದಿಂದ ಓಡುತ್ತಲೇ ಬಂದಿದ್ದಾರೆ. 1800 ಕಿಲೋಮೀಟರುಗಳ ಅಂತರ ಕ್ರಮಿಸುವ ಗುರಿಯನ್ನು ಇಟ್ಟುಕೊಂಡಿದ್ದಾರೆ. 18ನೇ ದಿನವಾದ ಇಂದು ಅವರು 65 ಕಿಲೋಮೀಟರ ಓಡಿದ್ದಾರೆ.''

ಆ ಅಪ್ರತಿಮ ಓಟಗಾರನೇ ಬಿಲ್ ಎಮರ್ಟನ್. ಆಸ್ಟ್ರೇಲಿಯದ ಟಾಸ್ಮಾನಿಯ ರಾಜ್ಯಕ್ಕೆ ಸೇರಿದವನು. 17ನೇ ವಯಸ್ಸಿನಿಂದಲೇ ಓಡಲು ಆರಂಭಿಸಿದ. ಸಾಯುವ ಕಾಲಕ್ಕೆ ಅವನ ತಂದೆ, ''ಬಿಲ್, ನೀನು ಹೀಗೇ ಓಡುತ್ತಿರು'' ಎಂದನಂತೆ. ''ಆದ್ದರಿಂದ ತಂದೆಗಾಗಿ ನಾನು ಓಡುತ್ತಿರುವೆ,'' ಎನ್ನುತ್ತಿದ್ದ ಈತ. ತಂದೆಯ ಸಾವಿನ ಮಾರನೇ ದಿನ 10 ಮೈಲು ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ಹೊಸ ದಾಖಲೆ ಸ್ಥಾಪಿಸಿದ. ಆದರೆ ನಂತರ ''ಆ ಸಮಯದಲ್ಲಿ ಓಟ ಎಷ್ಟು ಕೆಟ್ಟಿದು. ಅಂದರೆ ಸತ್ತರೂ ಚಿಂತೆಯಿಲ್ಲ ಅನ್ನಿಸಿಬಿಟ್ಟಿತ್ತು.'' ಎಂಬುದಾಗಿ ಹೇಳಿಕೆಯಿತ್ತಿದ್ದ.

ಹದಿನೆಂಟನೆಯ ವಯಸ್ಸಿನಲ್ಲಿ ಈತ ತನ್ನ ಕೆಲಸದ ಕಾರ್ಖಾನೆಯಿಂದ ಮನೆಗೆ ಆರೂವರೆ ಕಿಲೋ ಮೀಟರುಗಳಷ್ಟು ದೂರ ಊಟಕ್ಕಾಗಿ ಓಡಿಬರುತ್ತಿದ್ದ. 25ನೆಯ ವಯಸ್ಸಿನಲ್ಲಿ ಒಂದು ಜೀವ ವಿಮಾ ಕಂಪನಿಗೆ ಸೇರಿದ. ಅಲ್ಲಿ ಕಂತುಗಳನ್ನು ಸಂಗ್ರಹಿಸಲು ದಿನಕ್ಕೆ ಸುಮಾರು 25 ಕಿಲೋಮೀಟರು ಓಡುತ್ತಿದ್ದನಂತೆ.

1952ರಲ್ಲಿ ಓಟವನ್ನೇ ತನ್ನ ವೃತ್ತಿಯಾಗಿ ಸ್ವೀಕರಿಸಿದ ಬಿಲ್ ನಂತರ ನಾಲ್ಕು ವರ್ಷಗಳಲ್ಲಿ 40 ಪ್ರಶಸ್ತಿಗಳನ್ನು ಪಡೆದ. ಮ್ಯಾರಾಥಾನ್ ಓಟದಲ್ಲಿ ಮತ್ತು 30 ಮೈಲು ಓಟಗಳಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸಿದ.

[illegible] ಸಾಧಿಸಿದರೂ ಆಸ್ಟ್ರೇಲಿಯದ ಓಲಿಂ[illegible] ತರಬೇತುದಾರ ಹರ್ಬ್ ಎಲಿಯಟ್, "ಯಾರು 24 ಗಂಟೆಗಳಲ್ಲಿ ಅಥವಾ ಅದಕ್ಕೂ ಮೊದಲು 160 ಕಿಲೋಮೀಟರ್ (100 ಮೈಲು) ದೂರವನ್ನು ಕ್ರಮಿಸುತ್ತಾರೋ ಅವರು ಮಾತ್ರ ಅಧಿಕೃತ ಓಟಗಾರರಾಗಬಲ್ಲರು," ಎಂದು ಬಿಲ್‌ಗೆ ಆಹ್ವಾನವೊಡ್ಡಿದ.

ಅದನ್ನು ಸ್ವೀಕರಿಸಿದ ಬಿಲ್ 1959ರಲ್ಲಿ ಆ ದೂರವನ್ನು 20 ಗಂಟೆ 41 ನಿಮಿಷಗಳಲ್ಲಿ ಮುಗಿಸಿದ. ನಂತರ ಆತನಿಗೆ ಚಿಕ್ಕಪುಟ್ಟ ಸ್ಪರ್ಧೆಗಳಲ್ಲಿ ಆಸಕ್ತಿಯುಳಿಯಲಿಲ್ಲ. 200 ಕಿಲೋಮೀಟರ್ ದೂರವನ್ನು ಸತತ 26 ಗಂಟೆ ಓಡಿ ಕ್ರಮಿಸಿದ. 1962ರಲ್ಲಿ 271 ಕಿಲೋಮೀಟರ್ ದೂರವನ್ನು 42.5 ಗಂಟೆಗಳಲ್ಲಿ ಓಡಿದ. ಮಧ್ಯದಲ್ಲಿ ಎರಡು ಗಂಟೆ ವಿಶ್ರಮಿಸಿದನಷ್ಟೆ. ಈ ದೂರವನ್ನು ಆತ ಟಾಸ್ಮೇನಿಯಾದ ಅತ್ಯುಚ್ಚ ಹುಲ್ಲುಗಾವಲಿನಲ್ಲಿ ಕ್ರಮಿಸಬೇಕಾಗಿತ್ತು. ದಾರಿಯುದ್ದಕ್ಕೂ ಮಳೆ ಮತ್ತು ಮಂಜು ಸುರಿಯುತ್ತಿತ್ತು. ಜೊತೆಯಲ್ಲಿ ಎರಡು ಕಾರುಗಳಲ್ಲಿ ಬರುತ್ತಿದ್ದ ಹಿಂಬಾಲಕರು "ಇದು ಬಹಳ ಕಠಿಣ, ನಿಲ್ಲಿಸಿಬಿಡು," ಎಂದರು. ಆದರೆ ಎಮರ್ಟನ್ ಜಗ್ಗಲಿಲ್ಲ.

ಒಂದು ವರ್ಷದ ನಂತರ ಕ್ರಮವಾಗಿ ಎರಡು ತಿಂಗಳುಗಳಲ್ಲಿ ಎರಡು ಬಾರಿ 254 ಕಿಲೋಮೀಟರ್ ದೂರವನ್ನು ಓಡಿದ. ಟಾಸ್ಮೇನಿಯಾದ ಸಾವಿನ ಶಿಖರವೆಂದು ಪ್ರ[illegible]ದ್ಧವಾದ ವೆಲ್ಲಿಂಗ್ಟನ್ ಪರ್ವತಾವಳಿಯಲ್ಲಿ.

ಏತನ್ಮಧ್ಯೆ ಒಂದು ಸ್ಪರ್ಧೆಯ ಕಾಲಕ್ಕೆ ನಾರ್ಮ್ ಆರ್ಕಲ್ ಎಂಬಾಕೆಯ ಪರಿಚಯವಾಯಿತು. ಪರಿಚಯ ಪ್ರೇಮಕ್ಕೆ ತಿರುಗಿ ಇಬ್ಬರೂ ಮದುವೆಯಾದರು. ನಾರ್ಮ್ ಸ್ವೀಡಿಷ್ ಮಸಾಜ್‌ನಲ್ಲಿ ಪದವೀಧರೆ. ಇದು ಎಮರ್ಟನ್‌ಗೆ ಅನುಕೂಲವೇ ಆಯಿತು. ನಿತ್ಯ ಎರಡು ಬಾರಿ ಆಕೆ ಎಮರ್ಟನ್‌ಗೆ ಮಾಲೀಸು ಮಾಡುತ್ತಿದ್ದಳು.

ನಾರ್ಮ್‌ಳನ್ನು ಮದುವೆಯಾದ ಮೇಲೆ ಎಮರ್ಟನ್‌ಗೆ ಅದೃಷ್ಟವೂ ಕೂಡಿ ಬಂತು. ಮದುವೆಯಾದ 15 ತಿಂಗಳಲ್ಲಿ ಬ್ರೂಯರಿ ಕಂಪನಿಯಿಂದ ಒಂದು ಕರೆ ಬಂತು. "800 ಕಿಲೋಮೀಟರ್ ದೂರವನ್ನು ಆಸ್ಟ್ರೇಲಿಯದ ಮರುಭೂಮಿಯಲ್ಲಿ 40 ಉಷ್ಣಾಂಶದಲ್ಲಿ 'ಕೂಪರ್ ಸ್ಪ್ರಾಟ್ ಫಾರ್ ಸ್ಟಾಮಿನಾ'ದ ಟೀ ಶರ್ಟ್ ಧರಿಸಿ ಓಡಬೇಕು" ಎಂದು. ಬಿಲ್ ಓಡಲೊಪ್ಪಿದ. ಇದಕ್ಕಾಗಿ ಆ ಕಂಪನಿ ಭಾರಿ ಮೊತ್ತದ ಹಣ ನೀಡಿತು. ಅನಂತರ ಇಂಟರ್‌ನ್ಯಾಶನಲ್ ಉಣ್ಣೆ ಕಾರ್ಯಾಗಾರವು ತನ್ನ ಉಲ್ಲನ್ ನಿಕ್ಕರಗಳನ್ನು ಧರಿಸಿ ಇಂಗ್ಲಂಡಿನಲ್ಲಿ ಓಡಲು ಭಾರಿ ಮೊತ್ತದ ಹಣದ ಆಹ್ವಾನವೊಡ್ಡಿತ್ತು. ಅದರಂತೆ ಎಮರ್ಟನ್ 952 ಕಿಲೋಮೀಟರ್ ದೂರವನ್ನು 18 ದಿನ 10.5 ಗಂಟೆಗಳಲ್ಲಿ ಓಡಿದ. ಆಗ ಆತನೆ ಹೇಳುವಂತೆ ಬಿಲ್



ಅನೇಕ ಬಾರಿ ಮರಣದಂಚಿಗೆ ಜಾರಿದ್ದ. ಆದರೂ ಛಲದಿಂದ ಗುರಿ ತಲುಪಿದ.

1968ರಲ್ಲಿ ಪೂರ್ವ ಕ್ಯಾಲಿಫೋರ್ನಿಯದ 'ಮರಣ ಕಣಿವೆ' (ಡೆತ್‌ವ್ಯಾಲಿ)ಯಲ್ಲಿ 200 ಕಿಲೋಮೀಟರ್ ದೂರ ಓಡುವೆನೆಂದು ಆತ ಘೋಷಿಸಿದ. ''ಈ ಪ್ರಯತ್ನದಲ್ಲಿ ಅನೇಕರು ಸತ್ತಿದ್ದಾರೆ. ಆದರೆ ನನಗೆ ಇದು ನಿಜಕ್ಕೂ ಒಂದು ಸವಾಲು. ನಾನು ಸತ್ತರೂ ಚಿಂತೆಯಿಲ್ಲ, ಜನ ಇದರಿಂದ ಜಾಗೃತರಾಗುತ್ತಾರೆ'' ಎಂದಾತ ಹೇಳಿದ.

ಓಟ ಪ್ರಾರಂಭವಾದಾಗ 41 ಉಷ್ಣಾಂಶವಿತ್ತು. 50 ಕಿಲೋಮೀಟರ್ ಓಡಿದ್ದನಷ್ಟೆ. ಕಣ್ಣಾಲಿ ಕತ್ತರಿಸುವ ಉಗ್ರವಾದ ಮರಳುಗಾಳಿ ಅವನನ್ನು ಎತ್ತಿ ನಾಲ್ಕು ಕಿಲೋಮೀಟರ್ ದೂರ ಅಪ್ಪಳಿಸಿತ್ತು. ಆದರೂ ಎದ್ದು ಮುಂದುವರಿದ. ನಂತರ ಗಂಧಕದ ಹೊಗೆಯಲ್ಲಿ ಕೆಲವಷ್ಟು ಅಂತರವನ್ನು ಕ್ರಮಿಸಿದನಾದರೂ ಮುಂದೆ ಓಡಲಾಗದೆ ಕುಸಿದುಬಿದ್ದ. ನಾರ್ಮ್, ಜೊತೆಗೆ ವ್ಯಾನಿನಲ್ಲಿ ಬರುತ್ತಿದ್ದವಳು ಕೂಡಲೆ ಶುಶ್ರೂಷೆ ಮಾಡಿದಳು. ಆತನ ಬಟ್ಟೆಯನ್ನು ತಣ್ಣೀರಿನಲ್ಲಿ ನೆನೆಸಿದಳು. ಕುತ್ತಿಗೆ ಕಾಲುಗಳಿಗೆ ಮಾಲೀಸು ಮಾಡಿದಳು. ಮುಖಕ್ಕೆ ನೀರು ಸಿಂಪಡಿಸಿದಳು. ಮೂರೇ ನಿಮಿಷದಲ್ಲಿ ಎಮರ್ಸನ್ ಎದ್ದು ನಿಂತ. ''ನಾನು ಸೋಲೊಪ್ಪಲು ಸಿದ್ಧನಿಲ್ಲ,'' ಎಂದು ತನ್ನ ಪಾದರಕ್ಷೆಯ ಮುಂಭಾಗವನ್ನೇ ಗಾಳಿಯಾಡಲು ಕತ್ತರಿಸಿ ಮಿಕ್ಕ ದೂರವನ್ನು ಮುಗಿಸಿ ಬಿಟ್ಟ. ''ವಿವೇಕಿ ಎಂದು ತಿಳಿಯಲ್ಪಟ್ಟ ಆಸಾಮಿ ಮರಣ ಕಣಿವೆಯಲ್ಲಿ ಓಡಿದ.'' ಈ ಸಾಹಸದ ನಂತರ ಅಲ್ಲಿನ ಪತ್ರಿಕೆಗಳು ಹೀಗೆ ಬರೆದವು.

ಬಹಳ ದಣಿದಾಗ ಎಮರ್ಸನ್ ಗೊಣಗುತ್ತಿದ್ದ, ''ಇದೇನು ನರಕ. ನಾನೇಕೆ ಇದಕ್ಕೆ ಒಪ್ಪಿದೆ? ಪಾದಗಳಿಂದ ರಕ್ತ ಸುರಿಯುತ್ತಿದೆ. ಸ್ನಾಯುಗಳು ಸುಸ್ತಾಗಿವೆ. ಒಂದು ಮೆತ್ತನೆ ಹಾಸಿಗೆಯ ಮೇಲೆ ಮಲಗಲು ನಾನು ಏನು ಬೇಕಾದರೂ ಕೊಡಬಲ್ಲೆ. ಆದರೆ ಅದು ಒಂದೇ ಕ್ಷಣ. ಮರುಕ್ಷಣಕ್ಕೆ ಇನ್ನು 500 ಮೈಲಿ ಅಷ್ಟೆ. ಇನ್ನು 500 ಮೈಲಿ ಏನು ಮಹಾ!'' ಎಂದುಕೊಳ್ಳುತ್ತಾ ಮುಂದೆ ಸಾಗುತ್ತಿದ್ದ. ನಾರ್ಮ್ ಜೀಪಿನಲ್ಲಿ ಹಿಂದೆ ಬರುತ್ತಿದ್ದಳು. ಜೋಮು ಹಿಡಿದಿರುವ ಕಾಲುಗಳನ್ನು ತಿಕ್ಕುತ್ತಿದ್ದಳು. ದಿನಕ್ಕೆ ಹತ್ತು ಜೊತೆ ಕಾಲುಚೀಲಗಳನ್ನು ಒಗೆದುಕೊಡುತ್ತಿದ್ದಳು. ಇವೆಲ್ಲಕ್ಕಿಂತ ಮಿಗಿಲಾಗಿ ಎಮರ್ಸನ್‌ನಲ್ಲಿ ಚೈತನ್ಯ-ಉತ್ಸಾಹಗಳನ್ನು ತುಂಬುತ್ತಿದ್ದಳು.

ಈತನ ಗುರಿ ಆಸ್ಟ್ರೇಲಿಯದ ಪಶ್ಚಿಮ ಕರಾವಳಿ ಪರ್ತನಿಂದ ಪೂರ್ವ ಮೆಲ್ಬೋರ್ನವರೆಗೆ ಓಟ. ಅಂತರ 3500 ಕಿಲೋಮೀಟರುಗಳು. ಈ ದೂರದ ಬಹುಭಾಗ ನಲ್ಲರ್‌ಬೂರ್ ಸಮತಟ್ಟಿನ ಭೂಮಿಯ ಮೇಲೆ ಜಗತ್ತಿನ ಮುಖ್ಯ ಮರುಭೂಮಿಗಳಲ್ಲಿ ಇದೂ ಒಂದು ಗಟ್ಟಿ ಮನಸ್ಸಿನ ಬಿಲ್‌ನಿಗೆ ಈ ಗುರಿಯೂ ಅಸಾಧ್ಯವೆನಿಸಲಿಲ್ಲ.

ಈ ರೀತಿ ನರಕ ಸದೃಶ ಓಟಗಳ ನಡುವೆಯೂ ಬಿಲ್ ಆರೋಗ್ಯ ಕಾಯ್ದುಕೊಳ್ಳುವಂತೆ ಜನತೆಗೆ ತಿಳಿಹೇಳುತ್ತಿದ್ದ.

ಒಮ್ಮೆ ಸಮಾರಂಭವೊಂದರಲ್ಲಿ ಒಬ್ಬ, ''ಬಿಲ್, ವೈದ್ಯರು ನಿನಗೆ ಓಡುವುದನ್ನು ನಿಲ್ಲಿಸಬೇಕು ಎಂದು ಸಲಹೆಯಿತ್ತರೆ ಏನು ಮಾಡುತ್ತಿ?'' ಎಂದು ಕೇಳಿದನಂತೆ. ಬಾಣದಂತೆ ಬಂತು, ''ತಕ್ಷಣ ಅವರ ಬಳಿಯಿಂದ ದೂರ ಓಡಿ ಹೋಗುತ್ತೇನೆ,'' ಎಂಬ ಉತ್ತರ. ●

ಒಂದು ಬಾರಿನಲ್ಲಿದ್ದ ಭಿತ್ತಿ ಪತ್ರ: ''ನೀವು ಮರೆಯಬೇಕೆಂದು ಕುಡಿಯುತ್ತಿರುವಿರಾದರೆ, ಹಣವನ್ನು ಮುಂಗಡವಾಗಿ ಕೊಡಿರಿ.''
ರವೀಂದ್ರ ದಾಸ್ತಿಕೊಪ್

ಜೀವನದರ್ಶನ

ಕೆ.ಟಿ. ಪಾಂಡುರಂಗಿ

ನಮ್ಮವರು-ಬೇರೆಯವರು

ಜೀವನದಲ್ಲಿ ನಮ್ಮವರು ಬೇರೆಯವರು ಎಂಬ ವಿಭಾಗ ಅನೇಕ ದೃಷ್ಟಿಯಿಂದ ಇರುತ್ತದೆ. ಪ್ರತಿಯೊಂದು ದೃಷ್ಟಿಯಲ್ಲಿಯೂ ನಮ್ಮತನದ ಒಂದೊಂದು ಸಂಬಂಧವಿರುತ್ತದೆ. ಇಂಥ ಎರಡು ಮೂರು ದೃಷ್ಟಿಗಳಿಂದ ನಮ್ಮತನವಿದ್ದರೆ ಅದು ಗಟ್ಟಿಯಾಗಿರುತ್ತದೆ. ಇಂಥ ದೃಷ್ಟಿಗಳಲ್ಲಿ ನಮ್ಮ ಕುಟುಂಬದವರು ಬಂಧುಬಳಗದವರು ಎಂಬುದು ಮೊದಲನೆಯದು, ನಮ್ಮ ಧರ್ಮದವರು, ನಮ್ಮ ಜಾತಿಯವರು ಎಂಬುದು ಭಾರತದಲ್ಲಿಯೇ ಹೆಚ್ಚಾಗಿ ಬಳಕೆಯಲ್ಲಿರುವ ಇನ್ನೊಂದು ಮಹತ್ವದ ದೃಷ್ಟಿ. ನಮ್ಮ ಭಾಷೆಯವರು, ನಮ್ಮ ಊರವರು, ಪ್ರಾಂತದವರು, ದೇಶದವರು, ನಮ್ಮ ವೃತ್ತಿಗೆ ಸೇರಿದವರು, ನಾವು ಕೆಲಸ ಮಾಡುತ್ತಿರುವ ಸಂಸ್ಥೆಗಳಿಗೆ ಸೇರಿದವರು ಹೀಗೆ ನಮ್ಮತನದ ಅನೇಕ ನಂಟುಗಳು ಇರುತ್ತವೆ. ಈ ನಮ್ಮತನದ ಭಾವನೆ ಪರಸ್ಪರ ಸಹಕಾರಕ್ಕೆ ತುಂಬ ಸಹಾಯಕವಾಗುತ್ತದೆ.

ಈ ಯಾವುದೇ ಸಂಬಂಧವಿಲ್ಲದ ವ್ಯಕ್ತಿಗಳು ಸಿಗುವುದೇ ದುರ್ಲಭ. ಆದ್ದರಿಂದ ಸಂಪೂರ್ಣವಾಗಿ ಪರಕೀಯರಾದ ವ್ಯಕ್ತಿಗಳೇ ಸಿಗುವುದಿಲ್ಲ. ಆದರೆ ಕೆಲವರಿಗೆ ಈ ನಮ್ಮತನದಲ್ಲಿ ಕೆಲವೊಂದು ನಮ್ಮತನದ ಭಾವನೆಗಳು ಪ್ರಬಲವಾಗಿರುತ್ತವೆ. ಅವಿಲ್ಲದವರನ್ನು ಅವರು ಪರಕೀಯರೆಂದು ಭಾವಿಸುತ್ತಾರೆ. ಉದಾಹರಣೆಗೆ- ಜಾತೀಯ ನಮ್ಮತನ ಪ್ರಬಲವಾಗಿದ್ದವರು ಇತರ ಜಾತಿಯವರನ್ನು ಪರಕೀಯರೆಂದು ಭಾವಿಸುತ್ತಾರೆ. ಕುಟುಂಬದ ನಮ್ಮತನ ಬಲವಾಗಿದ್ದವರು ತಮ್ಮ ಕುಟುಂಬದ ಹೊರಗಿನವರಿಗೆ ಯಾವ ಉಪಕಾರವನ್ನೂ ಮಾಡುವದಿಲ್ಲ. ನಮ್ಮತನದ ಈ ಎಲ್ಲ ಸಂಬಂಧಗಳಿಗಿಂತ ಎರಡು ಸಂಬಂಧಗಳು ನಮ್ಮತನವನ್ನು ಹೆಚ್ಚಾಗಿ ಕುದುರಿಸುತ್ತವೆ. ಒಂದು ಪರಸ್ಪರರ ಸ್ವಭಾವ, ನಡವಳಿಕೆ, ಜೀವನದ ಉದ್ದೇಶ ಒಂದಾಗಿರುವುದು. ಇನ್ನೊಂದು ಪರಸ್ಪರರ ಸ್ವಪ್ರಯೋಜನಗಳು ಪರಸ್ಪರರಿಂದ ಆಗುವುದು. ಮೊದಲನೆಯದು ಸಹಜವಾದುದು, ಎರಡನೆಯದು ವ್ಯಾವಹಾರಿಕವಾದುದು.

ಜೀವನದಲ್ಲಿ ಸಾಧ್ಯವಾದಷ್ಟು ಹೆಚ್ಚು ಜನರೊಡನೆ ಸಾಧ್ಯವಾದಷ್ಟು ಹೆಚ್ಚು ದೃಷ್ಟಿಗಳಿಂದ ನಮ್ಮತನ ಬೆಳಸಿಕೊಳ್ಳುವುದು ಸ್ವಂತಕ್ಕೂ ಹಿತಕರ, ಲೋಕಕ್ಕೂ ಹಿತಕರ. ಇದರಿಂದ ಜೀವನವು ತೃಪ್ತಿಕರವೂ ಉಲ್ಲಾಸಮಯವೂ ಆಗುವುದು.

ಇಂದಿನ ಸ್ಪರ್ಧಾತ್ಮಕವಾದ ಜೀವನದಲ್ಲಿ ಸ್ವಕಾರ್ಯಸಿದ್ಧಿಗಾಗಿ ಬೇರೆಯವರಲ್ಲಿ ಪರಕೀಯತೆಯ ಭಾವನೆಯನ್ನು ಮೂಡಿಸುವ ಪ್ರವೃತ್ತಿಯು ಕಂಡು ಬರುತ್ತದೆ. ಅದನ್ನು ಜಯಿಸುವಷ್ಟು ನಮ್ಮತನದ ವಿಸ್ತಾರವನ್ನು ಮಾಡಿಕೊಂಡವರು ಇಂದಿನ ಜೀವನದಲ್ಲಿ ಹೆಚ್ಚು ಯಶಸ್ವಿಗಳಾಗುವರು. ●

ಪತ್ರ ಪ್ರಮಾದ

ಮೂಲ: ಸಾಮರ್‌ಸೆಟ್ ಮಾಮ್
ಕನ್ನಡಕ್ಕೆ: ಎಚ್. ಆರ್. ಚಂದ್ರವದನರಾವ್

ಕೊಲೆಯ ಸುದ್ದಿ ಎಲ್ಲೆಡೆ ಕುತೂಹಲ ಕೆರಳಿಸಿತ್ತು. ಕ್ಲಬ್, ರೆಸ್ಟೊರಾಗಳಲ್ಲಿ ಮತ್ತು ಟೆನ್ನಿಸ್ ಕೋರ್ಟ್ ಬಳಿ ಸೇರುತ್ತಿದ್ದ ಜನ ಇದರ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಬೆಲಾಂಡದಲ್ಲಿ ರಾಬರ್ಟ್ ಕ್ರಾಸಬಿಯ ಪತ್ನಿ ಲೆಸ್ಲಿ ಜೆಫರಿ ಹಮಾಂಡ್‌ನನ್ನು ಗುಂಡಿಕ್ಕಿ ಕೊಂದಿದ್ದಕ್ಕಾಗಿ ಅವಳನ್ನು ಸಿಂಗಪುರದ ನ್ಯಾಯಾಂಗ ಕಸ್ಟಡಿಯಲ್ಲಿ ಬಂಧನದಲ್ಲಿಡಲಾಗಿತ್ತು. ಕ್ರಾಸಬಿ ಹೆಸರಾಂತ ವಕೀಲರಾದ ಮೆಸರ್ಸ್ ರಿಪ್ಲಿ, ಜಾಯ್ಸ್ ಮತ್ತು ನೀಲರ್‌ರವರ ಕಛೇರಿಗೆ ಜಾಯ್ಸ್‌ನನ್ನು ನೋಡಲು ಬಂದಾಗ ಜಾಯ್ಸ್ ತನ್ನ ಕೊಠಡಿಯಲ್ಲಿ ಯೂಪ್ರದೋ ರಿಪೋರ್ಟ್ ನೋಡುತ್ತಾ ಕುಳಿತಿದ್ದ. ಛಾವಣಿಯಿಂದ ಇಳಿಬಿದ್ದ ಪಂಖಾ ಜೋರಾಗಿ ಸುತ್ತುತ್ತಿತ್ತು. ಹೊರಗೆ ಗದ್ದಲ, ಸುಡು ಬಿಸಿಲು. ಆದರೆ ಆಫೀಸಿನ ಒಳಗೆ ಪ್ರಶಾಂತ ವಾತಾವರಣವಿತ್ತು. ಕದ ತಟ್ಟಿದ ಸದ್ದು ಕೇಳಿ ಜಾಯ್ಸ್,

"ಯಾರು? ಒಳಕ್ಕೆ ಬನ್ನಿ," ಎಂದ.

ಒಳಕ್ಕೆ ಬಂದವನು ಜಾಯ್ಸ್‌ನ ಚೀನಿ ಸಹಾಯಕ, ಓಂಗ್ ಚಿ ಸೆಂಗ್. ಅವನು ಗ್ರೇಸ್ ಇನ್ನಿನಲ್ಲಿ ಕಾನೂನು ಶಾಸ್ತ್ರ ಓದಿದ ನಂತರ ಅನುಭವ ಪಡೆಯಲು ಈ ಪ್ರಖ್ಯಾತ ಲಾಯರುಗಳ ಸಂಸ್ಥೆಗೆ ಸೇರಿದ್ದ. ಕಷ್ಟಪಟ್ಟು ದುಡಿಯುವ ಬುದ್ಧಿವಂತ ಹುಡುಗ. ಉಡುಗೆ ತೊಡುಗೆಯಲ್ಲಿ, ಮಾತನಾಡುವುದರಲ್ಲಿ ಬಲು ನಾಜೂಕು ಅವನಿಗೆ ಸೊಗಸಾಗಿ ಇಂಗ್ಲೀಷಿನಲ್ಲಿ ಮಾತನಾಡಲು ಬರುತ್ತಿತ್ತು.

"ತಮ್ಮನ್ನು ನೋಡಲು ಕ್ರಾಸ್‌ಬಿ ಬಂದಿದ್ದಾರೆ ಸರ್. ಕಳುಹಿಸಲೇ?"

"ಕಳುಹಿಸು."

ಒಳ ಬಂದು, ಜಾಯ್ಸ್‌ನ ಕೈ ಕುಲುಕಿ ಕುಳಿತ ಕ್ರಾಸ್‌ಬಿ ಆರಡಿಗೂ ಮಿಕ್ಕಿ ಎತ್ತರವಾಗಿದ್ದು ಅಗಲ ಭುಜದ ಕಟ್ಟುಮಸ್ತಾದ ಆಳು. ಅವನೊಬ್ಬ ಪ್ಲಾಂಟರ್. ಎಸ್ಟೇಟಿನಲ್ಲಿ ಆಳುಗಳಿಂದ ಕೆಲಸ ಮಾಡಿಸುವುದು, ಸಂಜೆ ಟೆನ್ನಿಸ್ ಆಡುವುದು ಅವನ ದೈನಂದಿನ ಕೆಲಸ. ಒಂದೇ ಏಟಿಗೆ ಯಾರನ್ನಾದರೂ ಎಗರಿಸಬಹುದಾದ ಬಲವಿದ್ದರೂ ಅತೀವ ದಯಾಳು. ಅವನ ಮಗುವಿನಂತಹ ಮುಖ, ನೀಲಿ ಕಣ್ಣುಗಳು ಯಾರಲ್ಲೂ ಹೆದರಿಕೆ ತರುತ್ತಿರಲಿಲ್ಲ. ಅವನ ಮುಖದಲ್ಲಿ ಕಾಣುತ್ತಿದ್ದ ಗಾಬರಿಯನ್ನು

ಕಂಡು, ''ಗಾಬರಿ ಆಗಬೇಡಿ ಕ್ರಾಸಬಿ ಅವರೆ, ಸಮಾಧಾನ ತಂದುಕೊಳ್ಳಿ.... ಕಸ್ಟಡಿಯಲ್ಲಿರುವ ನಿಮ್ಮ ಪತ್ನಿಯನ್ನು ಕಂಡಿದ್ದೀರಾ? ಆಕೆ ಏನು ಹೇಳಿದಳು?'' ಎಂದು ಕೇಳಿದ ಜಾಯ್ಸ್.

''ಇಲ್ಲ, ನೇರವಾಗಿ ಇಲ್ಲಿಗೇ ಬಂದೆ. ಲೆಸ್ಲೀನ ಈ ಸಂಜೆ ನೋಡಬೇಕು. ಅವಳನ್ನು ಬಂಧಿಸಿಟ್ಟಿರುವುದು ತೀರಾ ಅನ್ಯಾಯ.''

''ಅವಳ ಮೇಲಿನ ಅಪವಾದ ತೀರಾ ಗುರುತರವಾದದ್ದು. ಅದಕ್ಕೇ ಅವಳನ್ನು ಬೇಲ್ ಮೇಲೆ ಬಿಡಲೂ ಕೋರ್ಟು ಒಪ್ಪುತ್ತಿಲ್ಲ.''

''ತೀರಾ ಅನ್ಯಾಯ. ಅವಳು ಮಾಡಿರುವುದಾದರೂ ಏನು? ಯಾವೊಬ್ಬ ಗೌರವಸ್ಥ ಹೆಂಗಸು ಮಾಡುವಂತಹುದನ್ನೇ ಅವಳೂ ಮಾಡಿದ್ದಾಳೆ. ಅವಳೊಂದಿಗೆ ನನ್ನ ಮದುವೆಯಾಗಿ ಹನ್ನೆರಡು ವರ್ಷವಾಯಿತು. ಅವಳ ಗುಣ ನನಗೆ ಗೊತ್ತಿಲ್ಲವೇ? ಒಂದು ಇರುವೆಯನ್ನು ಸಾಯಿಸುವುದಕ್ಕೂ ಹಿಂಜರಿಯುವಾಕೆ ಅವಳು. ನನಗೆ ಅವನು ಸಿಕ್ಕಿದ್ದಿದ್ದರೆ ಕತ್ತನ್ನು ತಿರುಚಿ ಅವನನ್ನು ಕೊಲ್ಲುತ್ತಿದ್ದೆ. ಮುಕ್ಕಾಲು ಪಾಲು ನೀವೂ ಹಾಗೆ ಮಾಡುತ್ತಿದ್ದಿರಿ ಎಂದು ಕಾಣುತ್ತೆ.''

''ಅವಳೇ 'ನಾನು ಕೊಂದೆ' ಎಂದು ಒಪ್ಪಿಕೊಂಡಿರುವಾಗ ಅವಳನ್ನು ಕಸ್ಟಡಿಯಲ್ಲಿಡುವುದು ಅಗತ್ಯ.''

''ಮಾನ ಸಂರಕ್ಷಿಸಿಕೊಳ್ಳಲು ಒಬ್ಬ ದುರುಳನನ್ನು ಸಾಯಿಸುವುದು ಕೊಲೆಯಲ್ಲ.''

''ಲೆಸ್ಲಿ, ಹೆಮಾಂಡ್‌ಗೆ ಒಂದು ಗುಂಡು ಹೊಡೆಯಲಿಲ್ಲ; ಆರು ಗುಂಡು ಹೊಡೆದಿದ್ದಾಳೆ. ಮಾನರಕ್ಷಣೆಗೆ ಆರು ಗುಂಡು ಬೇಕಿರಲಿಲ್ಲ.





''ಮಾನ ಹೋಗುವ ಸಂದರ್ಭದಲ್ಲಿ ಲೆಕ್ಕ ಮಾಡಿ ಯಾರು ಗುಂಡು ಹೊಡೆಯುತ್ತಾರೆ?''

''ಆದರೆ ಪ್ರಾಸಿಕ್ಯೂಟರನ ದೃಷ್ಟಿಯಲ್ಲಿ ಅಷ್ಟು ಸಾರಿ ಗುಂಡು ಹೊಡೆದದ್ದು ಅನಾವಶ್ಯಕ. ಇರಲಿ, ನೋಡೋಣ.... ಹೆಮಾಂಡ್ ಬಗ್ಗೆ ಯಾರಿಗೂ ಒಳ್ಳೆಯ ಅಭಿಪ್ರಾಯವಿಲ್ಲ.....''

ಕ್ರಾಸ್‌ಬಿ ಮತ್ತು ಜಾಯ್ಸ್, ಲೆಸ್ಲಿಯನ್ನು ಅನೇಕ ಸಲ ಜೈಲಿನಲ್ಲಿ ನೋಡಿದರು. ಜೈಲಿನಲ್ಲಿದ್ದರೂ ಅವಳ ನಡವಳಿಕೆ, ಮನಃಸ್ಥೈರ್ಯವೇನೂ ಕಡಿಮೆಯಾಗಿರಲಿಲ್ಲ. ಕೊಲೆ ಬಗ್ಗೆ ಮೊದಲು ಏನು ಹೇಳಿದ್ದಳೋ ಈಗಲೂ ಅದನ್ನೇ ಅವಳು ಹೇಳುತ್ತಾಳೆ. ಅವಳ ವಿವರಣೆಯಲ್ಲಿ ಏನೂ ವ್ಯತ್ಯಾಸವಿಲ್ಲ.

ಲೆಸ್ಲಿಗೆ ಮೂವತ್ತರ ಪ್ರಾಯ. ಸಾಧಾರಣ ಎತ್ತರ. ನಗು ಮುಖ. ತಲೆ ತುಂಬಾ ಗುಂಗುರ ಕೂದಲು, ಒಳಗಿರುವ ಮೂಳೆ ಕಾಣುತ್ತದೋ ಅನ್ನುವಷ್ಟು ಬಿಳಿ ಚರ್ಮ. ನಾಚಿಕೆ ಸ್ವಭಾವದ, ಕರುಣೆ ತುಂಬಿರುವ ಅಂತಹವಳು ಕೊಲೆ ಮಾಡಲು ಸಾಧ್ಯವೇ ಇಲ್ಲ ಎಂದು ಅವಳ ಗೆಳತಿಯರ ಅಭಿಪ್ರಾಯ. ಜಾಯ್ಸ್‌ನ ಹೆಂಡತಿಗೆ ಹೀಗೇ ಅನಿಸಿತ್ತು. ಅವಳು ಕ್ರಾಸ್‌ಬಿ ಎಸ್ಟೇಟಿನ ಮನೆಯಲ್ಲಿ ಲೆಸ್ಲಿಯೊಡನೆ ಹತ್ತು ಹದಿನೈದು ದಿನ ಇದ್ದು ಬಂದಿದ್ದಳು. ಹೀಗೆ ಜಾಯ್ಸ್ ದಂಪತಿಗಳು ಮೊದಲಿನಿಂದ ಪರಿಚಯವಿದ್ದುದರಿಂದ, ಕ್ರಾಸ್‌ಬಿ ಕೇಸನ್ನು ಜಾಯ್ಸ್‌ಗೆ ಒಪ್ಪಿಸಿದ್ದ.

ಜಾಯ್ಸ್, ರಾಬರ್ಟ್ ಕ್ರಾಸ್‌ಬಿಗೆ ಆಶ್ವಾಸನೆ ಕೊಟ್ಟು ಕಳುಹಿಸಿದ ನಂತರ ಮೊಕದ್ದಮೆಯ ಕಡತವನ್ನು ತೆಗೆದು ಓದುತ್ತಾ ಕುಳಿತ.

ಅದೊಂದು ಜನರಲ್ಲಿ ಕುತೂಹಲವನ್ನುಂಟು ಮಾಡಿದ ಮೊಕದ್ದಮೆಯಾಗಿತ್ತು. ಸಿಂಗಪುರದಿಂದ ಪೆನಾಂಗ್‌ವರೆಗೆ ಜನ ಈ ಕೊಲೆ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು.

ಕೊಲೆಯ ಬಗ್ಗೆ ತಿಳಿದಿದ್ದು:

ಅಂದು ರಾತ್ರಿ ಅವಳು ಊಟ ಮಾಡಿ ಒಬ್ಬಳೇ ಕುಳಿತಿದ್ದಳು. ಗಂಡ ಸಿಂಗಪುರಕ್ಕೆ ಯಾವುದೋ ಕೆಲಸಕ್ಕೆ ಹೋಗಿದ್ದ. ಬಂಗ್ಲೆಯಲ್ಲಿ ಯಾರೂ ಇರಲಿಲ್ಲ. ಜವಾನರೂ ಹಿಂಭಾಗದಲ್ಲಿದ್ದ ಕ್ವಾಟರ್ಸ್‌ಗೆ ಹೊರಟು ಹೋಗಿದ್ದರು. ತೋಟದಲ್ಲಿ ಬೂಟಿನ ಸದ್ದಾಯಿತು. ಆತ ಶ್ವೇತ ವರ್ಣೀಯ; ಸ್ಥಳದವನಲ್ಲ. ಆದರೆ ಮೋಟಾರ್ ಕಾರ್ ಬಂದ ಶಬ್ದ ಕೇಳಿಸಲಿಲ್ಲ. ಯಾರಿರಬಹುದು? ಮೆಟ್ಟಲು ಹತ್ತಿ, ವರಾಂಡ ದಾಟಿ, ಅವಳಿದ್ದ ಹಾಲಿಗೇ ಬಂದ ಅವನು. ನಿಂತ ಜಾಗದಲ್ಲಿ ಕತ್ತಲೆ, ಇದ್ದುದರಿಂದ ಯಾರು ಎಂದು ಕಾಣಿಸಲಿಲ್ಲ.

''ನಾನು,'' ಎಂದ ಆಗಂತುಕ.

ಅವಳಿಗೆ ಧ್ವನಿ ಯಾರದ್ದು ಎಂದು ಗೊತ್ತಾಗಲಿಲ್ಲ. ಕ್ರೋಶಾ ಹಾಕುತ್ತಿದ್ದ ಅವಳು ಕನ್ನಡಕ ತೊಟ್ಟಿದ್ದಳು. ಕೂಡಲೇ ಕನ್ನಡಕವನ್ನು ಮೇಜಿನ ಮೇಲೆ ಇಟ್ಟಳು.

''ನಾನು ಜೆಫರಿ ಹೆಮಾಂಡ್.''

''ಓ, ಯಾರೋ ಅಂತಿದ್ದೆ. ಬನ್ನಿ ಕುಳಿತು ಕೊಳ್ಳಿ.''

ಹೆಮಾಂಡ್ ಬಂದದ್ದು ಅವಳಿಗೆ ಆಶ್ಚರ್ಯ. ಅವನು ಹತ್ತಿರದಲ್ಲೇ ಇದ್ದರೂ ಅವನೊಡನೆ ಗಂಡನಿಗಾಗಲಿ, ಅವಳಿಗಾಗಲಿ ಗಾಢವಾದ ಸ್ನೇಹವೇನೂ ಇರಲಿಲ್ಲ. ಸುಮಾರು 8-10 ಮೈಲಿ ದೂರದಲ್ಲಿದ್ದ ಎಸ್ಟೇಟಿನ ಮೇನೇಜರ್ ಅವನು. ಈ ಅವೇಳೆಯಲ್ಲಿ ಅವನು ಬಂದದ್ದು ನೋಡಿ ಲೆಸ್ಲಿಗೆ ವಿಸ್ಮಯವಾಯಿತು.

''ರಾಬರ್ಟ್ ಮನೆಯಲ್ಲಿಲ್ಲ. ಸಿಂಗಪುರಕ್ಕೆ ಹೋಗಿದ್ದಾನೆ. ಏನು ಬಂದದ್ದು?''

''ರಾತ್ರಿ ಒಬ್ಬನೇ ಇದ್ದು ಬೇಜಾರಾಯಿತು. ಏನು ಮಾಡುತ್ತಿದ್ದೀರಿ ಅಂತ ನೋಡೋಣ ಅನ್ನಿಸಿತು ಅದಕ್ಕೇ ಬಂದೆ.''

''ಅಷ್ಟು ದೂರದಿಂದ ಬಂದದ್ದಾದರೂ ಹೇಗೆ? ಕಾರಿನ ಶಬ್ದವೇ ಆಗಲಿಲ್ಲವಲ್ಲ?''

''ರಸ್ತೆಯ ಕೆಳಗೆ ಕಾರನ್ನು ಬಿಟ್ಟಿದ್ದೇನೆ. ನೀವು ಮಲಗಿರುತ್ತೀರಿ ಅಂತ ಭಾವಿಸಿದ್ದೆ.''

ಅವನು ಹೀಗೆ ಯೋಚಿಸಿದ್ದು ಸ್ವಾಭಾವಿಕ. ಕೆಲಸಗಾರರ ಹಾಜರಿ ತೆಗೆದುಕೊಳ್ಳುವುದಕ್ಕೆ ಪ್ಲಾಂಟರ್ಸ್ ಹೊತ್ತಿಗೆ ಮುಂಚೆಯೇ ತೋಟಕ್ಕೆ ಹೋಗಬೇಕಾಗುತ್ತದೆ. ಆದುದರಿಂದ ಊಟ ಮುಗಿದೊಡನೆ ಎಲ್ಲರೂ ಮಲಗುತ್ತಾರೆ.

ರಾಬರ್ಟ್ ಮನೆಯಲ್ಲಿ ಇಲ್ಲದೇ ಇದ್ದುದರಿಂದ ಅವಳು ಕುಳಿತಿದ್ದ ಜಾಗದಲ್ಲಿ ವ್ಹಿಸ್ಕಿ ಮತ್ತು ಸೋಡಾ ಇರಲಿಲ್ಲ. ಲೆಸ್ಲಿ ಆಳು ಹುಡುಗನನ್ನು ಕರೆಯದೆ ತಾನೆ ಬಾಟಲುಗಳನ್ನು ತಂದಳು. ಹೆಮಾಂಡ್ ವ್ಹಿಸ್ಕಿಗೆ ಸೋಡಾ ಸೇರಿಸಿ ಕುಡಿಯುತ್ತಾ, ಪೈಪಿಗೆ ಹೊಗೆಸೊಪ್ಪನ್ನು ತುಂಬಿದ.

ಹೆಮಾಂಡ್‌ಗೆ ಕಾಲೋನಿಯಲ್ಲಿ ತುಂಬಾ ಜನ ಸ್ನೇಹಿತರು. ಅವನಿಗೆ ಸುಮಾರು 35-40 ವರ್ಷದ ಪ್ರಾಯ. ಯುದ್ಧ ಶುರುವಾದಾಗ ಅವನು ಸ್ವಇಚ್ಛೆಯಿಂದ ಸೈನ್ಯಕ್ಕೆ ಸೇರಿದ್ದ. ಮೊಣಕಾಲ ಮೇಲೆ ಗುಂಡು ತಾಕಿ ಗಾಯವಾದುದರಿಂದ, ಎರಡು ವರ್ಷದ ನಂತರ, ಅವನನ್ನು ಸೇನೆಯಿಂದ ಬಿಡುಗಡೆ ಮಾಡಿದ್ದರು. ಅವನಿಗೆ ಡಿ.ಎಸ್.ಜೆ. ಮತ್ತು ಎಮ್.ಸಿ. ಪ್ರಶಸ್ತಿ ಬಂದಿತ್ತು. ಒಳ್ಳೆಯ ಟೆನ್ನಿಸ್ ಆಟಗಾರ; ಹಿಂದೆ ಸೊಗಸಾಗಿ ನರ್ತನ ಮಾಡುತ್ತಿದ್ದ. ಮೊಣಕಾಲು ಪೆಟ್ಟಾದಾಗಿನಿಂದ ಅವನಿಗೆ ನೃತ್ಯ ಮಾಡಲು ಕಷ್ಟವಾಗುತ್ತಿತ್ತು. ಆದರೂ ಅವನ ಜನಪ್ರಿಯತೆ ಕಡಿಮೆಯಾಗಿರಲಿಲ್ಲ. ಎತ್ತರವಾಗಿ ನೋಡಲು ಚೆನ್ನಾಗಿದ್ದ. ನೀಲಿ ಕಣ್ಣುಗಳು, ಕರೀ ಕೂದಲು. ಅವನಿಗಿದ್ದ ಒಂದೇ ದುರ್ಗುಣವೆಂದರೆ ಹುಡುಗಿಯರ ಚಟ.

ಹೆಮಾಂಡ್, ಸಿಂಗಾಪುರದಲ್ಲಿ ಆಗ ನಡೆಯುತ್ತಿದ್ದ ಕುದುರೆ ಜೂಜು, ರಬ್ಬರ್ ಬೆಲೆ, ಹೊಸ ಕಾರುಗಳ ಬಗ್ಗೆ ಮಾತನಾಡುತ್ತಾ ತಾನು ಬೇಟೆಯಾಡಿ ಕೊಲ್ಲಬೇಕಾಗಿದ್ದ ಹುಲಿ



ಹೇಗೆ ತಪ್ಪಿಸಿಕೊಂಡಿತು ಎಂದು ಹೇಳಲು ಶುರುಮಾಡಿದ. ಆದರೆ ಲೆಸ್ಲಿಗೆ ಕಸೂತಿ ಮುಗಿಸುವ ತವಕ.

ಅವಳು ಟೇಬಲ್ಲನ್ನು ಹತ್ತಿರ ಎಳೆದುಕೊಂಡು ಕನ್ನಡಕ ಹಾಕಿಕೊಂಡಳು.

"ಕನ್ನಡಕ ನಿನಗೆ ಚೆನ್ನಾಗಿ ಕಾಣುವುದಿಲ್ಲ. ನಿನ್ನಂತಹ 'ಚೆಲುವೆಯರು ಮುಂದಕಡ್ಡಿಯ ಕನ್ನಡಕವನ್ನು ಏಕಾದರೂ ಹಾಕಿಕೊಳ್ಳುತ್ತಾರೋ?"

ಇಂತಹ ಮಾತುಗಳನ್ನು ಅವನ ಬಾಯಿಯಿಂದ ಎಂದೂ ಕೇಳದೆ ಇದ್ದುದರಿಂದ, ಅವನು ಹೀಗೆ ಮಾತನಾಡಿದ್ದು ಲೆಸ್ಲಿಗೆ ಸ್ವಲ್ಪ ಆಶ್ಚರ್ಯವೇ ಆಯಿತು.

"ನಾನೇನೂ ಚೆಲುವೆ ಅಂತ ತಿಳಿದುಕೊಂಡಿಲ್ಲ. ನಿಜ ಹೇಳಬೇಕಾದರೆ ನೀನು ನನ್ನ ಬಗ್ಗೆ ಏನು ಬೇಕಾದರೂ ತಿಳಿದುಕೋ. ನಿನ್ನ ಅಭಿಪ್ರಾಯಕ್ಕೆ ನಾನು ಚೂರೂ ಬೆಲೆ ಕೊಡುವುದಿಲ್ಲ."

"ಹಾಗಲ್ಲ, ನಿಜವಾಗಿ ನೀನೊಬ್ಬ ಚೆಲುವೆ."

"ನಿನ್ನ ಹೊಗಳುಮಾತಿಗೆ ತುಂಬಾ ವಂದನೆಗಳು," ಎಂದು ವ್ಯಂಗ್ಯವಾಗಿ ನುಡಿಯುತ್ತಾ, "ಆದರೆ ನಿಜವಾಗಿಯೂ ನೀನೊಬ್ಬ ಹೆಡ್ಡ," ಅಂದಳು.

ಅವನು ನಕ್ಕು ಎದ್ದು ಬಂದು ಅವಳು ಕುಳಿತ ಕುರ್ಚಿಯ ಪಕ್ಕದಲ್ಲಿನ ಕುರ್ಚಿಯಲ್ಲಿ ಕುಳಿತುಕೊಂಡ.

ಅವಳ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು, "ನಿನ್ನ ಕೈಗಳು ಎಷ್ಟು ಚೆನ್ನಾಗಿವೆ! ಇದನ್ನಾದರೂ ನೀನು ಒಪ್ಪುತ್ತೀ ತಾನೆ?" ಎಂದು ಮಾತು ಮುಂದುವರಿಸಿದ.

"ಪೆದ್ದನ ಹಾಗೆ ಆಡಬೇಡ. ಪ್ರಜ್ಞೆ ಇಟ್ಟು ಮಾತನಾಡು. ಇಲ್ಲದಿದ್ದರೆ ಮನೆಯಿಂದ ಹೊರಕ್ಕೆ ಅಟ್ಟಬೇಕಾಗುತ್ತೆ."

"ನಿನ್ನನ್ನು ಕಂಡರೆ ನನಗೆ ತುಂಬಾ ಪ್ರೀತಿ."

ಸ್ವಲ್ಪ ಹೊತ್ತು ಸುಮ್ಮನಿದ್ದು ನಂತರ ಅವಳು ಹೇಳಿದಳು-

"ನೀನು ನನ್ನನ್ನು ಪ್ರೀತಿಸಬಹುದು. ಆದರೆ ನಾನು ನಿನ್ನನ್ನು ಪ್ರೀತಿಸುವುದಿಲ್ಲ. ನಾನು ರಾಬರ್ಟ್‌ನನ್ನು ಬಿಟ್ಟು ಯಾರನ್ನೂ ಪ್ರೀತಿಸಲಾರೆ."

ಅವನ ಮಾತುಗಳು ಅವಳಲ್ಲಿ ತುಂಬಾ ಆಶ್ಚರ್ಯ ತಂದಿತ್ತು. ಈ ಏಳು ವರ್ಷಗಳಲ್ಲಿ ಅವನೆಂದೂ ಅವಳ ರೂಪ ಲಾವಣ್ಯದ ಬಗ್ಗೆ ಮಾತನಾಡಿರಲಿಲ್ಲ. ಯುದ್ಧದಿಂದ ವಾಪಸ್ಸಾಗಿ ಕಾಯಿಲೆ ಬಿದ್ದಿದ್ದಾಗ ರಾಬರ್ಟ್ ಅವನನ್ನು ಮನೆಗೆ ಕರೆದುಕೊಂಡು ಬಂದು ಉಪಚರಿಸಿದ್ದು ನಿಜ. ಅವನು ಅವರ ಅತಿಥಿಯಾಗಿ ಹದಿನೈದು ದಿನಗಳಿದ್ದರೂ ಅವರ ಸ್ವಭಾವ ಬೇರೆ ಬೇರೆಯಾದ್ದರಿಂದ ಅವರಲ್ಲಿ ಅಷ್ಟು ಒಡನಾಟ ಬೆಳೆಯಲಿಲ್ಲ. ಅಪರೂಪಕ್ಕೆ ಆತ ರಾಬರ್ಟ್ ಜೊತೆ ಟೆನ್ನಿಸ್ ಆಡಲು ಬರುತ್ತಿದ್ದ. ಪ್ಲಾಂಟರ್ ಯಾರಾದರೂ ಪಾರ್ಟಿ ಕೊಟ್ಟರೆ ಅಲ್ಲಿ ಅವನೂ ಇರುತ್ತಿದ್ದ. ಆದರೆ ಒಂದು ತಿಂಗಳಿನಿಂದ ಲೆಸ್ಲಿ ಅವನನ್ನು ನೋಡಿಯೇ ಇರಲಿಲ್ಲ.

ಹಮಾಂಡ್ ಗ್ಲಾಸಿಗೆ ಪುನಃ ವಿಸ್ಕಿ ಹಾಕಿ, ಸೋಡಾ ಬೆರೆಸಿ ಕುಡಿದ. ಅವನು ಅಷ್ಟು ಕುಡಿಯುತ್ತಾನೆ ಎಂದು ಅವಳು ಅಂದುಕೊಂಡಿರಲಿಲ್ಲ. "ನಾನೇ ನೀನಾದರೆ ಅಷ್ಟು ಕುಡಿಯುತ್ತಿರಲಿಲ್ಲ," ಅಂದಳು ಲೆಸ್ಲಿ.

"ಕುಡಿದು, ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದೇನೆ ಎಂದುಕೊಂಡಿಯಾ?"

"ಹೌದು."

"ಇಲ್ಲ, ನನಗೇನೂ ಮತ್ತು ಏರಿಲ್ಲ. ನಿನ್ನ ಕಂಡರೆ ನನಗೆ ನಿಜವಾಗಿ ಪ್ರೀತಿ. ನಿನ್ನನ್ನು ನಾನು ಪ್ರೀತಿಸ್ತೀನಿ, ಪ್ರೀತಿಸ್ತೀನಿ, ಪ್ರೀತಿಸ್ತೀನಿ."

ಅವಳು ಎದ್ದು "ಗುಡ್‌ನೈಟ್,"

ಎಂದಳು.

"ನಾನು ಹೋಗುತ್ತಾ ಇಲ್ಲ."

ಅವಳಿಗೆ ತಾಳ್ಮೆ ಮೀರಿತು.

"ದಡ್ಡ ಶಿಖಾಮಣಿ, ನಿನಗೆ ಇನ್ನೂ ಗೊತ್ತಾಗಲಿಲ್ಲವೇ? ನನಗೆ ನಿನ್ನ ಮೇಲೆ ಪ್ರೀತಿ ಇಲ್ಲ. ನಾನು ಪ್ರೀತಿಸುವುದು ನನ್ನ ಗಂಡನನ್ನು- ರಾಬರ್ಟ್‌ನನ್ನು."

"ಆದರೆ ರಾಬರ್ಟ್ ಇಲ್ಲಿ ಇಲ್ಲವಲ್ಲಾ?"

"ಇನ್ನೊಂದು ನಿಮಿಷದಲ್ಲಿ ನೀನು ಹೋಗದೇ ಇದ್ದರೆ ಆಳನ್ನು ಕರೆದು ದಬ್ಬಿಸುತ್ತೇನೆ."

"ನೀನು ಕೂಗಿದರೆ ಅವರಿಗೆ ಕೇಳುವುದಿಲ್ಲ. ಅವರು ಬಹಳ ದೂರದಲ್ಲಿದ್ದಾರೆ." ಆಳುಗಳನ್ನು ಕರೆಯಲೋ ಎಂಬಂತೆ ಅವಳು ಎದ್ದು ವರಾಂಡಕ್ಕೆ ಬಂದಳು. ಆದರೆ ಹೆಮಾಂಡ್ ಅವಳ ತೋಳುಗಳನ್ನು ಹಿಡಿದುಕೊಂಡ. ನಂತರ ಅವಳನ್ನು ತಬ್ಬಿ ಹುಚ್ಚು ಹಿಡಿದವನಂತೆ ಅವಳ ತುಟಿಗೆ ಮುತ್ತಿನ ಮಳೆಗರೆದ.

"ಬೇಡ, ಬೇಡ, ಬಿಟ್ಟುಬಿಡು," ಎಂದಳು ಲೆಸ್ಲಿ.

ಅವಳಿಗೆ ಮುಂದೆ ಏನಾಯಿತು ಅನ್ನುವುದರ ಬಗ್ಗೆ ನಿಖರವಾಗಿ ಜ್ಞಾಪಕವಿಲ್ಲ.

"ಅವನು ಅವಳನ್ನು ತಬ್ಬಿ ಪ್ರೇಮ ಭಿಕ್ಷೆಯನ್ನು ಬೇಡುತ್ತಿದ್ದ. ಅವನ ಕಪಿಮುಷ್ಟಿಯಿಂದ ಅವಳು ತಪ್ಪಿಸಿಕೊಳ್ಳಲಾರದೆ ಒದ್ದಾಡುತ್ತಿದ್ದಳು. ಅವನ ಬಿಸಿಯುಸಿರು ಅವಳ ಮುಖವನ್ನು ಮುತ್ತುತ್ತಿತ್ತು. ಅವಳ ಬಾಯಿಯನ್ನು, ಕಣ್ಣುಗಳನ್ನು, ಕೆನ್ನೆಗಳನ್ನು, ಕೂದಲನ್ನು ಅವನು ಚುಂಬಿಸಿದ. ಅವನ ಗಾಢಾಲಿಂಗನದಿಂದ ಅವಳಿಗೆ ಉಸಿರುಗಟ್ಟಿದಂತಾಯಿತು. ಅವಳನ್ನು ಅನಾಮತ್ತು ಎತ್ತಿ ಬೆಡ್‌ರೂಂ ಕಡೆಗೆ ಹೊತ್ತುಕೊಂಡು ಹೊರಟ. ಈಗ ಅವನ ವರ್ತನೆ ಒಬ್ಬ ಅನಾಗರಿಕ ಮನು



ಷ್ಯನಂತೆ ಇತ್ತು. ಬರುವಾಗ ಮಧ್ಯದಲ್ಲಿದ್ದ ಮೇಜಿನ ಕಾರಿಗೆ ಅವನ ಕಾಲು ತಾಗಿ ಮುಗ್ಗರಿಸಿ ಬೀಳುವಂತಾದ. ಮೊಣಕಾಲು ನೋವಾದ್ದರಿಂದ ಅವನಿಗೆ ಅವಳ ಮೇಲಿನ ಹಿಡಿತ ಸಡಿಲವಾಯಿತು. ಅವಳು ಕೂಡಲೇ ಅವನ ಅಪ್ಪುಗೆಯಿಂದ ತಪ್ಪಿಸಿಕೊಂಡು ಓಡಿಹೋಗಿ ರಿವಾಲ್ವರ್ ತಂದು ಏಳುತ್ತಿದ್ದ ಹೆಮಾಂಡ್‌ನತ್ತ ಗುಂಡು ಹಾರಿಸಿದಳು. ಅವನು ತೆವಳಿಕೊಂಡು ಹೊರಬರುವುದರಲ್ಲಿ ಆರು ಗುಂಡುಗಳು ಅವನ ದೇಹವನ್ನು ಹೊಕ್ಕಿದ್ದವು. ಆಳುಗಳು ಬಂದಾಗ ಅವಳು ಅಲ್ಲೇ ನಿಂತಿದ್ದಳು. ಕೈಯಲ್ಲಿದ್ದ ರಿವಾಲ್ವರನ್ನು ಕೆಳಕ್ಕೆ ಹಾಕಿ ಬೆಡ್‌ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡಳು. ಆಳುಗಳಲ್ಲೊಬ್ಬ ರಾಬರ್ಟನ ಕಾರಿನಲ್ಲಿ ಹೋಗಿ ಎ.ಡಿ.ಓ. (ಅಸಿಸ್ಟಂಟ್ ಡಿಸ್ಟ್ರಿಕ್ಟ್ ಆಫೀಸರ್)ನನ್ನು ಕರೆದುಕೊಂಡು ಬಂದ. ಗಂಡ ಬರುವವರೆಗೂ ಅವಳು ಏನೂ ಹೇಳಲಿಲ್ಲ. ಅನಂತರ ನಡೆದುದೆಲ್ಲಾ ಹೇಳಿದಳು. ಒಂದು ಗುಂಡಲ್ಲದೆ ಆರು ಗುಂಡುಗಳನ್ನೆಲ್ಲ ಹೊಡೆದೆ ಎಂಬುದನ್ನು ಮಾತ್ರ ಹೇಳಲು ಅವಳಿಂದಾಗಲಿಲ್ಲ.

"ಗೌರವಸ್ಥ ಮನೆತನದ ಹೆಣ್ಣೊಬ್ಬಳ ಹೃದಯದಲ್ಲಿ ಏನು ಅಡಗಿರುತ್ತದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ," ಎಂದುಕೊಂಡು ಜಾಯ್ಸ್.

* * *

ಜಾಯ್ಸ್ ಯೋಚಿಸುತ್ತಾ ಕುಳಿತಿರುವಾಗ ಅವನ ಚೀನೀ ಅಸಿಸ್ಟೆಂಟ್ ಸೆಂಗ್ ''ನಿಮಗೆ ಒಂದು ವಿಷಯ ತಿಳಿಸಬೇಕು, ತುಂಬಾ ಗಹನ ವಾದದ್ದು, ತುಂಬಾ ಗುಟ್ಟಾದದ್ದು.''

''ಹೇಳು.''

''ಅದು ಕ್ರಾಸ್‌ಬಿ ಕೇಸಿಗೆ ಸಂಬಂಧಿಸಿದ್ದು.''

''ಹೂಂ.''

''ಲೆಸ್ಲಿ, ಹೆಮಾಂಡ್‌ಗೆ ಒಂದು ಕಾಗದ ಬರೆದಿದ್ದಾಳೆ.''

''ಇರಬಹುದು. ಅವರಿಬ್ಬರೂ ಸುಮಾರು ಏಳು ವರ್ಷಗಳಿಂದ ಒಬ್ಬರಿಗೊಬ್ಬರು ಪರಿಚಿತರು. ಟೆನ್ನಿಸ್ ಆಡಲೋ, ಊಟಕ್ಕೋ ಆಹ್ವಾನಿಸಿ ಬರೆದ ಕಾಗದವಿರಬೇಕು.''

''ಆದರೆ ಈ ಕಾಗದಾನ ಹೆಮಾಂಡ್ ಸತ್ತ ದಿನ ಆಕೆ ಬರೆದಿದ್ದು.''

''ನಿನಗೆ ಯಾರು ಹೇಳಿದರು?'' ಕಣ್ಣನ್ನು ಮಿಟುಕಿಸಿ ಜಾಯ್ಸ್ ಸೆಂಗನನ್ನು ಕೇಳಿದ.

''ಹೀಗೊಬ್ಬ ಗೆಳೆಯ.''

''ನಿನ್ನ ಬಳಿ ಪತ್ರವಿದೆಯೆ?''

''ಇಲ್ಲ, ಅದರ ನಕಲಿದೆ,'' ಎಂದು ಜೇಬಿನಿಂದ ಒಂದು ಕಾಗದವನ್ನು ತೆಗೆದಿಟ್ಟು, ಅದರಲ್ಲಿ, ''ರಾಬರ್ಟ್ ಮನೆಯಲ್ಲಿರುವುದಿಲ್ಲ. ಸಿಂಗಪುರಕ್ಕೆ ಹೋಗುತ್ತಾನೆ. ನಿನ್ನನ್ನು ನಾನು ನೋಡಲೇಬೇಕು. ರಾತ್ರಿ ಹನ್ನೊಂದಕ್ಕೆ ಬಾ. ನನಗೆ ಬಹಳ ಬೇಜಾರಾಗಿದೆ. ನೀನು ಬರದೇ ಇದ್ದರೆ ನನಗೆ ತುಂಬಾ ನಿರಾಶೆಯುಯಾಗುವುದು,'' ಎಂದ ಕೈ ಬರಹ ಒಬ್ಬ ಚೀನೀ ಮನುಷ್ಯ ಬರೆದ ಹಾಗಿತ್ತು

''ಈ ಕಾಗದವನ್ನು ಅವಳೇ ಬರೆದಿದ್ದಾಳೆ ಎನ್ನುವುದಕ್ಕೇನು ಪುರಾವೆ?''

''ನನ್ನ ಸ್ನೇಹಿತ ಹೇಳಿದ. ಅವನ ಮಾತಿನಲ್ಲಿ ನನಗೆ ನಂಬಿಕೆ ಇದೆ. ಬರೆದಿದ್ದುಂಟೋ ಇಲ್ಲವೋ ಎನ್ನುವುದನ್ನು ಲೆಸ್ಲಿಯನ್ನೇ ಕೇಳಬಹುದಲ್ಲಾ?''

''ಇಂತಹ ಕಾಗದವನ್ನು ಲೆಸ್ಲಿ ಅಂತಹ ಮರ್ಯಾದಸ್ಥ ಹೆಣ್ಣುಮಗಳೊಬ್ಬಳು ಬರೆದಿದ್ದಾಳೆ ಎಂದರೆ ನಂಬುವುದಕ್ಕಾಗುವುದಿಲ್ಲ.''

''ನಾನು ನಿಮ್ಮಲ್ಲಿ ಕೆಲಸ ಮಾಡುತ್ತಾ ಇದ್ದೇನೆ ಎಂದು ನನ್ನ ಸ್ನೇಹಿತನಿಗೆ ಗೊತ್ತು. ಪಬ್ಲಿಕ್ ಪ್ರಾಸಿಕ್ಯೂಟರ್‌ನ ಕೈ ಸೇರುವ ಮೊದಲು ಇಂತಹ ಒಂದು ಕಾಗದವಿದೆ ಎಂದು ನಿಮಗೆ ಗೊತ್ತಾಗಲಿ ಎಂದು ಅವನು ನನಗೆ ಹೇಳಿದ...''

''ಮೂಲ ಪ್ರತಿ ಯಾರ ಬಳಿ ಇದೆ?''

''ಹೆಮಾಂಡ್ ಒಬ್ಬ ಚೀನಿ ಸ್ತ್ರೀಯೊಡನೆ ಸಂಬಂಧ ಇಟ್ಟುಕೊಂಡಿದ್ದ ಎನ್ನುವುದು ನಿಮಗೆ ಗೊತ್ತಿರಬಹುದು. ಕಾಗದ ಅವಳ ಬಳಿ ಇದೆ,'' ಎಂದು ಹೇಳಿ ಸೆಂಗ್ ಹೊರಟು ಹೋದ.

ಲೆಸ್ಲಿ ನ್ಯಾಯಾಂಗ ಬಂಧನದಲ್ಲಿದ್ದಾಗಲೆ ಜಾಯ್ಸ್ ಅಲ್ಲಿಗೆ ಹೋಗಿ ನೋಡಿದಾಗ ಅವಳು ಸಂತೋಷವಾಗಿಯೇ ಇದ್ದಳು. ಜಾಯ್ಸ್ ಅವಳನ್ನು, ''ನೀನು ಹೆಮಾಂಡ್ ಸೊಂದಿಗೆ ಯಾವ ಪತ್ರವ್ಯವಹಾರವನ್ನೂ ಮಾಡಿಲ್ಲ ಅಲ್ಲವೇ?'' ಎಂದು ಕೇಳಿದ.

''ಇಲ್ಲ. ಹಿಂದೆ ಭೋಜನಕ್ಕೆ ಅಥವಾ ಟೆನ್ನೀಸ್ ಆಡಲು ಕರೆಯುತ್ತಿದ್ದುದುಂಟು. ಆದರೆ ಕೆಲವು ತಿಂಗಳಿಂದ ನಾನು ಅವನಿಗೆ ಪತ್ರ ಬರೆದಿಲ್ಲ.''

''ಹಿಂದೆ, ನಿನಗೂ ಅವನಿಗೆ ಸೌಹಾರ್ದ ನೆಂಟಸ್ತಿಕೆ ಇತ್ತು. ಇದ್ದಕ್ಕಿದ್ದಂತೆ ಆ ಸ್ನೇಹ ಹೋಗಲು ಏನು ಕಾರಣ?''

ಭುಜ ಕುಣಿಸುತ್ತಾ ಲೆಸ್ಲಿ, ''ಸ್ನೇಹ ಹೋಗಿದೆ ಎಂದೇನೂ ಇಲ್ಲ. ಹಿಂದೆ ಕಾಯಿಲೆ ಆದಾಗ ಅವನನ್ನು ಕರೆದು ನಾನು, ರಾಬರ್ಟ್ ಉಪಚರಿಸಿದ್ದು ನಿಜ. ಆದರೆ ಈಚೀಚೆಗೆ ನಾವು ಭೇಟಿ ಆಗುವುದೇ ಅಪರೂಪ. ಅವ ನನ್ನು ಆಹ್ವಾನಿಸುವವರು ಈಗ ತುಂಬ''

ಲೆಸ್ಲಿ ಅನುಮಾನಿಸುತ್ತಾ, "ಹೆಮಾಂಡ್ ಈಚೆಗೆ ಒಬ್ಬ ಚೀನಿ ಹೆಂಗಸಿನೊಡನೆ ಸಂಬಂಧ ಇಟ್ಟುಕೊಂಡಿದ್ದ. ದೇಶಿಯರ ಜೊತೆ ಸಂಬಂಧ ಇಟ್ಟುಕೊಂಡ ಅವನನ್ನು ರಾಬರ್ಟ್ ಇಷ್ಟಪಡುತ್ತಿರಲಿಲ್ಲ. ಅವಳನ್ನು ನಾನು ನೋಡಿದ್ದೆ," ಎನ್ನುವಾಗ ಅವಳ ಕಣ್ಣುಗಳಲ್ಲಿ ಕ್ಷಣ ಮಾತ್ರ ಕೆಂಪು ಕಾಣಿಸಿಕೊಂಡಿತು.

"ನಿನ್ನ ಕೈ ಬರಹದಲ್ಲಿ ಹೆಮಾಂಡ್‌ಗೆ ಬರೆದ ಕಾಗದವೊಂದು ಸಿಕ್ಕಿದೆ," ಎನ್ನುತ್ತಾ ಜಾಯ್ಸ್ ಲೆಸ್ಲಿಯನ್ನು ಸೂಕ್ಷ್ಮವಾಗಿ ನೋಡಿದ.

ಅವಳಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಶಾಂತವಾಗಿ, "ಹಿಂದೆ ಅವನು ಸಿಂಗಪುರಕ್ಕೆ ಹೋಗುತ್ತಾನೆ ಎಂದು ತಿಳಿದಾಗ ನನಗೆ ಬೇಕಾದುದನ್ನು ತರಿಸಿಕೊಳ್ಳಲು ಅವಳಿಗೆ ಚೀಟಿ ಬರೆದು ಕಳುಹಿಸುತ್ತಿದ್ದೆ."

"ಆದರೆ, ಈ ಕಾಗದದಲ್ಲಿ ರಾಬರ್ಟ್ ಸಿಂಗಪುರಕ್ಕೆ ಹೋಗುತ್ತಾನೆ. ನೀನು ಬಾ ಅಂತ ಇದೆಯಲ್ಲಾ."

"ಇಲ್ಲ, ಅಂತಹ ಕಾಗದವನ್ನು ನಾನು ಬರದೇ ಇಲ್ಲ."

"ಹಾಗಾದರೆ ನೀನೇ ನೋಡು," ಎಂದು ಜಾಯ್ಸ್ ತನ್ನ ಜೇಬಿನಿಂದ ಕಾಗದ ಒಂದನ್ನು ತೆಗೆದು ಅವಳಿಗೆ ಕೊಟ್ಟ. ಅದನ್ನು ನೋಡಿ ಅವಳು ನಗುತ್ತಾ,

"ಇದು, ನನ್ನ ಕೈ ಬರಹ ಅಲ್ಲ," ಅಂದಳು.

"ಅದು ನನಗೆ ಹೊತ್ತು. ಆದರೆ ಇದರ ಮೂಲ ಪ್ರತಿ?"

ಅವಳ ಮುಖ ಬಿಳಚಿಕೊಂಡಿತು. ಕ್ಷಣ ಮಾತ್ರದಲ್ಲಿ ಮೊದಲಿನಂತಾಗಿ, "ನಾನು ಇಂತಹ ಕಾಗದ ಬರದೇ ಇಲ್ಲ. ಪ್ರಮಾಣವಾಗಿ ಹೇಳುತ್ತೇನೆ," ಅಂದಳು. "ಯೋಚಿಸಿ ಮಾತನಾಡು. ಮೂಲ ಪ್ರತಿ ನಿನ್ನ ಕೈ ಬರಹದಲ್ಲಿದ್ದರೆ, ಈಗ 'ನನ್ನದಲ್ಲ' ಎಂದು ಹೇಳಿ ಪ್ರಯೋಜನವಿಲ್ಲ."

"ಅದು ಫೋರ್ಜರಿ."

"ಫೋರ್ಜರಿ ಅಂತ ಸಿದ್ಧಪಡಿಸುವುದು ಕಷ್ಟ. ಆದರೆ ಕಾಗದ ಅಸಲಿ ಅಂತಹ ಸುಲಭವಾಗಿ ಪ್ರೂವ್ ಮಾಡಬಹುದು."

"ನೋಡಿ, ಕಾಗದದಲ್ಲಿ ತಾರೀಖು ಇಲ್ಲ. ಹಿಂದೆ ಯಾವಾಗಲೋ ಬರೆದ ಕಾಗದ ಇರಬೇಕು. ಟೈಂ ಕೊಟ್ಟರೆ ಯೋಚಿಸಿ ಯಾವಾಗ ಬರೆದಿದ್ದು ಹೇಳುತ್ತೇನೆ."

"ಕಾಗದದಲ್ಲಿ ತಾರೀಖು ನಮೂದಿಸಿಲ್ಲ ಅನ್ನುವುದು ನನಗೂ ಗೊತ್ತು. ಪ್ರಾಸಿಕ್ಯೂಷನ್‌ಗೆ ಈ ಕಾಗದ ಸಿಕ್ಕಿದರೆ ಅವರು ನಿನ್ನ ಮನೆ ಆಳುಗಳನ್ನು ಕರೆದು, ಕೋರ್ಟಿನಲ್ಲಿ ಪ್ರಶ್ನಿಸುತ್ತಾರೆ. ಹೆಮಾಂಡ್‌ಗೆ ನೀನು ಅವನು ಸತ್ತ ದಿನ ಪತ್ರ ಕಳುಹಿಸಿದ್ದೆ ಅನ್ನುವುದು ಗೊತ್ತಾಗುತ್ತದೆ."

"ಪ್ರಮಾಣವಾಗಿ ಹೇಳುತ್ತೇನೆ- ನಾನಲ್ಲ ಕಾಗದ ಬರೆದಿದ್ದು."

"ಪ್ರಾಸಿಕ್ಯೂಷನ್ ಕೈಗೆ ಈ ಕಾಗದ ಸಿಕ್ಕಿ, ಅವರು ಈ ಬಗ್ಗೆ ಪ್ರಶ್ನಿಸಿದರೆ ಉತ್ತರ ಹೇಳಲು ನೀನು ತಯಾರಾಗಿದ್ದೀಯಾ?"

ಅವಳು ಸ್ವಲ್ಪ ಹೊತ್ತು ಸುಮ್ಮನಿದ್ದು ಅನಂತರ ಕೇಳಿದಳು-

"ಕಾಗದ ಓದಿದವರಿಗೆ ಏನು ಅನ್ನಿಸುತ್ತೆ?"

"ನೀನು ಹೇಳುತ್ತಿರುವುದು ಸುಳ್ಳು. ನಿನಗೂ ಹೆಮಾಂಡ್‌ಗೂ ಮೂರು ತಿಂಗಳಿನಿಂದ ಪತ್ರ ವ್ಯವಹಾರವಿರಲಿಲ್ಲ ಅನ್ನುವ ವಿಷಯ ಸುಳ್ಳು ಅನ್ನಿಸುತ್ತೆ."

"ನನಗೆ ಈ ಬಗ್ಗೆ ಮರೆತು ಹೋಗಿತ್ತು. ಒಂದು ಸಾರಿ ಪತ್ರ ವ್ಯವಹಾರ ಇರಲಿಲ್ಲ ಅಂತ ಹೇಳಿದ್ದನ್ನು ನಾನು ಸಾಧಿಸಬೇಕಾಗಿದೆ. ಅದಕ್ಕೇ ಹೇಳಿದ್ದು."

"ಜೆಫರಿಗೆ ಅಂದು ಏಕೆ ಕಾಗದ ಬರೆದ

ದ್ದು?''

''ಅವನಿಗೆ ಹೇಳಿ ಸಿಂಗಪುರದಿಂದ ಒಂದು ಬಂದೂಕು ತರಿಸೋಣ ಅಂತಿದ್ದೆ. ನನ್ನ ಗಂಡನ ಹುಟ್ಟಿದ ಹಬ್ಬ ಮುಂದಿನ ತಿಂಗಳು. ಒಂದು ಉಡುಗೊರೆ ಬೇಕಾಗಿತ್ತು.''

''ಈ ಪತ್ರ ಮೊಕದ್ದಮೆಯ ರೂಪವನ್ನೇ ಬದಲಾಯಿಸಿದೆ. ಹೆಮಾಂಡ್ ನಿನ್ನ ಆಹ್ವಾನವನ್ನು ಅಂಗೀಕರಿಸಿ ಬಂದ ಅನ್ನುವುದನ್ನು ನೀನು ಅಲ್ಲಗಳೆಯುವುದಿಲ್ಲ ತಾನೆ? ಕಾಗದದ ಬಗ್ಗೆ ಇನ್ನೇನನ್ನೂ ನಾನು ತಿಳಿದುಕೊಳ್ಳಲು ಇಷ್ಟಪಡುವುದಿಲ್ಲ. ಏನೇ ಇರಲಿ, ಜೆಫರಿ ಹೆಮಾಂಡ್ ನಿನ್ನ ಮಾನಾಪಹರಣಕ್ಕೆ ಪ್ರಯತ್ನಿಸಿದ, ಮಾನ ರಕ್ಷಣೆಗೆ ಗುಂಡು ಹೊಡೆದಿದ್ದು ಎಂದು ವಾದಿಸಿ, ಅವನು ಕಾಮುಕ ಎಂದು ಹೇಳಿ ನಿನ್ನನ್ನು ಕೊಲೆಯ ಆರೋಪಣೆಯಿಂದ ಬಿಡಿಸಬಲ್ಲೆ, ಆದರೆ ನೀನು ಹೆಮಾಂಡ್‌ಗೆ ಬರೆದ ಕಾಗದ ಈಗ ಚೀನಿ ಹೆಂಗಸಿನ ಬಳಿ ಇದೆ. ಅದು ಪ್ರಾಸಿಕ್ಯೂಷನ್ನಿನ ಕೈ ಸೇರಬಾರದು. ಆ ಚೀನಿ ಹೆಂಗಸು ಹಣ ಕೊಟ್ಟರೆ ಅದನ್ನು ನಮಗೆ ಕೊಡಬಹುದು. ಆದರೆ ನಿನ್ನ ಗಂಡನ ಆರ್ಥಿಕ ಸ್ಥಿತಿ ನನಗೆ ಗೊತ್ತಿಲ್ಲ.''

''ರಾಬರ್ಟ್ ನನ್ನನ್ನು ತುಂಬಾ ಪ್ರೀತಿಸುತ್ತಾನೆ. ನನ್ನ ಬಿಡುಗಡೆಗೋಸ್ಕರ ಎಷ್ಟು ಹಣ ಬೇಕಾದರೂ ಖರ್ಚು ಮಾಡುತ್ತಾನೆ.''

★ ★ ★

ಅಂದು ಸಂಜೆ ಜಾಯ್ಸ್, ರಾಬರ್ಟ್ ಕ್ರಾಸ್‌ಬಿಯನ್ನು ಕ್ಲಬ್‌ನಲ್ಲಿ ಸಂಧಿಸಿ, ''ನಿನ್ನ ಪತ್ನಿ ಹೆಮಾಂಡ್‌ಗೆ ಆ ದಿನ ಬರೆದ ಒಂದು ಪತ್ರ ಸಿಕ್ಕಿದೆ. ಅವಳಿಗೆ ನಿನ್ನ ಹುಟ್ಟುಹಬ್ಬಕ್ಕೆ ಒಂದು ಬಂದೂಕನ್ನು ಉಡುಗೊರೆಯಾಗಿ ಕೊಡೋಣ ಅನ್ನಿಸಿತಂತೆ. ಅದನ್ನು ತರುವ ಬಗ್ಗೆ ಮಾತನಾಡಲು ಹೆಮಾಂಡ್‌ಗೆ ಕಾಗದ ಬರೆದಿದ್ದು ನಿಜ ಎಂದು ಈಗ ಹೇಳುತ್ತಾ ಇದ್ದಾಳೆ. ನನಗೂ, ಅವನಿಗೂ ಯಾವ ವಿಧವಾದ ವ್ಯವಹಾರವೂ ಇರಲಿಲ್ಲ ಎಂದು ಮೊದಲು ಹೇಳಿದ್ದಳು. ಪ್ರಾಸಿಕ್ಯೂಷನ್ ಈಗ ಈ ಕಾಗದ ಹಾಜರುಪಡಿಸಿದರೆ ಕೇಸಿನ ಗತಿಯೇ ಬದಲಾಗುತ್ತೆ..... ಕಾಗದ ಹೆಮಾಂಡ್‌ನ ಪ್ರೇಯಸಿ ಒಬ್ಬ ಚೀನಿ ಹೆಂಗಸಿನ ಬಳಿ ಇದೆ. ಅದನ್ನು ಕೊಡಲು ಹತ್ತು ಸಾವಿರ ಡಾಲರ್ ಕೇಳುತ್ತಿದ್ದಾಳೆ.'' ಎಂದು ಹೇಳಿದ.

''ಹಾಗಾದರೆ ಈಗ ಏನು ಮಾಡಬೇಕು ಅಂತೀರಿ?''

★ ★ ★

ಮಾರನೇ ದಿನ ರಾಬರ್ಟ್ ಸೆಂಗ್, ಹಾಗೂ ಜಾಯ್ಸ್ ಮೂವರೂ ಆ ಚೀನಿ ಹೆಂಗಸಿನ ಬಳಿ ಹೋಗಿ ಮಾತನಾಡಿದರು. ರಾಬರ್ಟ್ ಹಣ ಕೊಟ್ಟು, ಲೆಸ್ಲಿ ಬರೆದ ಕಾಗದ ಅವಳಿಂದ ಪಡೆದ. ಮೂವರೂ ಕಾಗದವನ್ನು ಪರೀಕ್ಷಿಸಿ ಅದು ಮೂಲ ಪ್ರತಿಯೆಂದು ದೃಢಪಡಿಸಿಕೊಂಡರು. ರಾಬರ್ಟ್ ಕಾಗದವನ್ನು ಜೋಪಾನವಾಗಿ ತನ್ನ ಬಳಿಯಲ್ಲೇ ಇಟ್ಟುಕೊಂಡ.

★ ★ ★

ಕೋರ್ಟ್‌ನಲ್ಲಿ ಜನ ಕಿಕ್ಕಿರಿದು ಸೇರಿದ್ದರು. ಅಂದು ಲೆಸ್ಲಿ ಕೇಸಿನ ತೀರ್ಪು.

''ಹೆಮಾಂಡ್ ಒಬ್ಬ ಸ್ತ್ರೀ ಲೋಲ. ತನ್ನ ಕಕ್ಷಿದಾರಳ ಮಾನಾಪಹರಣ ಮಾಡಲೆಂದೇ ಅಂದು ರಾತ್ರಿ ಬಂದಿದ್ದ. ಮಾನ ರಕ್ಷಣೆಗೆ ಅವಳು ಗುಂಡು ಹಾರಿಸಿದಳು. ಅವನನ್ನು ಕೊಲ್ಲುವ ಇಚ್ಛೆ ಅವಳಿಗೇನೂ ಇರಲಿಲ್ಲ,'' ಎಂದು ಜಾಯ್ಸ್ ವಾದಿಸಿದ್ದ. ಪ್ರಾಸಿಕ್ಯೂಟರ್ ಕೂಡ ಲೆಸ್ಲಿ ಕಡೆಗೇ ಇದ್ದ ಹಾಗಿತ್ತು.

ತೀರ್ಪು ಎಲ್ಲರೂ ಅಂದುಕೊಂಡಂತೆ ಲೆಸ್ಲಿಯ ಪರವಾಗಿಯೆ ಆಯಿತು. ನ್ಯಾಯಾಲಯದಲ್ಲಿದ್ದವರಿಗೆಲ್ಲಾ ಅತೀವ ಸಂತೋಷ. ಸೌಮ್ಯಮೂರ್ತಿ ಲೆಸ್ಲಿ ಕಷ್ಟದಿಯಿಂದ ಬಿಡುಗಡೆಯಾದೊಡನೆ ಜಾಯ್ಸ್ ಹೆಂಡತಿ ಅವಳನ್ನು ತಬ್ಬಿಕೊಂಡು, ಆನಂದಬಾಷ್ಪ ಕರೆದು, ತನ್ನ ಮನೆಗೆ ಅವಳನ್ನು ರಾಬರ್ಟ್‌ನನ್ನು

ಊಟಕ್ಕೆ ಆಹ್ವಾನಿಸಿದಳು. ಕ್ರಾಸ್‌ಬಿಗೆ, "ನಿಮ್ಮ ಪತ್ನಿಯ ಮನಸ್ಸಿಗೆ ಆಗಿರುವ ಆಘಾತವನ್ನು ಕಡಿಮೆ ಮಾಡಲು ನೀವಿಬ್ಬರೂ ಇಂಗ್ಲಂಡಿಗೆ ಅಥವಾ ಆಸ್ಟ್ರೇಲಿಯಾಕ್ಕೆ ಹೋಗಿ ನಾಲ್ಕಾರು ತಿಂಗಳು ಇದ್ದು ಬನ್ನಿ," ಎಂದು ಸೂಚಿಸಿದಳು.

ಜಾಯ್ಸ್ ಮನೆಯಲ್ಲಿ, ಲೆಸ್ಲಿ, ರಾಬರ್ಟ್, ಸೆಂಗ್ ಎಲ್ಲರೂ ಸೇರಿದ್ದರು. ಆತಂಕ ಹೋಗಿ ಎಲ್ಲರ ಮುಖದಲ್ಲಿ ಹರ್ಷ ಕಾಣಿಸಿಕೊಂಡಿತು.

"ನಾನು ಊಟಕ್ಕೆ ಉಳಿಯಲಾರೆ. ಪ್ಲಾಂಟೇಶನ್ನಿನಲ್ಲಿ ಅರ್ಜೆಂಟ್ ಕೆಲಸವಿದೆ. ದಯವಿಟ್ಟು ಬಲವಂತ ಮಾಡಬೇಡಿ.... ಲೆಸ್ಲಿ ಡಾರ್ಲಿಂಗ್, ನನ್ನನ್ನು ಬಿಟ್ಟು ಕೊಡಲು ಗೇಟಿನವರೆಗೂ ಬರುವುದಿಲ್ಲವೇ?" ಅಂದ ಕ್ರಾಸ್‌ಬಿ.

"ಊಟ ಮುಗಿಸಿ ಹೋಗು," ಎಂದು ಎಲ್ಲರೂ ಹೇಳುತ್ತಿದ್ದರೂ, ಜಾಯ್ಸ್,

"ಏಕೆ ಬಲವಂತ? ಏನೋ ಮಹತ್ತರವಾದ ಕೆಲಸವಿರಬೇಕು, ಕ್ರಾಸ್‌ಬಿ ಹೋಗಲಿ," ಅಂದ.

ಪೋರ್ಟಿಕೋ ಬಳಿ ನಿಲ್ಲಿಸಿದ್ದ ಮೋಟಾರ್ ಕಾರನ್ನು ಸ್ಟಾರ್ಟ್ ಮಾಡುತ್ತಿದ್ದ ಗಂಡನ ಬಳಿಗೆ ಲೆಸ್ಲಿ ಬಂದಾಗ ಜೇಬಿನಿಂದ 'ಪತ್ರ' ತೆಗೆದು ಅವಳ ಕೈಯಲ್ಲಿಟ್ಟ ಕ್ರಾಸ್‌ಬಿ. ಲೆಸ್ಲಿಗೆ ಆ ಕಾಗದ ಯಾವುದು ಎಂದು ಕೂಡಲೇ ಗೊತ್ತಾದರೂ ಅದನ್ನು ಬಿಚ್ಚಿ ನೋಡಿದಳು. ಅವಳ ಮುಖ ಬಿಳಚಿಕೊಂಡು ಮೂರ್ಛೆ ಬೀಳುವ ಹಾಗಾದಳು. ಜಾಯ್ಸ್ ಕೂಡಲೇ ಓಡಿ ಹೋಗಿ ಅವಳನ್ನು ಹಿಡಿದುಕೊಂಡ. ಅವಳ ಕೈಯಲ್ಲಿದ್ದ ಕಾಗದವನ್ನು ತೆಗೆದುಕೊಂಡು ಕಡ್ಡಿಗೀರಿ ಹೊತ್ತಿಸಿದ. ಅದು ಬೂದಿಯಾಗಿ ಕೆಳಕ್ಕೆ ಬಿತ್ತು. ಬೂಟು ಕಾಲಿನಿಂದ ಅದನ್ನು ತುಳಿದ.

ಲೆಸ್ಲಿ ಕ್ಷಣಾರ್ಧದಲ್ಲಿ ಚೇತರಿಸಿಕೊಂಡು,

"ಹೌದು, ಆ ಕಾಗದವನ್ನು ನಾನೇ ಬರೆದಿದ್ದು. ನಾನು ಮತ್ತು ಹಮಾಂಡ್ ಪ್ರೇಮಿಗಳು. ನಮ್ಮ ಪ್ರೇಮದಾಟ ಆರೇಳು ವರ್ಷದಿಂದ ನಡೆದಿತ್ತು. ಯಾರಿಗೂ ಸುಳಿವು ಸಿಗದಂತೆ ಹಮಾಂಡ್ ಮನೆಗೆ ರಾತ್ರಿ ವೇಳೆ ರಾಬರ್ಟ್ ಇಲ್ಲದಿದ್ದಾಗ ಬರುತ್ತಿದ್ದ. ಕೆಲವು ವೇಳೆ ನಾನೇ ಅವನನ್ನು ಪ್ಲಾಂಟೇಶನ್ ಗೆಸ್ಟ್ ಹೌಸಿನಲ್ಲಿ ಭೇಟಿಯಾಗುತ್ತಿದ್ದೆ... ಈಗ ಸ್ವಲ್ಪ ದಿನದಿಂದ ಅವನಿಗೆ ನನ್ನ ಮೇಲೆ ಪ್ರೀತಿ ಕಡಿಮೆಯಾಯಿತು. ಅವನು ಒಬ್ಬ ಚೀನಿ ಹೆಂಗಸನ್ನು ಇಟ್ಟುಕೊಂಡಿದ್ದಾನೆ ಎಂದು ತಿಳಿಯಿತು. ಯಾರೋ ನನಗೆ ಅವಳನ್ನು ಮಾರ್ಕೆಟ್ ಬಳಿ ತೋರಿಸಿದರು. ಅವಳೇನೂ ನನಗಿಂತ ಚೆನ್ನಾಗಿಲ್ಲ. ನನಗಿಂತ ಎರಡು ಮೂರು ವರ್ಷ ದೊಡ್ಡವಳೇ ಇರಬೇಕು. ಹಾಗಿರಬೇಕಾದರೆ ಅವಳನ್ನೇಕೆ ಹಮಾಂಡ್ ಪ್ರೀತಿಸುತ್ತಾ ಇದ್ದಾನೆ ಅಂತ ನನಗೆ ಗೊತ್ತಾಗಲಿಲ್ಲ. ವಿಷಯ ತಿಳಿದುಕೊಳ್ಳಲು, ರಾಬರ್ಟ್ ಇಲ್ಲದ ಆ ರಾತ್ರಿ 'ಬಾ' ಎಂದು ಕಾಗದ ಬರೆದೆ. ನನ್ನ ಹಿಂದಿನ ಕಾಗದವೆಲ್ಲಾ ಅವನು ಹರಿದುಹಾಕಿ ಇದನ್ನೇಕೆ ಇಟ್ಟುಕೊಂಡನೋ? ರಾತ್ರಿ ಮನೆಯಲ್ಲಿ ಅವನಿಗೂ ನನಗೂ ಜೋರಾಗಿ ಮಾತುಕತೆ ನಡೆಯಿತು. 'ನಿಜ ಹೇಳಬೇಕೆಂದರೆ ನಿನ್ನ ಮೇಲೆ ನನಗೆ ಪ್ರೀತಿ ಇಲ್ಲ. ಆ ಚೀನಿ ಹೆಂಗಸು ನನಗೆ ಪಂಚಪ್ರಾಣ' ಅಂದ ಹಮಾಂಡ್. ನನಗೆ ಕೋಪ ನೆತ್ತಿಗೇರಿತು. ಅವನನ್ನು ಗುಂಡಿಟ್ಟು ಕೊಂದೆ. ಕೋಪ ಕಡಿಮೆ ಆಗುವವರೆಗೂ ಗುಂಡು ಹಾರಿಸುತ್ತಲೇ ಇದ್ದೆ."

"ಊಟ ಸಿದ್ಧವಾಗಿದೆ," ಎಂದು ಹೇಳುತ್ತಾ ಶ್ರೀಮತಿ ಜಾಯ್ಸ್ ಒಳಗಿನಿಂದ ಬಂದು ಜಾಯ್ಸ್ ಮತ್ತು ಲೆಸ್ಲಿಯನ್ನು ಊಟದ ಕೋಣೆಗೆ ಕರೆದುಕೊಂಡು ಹೋದಳು.

●

ಪದಾರ್ಥ ಚಿಂತಾಮಣಿ

135 (ಅ)

ದೇವಾಲಯ ಪ್ರಕರಣ

ಕ್ರೈಸ್ತರ ದೇವಾಲಯ ಅಥವಾ ಪ್ರಾರ್ಥನಾ ಮಂದಿರಕ್ಕೆ ಕನ್ನಡದಲ್ಲಿ ಕೆಲವೆಡೆ 'ಚರ್ಚು' ಎಂಬ, ಕೆಲವೆಡೆ 'ಇಗರ್ಜಿ'ಯೆಂಬ ಹೆಸರು ಬಳಕೆಯಲ್ಲಿದೆ. ಚರ್ಚು ಎಂಬುದು ನೇರವಾಗಿ ಇಂಗ್ಲೀಷಿನಿಂದ ಬಂದದ್ದು. ಇಗರ್ಜಿ ಎಂಬುದು ಪೋರ್ತುಗೀಸಿನಿಂದ. ಇವೆರಡರ ಜಾಡು ಹಿಡಿಯಹೋದರೆ ಕೊನೆಗೆ ಅವು ಒಂದೇ ಉಗಮದತ್ತ ನಿರ್ದೇಶಿಸುತ್ತವೆ. ಅದು ಗ್ರೀಕ್ ಪದ-ಕ್ರೈಸ್ತ ಧಾರ್ಮಿಕ ಸಾಹಿತ್ಯ ಮೊದಲು ನಿರ್ಮಿತವಾದ ಭಾಷೆ ಗ್ರೀಕೇ ಆದ್ದರಿಂದ. ಗ್ರೀಕಿನಲ್ಲಿ Kuriakon ಎಂದರೆ ದೇವರ ಮನೆ - ದೇವಗೃಹ (Kurios= ದೇವರು) ಕ-ಗ-ಜ ಧ್ವನಿಗಳು ಒಂದಕ್ಕೊಂದು ಹತ್ತಿರದವಾದ್ದರಿಂದ ಕ್ರೈಸ್ತ ಧರ್ಮ ಯುರೋಪಿನಲ್ಲಿ ಹಬ್ಬುತ್ತ ಬಂದಂತೆ ಈ ದೇವಾಲಯಾರ್ಥಕ ಶಬ್ದ ಆಯಾ ಭಾಷಾಧರ್ಮದಂತೆ ಉಚ್ಚಾರ ವ್ಯತ್ಯಾಸ ಹೊಂದುತ್ತ ಬಂತು. ಇಂಗ್ಲಂಡಿನಲ್ಲಿಯೇ ಉತ್ತರಭಾಗ ಮತ್ತು ಸ್ಕಾಟ್‌ಲಂಡಿನಲ್ಲಿ ಅದು 'ಕರ್ಕ' ಎನಿಸಿತು; ಇಂಗ್ಲೀಷಿನ ಪೂರ್ವಜ ಹಳೇ ಸ್ಯಾಕ್ಸನ್ ಭಾಷೆಯಲ್ಲಿ 'ಕರ್ಕ' ಆಗಿತ್ತು. ಹಳೇ ಜರ್ಮನ್ನಿನಲ್ಲಿ 'ಚಿರಿಃಕ' ಎಂದಾಯಿತು. ಅದರ ಕಕಾರ ದಕ್ಷಿಣದಲ್ಲಿ 'ಗ'ಕಾರಕ್ಕೆ ತಿರುಗಿ ಪೋರ್ತುಗೀಸಿನಲ್ಲಿ 'ಇಗ್ರೇಜ' (i-greja) ಆಗಿ ನಮ್ಮ ಕರಾವಳಿಯಲ್ಲಿ 'ರ'ಕಾರ ಸ್ಥಾನ ಪಲ್ಲಟ ಹೊಂದಿ 'ಇಗರ್ಜಿ' ಆಯಿತು. ಕೆಲವೆಡೆ ಅದು ಆಧಾರಕ್ಕೆ ಬಿಂದುವನ್ನು ಸೇರಿಸಿಕೊಂಡು 'ಇಂಗ್ರೆಜಿ' (ತುಳು) ಮತ್ತು ಬರೇ 'ಇಗ್ರೇಜಿ' (ತುಳು) ಎಂಬ ರೂಪಗಳಲ್ಲಿಯೂ ಪ್ರಚಲಿತವಾಯಿತು. ಬಂಗಾಲಿಯಲ್ಲಿ, ಹಿಂದಿಯಲ್ಲಿ 'ಗಿರ್ಜಾ' ರೂಪ ಇದೆ. ಇಂಗ್ಲೀಷ್ ಪ್ರಸಾರದಿಂದಾಗಿ 'ಚರ್ಚ್' ರೂಪ ಸಾರ್ವತ್ರಿಕವಾಗಿದೆ.

★

ಇತರ ಧರ್ಮಗಳ ದೇವಾಲಯಗಳ ವಿಚಾರ ಸ್ವಲ್ಪ ನೋಡುವಾ. ಮುಸಲ್ಮಾನರ 'ಮಶೀದಿ' ಅಥವಾ 'ಮಸೀತಿ' ಅಥವಾ 'ಮಸೂತಿ' ಇತ್ಯಾದಿ ಇವೆ. ಇವೆಲ್ಲ 'ಮಸ್‌ಜಿದ್' ಎಂಬ ಅರಬ್ಬಿ ಶಬ್ದದಿಂದ ನಮ್ಮ ಬಾಯಿಗೆ ಸರಿಯಾಗಿ ಅಪಭ್ರಂಶವಾದ ಪದಗಳು. ಮೂಲ ಅರಬ್ಬಿ ಶಬ್ದಕ್ಕೆ ಅಡ್ಡಬೀಳುವ ಅರ್ಥಾತ್ ದೀರ್ಘ ದಂಡ ಪ್ರಣಾಮ ಮಾಡುವ ಸ್ಥಳ ಎಂದರ್ಥ (ಡಾ.ಶಂಕರ ಕೆದ್ಲಾಯರ Foreign Loan Words in Kannada'). ಮುಸಲ್ಮಾನರು ಯಾವ ಮೂರ್ತಿ ಅಥವಾ ಸಂಕೇತವನ್ನೂ ಆರಾಧಿಸುವುದಿಲ್ಲವಾದ್ದರಿಂದ ಅವರ ಪ್ರಾರ್ಥನಾ ಮಂದಿರಗಳು ಕೇವಲ ನಮಸ್ಕಾರ ಗೃಹಗಳಾಗಿವೆಯೆಂಬುದು ಸ್ವಾಭಾವಿಕ.

ಇತಿಹಾಸಜ್ಞರ ಪ್ರಕಾರ ಹಿಂದೂಗಳಲ್ಲಿ ಮೂರ್ತಿಪೂಜೆ ತುಸು ಈಚೆಗಿನ ಸಂಪ್ರದಾಯವಾಗಿದೆ. ಹೀಗೆ ದೇವಾಲಯಯ, ದೇವಸ್ಥಾನ, (ದೇವ) ಮಂದಿರ ಮೊದಲಾದವುಗಳು ನೇರವಾದ ಅರ್ಥವನ್ನೇ ಕೊಡುತ್ತವೆ. ಇದಕ್ಕಿಂತ ಪ್ರಾಚೀನವಾದದ್ದು 'ಆಯತನ'. ಇದು ಮೂಲತಃ 'ಬ್ರಾಹ್ಮಣ' ಉಪನಿಷತ್ತುಗಳಲ್ಲಿ ಮನೆ, ವಿಶ್ರಾಂತಿ ಸ್ಥಳ, ನಿವೇಶನ ಇತ್ಯಾದಿ ಅರ್ಥಗಳಲ್ಲಿ ಪ್ರಯೋಗವಾಗಿದೆ. ಆದರೆ ಅನಂತರದ

ಕಾತ್ಯಾಯನ, ಆಶ್ವಲಾಯನ ಸೂತ್ರಗಳ ಕಾಲದಿಂದ ಇದಕ್ಕೆ ದೇವ ಮಂದಿರವೆಂಬ ಅರ್ಥ ಬಂತು. 'ಆ-ಯಜನ' ಎಂಬ ಶಬ್ದದಿಂದ ನಿಷ್ಪತ್ತಿ ಹೇಳಲಾದ ಈ ಶಬ್ದಕ್ಕೆ ಯಜ್ಞವೇದಿ ಎಂಬರ್ಥವೂ ಆಮೇಲೆ ದೇವತಾರಾಧನೆಯ ಸ್ಥಳವೆಂಬರ್ಥವೂ ಬರಲಿಕ್ಕೆ ಹಳೇ ಪಾರಸೀಕ ಭಾಷೆಯ ಪ್ರಭಾವ ಕಾರಣವಾಗಿರಬೇಕೆಂದು ಸುನೀತಿ ಕುಮಾರ ಚಟರ್ಜಿ ಹೇಳುತ್ತಾರೆ. ಯಾಕೆಂದರೆ ಹಳೇ ಪಾರಸೀಕದಲ್ಲಿ ಆಯದನ ಎಂದರೆ ಪೂಜಾಗೃಹ. ಅಲ್ಲಿ ಯದನ ಎಂದರೆ ಆರಾಧನೆ (ಯದ್=ಪೂಜಿಸು).

ಯಹೂದ್ಯರ ಪೂಜಾಸ್ಥಳಕ್ಕೆ 'ಸಿನಾಗೋಗ್' ಎಂದು ಹೆಸರು. ಇದು ಗ್ರೀಕ್ ಮೂಲದ ಪದ. (Synagogue) ಅದರರ್ಥ ಒಟ್ಟು (Syn) ಕೂಡುವ (ago=ತಾ) ಸ್ಥಳ. ಧಾರ್ಮಿಕ ಆಚರಣೆಗಳಿಗಾಗಿ, ಧಾರ್ಮಿಕ ಸಭೆಗಳಿಗಾಗಿ ಸೇರುವ ಸ್ಥಳವೇ Synagogue. ಯಹೂದ್ಯರೂ ಮೂರ್ತಿಪೂಜಾವಿರೋಧಿಗಳು. ಆದ್ದರಿಂದ ಅವರೂ ಸಾಮೂಹಿಕ ಪ್ರಾರ್ಥನಾ ವಿಧಿಗಳಿಗಷ್ಟೇ ತಮ್ಮೀ ಪವಿತ್ರ ಸ್ಥಳವನ್ನು ಬಳಸುತ್ತಾರೆಂದು ತಿಳಿಯಬಹುದು.

ನಮ್ಮದೇ ದ್ರಾವಿಡದ 'ಕೋಯಿಲ್' 'ಕೋವಿಲ್' (ತಮಿಳು, ಮಲಯಾಳಿ, ತೆಲುಗು, ಕನ್ನಡ) ಆದರೂ ಅಷ್ಟೆ 'ಕೋ' ಅಂದರೆ ದೇವರೂ ಹೌದು, ರಾಜನೂ ಹೌದು. 'ಕೋ'ವಿನ 'ಇಲ್' ಎಂದರೆ ಮನೆ ದೇವಾಲಯ. ಇದಕ್ಕೆ ಸೋಜಿಗಪಡಬೇಕಿಲ್ಲ. ಕರ್ಕ ಅಥವಾ ಚರ್ಚಿನ ಮೂಲವಾದ ಗ್ರೀಕ್ ಭಾಷೆಯಲ್ಲಿ ಕೂಡ Kurios ಎಂದರೆ ಪ್ರಭು ಅಥವಾ ಒಡೆಯ. ದೇವರೂ ಒಡೆಯ. ಒಡೆಯರ ಒಡೆಯ ಅಷ್ಟೆ. ಸಂಸ್ಕೃತದಲ್ಲಿ ಕೂಡ 'ದೇವ' ಎಂಬುದು ಅಧಿಲೋಕದ (ಹೊಳೆಯುವ)ವನೆಂಬುದು ಮೂಲಾರ್ಥವಾದರೂ ಅನಂತರದ ಕಾಲದಲ್ಲಿ ರಾಜರನ್ನು 'ದೇವ' ಎಂದು ಸಂಬೋಧಿಸುವುದಾಯಿತು. ಯಾವುದೋ ಕಾರಣದಿಂದ ಕನ್ನಡದಲ್ಲಿ ಇಂದು ಕೋಯಿಲ್ ಪದ ಲುಪ್ತವಾಗಿ ಹೋಗಿರುವುದು ದುರ್ದೈವ.

ಜೈನರ ದೇವಸ್ಥಾನಕ್ಕೆ 'ಬಸದಿ' ಎನ್ನುವುದು ರೂಢಿ. ಮೇಲೆಯೆ ತೋರುವಂತೆ ಅದು 'ವಸತೀ' ಎಂಬ ಸಂಸ್ಕೃತ ಪದದ ತದ್ಭವ. ಇರುವ ತಾಣವೇ ಬಸದಿ. ಜೈನ ಮುನಿಗಳಿರುವ ಸ್ಥಾನ ಅಥವಾ ಮಠಕ್ಕೂ (ಸವಣ್ಮನೆ) ಇದೇ ಹೆಸರಿತ್ತು. ಬಹುಶಃ ಅದೇ ಮೂಲಾರ್ಥ. ಜೈನ ಧರ್ಮದಲ್ಲಿ ವಿಗ್ರಹಾರಾಧನೆ ಮತ್ತು ವಿಗ್ರಹಗಳಿಗಾಗಿ ಆಲಯಗಳ ರಚನೆ ಆರಂಭವಾದ ಮೇಲೆ ಪ್ರಧಾನವಾಗಿ ಅದೇ 'ಬಸದಿ'ಯಾಗಿರಬೇಕು. ಒಂದು ವಿಶೇಷವೆಂದರೆ ಜೈನ ಧರ್ಮದ ಉದ್ಭವ ಸ್ಥಾನವಾದ ಉತ್ತರ ಭಾರತದ ಹಿಂದೀ ಭಾಷೆಯಲ್ಲಿ 'ಬಸ್ತೀ' (=ವಸತಿ) ಎಂದರೆ ಬರೇ ಜನರು ಗುಂಪಾಗಿ ವಾಸಿಸುವ ಸ್ಥಳ - ನಾವು 'ಕೇರಿ' ಎಂದು ಕನ್ನಡದಲ್ಲಿ ಹೇಳುವಂಥಾದ್ದು ಹೊರತು ಶ್ರಮಣರಾಗಲಿ ಸಂನ್ಯಾಸಿಗಳಾಗಲಿ ವಾಸಿಸುವ ಕಟ್ಟಡವಲ್ಲ. ಬ್ರಾಹ್ಮಣ ಕೇರಿ ಇತ್ಯಾದಿಯಾಗಿ ಕನ್ನಡದಲ್ಲಿ ಹೇಳುವ ಹಾಗೆ ಅವರು ಮುಸ್ಲಿಮರ 'ಬಸ್ತಿ' ಇತ್ಯಾದಿಯಾಗಿ ಹೇಳುತ್ತಾರೆ.

ಬೌದ್ಧರದು 'ವಿಹಾರ'. ವಿಹಾರವೆಂದರೆ ವಿಹರಿಸುವ ಸ್ಥಳ. ಅರ್ಥಾತ್ ವಿಶ್ರಾಂತಿ ತೆಗೆದುಕೊಳ್ಳುವ ಪ್ರದೇಶ. ಸಂತೋಷಕ್ಕಾಗಿ ಓಡಾಡುವ ಸ್ಥಳವೂ ಹೌದು. ಬುದ್ಧನ ಕಾಲದಲ್ಲೇ ಆತನಿಗಾಗಿಯೂ ಅವನು ಸಂಘಟಿಸಿದ ಭಿಕ್ಷುಗಳ ಗಡಣಕ್ಕಾಗಿಯೂ ವಾಸಿಸಲೂ ಶ್ರೀಮಂತ ವೈಶ್ಯರೂ ರಾಜರೂ ದೊಡ್ಡ ಉದ್ಯಾನದಂಥ ಪ್ರದೇಶಗಳನ್ನು ದತ್ತ ಬಿಟ್ಟಿದ್ದರು. ಅವು ಭಿಕ್ಷುಗಳ ವಸತಿಗಳಾಗಿ ಬೆಳೆದು ಮುಂದೆ ಅಲ್ಲಿ ತಥಾಗತನ ಮೂರ್ತಿಗಳೂ ಅವಶೇಷಗಳೂ ಸ್ಥಾಪನೆ ಹೊಂದಿ ಒಂದು ತರಹದ ದೇವಮಂದಿರಗಳೇ ಮೊದಲಾದವು ರೂಪಗೊಂಡರೂ ಹಳೇ 'ವಿಹಾರ' ಎಂಬ ಹೆಸರು ಉಳಿದುಕೊಂಡಿತು. ಬೌದ್ಧಧರ್ಮದ ಜನಪ್ರಿಯತೆ ಹೆಚ್ಚಿದಂತೆ ಬುದ್ಧನ ಹುಟ್ಟುನಾಡಿನಲ್ಲಿ ಇಂಥ ವಿಹಾರಗಳ ಸಂಖ್ಯೆ ತುಂಬಾ ಬೆಳೆದು ಬಂದು ಇಡೀ ಪ್ರಾಂತಕ್ಕೆ ವಿಹಾರ (ಈಗಿನ ಬಿಹಾರ್) ಎಂಬ ಹೆಸರು ಬಿದ್ದಿರಬೇಕು. ವಿಹಾರಗಳು ಪ್ರಾಥಮಿಕವಾಗಿ ಬೌದ್ಧರ ಮಠಗಳೇ.

ಆದರೆ ಉತ್ತರ ಭಾರತದಲ್ಲಿ ಜನಪ್ರಿಯವಾಗಿರುವ 'ಬಿಹಾರಿ' (=ವಿಹಾರಿ) ಎಂಬ ಹೆಸರು ಬುದ್ಧನಿಗೆ ಸಂಬಂಧಿಸಿದ್ದಲ್ಲ, ಕೃಷ್ಣನಿಗೆ ಸಂಬಂಧಿಸಿದ್ದು. ಅವನು 'ಕುಂಜವಿಹಾರಿ'-ಕುಂಜಗಳಲ್ಲಿ (=ಹಾಡಿಗಳಲ್ಲಿ) ರಾಧೆಯೊಡನೆ ವಿಹರಿಸುವದರಲ್ಲಿ ಸಂತೋಷಪಡುತ್ತಿದ್ದವನು. ಅದು ಬಿಹಾರಿನಲ್ಲಲ್ಲ -ಯಮುನಾತೀರದಲ್ಲಿ.

●

ಪಾವೆಂ.

ಪುಸ್ತಕಂ ವನಿತಾಂ ವಿತ್ತಂ.....

ವೈ.ಎನ್.ಗುಂಡೂರಾವ್

ಕನ್ನಡ ಸಾಹಿತ್ಯದ ವಿಷಯಕ್ಕೆ ಬಂದಾಗ. ಸಾಹಿತ್ಯದ ಬಗ್ಗೆ ಒಲವು ತೋರುವವರು ಕಡಿಮೆ; ತೋರಿದರೂ ಪುಸ್ತಕಗಳನ್ನು ಕೊಂಡು ಓದುವವರು ಕಡಿಮೆ ಎಂಬ ಮಾತು ಬಹಳ ಹಿಂದಿನದು. ಇದಕ್ಕೆ ಅವರವರ ಆರ್ಥಿಕ ಪರಿಸ್ಥಿತಿಯೂ ಕಾರಣವಾಗಿರಬಹುದು. ಅಲ್ಲದೆ ಬೇರೆಯವರಿಂದ ಪಡೆದ ಪುಸ್ತಕಗಳನ್ನು ಓದಿ ನೀಟಾಗಿ ಹಿಂದಿರುಗಿಸುವ ಮಂದಿಯೂ ವಿರಳ. ಓದಲು ಹಣತೆತ್ತು ಕೊಳ್ಳದಿದ್ದರೆ ಹೋಗಲಿ, ಎರವಲು ಪಡೆದ ಪುಸ್ತಕಗಳನ್ನು ಅದೇ ರೀತಿಯಲ್ಲಿ ಹಿಂದಿರುಗಿಸಲೂ ಆಗದೆಂದರೆ! ಸಂಸ್ಕೃತದಲ್ಲಿ ಬಹುಶಃ ಅದಕ್ಕೇ ಹೇಳಿರಬಹುದೆನಿಸುತ್ತದೆ: ''ಪುಸ್ತಕಂ ವನಿತಾಂ ವಿತ್ತಂ ಪರಹಸ್ತಂ ಗತೇ ಗತೇ....'' ಎಂದು.

ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುವಾಗ, ವೇಳೆ ಕಳೆಯಲು ಒಂದೆರಡು ಪತ್ರಿಕೆಗಳನ್ನು ಕೊಂಡಿದ್ದೆ. ಅದು ಕೈಯಲ್ಲಿದ್ದುದನ್ನು ಕಂಡ ತಕ್ಷಣ ಪಕ್ಕದವರು ಸುಮ್ಮನಿದ್ದಾರೆಯೆ? ಕೇಳಿ ಪಡೆದುಕೊಂಡರು. ಅವರ ಅಭಿರುಚಿ ಯಾವ ಲೇಖನದ ಮೇಲಿದೆ, ಯಾವುದನ್ನು ಅವರು ಇಷ್ಟಪಡುತ್ತಾರೆ, ಎನ್ನುವುದನ್ನು ನೋಡೋಣವೆಂದು ಹಾಗೇ ಅತ್ತ ಕಣ್ಣು ಹಾಯಿಸಿದೆ. ಮುಖಪುಟದ ಚಿತ್ರವನ್ನು ಕ್ಷಣ ಕಾಲ ವೀಕ್ಷಿಸಿದರು. ನೀಟಾಗಿ ಬೆನ್ನ ಹಿಂದಕ್ಕೆ ಆ ಪುಟವನ್ನು ಮಡಿಚಿದರು. ನನಗೆ ಆಗಲೇ ಮೈ ಎಲ್ಲಾ ಉರಿಯತೊಡಗಿತು. ಹಾಗೇ ಮಡಿಕೆ ಬೀಳದಂತೆ ಹಿಂದಕ್ಕೆ ಮಡಿಸಿದರೆ? ಊಹುಂ, ಪಿನ್ನು ಹಾಕಿದ್ದ ಜಾಗದಲ್ಲಿ ಅವರಿಗೆ ಓದಲು ಸರಿ ಹೊಂದುವಂತೆ ಮೇಲಿಂದ ಕೆಳಕ್ಕೆ ಹಲವಾರು ಬಾರಿ ಉಜ್ಜಿ ಉಜ್ಜಿ ಮಡಿಚಿದರು.

ಈತ ಹಣ ಕೊಟ್ಟು ಕೊಂಡಿದ್ದರೆ ಈ ರೀತಿ ಮಾಡುತ್ತಿದ್ದನೆ? ಎಂದು ಕೋಪ ಉಕ್ಕಿ ಬಂತು. 'ರೀ ಮಿಸ್ಟರ್, ಎರಡೂ ಕಡೆಯ ಹಾಳೆಯನ್ನೂ ಬಿಡಿಸಿ ಎರಡು ಕೈಯಲ್ಲಿ ಹಿಡಿದು ಓದಿದರೇನಾಗುತ್ತದೆ? ಯಾಕೆ ಪುಸ್ತಕವನ್ನು ಹಾಳು ಮಾಡುತ್ತಿದ್ದೀರಾ? ಮೊದಲೇ ಪಿನ್ನು ಹೊಡೆದ ಪುಸ್ತಕ. ಹಾಗೆ ಹಿಂದಕ್ಕೆ ಮಡಿಚಿದರೆ ಹಾಳೆ ಕಿತ್ತು ಬರಲಾರದೆ?' ಎಂದು ಕೇಳಬೇಕೆನಿಸಿತು. ಅವರ ವಯಸ್ಸಿಗೆ ಮರ್ಯಾದೆ ಕೊಡಲು, ಹಾಗೆ ನೇರವಾಗಿ ಹೇಳಲಾರದೆ ಹಾಗೇ ನೋಡತೊಡಗಿದೆ. ಎರಡನೇ ಪುಟಕ್ಕೆ..... ಮೂರನೇ ಪುಟಕ್ಕೆ..... ನಾಲ್ಕನೇ... ಹೀಗೆ ಓದುತ್ತಾ ಹೋದಂತೆಲ್ಲಾ ಹಿಂದಕ್ಕೆ ಉಜ್ಜಿ ಉಜ್ಜಿ ಮಡಿಸುತ್ತಲೇ ಹೋದರು. ಒಂದೊಂದು ಪುಟ ಮಡಿಸಿದಾ

ಗಲೂ ನನ್ನದೆಗೆ ಗೀರು ಹೊಡೆದು ಮಡಿಚಿದಂತೆಯೆ ಆಗುತ್ತಿತ್ತು.

ಕೊನೆಗೂ ಪುಸ್ತಕ ಓದಿ ಮುಗಿಸಿ, ಒಂದು ಥ್ಯಾಂಕ್ಸ್ ಕೂಡ ಹೇಳದೆ ಹಾಗೇ ನನ್ನ ತೊಡೆಯ ಮೇಲಿಟ್ಟರು. ಹಿಂದಕ್ಕೆ ಉಜ್ಜಿ ಉಜ್ಜಿ ಮಡಿಚಿದ ಹಾಳೆಗಳು ತೊಂಬತ್ತು ಅಂಶದ ಲಂಬದಲ್ಲಿ ನಿಮಿರಿ ನಿಂತುಕೊಂಡವು. ಪುಸ್ತಕವನ್ನು ಎತ್ತಿಕೊಂಡು ನೋಡಿದೆ. ಪಿನ್ನು ಹೊಡೆದಿದ್ದ ಪುಸ್ತಕದಿಂದ ಮೊದಲೆರಡು ಪುಟಗಳು ಕಿತ್ತು ಬಂದಿದ್ದುವು. ಅವರ ಮುಖವನ್ನೊಮ್ಮೆ ನೋಡಿದೆ. ಬಹುಶಃ ಅವರಿಗೆ ಅರ್ಥವಾಗಿರಬೇಕು. ಅವರು ಮಡಿಚಿದ್ದ ವಿರುದ್ಧ ದಿಕ್ಕಿನಲ್ಲಿ ಹಾಳೆಗಳು ಮಲಗಿಕೊಂಡವು.

'ಹೇಗೂ ಸಿಟಿಗೆ ಹೋಗುತ್ತಿದ್ದೀರಲ್ಲಾ ಒಂದು ಪತ್ರಿಕೆ ಕೊಂಡು ಬನ್ನಿ,' ಎಂದಿದ್ದ ಪಕ್ಕದ ಮನೆಯವರಿಗೆ ಈ ಹರಿದ ಹಾಳೆಯ ಪುಸ್ತಕ ಕೊಡುವುದಾದರೂ ಹೇಗೆಂದು ಯೋಚಿಸಿ, ಮನೆ ತಲುಪಿದ ನಂತರ ಸ್ವಲ್ಪ ಗೋಂದು ಸವರಿ ಅಂಟಿಸಿ ನೀಟಾಗಿ ಕೊಟ್ಟಾಗ, 'ನೀವಾ ಅಂಟಿಸಿದ್ದು, ಈಗಿನ ಪುಸ್ತಕಗಳ ಬೆಲೆ ಜಾಸ್ತಿ. ಜೊತೆಗೆ ಸರಿಯಾಗಿ ಪಿನ್ನು ಹೊಡೆದಿರೋಲ್ಲ. ನೀವು ಅಂಟಿಸಿದ್ದು ಒಳ್ಳೆಯದೇ ಆಯಿತು. ಪುಸ್ತಕ ಬೇಕಾದಾಗಲೆಲ್ಲ ನಿಮ್ಮ ಕೈಲೇ ತರಿಸಿಕೊಂಡರೆ ನೀಟಾಗಿ ತಂದುಕೊಡುತ್ತೀರಿ, ಎಂದಾಗ, ಪುಸ್ತಕ ಹರಿದ ಮಹಾಶಯನನ್ನು ಪುನಃ ಹರಿಸಿಕೊಳ್ಳಲು ಹುಡುಕುವುದಾದರೂ ಹೇಗೆಂದು ಯೋಚಿಸುತ್ತಾ ಜಾಗ ಖಾಲಿ ಮಾಡಿದೆ.

ಇನ್ನೊಂದು ಸಾರೆ ಫ್ರಾನ್ಸ್ ದೇಶದ ಯಾವುದೋ ಮುಖ್ಯ ಪಟ್ಟಣವನ್ನು ಹುಡು





''ನೀವು ಕುಳ್ಳರು-ನಾನೆತ್ತರ ಅನ್ನೋಕೆ ನಾಚಿಕೆ ಆಗಿ ನೀವು ಪಾತಾಳ-ನಾನು ಸ್ವರ್ಗ ಅಂತ ಹೇಳಿದ ಅಷ್ಟೆ...''

ಕಲು ಪ್ರಪಂಚದ ಭೂ ಪಟವನ್ನು ಸ್ನೇಹಿತರೊಬ್ಬರು ಕೇಳಿದರು, ಕೊಟ್ಟೆ. ಫ್ರಾನ್ಸ್ ದೇಶದ ಪುಟ ತೆರೆದು, ಮೇಜಿನ ಮೇಲಿಟ್ಟು ಬಲವಾಗಿ ಮೇಲಿಂದ ಕೆಳಕ್ಕೆ ಪುಸ್ತಕದ ಮಧ್ಯ ಭಾಗದಲ್ಲಿ ಅದುಮಿ ಮಡಿಚಿದರು. ಪುಸ್ತಕ ಮೇಜಿನ ಮೇಲಿಟ್ಟಾಗ ಮುಚ್ಚಿಕೊಳ್ಳುತ್ತಿದ್ದುದು ಈಗ ತೆರೆದು ಬಿದ್ದುಕೊಂಡಿತು. ಕೆಲಸವಾದ ನಂತರ ಅದನ್ನು ವಾಪಸ್ಸು ಮಾಡಿದರು. ಆದರೆ ಆ ರೀತಿ ಬಲಪ್ರಯೋಗದಿಂದ ಹೊರ ಮೈಯ ಹೊದಿಕೆಯ ಮಡಿಚಿದ ಭಾಗ, ಮಳೆ ಕಾಣದೆ ಬಿರುಕುಬಿಟ್ಟ ನೆಲದಂತೆ ಬಿರುಕುಗಳಾಗಿ ಹೋಗಿತ್ತು. ಹೊಸ ಪುಸ್ತಕ, ಪುನಃ ಎಷ್ಟೇ ಉಜ್ಜಿದರೂ ಅದನ್ನು ಮೊದಲಿನ ಸ್ಥಿತಿಗೆ ತರಲಾಗಲಿಲ್ಲ.

ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ ಪ್ರಕಟಿಸಿರುವ ''ಎಕ್ಸ್‌ಪ್ಲೋರಿಂಗ್ ಕರ್ನಾಟಕ'', ಟಿ.ಎಸ್.ಸತ್ಯನ್‌ರವರ ಛಾಯಾ ಚಿತ್ರಗಳಿಂದ ಕೂಡಿದೆ. ಪುಸ್ತಕವನ್ನು ಸ್ನೇಹಿತರೊಬ್ಬರು ನೋಡಬಯಸಿದರು. ಆ ಪುಸ್ತಕ ಕಪ್ಪು ಬಿಳುಪಿನ ಹಾಗೂ ಬಣ್ಣದ ಛಾಯಾ ಚಿತ್ರಗಳಿಂದ ತುಂಬಿ ನೋಡುವವರ ಕಣ್ಮನ ಸೆಳೆಯುವಂತಿದೆ. ಅಪರೂಪದ ಪುಸ್ತಕವೆಂದು ಬಹಳ ಜೋಪಾನವಾಗಿಯೇ ಇಟ್ಟುಕೊಂಡಿದ್ದೆ. ಆದರೆ ಇಂತಹ ಅಪರೂಪದ ಪುಸ್ತಕ ನನ್ನ ಬಳಿ ಇದೆ ಎಂದು ಬೇರೆಯವರಿಗೆ ತಿಳಿಯುವುದಾದರೂ ಹೇಗೆ? ಬೇರೆಯವರಿಗೆ ತೋರಿಸಿದರೆ ತಾನೆ! ಪುಸ್ತಕವನ್ನು ನೋಡಬೇಕೆಂದಾಗ ತೆಗೆದುಕೊಂಡು ಹೋದೆ. ಅವರು ಪುಟ ತಿರುವಿ ನೋಡತೊಡಗಿದರು. ಆ ಪುಸ್ತಕದ ಹಾಳೆಗಳು ದಪ್ಪ ಕಾಗದದಿಂದ ಕೂಡಿದ್ದವು. ಪ್ರತಿ ಪುಟವನ್ನು ತೆರೆಯುವಾಗಲೂ ಬಲಗೈ ಹೆಬ್ಬೆರಳೂರಿ, ಮಧ್ಯದ ಬೆರಳಿಂದ ಪುಟವನ್ನು ಮಡಿಚಿ ಮಡಿಚಿ ತೆರೆಯುತ್ತಿದ್ದಾಗ ಆದ ಆಘಾತ ಅಷ್ಟಿಷ್ಟಲ್ಲ. ಪ್ರತಿ ಪುಟದ ಕೆಳ ಬಲತುದಿಯು ಮಡಿಚಿಕೊಳ್ಳತೊಡಗಿತು. ಇದರ ಜೊತೆ ಪುಟ ತೆರೆಯಲು ಆಗದಿದ್ದಾಗ ಬಲಗೈ ಮಧ್ಯದ ಬೆರಳನ್ನು ನಾಲಿಗೆಗೆ ಸವರಿ, ಬೆರಳಿಗಂಟಿದ ಯಥೇಚ್ಛವಾದ ಜೊಲ್ಲನ್ನು ಪುಟಕ್ಕೆ ಸವರಿ ಅವರು ಪುಟ ತೆರೆಯುತ್ತಿದ್ದ ಆ ವೈಖರಿ ಅಸಹ್ಯ ತರುತ್ತಿತ್ತು. ಆ ಪುಸ್ತಕದ ಛಾಯಾಂಕನಕ್ಕೆ ಉಪಯೋಗಿಸಿದ ಉತ್ಕೃಷ್ಟ ಬೆಲೆ ಕಾಗದವಾಗಿದ್ದರಿಂದ ಅವರ ಜೊಲ್ಲಿನ ಬೆರಳಿನ ಒತ್ತು ಪ್ರತಿ ಪುಟದಲ್ಲೂ ಮೂಡತೊಡಗಿತು. ಕುಲಗೆಡುತ್ತಿರುವ ಪ್ರತಿ ಪುಟವನ್ನು ನೋಡಿದ ಯಜಮಾನನಿಗೆ ಹೇಗಾಗಿರಬೇಡ?

ಇನ್ನೂ ಕೆಲವರಿದ್ದಾರೆ. ತಿಂಡಿ ತಿನ್ನುವಾಗ, ಊಟ ಮಾಡುವಾಗ ಪುಸ್ತಕ ಕೈಲಿ ಹಿಡಿಯದಿದ್ದರಾಗದು; ತಾವೇನು ತಿಂದಿದ್ದೇವೆಂದು ತಿಳಿಸಲೋ ಏನೋ ಪುಸ್ತಕಕ್ಕೂ ಅಷ್ಟು ಮೆತ್ತಿರುತ್ತಾರೆ. ಕರಿದ ತಿಂಡಿಯನ್ನು ಪೇಪರಿನಲ್ಲಿಟ್ಟು ತಿನ್ನುವಾಗ ಪುಸ್ತಕದ ಮೇಲೂ ಇಟ್ಟು ಎಣ್ಣೆ ಸ್ನಾನ ಮಾಡಿಸುವವರೂ ಇದ್ದಾರೆ.

ಮತ್ತೊಂದು ಸಾರೆ ಒಬ್ಬರಿಗೆ, ಶ್ರೀಲಂಕಾದ ವಿಚಾರವಾದಿ ಅಬ್ರಹಾಂ ಕೋವೂರರ

''ಬೈಗಾನ್ ಗಾಡ್‌ಮನ್'' ಪುಸ್ತಕವನ್ನು ಕೊಟ್ಟೆ. ಅದನ್ನು ಅವರು ಬಹಳ ಚೆನ್ನಾಗಿದೆ ಎಂದು ಹೊಗಳಿ ತಮ್ಮ ಸ್ನೇಹಿತರೊಬ್ಬರಿಗೆ ವರ್ಗಾಯಿಸಿದರು. ಅವರು ಮತ್ತೊಬ್ಬರಿಗೆ..... ಇನ್ನೊಬ್ಬರಿಗೆ...... ಹೀಗೆ ವರ್ಗಾಯಿತವಾದ ಪುಸ್ತಕ ಕಡೆಗೆ ನನ್ನ ಬಳಿ ಬಂದಾಗ, ಹೊದಿಕೆ ಪೂರ್ಣ ಹರಿದು, ''ಇದು ನೋಡಿ, ನಮ್ಮ ಹುಡುಗನಿಗೆ ಪುಸ್ತಕವೆಂದರೆ ಬಹಳ ಪ್ರೀತಿ, ಯಾವುದೇ ಪುಸ್ತಕ ಕೈಗೆ ಸಿಕ್ಕಿದರೂ ಹರಿದೇ ಬಿಡೋದೇ ಇಲ್ಲ,'' ಎಂದು ವಿಚಿತ್ರವಾಗಿ ಕೆನೆದು, ರಟ್ಟು ಕಿತ್ತು ಪುಸ್ತಕವನ್ನು ನನ್ನ ಕೈಲಿಟ್ಟಾಗ, ಅದರ ಸ್ಥಿತಿ ನೋಡಿ ಪುಸ್ತಕವನ್ನು ಯಾರಿಗೂ ಕೊಡಲೇ ಬಾರದು; ಕೊಟ್ಟರೂ ''ಯಾರಿಗೂ ವರ್ಗಾಯಿಸತಕ್ಕುದಲ್ಲ''ವೆಂದು ಬರೆದು ತಿಳಿಸಬೇಕೆನಿಸಿತು.

ಇನ್ನೊಂದು ಸಾರ್‍ರೆ ಪ್ರಯಾಣ ಮಾಡುತ್ತಿದ್ದಾಗ ಎಲೆ ಅಡಿಕೆ ಮೇಯುತ್ತ ಪಕ್ಕದಲ್ಲೊಬ್ಬ ಬಂದು ಕುಳಿತ. ಹಲ್ಲಿನ ಸಂದಿಗೆ ಸಿಕ್ಕಿದ್ದ ಎಲೆ, ಅಡಿಕೆ ಚೂರುಗಳನ್ನು ಬಲಗೈ ತೋರು ಬೆರಳು ತೂರಿಸಿ ದವಡೆಯಂಚಿನಿಂದ ನಾಲಿಗೆಗೆ ತಳ್ಳಿ, ಬೆರಳಲ್ಲಿ ಉಳಿದುದನ್ನು ಎಡ ಅಂಗೈಗೆ ಉಜ್ಜಿಕೊಳ್ಳುತ್ತಿದ್ದುದನ್ನು ನೋಡಿ ಅಸಹ್ಯವೆನಿಸಿತು. ಇಂಥಾ ಮನುಷ್ಯ ಕೈಲಿದ್ದ ಪುಸ್ತಕ ಕೇಳಿದರೆ ಹೇಗೆನಿಸಬೇಡ? ಅಪರಿಚಿತ, ನಿಷ್ಠುರವಾದರೂ ಸರಿ ನನಗೇನಂತೆ ಎಂದು, ಬಸ್ಸು ನಿಂತಾಗ, ''ಕೊಂಚ ಕೈ ತೊಳೆದು ಬನ್ನಿ,'' ಎಂದೆ. ಕಣ್ಣಲ್ಲೇ ಸುಟ್ಟು ಬಿಡುವವನಂತೆ ದುರುದುರು ನೋಡಿದ. ಬಹುಶಃ ಅವನ ಕ್ರೋಧನೇತ್ರದಿಂದ ನಾನೆಲ್ಲಿ ಭಸ್ಮವಾಗಿ ಪಕ್ಕದ ಸೀಟೆಲ್ಲಾ ಬೂದಿಯಾದೀತೆಂದೋ ಏನೋ ಕಿಟಕಿ ಕಡೆ ಮುಖ ತಿರುವಿ ಕುಳಿತುಬಿಟ್ಟೆ.

ಬಹಳಷ್ಟು ಜನರಿಗೆ ಪುಸ್ತಕವನ್ನು ಓದುವಾಗ ಹೇಗೆ ಉಪಯೋಗಿಸಬೇಕೆಂಬ



ಚುನಾವಣೆಯ ವೇಳೆಯಲ್ಲಿ ನನಗೊಂದು ಬೆಲೆ ಬಾಳುವ ಸೀರೆ ಕೊಡಿಸಿದ್ದರೆ ನನ್ನದೊಂದು ಮತವಾದರೂ ಬೀಳುತ್ತಿತ್ತು.

ಸಾಮಾನ್ಯ ಜ್ಞಾನವೂ ಇರುವುದಿಲ್ಲ. ತಿಂಗಳು, ವಾರಕ್ಕೆ ಪ್ರಕಟವಾಗುವ ಪತ್ರಿಕೆಗಳನ್ನು ಹೇಗಾದರೂ ಉಪಯೋಗಿಸಲಿ. ಆದರೆ ಕೆಲವೊಂದು ಅಮೂಲ್ಯವಾದ ಪುಸ್ತಕಗಳನ್ನು ಬೆನ್ನ ಹಿಂದಕ್ಕೆ ಮಡಿಚಿದಾಗ ಹೊಲಿಗೆ ಕಿತ್ತು ಬರದಿದ್ದೀತೇ? ಪುಸ್ತಕ ಕೊಟ್ಟಾಗ ಅವರು ಮಾಡುವ ಚಿತ್ರಹಿಂಸೆಯನ್ನು ನೋಡಲು ನಾವು ಹತ್ತಿರದಲ್ಲಿ ಇರಬಾರದಷ್ಟೆ.

ಇನ್ನೂ ಕೆಲವರಿದ್ದಾರೆ. ಗುರುತಿಗಾಗಿ ಎಡ ಮೇಲ್ತುದಿಯನ್ನು ಮಡಿಚುವುದು, ವಾಕ್ಯಗಳು ಚೆನ್ನಾಗಿದ್ದರೆ ಪೆನ್ನಿನಿಂದ ಗೆರೆ ಎಳೆಯುವುದು, ಬರಹಗಾರನ ವಾದ ಒಡಿಸದಿದ್ದರೆ ತಮ್ಮ ಕಮೆಂಟ್ಸ್ ಬರೆಯುವುದು, ಈ ರೀತಿಯ ಹಲವಾರು ಬಗೆಯ ಆಕ್ರಮಣಕ್ಕೊಳಗಾಗುವ ಪುಸ್ತಕದ ಗತಿ ಏನಾಗಬೇಡ?

ಒಂದು ಪುಸ್ತಕ ಚೆನ್ನಾಗಿದ್ದರೆ ನಾಲ್ಕು ಜನರಿಗೆ ಓದಲು ಕೊಟ್ಟು ನಾವು ಓದಿದ ವಿಷಯದ ಬಗ್ಗೆ ಬುದ್ಧಿಯನ್ನು ಹರಿತಗೊಳಿಸಿ

ಕೊಳ್ಳಲು, ಬೇರೆಯವರೊಡನೆ ಚರ್ಚಿಸಿದಾಗಲೇ ನಾವೆಷ್ಟು ಅರ್ಥ ಮಾಡಿಕೊಂಡಿದ್ದೇವೆಂದು ಅರಿವಿಗೆ ಬರುವುದು. ಈ ರೀತಿ ಚರ್ಚಿಸಿದಾಗಲೇ ಪುಸ್ತಕದ ಮಹತ್ವ ತಿಳಿಯುವುದು. ಹಾಗೆಂದು ಪುಸ್ತಕ ಕೊಟ್ಟಾಗ, ಬುದ್ಧಿ ಹರಿತಗೊಳಿಸಿಕೊಳ್ಳುವುದು ಹಾಗಿರಲಿ, ಪುಸ್ತಕವೇ ಹರಿದು ಹಿಂದಕ್ಕೆ ಬಂದರೆ? ಪುಸ್ತಕವನ್ನು ಓದುವಾಗ ಸರಿಯಾಗಿ ಉಪಯೋಗಿಸುವುದೂ ಒಂದು ಕಲೆ ಎಂಬುದನ್ನು ಅರಿತರೆ ಸರಿ. ಇಲ್ಲದಿದ್ದರೆ ಬೇರೆಯವರಿಗೆ ಎರವಲು ಕೊಡಬೇಕೊ, ಕೊಡಬಾರದೊ?

ಮತ್ತೊಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಡಿ.ವಿ.ಗುಂಡಪ್ಪನವರು ತಮ್ಮ ಜ್ಞಾಪಕ ಚಿತ್ರಶಾಲೆಯ ಹಲವರು ಸಾರ್ವಜನಿಕರು ಎಂಬ ಪುಸ್ತಕದಲ್ಲಿ ಒಂದು ವಿಷಯ ಪ್ರಸ್ತಾಪಿಸಿದ್ದಾರೆ. ಮಿರ್ಜಾ ಸಾಹೇಬರು ದಿವಾನರಾಗಿದ್ದ ಕಾಲ (1934-35). ಆಗ ಬೇಸಿಗೆ ಕಳೆಯಲು ಮದರಾಸಿನಿಂದ ಬೆಂಗಳೂರಿಗೆ ಬರುತ್ತಿದ್ದ ಗಣ್ಯರಲ್ಲಿ ಸರ್. ಪಿ.ಎಸ್.ಶಿವಸ್ವಾಮಿ ಅಯ್ಯರ್‌ರವರೂ ಒಬ್ಬರು. ಪ್ರಸಿದ್ಧ ವಿದ್ವಾಂಸರು. ವಕೀಲರೂ ಆಗಿದ್ದು, ಅಡ್ವೊಕೇಟ್ ಜನರಲ್ಲರಾಗಿ, ಗವರ್ನರಾಗಿ ಕೀರ್ತಿ ಗಳಿಸಿದವರು. ಇವರ ಪರಿಚಯ ಡಿ.ವಿ.ಜಿ.ಯವರಿಗೆ ಆಗಿ, ಓದಲು "ದಿ ನ್ಯೂ ಸಿವಿಲೈಜೇಷನ್" ಎಂಬ ಎರಡು ಸಂಪುಟಗಳ ಗ್ರಂಥವನ್ನು ಕೊಟ್ಟರಂತೆ. ಆದರೆ ಕೊಡುವುದಕ್ಕೆ ಮುಂಚೆ ಅವರು ವಿಧಿಸಿದ್ದ ಷರತ್ತುಗಳನ್ನು ನೋಡಿ:

1. ಪುಸ್ತಕವನ್ನು ಯಾರಿಗೂ ಎರವಲು ಕೊಡಬಾರದು, ನನಗೇ ವಾಪಸ್ ಕೊಡಬೇಕು.

2. ಪುಸ್ತಕವನ್ನು ಅಗಲವಾಗಿ ತೆರೆಯಬಾರದು.

3. ತೆರೆದ ಮೇಲೆ ಮುಚ್ಚುವುದಕ್ಕೆ ಮುಂಚೆ ಧೂಳನ್ನು ಒರೆಸಬೇಕು.

4. ಪುಸ್ತಕದ ಪುಟಗಳಲ್ಲಿ ಯಾವ ರೀತಿಯ ಗುರುತೂ ಮಾಡಬಾರದು.

ಇದು ಶಿವಸ್ವಾಮಿ ಅಯ್ಯರ್‌ರವರು ವಿಧಿಸಿದ ಷರತ್ತುಗಳು.

ಈ ರೀತಿ ನಾನೂ ಪುಸ್ತಕಗಳನ್ನು ಬೇರೆಯವರಿಗೆ ಕೊಡುವಾಗ ಆದೇಶಿಸಿ ಕೊಡುವುದೊ, ಕೊಡಲೇಬಾರದೊ ಎಂಬ ಸಂದಿಗ್ಧಕ್ಕೆ ಬಿದ್ದು ಪರಿಹಾರ ಕಾಣದೆ ತೊಳಲಾಡುತ್ತಿದ್ದೇನೆ. ●

ಭೇಟಿ

ಸಮಕಾಲೀನರಾಗಿದ್ದ ವರ್ಧಮಾನ ಮಹಾವೀರ ಹಾಗೂ ಗೌತಮ ಬುದ್ಧ ತಾವು ಸಾಕ್ಷಾತ್ಕಾರ ಮಾಡಿಕೊಂಡಂಥ ಧರ್ಮಗಳ ಪ್ರಚಾರಕ್ಕಾಗಿ ಆಗಾಗ್ಗೆ ಅಖಂಡ ಭರತ ವರ್ಷದುದ್ದಗಲ ಸಂಚಾರ ಕೈಗೊಳ್ಳುತ್ತಿದ್ದರಂತೆ. ಆಗ ಒಮ್ಮೆ ಆಕಸ್ಮಿಕವೆಂಬಂತೆ ಅವರು ಪರಸ್ಪರ ಸಂಧಿಸಿದಾಗ, ಒಂದಿಡೀ ದಿವಸ ಇಬ್ಬರೂ ಮುಖಾಮುಖಿ ಹಸನ್ಮುಖಿಗಳಾಗಿ, ಕುಳಿತು ಮಾತು ಮರುಮಾತಿಲ್ಲದೆ ಕಾಲ ಕಳೆದು, ಬಳಿಕ ತಂತಮ್ಮ ಹಾದಿ ಹಿಡಿದರಂತೆ.

"ಬುದ್ಧ ಗುರುವಿಗೆ ನಾನು ಹೇಳುವುದೇನೂ ಇರಲಿಲ್ಲವಾಗಿ, ಮೌನ ತಾಳಿದ್ದೆ," ಎಂದು ಅನಂತರ ವರ್ಧಮಾನ ಮುನಿ ತಮ್ಮ ಶಿಷ್ಯರಿಗೆ ತಿಳಿಸಿದರಂತೆ.

"ನಾನು ಹೇಳಬೇಕಾದದ್ದು ಬಹಳವೇ ಇತ್ತು, ಆದರೆ, ಮಹಾವೀರರಿಗೆ ಅವೆಲ್ಲ ಮೊದಲೇ ಮನವರಿಕೆಯಾಗಿದ್ದರಿಂದ ನಾನು ತುಟಿ ಬಿಚ್ಚಲಿಲ್ಲ," ಎಂದು ಗೌತಮ ಅನುಯಾಯಿಗಳಿಗೆ ವಿವರಿಸಿದರಂತೆ.

ಜಯಸುದರ್ಶನ

ನಿಮ್ಮ

ಶಬ್ದಭಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಪ್ರತಿ ತಿಂಗಳೂ ಇಲ್ಲಿ ಕೆಲವು ಶಬ್ದಗಳ ಪರಿಚಯ ಮಾಡಿಕೊಡಲಾಗುವುದು. ಅಂಥಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಅದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥವನ್ನು ವಿವರಿಸಿದೆ.

1. ನಿರ್ಭಿಡೆ
   - (ಅ) ನಿರಾಶೆ
   - (ಆ) ಮನೆಯಿಲ್ಲದ
   - (ಇ) ನಿರ್ದಾಕ್ಷಿಣ್ಯ
   - (ಈ) ಭಯವಿಲ್ಲದ
2. ಮುರವತ್ತು
   - (ಅ) ದಾಕ್ಷಿಣ್ಯ
   - (ಆ) ಕೆಂಪು ಕಲ್ಲಿನ ಕಟ್ಟಡ
   - (ಇ) ಕೃಷ್ಣ
   - (ಈ) ಬಾಗಿದ ಮರ
3. ಮುಂಗೋಳಿ
   - (ಅ) ಸೈನ್ಯದ ಮುಂಭಾಗ
   - (ಆ) ಹೆಬ್ಬಾಗಿಲು
   - (ಇ) ಹೋರಾಡುವ ಕೋಳಿ
   - (ಈ) ಹೊಸ ಪರಿಸ್ಥಿತಿಯ ಸೂಚಕ
4. ಸರಮೆ
   - (ಅ) ಮಡುವು
   - (ಆ) ನಾಯಿ
   - (ಇ) ಮಾಲೆಯಲ್ಲೊಂದು ವಿಧ
   - (ಈ) ತುಂಬಿ
5. ಚ್ಯುತ
   - (ಅ) ಗಾಯಗೊಂಡ
   - (ಆ) ತುರಿಕೆ
   - (ಇ) ಮಾವಿನ ಮರ
   - (ಈ) ಜಾರಿದ
6. ವಿಜೃಂಭಿಸು
   - (ಅ) ಪ್ರತಾಪ ತೋರಿಸು
   - (ಆ) ಮೆರೆ
   - (ಇ) ಹೆಡ್ಡತನ ಪ್ರದರ್ಶಿಸು
   - (ಈ) ಗೆಲ್ಲು
7. ತೆಗಲೆಣೆ
   - (ಅ) ಸಮಾನ
   - (ಆ) ಒಟ್ಟಿಗಿರುವವ
   - (ಇ) ಗಿಡ್ಡನ್ನ ನಿಚ್ಚಣಿಕೆ
   - (ಈ) ಭಾರ
8. ಶ್ವಸನ
   - (ಅ) ಆಳಿಕೆ
   - (ಆ) ಆಕಳಿಕೆ
   - (ಇ) ಉಸಿರು
   - (ಈ) ಊಟ
9. ಶ್ವಿತ್ರ
   - (ಅ) ಬಿಳಿಕಲೆ
   - (ಆ) ಬಿಳಿಕೊಡೆ
   - (ಇ) ಲಿಂಗ
   - (ಈ) ವಿರೋಧ
10. ಶ್ಲಾಘ್ಯ
    - (ಅ) ಒಳ್ಳೆ ಅದೃಷ್ಟ
    - (ಆ) ಸೀಳಾದದ್ದು
    - (ಇ) ಹೊಗಳಬೇಕಾದ್ದು
    - (ಈ) ಆಶ್ರಯ
11. ಮೊಸೆಗಾತಿ
    - (ಅ) ಚುರುಕಿನವಳು
    - (ಆ) ಜಗಳಗಂಟಿ
    - (ಇ) ಸಿಂಪಿಗಿತ್ತಿ
    - (ಈ) ಅಭಿಮಾನಿನಿ
12. ಬರಲು
    - (ಅ) ಕಡೆಯುವ ಕಲ್ಲು
    - (ಆ) ಒಣಭೂಮಿ
    - (ಇ) ಆಮಂತ್ರಣ
    - (ಈ) ಪೊರಕೆ

ಶಬ್ದ ಭಾಂಡಾರದ ಸರಿಯಾದ ಅರ್ಥಗಳು

1. **ನಿರ್ಭಿಡೆ**
(ಇ) ನಿರ್ದಾಕ್ಷಿಣ್ಯ, ನಿಸ್ಸಂಕೋಚ. ಉದಾ: ನಿರ್ಭಿಡೆಯಿಂದ ಟೀಕಿಸಿದನು. (ಮರಾಠಿ - ನಿರ್ಭೀಡ - ಭೀಡ್=ಗೌರವ, ವಿನಯ)

2. **ಮುರವತ್ತು**
(ಅ) ದಾಕ್ಷಿಣ್ಯ, ವ್ಯಕ್ತಿಗಳ ಬಗ್ಗೆ ಗೌರವ, ಭಯ. ಉದಾ: ಭಿಡೆ, ಮುರವತ್ತು ಇಲ್ಲದೆ ಮಾತಾಡಿದಳು. (ಮರಾಠಿ - ಮುರವ್ವತ - ಅರಬ್ಬಿ ಮುರವ್ವತ್=ಸಂಕೋಚ)

3. **ಮುಂಗೋಳಿ**
(ಈ) ಮುಂಜಾವನ್ನು ಸೂಚಿಸುವಂತೆ ಕೂಗುವ ಕೋಳಿ, (ಆದ್ದರಿಂದ) ಹೊಸ ಪರಿಸ್ಥಿತಿಯನ್ನು ಮುಂದಾಗಿ ಸೂಚಿಸುವ ಲಕ್ಷಣ. ಉದಾ: ಕ್ರಾಂತಿಯ ಮುಂಗೋಳಿ (ಕನ್ನಡ- ಮುನ್+ಕೋಳಿ)

4. **ಸರಮೆ**
(ಅ) ನಾಯಿ, ದೇವಲೋಕದ ಹೆಣ್ಣು ನಾಯಿ, ಆದಿಮ ನಾಯಿ. ಉದಾ: ಅವರು ಕನ್ನಡದ ಕಾವಲು ಸರಮೆಯಂತಿದ್ದಾರೆ. (ಸಂ.ಸರಮಾ)

5. **ಚ್ಯುತ**
(ಈ) ಜಾರಿದ, ಕಳಚಿದ, ತಳ್ಳಲ್ಪಟ್ಟು ಬಿದ್ದ, ನಷ್ಟವಾದ, ಭ್ರಷ್ಟ. ಉದಾ: ಕರ್ತವ್ಯದಿಂದ ಚ್ಯುತನಾದ. (ಸಂ.)

6. **ವಿಜೃಂಭಿಸು**
(ಅ) ಮೆರೆ, ಶ್ರೇಷ್ಠತೆಯನ್ನು ಪ್ರದರ್ಶಿಸು, ವಿಸ್ತರಿಸು, ಅರಳು. ಉದಾ: ಕೆಲ ಕಾಲ ವಿಜೃಂಭಿಸಿ ಅವನ ಪೌರುಷ ನಷ್ಟವಾಯಿತು. (ಸಂ.ವಿಜೃಂಭ+ಕ.ಇಸು)

7. **ಹೆಗಲೆಣೆ**
(ಅ) ಸರಿಸಮಾನ, ಸರಿಸಾಟಿ, ಉದಾ: ಪರಾಕ್ರಮದಲ್ಲಿ ಕರ್ಣಾರ್ಜುನ ಹೆಗಲೆಣೆಯಾಗಿದ್ದರು. (ದೇಶ್ಯ ಹೆಗಲ್+ಎಣೆ=ಸಮ)

8. **ಶ್ವಸನ**
(ಇ) ಉಸಿರು, ಶ್ವಾಸ, ಉಸಿರಾಟ, ಗಾಳಿ. ಉದಾ: ಶ್ವಸನದ ಲಕ್ಷಣ ಕಾಣಲಿಲ್ಲ. (ಸಂ.)

9. **ಶ್ವಿತ್ರ**
(ಅ) ಶರೀರದಲ್ಲಿನ ಬಿಳಿಕಲೆ, ಬಿಳಿತೊನ್ನು ರೋಗ, ಶ್ವೇತ ಕುಷ್ಠ. ಉದಾ: ಸುಂದರವಾದ ದೇಹದಲ್ಲಿ ಶ್ವಿತ್ರವೊಂದು ದೋಷವಾಗಿತ್ತು. (ಸಂ.)

10. **ಶ್ಲಾಘ್ಯ**
(ಇ) ಹೊಗಳಲು ಯೋಗ್ಯವಾದ್ದು, ಪ್ರಶಂಸಾರ್ಹ. ಉದಾ: ಶ್ಲಾಘ್ಯವಾದ ಕೃತಿಗಳು. (ಸಂ.)

11. **ಮೊನೆಗಾತಿ**
(ಅ) ಜಗಳಗಂಟಿ, ಶೌರ್ಯವುಳ್ಳವಳು, ಉದಾ: ಒಳ್ಳೇ ಮೊನೆಗಾತಿಯಾದ ಹೆಂಡತಿ. (ದೇಶ್ಯ-ಮೊನೆ=ಕಾಳಗ+ಗಾತಿ)

12. **ಬರಲು**
(ಈ) ಗುಡಿಸುವ ಸಾಧನ, ಕಸಬರಿಗೆ, ಪೊರಕೆ ಉದಾ: ಗಂಡಸೆ ಅಲ್ಲಿ ಒಳಗೆ ಬರಲು ಒಡಿಯಬೇಕು. (ದೇಶ್ಯ.)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

6- 8 ಸರಿಯಿದ್ದರೆ ... ಸಾಧಾರಣ
9-10 " ... ಉತ್ತಮ
11-12 " ... ಅತ್ಯುತ್ತಮ

ಅಂತ್ಯ ಸಂಸ್ಕಾರಕ್ಕೆ 113 ಕೋಟಿ ರೂಪಾಯಿ!

ಈ ಶತಮಾನದ ಪ್ರಾರಂಭಕ್ಕೆ ಜನ್ಮವೆತ್ತಿ, ತನ್ನ ಇಪ್ಪತ್ತೈದರ ಹರಯದಲ್ಲಿ (1926) ಜಪಾನ್ ದೇಶದ ಸಮ್ರಾಟಪದವನ್ನು ಅಲಂಕರಿಸಿ ಮುಂದೆ ಅರವತ್ತನಾಲ್ಕು ವರ್ಷಗಳವರೆಗೂ 'ಸಮ್ರಾಟ'ನಾಗೇ ಉಳಿದಾತ ಹಿರೋಹಿಟೋ. ಮಹತ್ವಾಕಾಂಕ್ಷಿಗಳಾಗಿದ್ದ ಹಿಟ್ಲರ್-ಮುಸಲೋನಿಯರಂತೆ ಜಗತ್ತನ್ನೇ ಆಳಬೇಕೆಂದುಕೊಂಡು, ಅದರ ಮೊದಲ ಹೆಜ್ಜೆಯಾಗಿ ಜಪಾನನ್ನು ಏಶಿಯದಲ್ಲೇ ಒಂದು ಪ್ರಬಲಶಕ್ತಿಯನ್ನಾಗಿ ಮಾಡಿ ಎರಡನೆಯ ಮಹಾಯುದ್ಧದಲ್ಲಿ ಭಾಗವಹಿಸುವುದರ ಮೂಲಕ ಈ ಖಂಡದ ಅನೇಕ ರಾಷ್ಟ್ರಗಳ ಜನತೆಯ ಸಾವು-ನೋವುಗಳಿಗೆ ಕಾರಣನಾದಾತ. ಯುದ್ಧ ಮುಗಿಯುವ ವೇಳೆಗೆ ಹಿಟ್ಲರ್-ಮುಸಲೋನಿಯರು ಅನಿವಾರ್ಯವಾಗಿ ಸಾವನ್ನು ಅಪ್ಪಬೇಕಾಗಿ ಬಂತಾದರೂ ಹಿರೋಹಿಟೋ ಮಾತ್ರ ಪಾರಾಗಿ ಸಿಂಹಾಸನವನ್ನು ಳಿಸಿಕೊಂಡ. ಆತ ತನ್ನ ದೇಶದ ಎರಡು ಮಹಾನಗರಗಳನ್ನು ಅಮೇರಿಕದ ಬಾಂಬುಗಳಿಗೆ ಆಹುತಿಕೊಡಬೇಕಾಗಿ ಬಂದದ್ದು ಮತ್ತು 1945ರ ಆಗಸ್ಟ್ 15ರಂದು ಅಮೇರಿಕದೊಂದಿಗೆ ಒಪ್ಪಂದ ಮಾಡಿಕೊಂಡದ್ದು ತನ್ನ ಸಿಂಹಾಸನಕ್ಕಾಗಿ ಆತ ತೆತ್ತ ದೊಡ್ಡ ಬೆಲೆಗಳು. ಆಮೇಲೆ ಅರಸುತನ ಹೊರಟು ಹೋಗಿ ಜಪಾನಿನಲ್ಲಿ ಪ್ರಜಾಪ್ರಭುತ್ವ ನೆಲೆಗೊಂಡಿತಾದರೂ ಕೊನೆಯವರೆಗೂ ಆ ದೇಶದವರ ಪಾಲಿಗೆ ಹಿರೋಹಿಟೋ 'ಪ್ರಭು'ವಾಗಿಯೇ ಉಳಿದ.

ಹದಿನೈದು ತಿಂಗಳುಗಳ ತೀವ್ರ ಅನಾರೋಗ್ಯದಿಂದ ಬಳಲಿ, ರಕ್ತಕಾರಿ ಹಾಸಿಗೆ ಹಿಡಿದು ಜಪಾನಿಗರ ಆತಂಕ ಹೆಚ್ಚಿಸಿದ್ದ ಹಿರೋಹಿಟೋ. "ದೊರೆಯು ದೀರ್ಘಾಯುವಾಗಲಿ, ಚಿರಾಯುವಾಗಲಿ" ಎಂದು ದೇವರಲ್ಲಿ ಪ್ರಾರ್ಥಿಸುವುದು ಜನರ ದಿನಚರಿಗಳಲ್ಲೊಂದು ಮುಖ್ಯ ಅಂಶವಾಗಿದ್ದರೆ, ಪತ್ರಿಕೆಗಳು ವಾರ್ತಾ ಮಾಧ್ಯಮಗಳು ಸಮ್ರಾಟನ ತತ್‌ಕ್ಷಣದ ಆರೋಗ್ಯವನ್ನು ತಿಳಿದುಕೊಂಡು ಪ್ರಕಟಿಸುವುದಕ್ಕಾಗಿ ಅರಮನೆಯ ಬಳಿ ತಮ್ಮ ವರದಿಗಾರರ ತಂಡವನ್ನೇ ನಿಲ್ಲಿಸಿದ್ದವು. ಜಗತ್ತಿನ ಅತಿ ಹೆಚ್ಚು ಪ್ರಸಾರದ ಜಪಾನೀ ಪತ್ರಿಕೆ 'ಅಸ್ಸಾ ಹಿಬೂನ್' ಒಂಬತ್ತು ಜನ ಛಾಯಾಗ್ರಾಹಕರನ್ನೂ ಐವತ್ತು ಜನ ವರದಿಗಾರರನ್ನೂ ನೇಮಿಸಿತ್ತು. ಎಸ್.ಎಸ್.ಕೆ. ಟೆಲಿವಿಜನ್ ನೆಟ್‌ವರ್ಕ್ ಸಂಸ್ಥೆ 80 ಜನ ವರದಿಗಾರರನ್ನೂ ಆರು ಟೆಲಿವಿಜನ್ ವ್ಯಾನುಗಳನ್ನೂ ಒಂದು ಹೆಲಿಕಾಪ್ಟರನ್ನೂ ಅಲ್ಲಿ ಉಳಿಸಿತ್ತು. ತಮ್ಮ ಅರಸನ ಸ್ಥಿತಿಯೇನೆಂದು ಅರಿತುಕೊಳ್ಳಲು ಸಾವಿರ ಸಂಖ್ಯೆಯಲ್ಲಿ ಜನರೂ ಅವರನ್ನು ನಿಯಂತ್ರಿಸಲು ಬಹು ಸಂಖ್ಯೆಯ ಆರಕ್ಷಕರೂ ಇರುತ್ತಿದ್ದರು.

1989 ಜನೆವರಿ 8ರಂದು ಹಿರೋಹಿಟೋ ಅಸುನೀಗಿದ. ನಂತರ ಆರು ದಿನ ಜಪಾನಿಗರು ಶೋಕದಲ್ಲಿ ಮುಳುಗಿದರು. ಜಪಾನಿನ ಸಂವಿಧಾನದ ಪ್ರಕಾರ ಐವತ್ತು ದಿನಗಳೊಳಗೇ ಮೃತಗಣ್ಯನ ಶವಸಂಸ್ಕಾರವಾಗಬೇಕು. 1989ರ ಫೆಬ್ರುವರಿ 24ರಂದು ನಡೆದ ಹಿರೋಹಿಟೋನ ಅಂತ್ಯ ಸಂಸ್ಕಾರವೂ ಅಬ್ಬಾ ಎನಿಸುವಂಥದೇ. 'ಶಿಂಜುಕು' ಉದ್ಯಾನವನದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ದೇಶವಿದೇಶಗಳ ಗಣ್ಯರು ಹಾಜರಾದರು. ಇವರೆಲ್ಲರ ರಕ್ಷಣೆ, ಆತಿಥ್ಯಗಳ ವೆಚ್ಚಗಳೂ ಸೇರಿದಂತೆ, ಅರಸನ ಸಮಾಧಿಯ 15 ಬಿಲಿಯನ್ ಪೌಂಡುಗಳ ಖರ್ಚು ಕೂಡಿಸಿದರೆ ಒಟ್ಟು 113 ಕೋಟಿ ರೂಪಾಯಿಗಳಷ್ಟು ಹಣ ಈ ಕಾರ್ಯಕ್ರಮಕ್ಕೆ ಬೇಕಾಯಿತು! ●

(ವಿವಿಧ ಮೂಲಗಳಿಂದ)

ಸುರೇಶ ತಾಂಡೇಲ



ಸಂಶೋಧನೆಯ ಬೆನ್ನು ಹತ್ತಿದ

'ಪಂಚಾಮೃತ'ದ ಕಾವೇರಿಕಾನ ಕೃಷ್ಣಭಟ್ಟರು

ಡಾ. ಹರಿಕೃಷ್ಣ ಭರಣ್ಯ

ಮದರಾಸು ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗಾಗಿ ಅಧ್ಯಯನ ನಡೆಸುತ್ತಿದ್ದಾಗ ಗ್ರಂಥಾಲಯದಲ್ಲೊಮ್ಮೆ ಹಳೆಯದಾದ ಚಿಕ್ಕ ಪುಸ್ತಕವೊಂದು ಕಣ್ಣಿಗೆ ಬಿತ್ತು. ಪುಸ್ತಕವೇನೋ ಸಾಧಾರಣ ಸುಸ್ಥಿತಿಯಲ್ಲೇ ಇತ್ತು. ಅಲ್ಲಲ್ಲಿ ತೂತು ಬಿದ್ದಿದ್ದರೂ ಬರಹಗಳನ್ನು ಓದಬಹುದಾಗಿತ್ತು. ಬಿಡಿಸಿ ನೋಡಿದರೆ 'ಪಂಚಾಮೃತಂ', ಬರೆದವರು: ವಿದ್ವಾ… ಕಾವೇರಿಕಾನ ಕೃಷ್ಣಭಟ್ಟ ಎಂದೂ ಕಂಡಿ… 1936ರಲ್ಲಿ ಪ್ರಕಟವಾದ ಈ ಹಳೆಯ ಪು… ದೊರೆತುದಕ್ಕೆ ನನಗೋ ಅತೀವ ಆನಂ… ತೆರೆದು ನೋಡಿದರೆ 'ಅರ್ಪಣೆ' ವಿಶಿಷ್ಟ… ಸಿತು. ಅದರಲ್ಲಿ ಕೆ.ವಿ.ಯವರು ಬರೆ… ತ್ತಾರೆ:

"ಕನ್ನಡ ನಾಡಿನಲ್ಲಿ ಹುಟ್ಟಿ, ಕನ್ನಡದ ತಂಗಾಳಿಗೆ ಮೈಯೊಡ್ಡಿ ಕನ್ನಡದ ಕೂಳುಂಡು, ಕನ್ನಡ ನುಡಿಯ ಏಳ್ಗೆಗಾಗಿ ಬೆವರಿಳಿವಂತೆ ದುಡಿದು, ನಾಡಿನಾಡಿಯಲ್ಲಿ ತಾಯ್ನುಡಿಯ ಮೇಲಿನ ಅಭಿಮಾನವು ಪ್ರತಿಯೊಂದು ರಕ್ತಕಣದಲ್ಲಿಯೂ ಹರಿದಾಡಿ, ಸಂಪೂರ್ಣ ಜೀವನವೇ ಕನ್ನಡಮಯವಾಗಿರುವ ಕನ್ನಡಿಗನೋರ್ವನು ತನ್ನಂತಿರುವ ಇತರ ಕರ್ಣಾಟಕ ಬಂಧು-ಭಗಿನಿಯರು ಓದಿ ಮನನ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಕರ್ಣಾಟಕ ಸಾಹಿತ್ಯದೇವಿಗೆ ನೈವೇದ್ಯವಾಗಿ ಅರ್ಪಿಸಿದ 'ಪಂಚಾಮೃತ'ವೇ ಈ ಸಂಗ್ರಹವು...."

ಈ ರೀತಿಯಾದ, ಸಂಪೂರ್ಣ ಜೀವನವನ್ನೇ ನೈವೇದ್ಯವನ್ನಾಗಿ ಅರ್ಪಿಸುವ ಕಲ್ಪನೆ ಅಂದಿಗೆ ಹೊಸದು; ವಿಶಿಷ್ಟ ಕೂಡ.

'ಪಂಚಾಮೃತ' ಒಂದು ವಿಶಿಷ್ಟ ರೀತಿಯ ಸಂಕಲನ. ಏಕೆಂದರೆ ಒಬ್ಬ ಲೇಖಕನ ಎಲ್ಲಾ ರೀತಿಯ ಬರಹಗಳನ್ನೂ ಒಂದೇ ಸಂಕಲನದಲ್ಲಿ ಈವರೆಗೂ ನಾನೆಲ್ಲೂ ಕಂಡ ನೆನಪಿಲ್ಲ. ಮೂವತ್ತರ ದಶಕದಲ್ಲಂತೂ ಇದು ವಿಶೇಷವೇ ಸರಿ. ಇದರಲ್ಲಿ ಪದ್ಯಗಳಿವೆ, ಗದ್ಯ ಲೇಖನಗಳೂ ಇವೆ. ಪದ್ಯಗಳಲ್ಲಿ ಕಂದ, ಷಟ್ಪದಿ, ವೃತ್ತ, ರಗಳೆಗಳು ಮಾತ್ರವಲ್ಲದೆ ಆಧುನಿಕ ರೀತಿಯ ಪ್ರಯೋಗಶೀಲತೆಯೂ ಇದೆ. ಗದ್ಯಲೇಖನಗಳಲ್ಲಿ ಹರಟೆಗಳು ತುಂಬಾ ಮೆಚ್ಚಿಕೆಯಾಗುವಂಥವು. ವಿಮರ್ಶಾತ್ಮಕ ಲೇಖನಗಳೂ ಸಂಶೋಧನಾತ್ಮಕ ಲೇಖನಗಳೂ ಇವೆ. ಕುತೂಹಲ ಹೆಚ್ಚುತ್ತಾ ಹೋಯಿತು.

ನಂತರ 'ಪಂಚಾಮೃತ' ಪುಸ್ತಕದ ಬಗೆಗೆ ಎಲ್ಲಾದರೂ ಪ್ರಸ್ತಾಪವಿದೆಯೆ? ಎಂಬುದಾಗಿ ಕನ್ನಡದ ಮುಖ್ಯ ಪಟ್ಟಿ ಹೊತ್ತಿಗೆಗಳನ್ನು ಮಗುಚಿ ಹಾಕಿದೆ. ಯಾವ ಉಲ್ಲೇಖವೂ ಲಭ್ಯವಾಗಲಿಲ್ಲ. ಉದ್ದೇಶಿತ ಸಂಶೋಧನೆಯ ವಿಷಯವನ್ನೆಲ್ಲಾ ಬದಿಗಿಟ್ಟು ಇದರ ಬಗೆಗೆ ಹೆಚ್ಚಿನ ಹುಡುಕಾಟ ಹಾಗೂ ಅಧ್ಯಯನಕ್ಕೆ ತೊಡಗಿದೆ.

ಕೆ.ವಿ.ಕೃಷ್ಣಭಟ್ಟ ಕಾವೇರಿಕಾನ, ಅಂಚೆ ಎಡನಾಡು; ಕುಂಬಳೆ ಎಂಬ ವಿಳಾಸ ಇದರಲ್ಲಿ ದೊರಕಿತು. ಹುರುಳಿ ಭೀಮರಾಯರು ಇದನ್ನು ಪ್ರಕಟಪಡಿಸಿದ್ದೆಂಬಿತ್ಯಾದಿ ವಿವರಗಳು ದೊರೆತದ್ದು ನನಗೆ ಈ ಲೇಖಕನ ಕುರಿತು ಇನ್ನಷ್ಟು ಮಾಹಿತಿ ಸಂಗ್ರಹಿಸಬಲ್ಲೆನೆಂಬ ದೃಢತೆಯನ್ನು ತಂದುಕೊಟ್ಟಿತು. ಕಾವೇರಿಕಾನವೆಂಬ ಸ್ಥಳವೆಲ್ಲಿದೆ? ಕೃಷ್ಣಭಟ್ಟರೆಂದರೆ ಯಾರು? ವೃತ್ತಿಯಲ್ಲಿ ಏನಾಗಿದ್ದಾರೆ? ಈಗ ಅವರಿದ್ದಾರೆಯೆ? ಅವರು ಬೇರೇನಾದರೂ ಕೃತಿ ರಚನೆ ಮಾಡಿರುವರೆ? ಮಾಡಿದ್ದರೆ ಯಾವವು?..... ಇತ್ಯಾದಿಯಾಗಿ ಹಲವಾರು ಪ್ರಶ್ನೆಗಳನ್ನು ನನಗೆ ನಾನೇ ಹಾಕಿಕೊಳ್ಳತೊಡಗಿದೆ.

ಊರಿಗೆ ಹೋಗಿದ್ದಾಗ ಕುಂಬಳೆ ಸಮೀಪದ ಕಾವೇರಿಕಾನಕ್ಕೆ ಹೋಗಿಯೇ ಬಿಟ್ಟೆ. ಕೆ.ವಿ.ಯವರಿರಲಿಲ್ಲ. ಅವರು ನಮ್ಮಿಂದಗಲಿ ವರ್ಷಗಳೇ ಆಗಿದ್ದವು. ಅವರ ಶ್ರೀಮತಿಯವರಿದ್ದರು. (ಅವರೂ ಇತ್ತೀಚೆಗೆ ನಿಧನರಾಗಿದ್ದಾರೆ.) ಕೆ.ವಿ.ಯವರಿಗೆ ನಾಲ್ಕು ಮಂದಿ ಹೆಣ್ಣುಮಕ್ಕಳು. ಕೆ.ವಿ.ಕೃಷ್ಣಭಟ್ಟರ ತಮ್ಮ (ದಿ.ಸುಬ್ರಹ್ಮಣ್ಯಭಟ್ಟರ ಮಕ್ಕಳು ಡಾ.ವಿ.ಕೆ.ಭಟ್ಟ; ಮಂಗಳೂರಿನಲ್ಲಿ ಸುಪ್ರಸಿದ್ಧ ಮನೋವೈದ್ಯರಾಗಿದ್ದಾರೆ) ಹಾಗೂ ಶಂಕರಭಟ್ಟರು ಕೆ.ವಿ.ಯವರ ಬಗೆಗೆ ಅನೇಕ ಮಾಹಿತಿಗಳನ್ನೊದಗಿಸಿದರು. ಪಟ್ಟಾಜೆ ವಿದ್ವಾನ್ ಕೃಷ್ಣಭಟ್ಟರು ಕೆ.ವಿ.ಯವರ ಹಿರಿಯ ಅಳಿಯಂದಿರು. ಅವರು ಕನ್ನಡ-ಸಂಸ್ಕೃತ ಭಾಷಾ ಸಾಹಿತ್ಯಾಭಿಮಾನಿಗಳು, ವಿದ್ವತ್ತುಳ್ಳವರು. ಕೆ.ವಿ.ಯವರ ಬಗೆಗೆ ಪ್ರೀತಿ, ಅಭಿಮಾನಗಳುಳ್ಳವರು. ಕೆ.ವಿ.ಯವರ ಸಾಹಿತ್ಯ ಕೃಷಿಯ ಬಗೆಗೆ ಸಾಕಷ್ಟು ಮಾಹಿತಿಗಳನ್ನು ತಿಳಿದವರು.

ಕೆ.ವಿ.ಭಟ್ಟರ ಸೃಜನಶೀಲತೆ, ವಿಮರ್ಶಕ-ಸಂಶೋಧಕ ಪ್ರಜ್ಞೆ, ಸಂಸ್ಕೃತ, ಕನ್ನಡ, ಇಂಗ್ಲಿಷ್ ತ್ರಿಭಾಷಾ ಪಾಂಡಿತ್ಯ, ಕವಿ ಹೃದಯ, ಕುಶಲ ಮಾತುಗಾರಿಕೆಗಳು, ಗೆಳೆತನ-ಬಾಂಧವ್ಯಗಳ ಸ್ಪಂದನೆಯಿರುವ ಹೃದಯವನ್ನು ಕಣ್ಣಿಗೆ ಕಟ್ಟುವಂತೆ ಹೇಳಿದರು ಪಟ್ಟಾಜೆಯವರು. ಕೆ.ವಿ.ಯವರು ಬರೆದಿದ್ದ ಅನೇಕ ಮುಖ್ಯ ಪತ್ರಗಳನ್ನೂ ನನಗೆ ಕೊಟ್ಟರು. ಈ ಪತ್ರಗಳಲ್ಲಿ ಕೆ.ವಿ.ಯವರ ಚಿಂತನಶೀಲತೆ, ಬದುಕಿನ ರೀತಿ, ಜೀವನ ತತ್ವಗಳು ಯಥಾವತ್ತಾಗಿ ಮೂಡಿರುವುದಷ್ಟೇ ಅಲ್ಲ, ಅವರ ವ್ಯಕ್ತಿತ್ವದ ಕೆಲವಂಶಗಳನ್ನೂ ಅವುಗಳಿಂದ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು.

ಕಾಸರಗೋಡು ತಾಲೂಕು ಕುಂಬಳೆಯ ಸಮೀಪದ ಎಡನಾಡು ಗ್ರಾಮದ ಕಾವೇರಿಕಾನ ವೆಂಕಟಪ್ಪಭಟ್ಟ ಮತ್ತು ಸರಸ್ವತಿ ಅಮ್ಮನವರ ಹಿರಿಯ ಮಗ ಕೆ.ವಿ.ಕೃಷ್ಣಭಟ್ಟರು (ಜನನ:1904). ಆರಂಭದ ವಿದ್ಯಾಭ್ಯಾಸ ಸಮೀಪದ ನಾಯಿಕಾಪು ಪ್ರಾಥಮಿಕ ಶಾಲೆಯಲ್ಲಿ. ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಅವರು ಮಂಗಳೂರಿನ ಕೆನರಾ ಹೈಸ್ಕೂಲನ್ನು ಸೇರಿ ಮೆಟ್ರಿಕ್ಯುಲೇಶನ್ ಮುಗಿಸಿ ನಾಯಿಕಾಪಿನ ಸಮೀಪದ ನಾರಾಯಣ ಮಂಗಲಂ ಸಂಸ್ಕೃತ ಪಾಠಶಾಲೆಯಲ್ಲಿ ಅಧ್ಯಾಪಕರಾದರು. ಕೆಲ ಸಮಯದಲ್ಲೇ ಮಂಗಳೂರಿನ ಸರಕಾರಿ ಕಲಾಶಾಲೆಯಲ್ಲಿ ಅಧ್ಯಾಪಕರಾದರು (1930). ಈ ಮಧ್ಯೆ ಭಟ್ಟರು ಸ್ವಪ್ರಯತ್ನದಿಂದಲೇ, ಖಾಸಗಿಯಾಗಿ ವಿದ್ವಾನ್ ಪರೀಕ್ಷೆಯಲ್ಲೂ ತೇರ್ಗಡೆಯಾಗಿ ಅಲ್ಲೇ ಸಹಾಯಕ ಕನ್ನಡ ಪಂಡಿತರಾಗಿ ಬಡ್ತಿ ಹೊಂದಿದರು. ಅಷ್ಟಕ್ಕೇ ಹಿಂಗಲಿಲ್ಲ ಅವರ ಜ್ಞಾನದಾಹ. ಖಾಸಗಿಯಾಗಿಯೇ ಕಲಿತು ಬಿ.ಎ. ಹಾಗೂ ಬಿ.ಒ.ಎಲ್.ಪದವಿಗಳನ್ನೂ ಪಡೆದರು. ಮುಂದೆ ಎಲ್.ಟಿ.ಪದವಿ ಕಲಿಕೆಗಾಗಿ ಮದರಾಸಿಗೆ ಹೋದರು ಭಟ್ಟರು.

ಅವರ ಮದರಾಸು ವಾಸ್ತವ್ಯದ ದಿನಗಳೇ ಭಟ್ಟರ ಬದುಕಿನ ಮಹತ್ತರ ತಿರುವುಗಳಿಗೆ ಕಾರಣ. ದುರ್ದೈವವಶಾತ್ ಟ್ರಾಮ್ ಗಾಡಿ ಅವಘಡಕ್ಕೊಳಗಾಗಿ ಅವರ ತೊಡೆ ಮುರಿಯಿತು. ಅನಿರೀಕ್ಷಿತವಾದ ಈ ಅಪಘಾತ ಅವರ ಬದುಕಿನ ದಾರಿಯನ್ನು ಕುಂಠಿತಗೊಳಿಸಿತು. ಬೆತ್ತದ ಸಹಾಯದಿಂದ ತಮ್ಮಷ್ಟಕ್ಕೆ ತಾವೇ ನಡೆಯುವಂತಾದರೂ ಭಟ್ಟರು ತಮ್ಮ ಅಧ್ಯಾಪಕ ಜೀವನಕ್ಕೆ ತಿಲಾಂಜಲಿಯನ್ನೀಯಲೇಬೇಕಾಯಿತು.

ಆದರೆ ಈ ಅಪಾಂಗಸ್ಥಿತಿಯ ಬದುಕನ್ನು ಅಧ್ಯಯನಕ್ಕಾಗಿ, ಬರವಣಿಗೆಗಾಗಿ ಮುಡಿಪಿಟ್ಟರು. ಅಂದಿನ ಕಾಲಕ್ಕೇ ಸಾವಿರಾರು ರೂಪಾಯಿಗಳ ಬೆಲೆಬಾಳುವ ಅಮೂಲ್ಯ ಗ್ರಂಥ ಭಂಡಾರವನ್ನು ಕೆ.ವಿ.ಯವರು ತಮ್ಮದನ್ನಾಗಿಸಿಕೊಂಡರು.

ಮೂವತ್ತರ ದಶಕದಲ್ಲೇ ಹೊಸಗನ್ನಡ ಗದ್ಯಕ್ಕೆ ವಿಶಿಷ್ಟವಾದ ರೂಪವನ್ನು ಕೊಡಲು ಉದ್ಯುಕ್ತರಾಗಿದ್ದ ಕೆ.ವಿ.ಯವರ ಸಾಹಿತ್ಯಕ ಚಟುವಟಿಕೆಗಳು ವೈವಿಧ್ಯಮಯ. ಪ್ರಾಚೀನ ಕಾವ್ಯಕೃತಿಗಳ ಸಂಗ್ರಹಣೆ, ಪರಿಷ್ಕರಣೆ, ಗ್ರಂಥ ಸಂಪಾದನೆ, ಪಾಂಡಿತ್ಯಪೂರ್ಣ ವ್ಯಾಖ್ಯಾನ, ಸಂಶೋಧನೆ, ಮೊದಲಾದ ಶಾಸ್ತ್ರೀಯ ವಿಚಾರಗಳಿಂದ ಹಿಡಿದು ಸ್ವತಂತ್ರವಾದ ಪ್ರಬಂಧಗಳ ರಚನೆ, ಚುಟುಕುಗಳು, ಕವಿತಾ ರಚನೆ, ಅಲ್ಲದೆ ಅಂದಿನ ಕಾಲಕ್ಕೆ ವಿಶಿಷ್ಟವಾದ ಹರಟೆಗಳು ಮೊದಲಾದ ಸೃಜನಾತ್ಮಕ ರಚನೆಗಳನ್ನೂ ಸಮರ್ಥವಾಗಿ ನಡೆಸಿದವರು ಅವರು. ಅವರ ರಚನೆಗಳಲ್ಲಿ ಕೆಲವಾದರೂ ಪ್ರಕಟವಾಗಿರುವುದು ನಮ್ಮ ಸೌಭಾಗ್ಯ.

'ಪಂಚಾಮೃತ'ದ ಬಗ್ಗೆ ಈಗಾಗಲೇ ಹೇಳಿದ್ದೇನಷ್ಟೆ. ಈ ಕೃತಿಯಿಂದಾಗಿ 'ಪಂಚಾಮೃತ ಕಿಟ್ಟಣ್ಣ'ನೆಂದೇ ಜನಪ್ರಿಯರಾದರಂತೆ ಅವರು. ಈ ಕೃತಿಯಲ್ಲಿರುವ ಹತ್ತು ಪದ್ಯ



"ಏನಿಲ್ಲಾ ಸಾಹೇಬ್ರೆ, ಇವತ್ತು ಬ್ಯಾಂಕಿನಲ್ಲಿ ಎಷ್ಟು ಹಣ ಜಮಾ ಉಳೀತು ಅಂತ ವಿಚಾರಿಸಿಕೊಂಡು ಹೋಗೋಕೆ ಬಂದೆ!"

ಗಳು ಛಂದಸ್ಸಿನಲ್ಲೇ ರಚಿಸಲ್ಪಟ್ಟಿದ್ದು ಸರಳ ಪದಗುಚ್ಛಗಳ, ನೇರ ನಿರೂಪಣೆ, ಮೃದುವಾದ ಭಾವ ಸಂವಹನ, ಗೇಯತೆ ಹಾಗೂ ಚಿರಪರಿಚಿತ ವಸ್ತುವನ್ನುಳ್ಳಂಥವು. ವಿಶ್ವ-ಪ್ರೇಮದ ಸಂದೇಶವನ್ನು ಸಾರುವ ಇಲ್ಲಿನ 'ಕಬ್ಬಿಗನ ಹೂಗೊಂಚಲು', ಅಗಲಿಕೆಯ ನೋವನ್ನು ಸೂಸುವ 'ದಿವಂಗತ ಕೋಕಿಲಂ' ಸರಳ ಭಾವನೆಯ ಸರಳ ಅಭಿವ್ಯಕ್ತಿ 'ಆನಂದ ಗೀತೆ', ವಿಶಿಷ್ಟ ಪ್ರಯೋಗವಾದ 'ಕಾಕ-ದಂಡಕಂ' ಕಾವ್ಯಚಮತ್ಕೃತಿ ಹಾಗೂ ಹೊಸತನಕ್ಕಾಗಿ ತುಡಿತವನ್ನು ತೋರಿಸುವಂಥ ರಚನೆಗಳಾದ 'ಕನ್ನಡ ಕಂದನ ವೃಂದಂ' ಹಾಗೂ 'ವಸಂತಾಗಮನಂ' 'ಎನ್ನ ಪೂಂದೋಟಂ' ಮೊದಲಾದವು ಗಮನಾರ್ಹ.

'ಪಂಚಾಮೃತ'ದೊಳಗಿನ ಅವರ ನಗೆಲೇಖನಗಳಲ್ಲಿ 'ಕೆಪ್ಪನ ಹಪ್ಪಳ', 'ಕಾಫಿಯ ಮಹಿಮೆ', 'ಇರುವೆ', 'ನಾಯಿಮರಿ', 'ಬ್ರಹ್ಮಗಿರಿ ಶೈಲಿ' ಮೊದಲಾದ ವಿಡಂಬನಾತ್ಮಕ ಕಾವ್ಯ ರಚನೆಗಳೂ ಮೇಳೈಸಿವೆ. ಸಮಕಾಲೀನ ಸಮಾಜಕ್ಕೆ ಕನ್ನಡಿಯನ್ನು ಹಿಡಿಯುವ ಈ ಎಲ್ಲಾ ರಚನೆಗಳಲ್ಲೂ ಕೆ.ವಿ.ಯವರು ಆಧುನಿಕತೆಗಾಗಿ ತುಡಿಯುತ್ತಿರುವುದು ವ್ಯಕ್ತವಾಗುತ್ತದೆ. ಅವರ ಹಾಸ್ಯ, ವಿಡಂಬನಾ ಶೈಲಿಗಳು ಎಲ್ಲಿಯೂ ವೈಯಕ್ತಿಕವೆಂದೆನ್ನಿಸುವುದೇ ಇಲ್ಲ.

ಸಮಕಾಲೀನ ಸಮಾಜಕ್ಕೆ ಕನ್ನಡಿ ಹಿಡಿಯುವ ವಿಚಿತ್ರ ಹಾಗೂ ವಿಶಿಷ್ಟವಾದ ವಿಡಂಬನೆಗಳು 'ಕೆಪ್ಪಯ್ಯಶಾಸ್ತ್ರಿ ಯಾನೆ ಇಮ್ಮಡಿ ಕಾಳಿದಾಸ', ಮತ್ತು 'ಅಭಿನವ ಮಹಾಕವಿ' ಎಂಬೆರಡು ಹರಟೆಗಳು ಪಂಚಾಮೃತದಲ್ಲಿವೆ. ಕೆ.ವಿ.ಯವರೊಬ್ಬ ಒಂಟಿಸಲಗ. ಎಂದೂ ಪಂಗಡವನ್ನು ಕಟ್ಟಿಕೊಂಡವರಲ್ಲ. ಬರಹಗಾರರು ಗುಂಪುಗಾರಿಕೆ ಮಾಡಿಕೊಂಡು ತಮ್ಮನ್ನು ತಾವೇ ಜಾಹೀರುಪಡಿಸಿಕೊಳ್ಳುತ್ತಿದ್ದ ಕ್ರಮಗಳನ್ನು ಅವರು ಇಲ್ಲೆಲ್ಲಾ ನವಿರಾಗಿ ವಿಡಂಬಿಸಿದ್ದಾರೆ.

ತಾವು ಬರೆದುದೆಲ್ಲಾ ಉತ್ತಮ ಸಾಹಿತ್ಯವೇ ಎಂಬ ಧಾರ್ಷ್ಟ್ಯ ಕೆ.ವಿ.ಯವರಲ್ಲಂತೂ ಇಲ್ಲವೇ ಇಲ್ಲ. ತಮ್ಮ ಬರವಣಿಗೆಗಳ ಬಗೆಗೆ ಅವರೇ ವಿಮರ್ಶೆ ಮಾಡಿಕೊಂಡಿರುವುದನ್ನೂ ಇದರಲ್ಲಿ ನೋಡಬಹುದು. ವಿಮರ್ಶಕನಾದವನು ಆಳವಾದ ಅಧ್ಯಯನ, ಚಿಂತನಗಳಿಂದಲೇ ಬರೆಯಬೇಕೆಂಬುದು ಅವರ ಅನಿಸಿಕೆ. ಕೇವಲ ವರ್ತಮಾನ ಪತ್ರಿಕೆಗಳನ್ನು ಓದುವುದರಿಂದ ಲೋಕಜ್ಞಾನ ಲಭಿಸುವುದಿಲ್ಲವೆಂಬ ಕಠೋರ ಸತ್ಯವನ್ನೂ ಅವರು ಹೇಳಿದ್ದಾರೆ.

ಪಂಚಾಮೃತದೊಳಗಿನ ಐದು ವಿಮರ್ಶಾಲೇಖನಗಳಲ್ಲಿ ಯಾವುದಾದರೂ ಒಂದನ್ನು ನೋಡಿದರೆ ಸಾಕು, ಕೆ.ವಿ.ಯವರ ವಿಮರ್ಶಾಪ್ರಜ್ಞೆಯನ್ನು ಗುರುತಿಸಬಹುದು. 'ಕುಮಾರ ವ್ಯಾಸನೂ ತಿಮ್ಮಣ್ಣ ಕವಿಯೂ', 'ವಿಜಯನಗರ ಅರಸರ ಆಳಿಕೆಯ ಕಾಲದಲ್ಲಿ ಕರ್ನಾಟಕ



"ತರಕಾರಿ ತರೋಣಾಂತ ಪೇಟೆಗೆ ಹೊರಟಿದ್ದೆ. ಇಲ್ಲಿ ಮಂತ್ರಿಗಳ ಭಾಷಣ ಇದೆಯಂತ ತಿಳೀತು. ಸುಮ್ಮನೆ ಹಣಕೊಟ್ಟು ತರಕಾರಿ ಏಕೆ ತರಬೇಕು ಅಂತ ಇಲ್ಲಿಗೆ ಬಂದೆ."



"ಈ ಪತ್ರಿಕೆಯ ಸಂಪಾದಕರಿಗೆ ನೀವು ನಿವೇಶನ ಮಂಜೂರು ಮಾಡಿಸಬಾರದಿತ್ತು. ಅದು ಸಿಕ್ಕ ಮೇಲೆ ನಿಮ್ಮ ಬಗ್ಗೆ ತೊಗಳಿಕೆಯ ಲೇಖನಗಳನ್ನ ಪ್ರಕಟ ಸೋದನ್ನೇ ನಿಲ್ಸಿದಾನೆ.."

ಸಾಹಿತ್ಯದ ಅಭ್ಯುದಯ, ಮೊದಲಾದ ಚಾರಿತ್ರಿಕ ಹಾಗೂ ಸಾಹಿತ್ಯಕ ವಿಚಾರಗಳು, 'ಛಂದಸ್ಸು', 'ಭಾಷೆಯೂ ವ್ಯಾಕರಣವೂ' ಪ್ರಬಂಧಗಳಲ್ಲಿ ಅವರ ಶಾಸ್ತ್ರೀಯ ವಿವೇಚನೆ ಹಾಗೂ ವ್ಯುತ್ಪನ್ನಮತಿಗಳು ನಿಖರವಾಗಿ ಮೂಡಿವೆ. ಸಾಹಿತ್ಯ, ವ್ಯಾಕರಣ, ಭಾಷೆಗಳ ಪ್ರಭೇದಗಳು, ಭಾಷೆಯ ಏಳಿಗೆಯ ಬಗೆಗೆ ಅವರು ವ್ಯವಸ್ಥಿತವಾಗಿ ವಿವೇಚಿಸಿರುವುದನ್ನು ಇಲ್ಲಿ ಗಮನಿಸಬಹುದು. ಕೆ.ವಿ.ಯವರು ಮಂಡಿಸುವ ಅಭಿಪ್ರಾಯಗಳಲ್ಲಿ ಯಾವುದೇ ರೀತಿಯ ಸಂದಿಗ್ಧತೆಯಾಗಲಿ ಅರ್ಥದ ಗೊಂದಲವಾಗಲಿ ಇಲ್ಲವೇ ಇಲ್ಲ. ಪ್ರಾಮಾಣಿಕ ಸಂಶೋಧಕರಾಗಿಯೂ ಅವರನ್ನು ಇಲ್ಲೆಲ್ಲಾ ಗುರುತಿಸಬಹುದಾಗಿದೆ.

ಇತರ ಕೃತಿಗಳು

'ಎಲ್ಲರಿಗೂ ಹುಚ್ಚು' 1951ರಲ್ಲಿ ಕುಂಬಳೆಯ ಸಮೀಪದ ಬೇಳ ಎಂಬಲ್ಲಿಂದ ಪ್ರಕಟವಾದ ಕೆ.ವಿ.ಯವರ ಸ್ವತಂತ್ರ ಸಾಮಾಜಿಕ ನಾಟಕ.

'ಸಾಹಸ ಭೀಮ ವಿಜಯಂ' (ಗದಾಯುದ್ಧ) 1949-50ರ ಸುಮಾರಿಗೆ ಕೆ.ವಿ.ಕೃಷ್ಣಭಟ್ಟರು ಕವಿ ರನ್ನನ ಸಾಹಸ ಭೀಮ ವಿಜಯವನ್ನು ಮೈಸೂರು ಹಾಗೂ ಮದರಾಸುಗಳ ಹಸ್ತಪ್ರತಿಗಳಿಂದ ಆಯ್ದು ಪರಿಷ್ಕರಿಸಿ ಪ್ರಕಟಿಸಿದ ಕೃತಿ ಇದು. ಅವರ ನುರಿತ ಹಾಗೂ ಪಾಂಡಿತ್ಯಪೂರ್ಣ ಗ್ರಂಥಸಂಪಾದನಾ ಅನುಭವಗಳನ್ನು ತೋರಿಸುವ ಕೃತಿ.

1953ರಲ್ಲಿ ಪ್ರಕಟವಾದ ಕೆ.ವಿ.ಯವರ 'ಕರ್ಣ ರಸಾಯನಂ' ಒಂದು ವಿದ್ವತ್ಪೂರ್ಣ ಕೃತಿಯೆಂಬುದರಲ್ಲಿ ಎರಡು ಮಾತಿಲ್ಲ. ಪಂಪ ಭಾರತ (ವಿಕ್ರಮಾರ್ಜುನ ವಿಜಯ) ಮಹಾಕಾವ್ಯದ ಮಹತ್ವವನ್ನು ವಿಶ್ಲೇಷಿಸುತ್ತಾ, ಆ ಕಾವ್ಯದಿಂದ ಕರ್ಣನ ಪ್ರಸಂಗವನ್ನು ಸಾದ್ಯಂತವಾಗಿ ಆಯ್ದು ಅದಕ್ಕೆ ಅರ್ಥ, ವಿವರಣೆ, ಟಿಪ್ಪಣಿ, ವ್ಯಾಕರಣ ವಿಚಾರಗಳು, ವಿಮರ್ಶಾ

ತ್ಮಕ ಹಾಗೂ ಸಂಶೋಧನಾತ್ಮಕ ವಿಚಾರಗಳನ್ನು ಕೊಟ್ಟಿರುವುದು ಕೆ.ವಿ.ಯವರ ಪಾಂಡಿತ್ಯದ ಸಮಗ್ರತೆಯನ್ನು ತೋರಿಸುತ್ತದೆ.

ಭಾಷೆ ಶೈಲಿ ಇತ್ಯಾದಿ

ಕೆ.ವಿ.ಯವರದ್ದು ವಿವರಣಾತ್ಮಕ ಗದ್ಯ ಶೈಲಿ. ಬರವಣಿಗೆಗಾಗಿ ಆಯ್ದುಕೊಳ್ಳುವ ಯಾವುದೇ ವಿಚಾರದ ಒಳಹೊರಗುಗಳನ್ನು ಸ್ಪಷ್ಟವಾದ ಸರಳವಾದ ಭಾಷೆಯಲ್ಲಿ ವಿಶ್ಲೇಷಿಸುವುದು ಅವರ ಜಾಯಮಾನ. ವಿವರವಾಗಿ ತಿಳಿಯ ಹೇಳುವ ಒಬ್ಬ ಉತ್ತಮ ಸಂಶೋಧಕನನ್ನು ಕೆ.ವಿ.ಯವರಲ್ಲಿ ಕಾಣಬಹುದು. ಹರಟೆಯಾದರೂ ಸರಿ, ಸರಳ ನೇರ ಮಾತಿನ ಸಹಜ ಶೈಲಿಯ, ಅನೇಕ ಕಿವಿಮಾತುಗಳಿಂದೊಪ್ಪುವ ವಿಚಾರ ಸರಣಿಗಳು ಅವರ ಲೇಖನಗಳಲ್ಲಿ ಎದ್ದು ಕಾಣುವ ಅಂಶ. ವಿಷಯವನ್ನು ಎಳೆ ಎಳೆಯಾಗಿ ಬಿಡಿಸುತ್ತಾ ವಿಡಂಬನೆಯನ್ನೋ ಹಾಸ್ಯವನ್ನೋ ನವಿರಾಗಿ ಪ್ರವಹಿ[illegible] ಹರಟೆಗಾರರಾಗಿ ನಮ್ಮೊಂದಿಗೆ ಅವರು ಬರುತ್ತಾರೆ.

1930ರಿಂದೀಚೆಗೆ ಅವರು ನಡೆಸಿದ ಸಾಹಿತ್ಯಕ ಚಟುವಟಿಕೆಗಳು ಇಂದಿಗೂ ಅರ್ಥ ಹಾಗೂ ಮೌಲ್ಯಗಳನ್ನು ಪಡೆಯುತ್ತವೆ ಎಂದಾಗ ಅಂದಿನ ಕಾಲಘಟ್ಟದಲ್ಲಿ ಅವುಗಳ ಮಹತ್ವವನ್ನು ಗುರುತಿಸಲು ಬೇರೇನೂ ಆಧಾರಗಳು ಬೇಕಾಗಿಲ್ಲ. ಅವರ ಅನೇಕ ಬಿಡಿ ಬರಹಗಳು ಅಂದಿನ ಅನೇಕ ಪತ್ರಿಕೆಗಳಲ್ಲಿ, ಪಠ್ಯಗಳಲ್ಲಿ ಹಾಗೂ ಇನ್ನಿತರ ಸಂಚಿಕೆಗಳಲ್ಲಿ ಕಾಣಸಿಕೊಂಡಿರುವಂಥವು ಸಿಕ್ಕಿವೆ. ಇನ್ನೂ ಅನೇಕ ಅಪ್ರಕಟಿತ ಬರಹಗಳು ಇರಬಹುದೆಂದು ಅವರನ್ನು ಸಮೀಪದಿಂದ ಬಲ್ಲವರು ಹೇಳುತ್ತಾರೆ. ಈ ಬಗೆಗೆ ಹುಡುಕಾಟವಿನ್ನೂ ನಡೆಯುತ್ತಲೇ ಇದೆ.

ಕೇವಲ ನಲವತ್ತೈದು ವರ್ಷ ಬಾಳಿದ ಅವರು (ನಿಧನ: 1950) ಕನ್ನಡ ಸಾಹಿತ್ಯ-ಸಂಶೋಧನಾ ಪ್ರಪಂಚಕ್ಕೆ ನೀಡಿದ್ದು ದೊಡ್ಡ ಕೊಡುಗೆಯೆ ಸರಿ.

●

ಎಚ್.ಗವಿಸಿದ್ದಯ್ಯ

ಕೊಲೆಗೀಡಾದವನೇ ಕೊಲೆಯ ಸುಳಿವು ನೀಡಿದಾಗ...

ಇಟಲಿಯ ಕಟಂಜರೋ ಎಂಬಲ್ಲಿ ಹದಿನೇಳರ ತರುಣಿ ಮರಿಯಾ ಟಲಾರಿಕೋ ಅಂದು (1939ರ ಜನವರಿ ಐದು) ತನ್ನ ಅಜ್ಜಿಯೊಂದಿಗೆ ಮನೆಗೆ ಹಿಂದಿರುಗುತ್ತಿದ್ದಾಗ, ಕೊರೆಸ್ ಎಂಬ ನದಿಯ ಸೇತುವೆಯನ್ನು ದಾಟುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಮೂರ್ಛೆ ಬಂದು ಬಿದ್ದಳು. ಹಾದಿ ಹೋಕರು ಅವಳನ್ನೂ ಗಾಬರಿಯಾಗಿದ್ದ ಮುದುಕಿಯನ್ನೂ ಮನೆಗೆ ಸಾಗಿಸಿದರು.

ಮೂರ್ಛೆ ತಿಳಿದೆದ್ದ ಮೇಲೆ ಮರಿಯಾ ನೋವಿನಿಂದ ನರಳಿ, ಹಾಸಿಗೆಯ ಮೇಲೆ ಹೊರಳಾಡತೊಡಗಿದಳು. ಅವಳ ಚಡಪಡಿಕೆ, ಕಿರುಚಾಟಗಳು ಮನೆಯವರನ್ನು ವಿವಂಚನೆಗೀಡುಮಾಡಿದವು. ಅವರಿಗೆಲ್ಲ ಅಚ್ಚರಿ ತಂದ ಸಂಗತಿಯೆಂದರೆ ಸಹಜವಾಗಿಯೇ ಮೃದುವೂ ಮಧುರವೂ ಆಗಿದ್ದ ಮರಿಯಾಳ ಧ್ವನಿ ಹುಡುಗನ ಧ್ವನಿಯಂತೆ ಗಡುಸಾಗಿಬಿಟ್ಟಿದ್ದು.

''ನಾನು ನನ್ನ ತಾಯಿಯನ್ನು ನೋಡಬೇಕು,'' ಎಂದು ಆಕೆ ಕೂಗಿಕೊಂಡದ್ದರಿಂದ, ಮರಿಯಾಳ ತಾಯಿಯನ್ನು, ಆಕೆ ಕೆಲಸ ಮಾಡುತ್ತಿದ್ದ ಸರಕಾರಿ ಕಚೇರಿಯಿಂದ ಕೂಡಲೇ ಕರೆಸಲಾಯಿತು. ಎದುರು ಬಂದು ನಿಂತ ತಾಯಿಯನ್ನು ನೋಡಿದ ಮರಿಯಾ, ''ನೀನು ನನ್ನ ತಾಯಿಯಲ್ಲ,'' ಎಂದಳು. ''ನಾನೇ ನಿನ್ನ ತಾಯಿ'' ಎಂದು ಅಮ್ಮ ಹೇಳಿದರೆ, ''ಸುಳ್ಳು. ನಿನ್ನ ಹೆಸರೇನೆಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ಕಟರಿಯಾ ವೆರಾಲ್ಡಿ. ಆಕೆ ಟಿರ್ರಾಚಿ ರಸ್ತೆಯ ಮನೆಯಲ್ಲಿದ್ದಾಳೆ. ನನ್ನನ್ನೆಲ್ಲಿ ತಂದು ಹಾಕಿದ್ದೀರಿ? ನಾನು ಪೆಪಿ. ನೀವು ತಿಳಿದುಕೊಂಡಂತೆ ಮರಿಯಾ ಗಿರಿಯಾ ಯಾವುದೂ ಅಲ್ಲ,'' ಎಂದು ಕೂಗಾಡಿಬಿಟ್ಟಳು. ಮನೆಯವರೆಲ್ಲ ಮಗಳ ತಲೆಕೆಟ್ಟಿದೆಯೆಂದು ದುಃಖಿಸಿದರು. ಆದರೆ ನೆರೆಹೊರೆಯ ಹಿರಿಯರ ಸಲಹೆಯ ಮೇರೆಗೆ ಶಾಂತ ಚಿತ್ತರಾಗಿ ನಡೆದುದೇನೆಂದು ಅರ್ಥಮಾಡಿಕೊಳ್ಳಲು ಸಹಕರಿಸತೊಡಗಿದಳು.

ಮರಿಯಾ ಮೂರ್ಛೆ ಹೋದ ಆ ಸೇತುವೆಯ ಅಡಿಯಲ್ಲಿ ಮೂರು ವರ್ಷಗಳ ಹಿಂದೊಂದು ಬೆತ್ತಲೆ ಶವ ದೊರೆತ್ತಿತ್ತು. ಕೊಲೆಯೋ ಆತ್ಮಹತ್ಯೆಯೋ ಎಂಬ ತನಿಖೆಯ ನಂತರ ಅದನ್ನು ಆತ್ಮಹತ್ಯೆಯೇ ಎಂದು ಪೋಲೀಸರು ನಿರ್ಧರಿಸಿದ್ದರು. ಹಾಗೆ

'ಆತ್ಮಹತ್ಯೆ'ಗೆಳಸಿದಾತ ಹತ್ತೊಂಬತ್ತರ ತರುಣ ಜೆಸೊಪ್ಪೆ ಪೆರಾಲ್ಡಿ ಎಂಬಾತ. ಮನೆಯಲ್ಲಿ ಪ್ರೀತಿಯಿಂದ 'ಪೆಪಿ' ಎಂದು ಕರೆಸಿಕೊಳ್ಳುತ್ತಿದ್ದ ಜೆಸೊಪ್ಪೆಯ ಸಾವು ನಿಗೂಢವಾಗಿತ್ತು ಆತನ ಕುಟುಂಬ ವರ್ಗಕ್ಕೆ.

ಆತನ ಬೆತ್ತಲೆ ಶವ ಸೇತುವೆಯ ಕೆಳಗೆ ಕಲ್ಲಿನ ಮೇಲೆ ಬಿದ್ದಿತ್ತು. ಒಂದು ಕೈ ಮುರಿದಿತ್ತು. ಆತ್ಮಹತ್ಯೆಯೇ ಎನ್ನುವುದಾದರೆ ನೂರು ಅಡಿಗಳಷ್ಟು ಎತ್ತರದಿಂದ ಬಿದ್ದ ಆತನ ದೇಹದ ಮೇಲೆ ಒಂದೆರಡು ಚಿಕ್ಕಪುಟ್ಟ ಗಾಯಗಳು ಮಾತ್ರ ಆಗುವುದು ಸಾಧ್ಯವೆ? ಇದು ಕೊಲೆ. "ಹಾಗಾದರೆ ಕೊಲೆಗಾರರು ಯಾರು?" ಎಂಬ ಪ್ರಶ್ನೆ ಮಾತ್ರ ಉತ್ತರ ಸಿಗದೇ ಕಾಡಿತ್ತು.

ಮೂರು ವರ್ಷಗಳ ನಂತರ ಮತ್ತೆ-'ಪೆಪಿ'ಯ ಕುರಿತು ಸುದ್ದಿ ಬಂದಾಗ ಕಟರಿಯಾ ಪೆರಾಲ್ಡಿ ಅಷ್ಟೇನೂ ಗಮನಕೊಡಲಿಲ್ಲ. ಆದರೆ ಜನಕ್ಕೆ ಕುತೂಹಲವನ್ನು ತಡೆ



ದುಕೊಳ್ಳಲಾಗಲಿಲ್ಲ. ಮರಿಯಾ ಅವರಿಗೆಲ್ಲ ಅಚ್ಚರಿಯ ವಸ್ತುವಾದಳು. ಒಂದೆರಡು ದಿನಗಳಲ್ಲೇ ಕಟಂಜರೋ ನಗರದಲ್ಲಿ ಮನೆಮಾತಾದಳು. ಮರಿಯಾಳನ್ನು ಪರೀಕ್ಷಿಸಲೆಂದು ಐದು ಜನ ವೈದ್ಯರು ಮುಂದಾದರು.

ಆಕೆಗೆ ಎಷ್ಟೆಲ್ಲ ಸಮಾಧಾನ ಮಾಡಿದರೂ ಒಂದು ವಿಷಯದಲ್ಲಿ ಮಾತ್ರ ಮರಿಯಾ ಹಟ ಬಿಡಲಿಲ್ಲ, ಸದಾ,''ನನಗೆ ನನ್ನ ತಾಯಿಯನ್ನು ತೋರಿಸಿ. ಆಕೆಯ ಹೆಸರು ಕಟರಿಯಾ ಪೆರಾಲ್ಟಿ. ನಾನು ಆಕೆಯ ಮಗ ಪೆಪಿ,'' ಎಂದೇ ಆಕೆಯ ವಾದವಾಗಿರುತ್ತಿತ್ತು. ಆದರೆ ಈಗಲೂ ಕಟರಿಯಾ ಪೆರಾಲ್ಟಿ ಈ ಬಗ್ಗೆ ಆಸಕ್ತಿ ತೋರಿಸದೆಯೇ ಉಳಿದಳು.

ಒಂದು ದಿನ ಶ್ರೀಮತಿ ಪೆರಾಲ್ಟಿಗೆ ಮರಿಯಾ ಕಾಗದ ಒಂದನ್ನು ಬರೆದಳು:

''ಅಮ್ಮ, ನಿನ್ನ ಮಗ ಪೆಪಿಯನ್ನು ನೋಡಬೇಕೆಂದೆನಿಸಿದರೆ, ಕೂಡಲೆ ಬಾ. ನಿನ್ನನ್ನು ನೋಡಲು ನಾನು ತವಕದಿಂದಿರುವೆ.'' ಕಾಗದ ಬರೆದಾದ ಮೇಲೆ ಅಲ್ಲಿದ್ದವರಿಗೆಲ್ಲ ಅಚ್ಚರಿಯಾಗುವಂತೆ, ''ನನಗೆ ವೈನ್ ಮತ್ತು ಸಿಗರೇಟು ಬೇಕು. ಕೊಡಿಸಿ,'' ಎಂದು ಕೇಳಿದಳು ಮರಿಯಾ. ಅಲ್ಲಿಯವರೆಗೂ ಆಕೆ ಅವುಗಳ ಹೆಸರನ್ನೇ ತೆಗೆದವಳಲ್ಲ. ಆಮೇಲೆ ಅಲ್ಲಿದ್ದವರನ್ನು, ಕಾರ್ಡ್ಸ್ ಆಡಲು ಅವರೆಲ್ಲ ಆಕೆಗೆ ಬೇಸರವನ್ನುಂಟು ಮಾಡಬಾರದೆಂದು ಇಸ್ಪೀಟಾಡಲು ಕುಳಿತಾಗ, ''ಹಾಂ, ಈಗ ಹಾಕು ರೊಸ್ಸಾರಿಯೋ.. ಡೆಮಿಯನೋ, ನಿನ್ನ ಬಳಿ ಯಾವುದಿದೆ?, ಟೋಟೋ, ಅನ್ಯಾಯ ಆಡಬೇಡ,'' ಎನ್ನತೊಡಗಿದಳು. (ಅವೆಲ್ಲ ಪೆಪಿಯ ಸ್ನೇಹಿತರ ಹೆಸರುಗಳು.)

ಪತ್ರ ತಲುಪಿದ ದಿನವೇ ಕಟರಿಯಾ ಪೆರಾಲ್ಟಿ 'ಪೆಪಿ'ಯನ್ನು ನೋಡಲು ಮರಿಯಾಳ ಮನೆಗೆ ಧಾವಿಸಿದಳು. ಅವಳನ್ನು ಕಂಡ ಕೂಡಲೇ ಮರಿಯಾ, ''ಬಾ ಅಮ್ಮ.. ನನ್ನ ಗೆಳೆಯರು ನನ್ನನ್ನು ಜೀವ ಹೋಗುವ ತನಕ ಹೊಡೆದು ನದಿಗೆ ಎಸೆದರು. ನಾನು ಹೇಗೋ ತೆವಳಿಕೊಂಡು ದಡ ಮುಟ್ಟಿದೆ. ಆದರೆ ಅವರು ಕಬ್ಬಿಣದ ಸಲಾಕೆಯಿಂದ ಹೊಡೆದು ಸತ್ತಿರುವುದನ್ನು ಖಾತ್ರಿಪಡಿಸಿಕೊಂಡ ಮೇಲೆ ನೋಡಿದವರಿಗೆ 'ಆತ್ಮಹತ್ಯೆ' ಎಂಬ ಭಾವನೆ ಬರುವಂತೆ ಮಾಡಿದರು....'' ಎಂದು ಹೇಳಿ ಅಲ್ಲಿದ್ದವರೊಂದಿಗೆ ಇಸ್ಪೀಟಾಟವನ್ನು ಮುಂದುವರೆಸುತ್ತ ನಡುನಡುವೆ ವೈನ್ ಕುಡಿಯತೊಡಗಿದಳು.

ಅದೇ ಧ್ವನಿ, ಅದೇ ಗಡಸುತನ, ಅದೇ ರೀತಿಯ ಆಟವಾಡುವಿಕೆ. ಆದರೆ ಆಕಾರದಲ್ಲಿ ಮಾತ್ರ ಬೇರೆಯೇ... ಕಟರಿಯಾ ಪೆರಾಲ್ಟಿಗೆ ಮಗನ ಮರಣದ ನೆನಪು ತಡೆದುಕೊಳ್ಳದಂತಾಯಿತು. ಆಕೆ ಭಯಾಶ್ಚರ್ಯಗಳಿಂದ ಮೂಕಳಾಗಿಬಿಟ್ಟಳು.

ಕೆಲ ನಿಮಿಷಗಳಲ್ಲೇ ಮರಿಯಾ ಕುಡಿದದ್ದನ್ನೆಲ್ಲ ಕಕ್ಕಿಕೊಂಡಳು. ನಂತರ, ''ಏಜಿಲೆ, ಟೋಟೋ, ಬಿಡು, ನನ್ನನ್ನು ಬಿಟ್ಟುಬಿಡು. ಕೊಲ್ಲಬೇಡ,'' ಎಂದು ಜೋರಾಗಿ ಕಿರುಚಿಕೊಂಡು ನಡುಗತೊಡಗಿದಳು. ''ಅಯ್ಯೋ. ನನ್ನನ್ನು ಉಳಿಸಿ, ಇವರು ನನ್ನನ್ನು ಮುಗಿಸುತ್ತಿದ್ದಾರೆ,'' ಎಂದು ಇಸ್ಪೀಟು ಆಡುತ್ತಿದ್ದವರನ್ನು ಗಾಬರಿಯಿಂದ ನೋಡತೊಡಗಿದಳು. ನಂತರ ಮೂರ್ಛೆ ಹೋದಳು.

ಕಟರಿಯಾ ಪೆರಾಲ್ಟಿ ಹಾಗೂ ಆಕೆಯ ಪತಿಗೆ ಇದು ಅತ್ಯಾಶ್ಚರ್ಯವುಂಟು ಮಾಡಿತು. ಹೌದು, ಸತ್ತುಹೋದ ತಮ್ಮ ಮಗನ ಗೆಳೆಯಂದಿರ ಹೆಸರುಗಳು ನಿಜವೆ. ಧ್ವನಿಯೂ ತಮ್ಮ ಮಗನದೆ. ಆದರೆ ಪೂರ್ತಿಯಾಗಿ ನಂಬುವುದು ಹೇಗೆ? ಈಕೆಯಲ್ಲಿ ತಮ್ಮ ಮಗನ ಭೂತಸಂಚಾರವಾಗಿರುವುದು ಸಾಧ್ಯವೆ? ಅಥವಾ ಇದು ನಟನೆಯೆ? ಅವರು ಪೂರ್ಣವಾಗಿ ಪರೀಕ್ಷಿಸಲು ನಿಶ್ಚಯಿಸಿದರು. ಅಂತೆಯೇ ಮರಿಯಾಳಿಗೆ ಪರಿಚಯವಿಲ್ಲದಿರುವ ತನ್ನ ತಂಗಿಯ ಫೋಟೊ

ಒಂದನ್ನು ಕಟರಿಯಾ ಪೆರಾಲ್ಟಿ ತೆಗೆದು ಮುಂಗೆ ಹಿಡಿದಾಗ, ಆಕೆ, "ಆಂಟೀ," ಎಂದು ಕೂಗಿಕೊಂಡಳು. ಹೌದು, ಪೆಪಿ ಹೀಗೆಯೇ ಆಂಟಿಯನ್ನು ಕೂಗುತ್ತಿದ್ದ.


ಈ ಘಟನೆಯ ನಂತರ ಶ್ರೀಮತಿ ಪೆರಾಲ್ಟಿ ವಾರಕ್ಕೊಂದು ಸಲವಾದರೂ ಮರಿಯಾಳನ್ನು ಕಾಣಲು ಬರತೊಡಗಿದಳು.

ಹೀಗೊಂದು ದಿನ ಆಕೆಯೊಂದಿಗೆ ಮಾತಾಡುತ್ತ ಕಟರಿಯಾ, "ಪೆಪಿ, ನೀನು ಹೇಗೆ ಕೊಲ್ಲಲ್ಪಟ್ಟೆ?" ಎಂದು ಕೇಳಿದಳು. ಅದಕ್ಕೆ ಮರಿಯಾ ಒಂದು ದೀರ್ಘ ಉಸಿರುಬಿಟ್ಟು, ಹೇಳತೊಡಗಿದಳು:

"ಟೋಟೋ, ಡಮಿಯುಸೋ, ಎಬಿಲಿ, ರೊಸರಿಯೋ ಮತ್ತು ನಾನು (ಪೆಪಿ) ಸೇರಿಕೊಂಡು ನದಿಯ ಹತ್ತಿರ ಹೋದೆವು. ಅವರು ಇಸ್ಪೀಟು ಆಡಲುತೊಡಗಿದರು. ನಾನು ತುಸು ದೂರ ಒಬ್ಬನೇ ಕುಳಿತು ವೈನ್ 'ಕುಡಿಯತೊಡಗಿದ್ದೆ. ಬಹಳ ಹೊತ್ತಿನ ನಂತರ 'ಕಸ್ಸೆಮ ಡಿ ಕ್ಯಾಪ್ಪುಸಿನೆ' ಎಂಬ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೊರಟರು.

"ಟೊಟೊ ಮತ್ತು ಎಬಿಲೆ ಅಲ್ಲಿ ನನ್ನನ್ನು ಗೋಡೆಯೊಂದಕ್ಕೆ ಒತ್ತಿ ಹಿಡಿದರು. ನಾನು ಕೊಸರಿಕೊಳ್ಳಲೂ ಆಗದಷ್ಟು ಬಿಗಿಯಾಗಿತ್ತು ಅವರ ಹಿಡಿತ. ಆಗ ರೊಸಾರಿಯೋ ನನ್ನ ತಲೆಗೆ ಬಲವಾದ ಪೆಟ್ಟು ಹಾಕಿದ. ನಾನು ಕಕ್ಕಾವಿಕ್ಕಿಯಾದೆ. ಕಣ್ಣಿಗೆ ಕತ್ತಲೆ ಬಂದಂತಾಯಿತು. ಅವರು ನನ್ನನ್ನು ಬೆತ್ತಲೆಗೊಳಿಸಿ ಸೇತುವೆಯ ಕೆಳಗೆ ಎತ್ತಿಕೊಂಡೊಯ್ದರೆಂದು ಕಾಣುತ್ತದೆ.

"ಅಲ್ಲಿ ಎಬಿಲೆ ಕಲ್ಲೊಂದರಿಂದ ನನ್ನ ದವಡೆಗಳನ್ನು ಮುರಿದ; ಟೋಟೋ ಕಬ್ಬಿಣದ ಸಲಾಕೆಯೊಂದರಿಂದ ಕೈಮೈಗೆಲ್ಲ





ಹೊಡೆದ. ನನ್ನ ತೋಳು ಮತ್ತು ಮಣಿಕಟ್ಟು ಮುರಿದವು. ನಾನು ಸತ್ತೆನೆಂದುಕೊಂಡು ಅವರು ಹೊರಟಾಗ ನಾನು ಮೆಲ್ಲನೆ ತೆವಳತೊಡಗಿದೆ. ಟೋಟೋ ಮತ್ತೊಮ್ಮೆ ಸಲಾಕೆಯನ್ನು ಬಳಸಿದ. ನಂತರ ನನ್ನ ಬಟ್ಟೆಬರೆಗಳನ್ನು ಪಕ್ಕದಲ್ಲಿಯೇ ಇಟ್ಟು, ತಲೆಯ ಬಳಿ ಕಲ್ಲೊಂದನ್ನಿರಿಸಿದರು. ನೋಡಿದ ಜನ ಇದು 'ಆತ್ಮಹತ್ಯೆ' ಎಂದು ತಿಳಿದುಕೊಳ್ಳಲಿ ಎಂಬ ಉದ್ದೇಶದಿಂದ.'' ಇಷ್ಟು ಹೇಳಿದ ಮರಿಯಾ ಬಿಕ್ಕಳಿಸಿ ಅಳಲಾರಂಭಿಸಿದಳು. ನಂತರ, ''ಅಮ್ಮ, ನಿನಗೆ ಗೊತ್ತೆ, ನನ್ನನ್ನು ಕೊಲೆ ಮಾಡಿದವರಲ್ಲಿ ಒಬ್ಬ ಈಗಾಗಲೇ ಸತ್ತಿದ್ದಾನೆ,'' ಎಂದಳು.

ಕಟರಿಯಾ ವೆರಾಲ್ಡಿ ಈ ಕುರಿತು ಮಾಹಿತಿ ಸಂಗ್ರಹಿಸಿದಾಗ ಪೆಪಿಯ ಕೊಲೆಗಾರರಲ್ಲೊಬ್ಬನಾಗಿದ್ದ ಎಬಿಲೆ 1938ರ ಸಪ್ಟಂಬರಿನಲ್ಲಿ ಸತ್ತಿರುವ ವಿಷಯ ಗೊತ್ತಾಯಿತು.

1939ರ ಫೆಬ್ರುವರಿ 9ರಂದು ಮರಿಯಾ ತನ್ನನ್ನು ಕೊರೆಸ್ ಸೇತುವೆಯ ಸಮೀಪ ಕರೆದೊಯ್ಯುವಂತೆ ತನ್ನ ತಾಯಿಗೆ ದುಂಬಾಲು ಬಿದ್ದಳು. ಹಾಗೆ ಕರೆದೊಯ್ದಾಗ, ತಾನು ಹದಿನೇಳರ ತರುಣಿ ಎಂಬುದನ್ನೂ ಮರೆತು, ಆವೇಶ ಬಂದವರಂತೆ ಮೈಮೇಲಿನ ಬಟ್ಟೆಬರೆಗಳನ್ನೆಲ್ಲ ಕಿತ್ತುಹಾಕಿ, ಪೆಪಿಯ ದೇಹ ಬಿದ್ದಿದ್ದ ಕಲ್ಲಿನ ಮೇಲೆ ಬೆತ್ತಲೆ ಬಿದ್ದುಬಿಟ್ಟಳು.

ತಾಯಿಗೋ ಗಾಬರಿ. ''ಮರಿಯಾ'' ಎಂದು ಕರೆಯ ಹೋದರೆ ಆಕೆ ಮೂರ್ಛೆಗೊಂಡಿದ್ದಾಳೆ. ಹತ್ತು ನಿಮಿಷಗಳ ನಂತರ ಪ್ರಜ್ಞೆ ಬಂದಾಗ, ತನ್ನ ಸುತ್ತ ನೆರೆದ ಜನ, ಅಳುವ ತಾಯಿ, ತನ್ನ ಅರೆಹೊದೆಸಿದ ದೇಹವನ್ನು ಕಂಡು ಗಾಬರಿ-ನಾಚಿಕೆಗಳಿಂದ, ಭರಭರನೆ ಬಟ್ಟೆತೊಟ್ಟು, ತಾಯಿಯನ್ನು ಕರೆದುಕೊಂಡು, ಗಡಬಡಿಸಿಕೊಂಡು ಮನೆಯತ್ತ ಹೆಜ್ಜೆ ಹಾಕಿದಳು. ನಂತರ ಆಕೆ ಸಾಮಾನ್ಯವಾಗೇ ಇದ್ದಳು.

'ಪೆಪಿ' ಆಕೆಯ ದೇಹ ತೊರೆದು ಹೋಗಿದ್ದ.

ಇಷ್ಟೆಲ್ಲ ನಡೆದು, ಈ ಘಟನೆಗಳೆಲ್ಲ ಎಲ್ಲರ ಮನಸ್ಸಿನಿಂದಲೂ ಮರೆಯಾದ ಮೇಲೆ- ಹನ್ನೆರಡು ವರ್ಷಗಳ ನಂತರ- 1951ರಲ್ಲಿ ಕಟರಿಯಾ ವೆರಾಲ್ಡಿಗೆ ಒಂದು ಪತ್ರ ಬಂತು. ಬರೆದಾತನ ಹೆಸರು ಲ್ಯೂಗಿಮರಾಚೆಟ್ ಎಂದು.

''ಶ್ರೀಮತಿ ವೆರಾಲ್ಡಿಯವರೇ,

ನಾನು- ನಿಮ್ಮ ಮಗ ಪೆಪಿಯ ಕೊಲೆಗಾರ. ಟೋಟೋ ಎಂದೂ ನನ್ನನ್ನು ಕರೆಯುತ್ತಾರೆ. ನನ್ನ ಹೆಂಡತಿ ಲಿಲ್ಲಿನಾಳ ಮೇಲೆ ಮನಸ್ಸಿಟ್ಟು ಆಕೆಯನ್ನು ತನ್ನ ಮೋಹಜಾಲಕ್ಕೆ ಸಿಕ್ಕಿಸಿಕೊಳ್ಳುವ ಯತ್ನ ನಡೆಸಿದ್ದ ನಿಮ್ಮ ಮಗ. ಆದ್ದರಿಂದಲೇ ಅವನನ್ನು ಗೆಳೆಯರ ಸಹಾಯದಿಂದ ಮುಗಿಸಬೇಕಾಯಿತು. ಕಬ್ಬಿಣದ ಸಲಾಕೆಯಿಂದ ಹೊಡೆದು ಕೊಂದೆ. ನಂತರ ನೋಡಿದವರಿಗೆ ಅದು 'ಆತ್ಮಹತ್ಯೆ' ಎನಿಸುವಂತೆ ಮಾಡಿದೆ.


ಈಗ ನನಗೆ ಪಶ್ಚಾತ್ತಾಪವಾಗಿದೆ.......''

ಅದಾಗಿ ಎರಡು ದಿನಗಳಲ್ಲಿಯೇ ಟೋಟೋ ತನ್ನ ಅಪಾರ ಆಸ್ತಿಯನ್ನು ಶ್ರೀಮತಿ ವೆರಾಲ್ಡಿಯ ಹೆಸರಿಗೆ ಬರೆದುಕೊಟ್ಟು, ಪೋಲೀಸರಿಗೆ ಶರಣಾದ. ●

(ಸಾಧಾರ)

ಪುಸ್ತಕ ವಿಭಾಗ

ಪ್ರೀತಿಯ ಪ್ರಸಾದ



ತೋವಿನಕೆರೆ ಸೀತಾರಾಮ ಜೋಯಿಸ

ಪ್ರೀತಿಯ ಪ್ರಸಾದ

ನೀಳ್ಗತೆ

ಉಪೇಂದ್ರನ ಮಗುವಿಗೆ ಅಕ್ಷರಾಭ್ಯಾಸದ ಸಮಾರಂಭ ಮುಗಿದಿತ್ತು. ಮಗು ಜಯವಂತನನ್ನು ಯಾವ ಶಾಲೆಗೆ ಕಳುಹಿಸಬೇಕೆಂಬ ಕುತೂಹಲ ತಂದೆತಾಯಿಯರ ಮನದಲ್ಲಿ ತೂಗಾಡುತ್ತಿತ್ತು. ಅದಕ್ಕಾಗಿ ನೆರೆಹೊರೆಯ ಗೃಹಿಣಿ-ಗೃಹಸ್ಥರನ್ನೆಲ್ಲ ವಿಚಾರಿಸಿಕೊಂಡರು. ಮನೆಗೆ ಹತ್ತಿರದಲ್ಲಿಯೇ ಇದ್ದ ಸ್ತ್ರೀ ಸಮಾಜದ ಬಾಲಿಕಾ ಪಾಠಶಾಲೆಯು ಅತ್ಯುತ್ತಮವಾದದ್ದೆಂದು ಅವರೆಲ್ಲ ಬಾಯಿತುಂಬ ಹೊಗಳಿದ್ದರು. ಅಲ್ಲಿನ ಉಪಾಧ್ಯಾಯರು, ಅಧಿಕಾರಿವರ್ಗದವ ಉನ್ನತವರ್ಗದವರೆಂದೂ, ತಮ್ಮ ಮಕ್ಕಳನ್ನು ಅದೇ ಶಾಲೆಗೆ ಕಳುಹಿಸುತ್ತಿರುವುದಾಗಿಯೂ, . ಮಗು-ಜಯವಂತನು ಇನ್ನೂ ನಾಲ್ಕು ವರ್ಷಗಳವರೆಗೂ ಅಲ್ಲೇ ಅಭ್ಯಾಸ ಮಾಡಬಹುದೆಂದೂ ಎಲ್ಲರೂ ಸಲಹೆ ಮಾಡಿದ್ದರು. ಆದುದರಿಂದ ಬರುವ ಸೋಮವಾರವೇ ಅವನನ್ನು ಬಾಲಿಕಾ ಪಾಠಶಾಲೆಗೇ ಸೇರಿಸಲು ನಿರ್ಧರಿಸಿದರು.

ಬಾಲಿಕಾ ಪಾಠಶಾಲೆ ಒಂದು ತೋಟದ ಮಧ್ಯದಲ್ಲಿದೆ. ಆ ತೋಟದಲ್ಲಿ ಉನ್ನತವಾಗಿ ಬೆಳೆದು ನೆರಳನ್ನು ಬೀರುವ ಮರಗಳೂ, ಹೂದೋಟಗಳೂ ಕಂಗೊಳಿಸುತ್ತಿವೆ. ಒಂದು ಕಡೆ ಪುಟ್ಟ ಮಕ್ಕಳು ಆಳುಗಳ ಸಹಾಯದಿಂದ ಹೂವಿನ ಗಿಡಗಳಿಗೆ ನೀರೆರೆಯುವ ವಿನೋದದಲ್ಲಿ ತೊಡಗಿದ್ದರೆ, ಇನ್ನೊಂದು ಕಡೆ ಮೈದಾನದಲ್ಲಿ ಅವರು ಆಡುವಾಗ ನಕ್ಕು ನೆಗೆದು, ಕೂಗಿ, ಕೇಕೆ ಹಾಕುವ ಧ್ವನಿಯು ತರಂಗ ತರಂಗವಾಗಿ ಹರಡುತ್ತಿರುವುದನ್ನು ಕೇಳಿ ಸವಿಯುವಂತಿದೆ. ದೊಡ್ಡ ಮಕ್ಕಳ ತರಗತಿಗಳಲ್ಲಿ ಶಿಕ್ಷಕರು ಆಗಲೇ ಪಾಠಪ್ರವಚನಗಳಲ್ಲಿ ತೊಡಗಿದ್ದಾರೆ. ಶಾಲೆಯು ಪ್ರಶಾಂತವಾಗಿದ್ದು ತಪೋವನದ ಗುರುಕುಲ ಆಶ್ರಮದ ನೆನಪನ್ನು ತರುತ್ತಿದೆ. ಸುಮನಾ ಜಯವಂತನೊಡನೆ ಅಲ್ಲಿಗೆ ಹೋದಾಗ ಕಂಡ ದೃಶ್ಯವಿದು.

ತೋಟದ ಹೆಬ್ಬಾಗಿಲು ಮುಚ್ಚಿತ್ತು. ಬಂದವರನ್ನು ಕಂಡ ಒಳಗಿದ್ದ ವೃದ್ಧೆ ಬಂದು ಬಾಗಿಲು ತೆರೆದು ನೋಡಿದಳು. ಆಕೆ ಪ್ರತಿಮೆಯಂತೆ ನಿಂತಿದ್ದ ಸುಮನಾಳನ್ನು ಕೇಳಿದಳು:

''ನೀವು ಯಾರಮ್ಮ, ಏನಾಗಬೇಕಾಗಿತ್ತು?''

''ಮಗುವನ್ನು ಶಾಲೆಗೆ ಸೇರಿಸಬೇಕಾಗಿತ್ತು; ಯಾರನ್ನು ಕಾಣಬೇಕು?''

''ಈ ಮಗು ನಿಮ್ಮದೋ? ಒಳಗೆ ಬನ್ನಿ'' ಎಂದು ಹೇಳಿ, ಅನಂತರ ಬಾಗಿಲನ್ನು ಭದ್ರಗೊಳಿಸಿ ಒಂದು ಕೊಠಡಿಗೆ ಕರೆದೊಯ್ದಳು. ಅಲ್ಲಿ ಒಬ್ಬಾಕೆ ಏನನ್ನೋ ಬರೆದುಕೊಳ್ಳುತ್ತಿದ್ದಳು. ವಂದನೆ, ಪ್ರತಿವಂದನೆಗಳಾದ ಮೇಲೆ

ಆಕೆ ಸುಮನಾಳ ಕೈಗೆ ಒಂದು ಸಣ್ಣ ಪುಸ್ತಕವನ್ನಿತ್ತು, 'ಇದರಲ್ಲಿ ಈ ಸಂಸ್ಥೆಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳೂ, ನಿಯಮ ನಿಬಂಧನೆಗಳೂ ಇವೆ. ನೀವೂ ಸದಸ್ಯೆಯಾಗಬಹುದು. ಈಗ ಮಗುವನ್ನು ಶಾಲೆಗೆ ಸೇರಿಸುವಿರಾ?' ಎಂದು ಕೇಳಿದಳು.

''ಹೌದು.''

''ನೀವು ಶಾಲೆಗೆ ಮಗುವನ್ನು ಸೇರಿಸುವುದಾದರೆ ಇಂದೇ ಸೇರಿಸಿಬಿಡಿ. ಒಂದು ಸ್ಥಾನ ಖಾಲಿ ಇದೆ, ಬರಬೇಕಾದವರು ಬರಲಿಲ್ಲ ಎಂದು ಪ್ರಣಾಳಿ ಪತ್ರವನ್ನು ಕೊಟ್ಟು ಅದರಲ್ಲಿ ಕೇಳಿರುವ ಎಲ್ಲ ಪ್ರಶ್ನೆಗಳಿಗೂ ಕರಾರುವಾಕ್ ಉತ್ತರಗಳನ್ನು ಬರೆದುಕೊಡಿ, ಎಂದು ಸೂಚಿಸಿದಳು. ಸುಮನಾ ಅದನ್ನೆಲ್ಲ ಓದಿಕೊಂಡು, 'ಇದರಲ್ಲಿ ತಂದೆತಾಯಿಗಳಿಬ್ಬರ ವಯಸ್ಸು, ಉದ್ಯೋಗ ಪ್ರತ್ಯೇಕ ಪ್ರತ್ಯೇಕ ವಿಳಾಸವನ್ನು ಕೇಳಿದೆ; ಇವೆಲ್ಲ ಅವಶ್ಯಕವೆ? ಎಂದು ಕೇಳಿದಳು. 'ಇವೆಲ್ಲ ಇಲ್ಲಿನ ನಿಯಮಕ್ಕೆ ಒಳ ಪಟ್ಟವು, ಎಲ್ಲರೂ ಬರೆದು ಕೊಡುತ್ತಾರೆ. ನೀವೂ ಸಹಾ ಬರೆದುಕೊಡಬೇಕು,' ಎಂದು ಆಕೆ ಉತ್ತರಿಸಿದಳು.

ಸುಮನಾ ಆದರಂತೆಯೇ ಮಾಡಿದಳು. ಅನಂತರ ಅಲ್ಲಿಯೇ ನಿಂತಿದ್ದ ವೃದ್ಧೆಗೆ, 'ನರಸಮ್ಮ, ಇವರನ್ನೂ ಈ ಪತ್ರವನ್ನೂ ಅಮ್ಮಾ ಅವರ ಆಫೀಸಿಗೆ ತಲುಪಿಸು, ಇವರನ್ನು ಅವರಿಗೆ ಪರಿಚಯ ಮಾಡಿಕೊಡು,' ಎಂದು ಸೂಚಿಸಿದಳು.

ಸುಮನಾ ಕಾರ್ಯದರ್ಶಿಗಳನ್ನು ಅವರ ಕೊಠಡಿಯಲ್ಲಿ ಕಂಡು ಆ ಪ್ರಣಾಳಿ ಪತ್ರವನ್ನು ಅವರಿಗೆ ಒಪ್ಪಿಸಿದಳು; ಕಾರ್ಯದರ್ಶಿಗಳು ಅದನ್ನು ಪರಿಶೀಲಿಸುತ್ತಿದ್ದರು.

ಸುಮನಾ ಕಾರ್ಯದರ್ಶಿಗಳನ್ನು ನೋಡಿದಳು; ಇವರೇ 'ಅಮ್ಮ ಅವರು'! ಅವರು ತನ್ನ ಕಲ್ಪನೆಯಂತೆ ಕಾಣಿಸಲಿಲ್ಲ. ಆಕೆ ತನ್ನ ಮನಸ್ಸಿನಲ್ಲಿ, ಅಮ್ಮ ಅವರು ಎಂದರೆ ಅವರು ವಯಸ್ಸಿನಲ್ಲೂ ವಿದ್ಯೆಯಲ್ಲೂ ಅನುಭವದಲ್ಲೂ ಹಿರಿಯವರಾಗಿರಬಹುದೆಂದು ಬಗೆದಿದ್ದಳು. ಆದರೆ ಈಕೆಗೆ ಇನ್ನೂ ಚಿಕ್ಕ ವಯಸ್ಸು, ಆದರೆ ಈಕೆಗೆ ಈ ಸಂಸ್ಥೆಯಲ್ಲಿ ಎಷ್ಟೊಂದು ಗೌರವ, ಆದರದ ಸ್ಥಾನವಿದೆ! ನೋಡುತ್ತಿದ್ದರೆ ಆ ಸೌಮ್ಯ ಸುಂದರ ವದನ



ವನ್ನು ಮತ್ತೆ ಮತ್ತೆ ನೋಡಬೇಕೆನ್ನಿಸುತ್ತಿದೆ. ಗಂಭೀರದ ಮುಖಭಾವ, ಶಾಂತವೂ ಸೌಮ್ಯವೂ ಆದ ನೋಟ, ಸಂಸ್ಕೃತವಾದ ಮನಸ್ಸು! ಏನೇನೂ ಆಡಂಬರವಿಲ್ಲ, ಆಭರಣಗಳ ಸುಳಿವೇ ಇಲ್ಲ. ಉಟ್ಟಿರುವುದು ಶುಭ್ರವಾದ ಬಿಳಿಯ ವಸನ, ಹೊದ್ದಿರುವುದು ಹಳದಿಯ ಶಾಲು; ಕೊರಳಿನಲ್ಲಿ ಅಲ್ಪಸ್ವಲ್ಪ ಕಾಣಿಸುವ ರುದ್ರಾಕ್ಷಿ ಸರ ಇವೇ ಇವರ ಚರ ಆಸ್ತಿಗಳು! ಈಕೆ ಋಷಿ ಪತ್ನಿಯಂತೆ ಅಲ್ಲ,



ಋಷಿಕುಮಾರಿಯಂತೆ ಕಾಣಸುತ್ತಾಳೆ. ಈಕೆ ತುಂಬ ವಿದ್ಯಾವತಿಯೇ ಆಗಿರಬೇಕು. ಎಂಥ ಪದವಿ ಇವರಿಗೆ! ಎಂದುಕೊಂಡಳು. ಕಾರ್ಯದರ್ಶಿಯವರು ಹೇಳಿದರು:

''ನೀವು ತಡವಾಗಿ ಬಂದಿರಿ. ಶಾಲೆಯ ಕೆಲಸ ಪ್ರಾರಂಭವಾಗಿ ಒಂದು ವಾರ ಕಳೆದಿದೆ. ಬರಬೇಕಾದವರು ಬಾರದಿದ್ದುದರಿಂದ ಈ ಮಗುವಿಗೆ ಇಲ್ಲಿ ಅವಕಾಶ ಸಿಕ್ಕಿದೆ, ಎಂದು ''ಅರ್ಧ ನಗೆಯಿಂದ ಮಗುವಿನ ಕಡೆ ನೋಡಿ ''ಮಗೂ ನಿನ್ನ ಹೆಸರೇನು?'' ಎಂದರು.

''ಜಯವಂತ.''

''ನಿನ್ನ ತಾಯಿಯ ಹೆಸರೇನು?''

''ಸುಮನಾ.''

''ನಿನ್ನ ತಂದೆಯ ಹೆಸರೇನು?''

''ಉಪೇಂದ್ರ.''

ಅಮ್ಮ ಅವರು ಅವನ ಮುದ್ದು ಮಾತನ್ನು ಕೇಳುತ್ತ ನಕ್ಕರು. ಆ ನಗುವಿನಲ್ಲಿ ಕುತೂಹಲ, ಪ್ರೀತಿ, ಲಾಲಸೆ ಎದ್ದು ಕಾಣುತ್ತಿದ್ದವು. ಮಗುವಿನ ಕೈಗೆ ಏನೋ ಒಂದು ಪೊಟ್ಟಣ ಕೊಡುತ್ತ ಇತ್ತ ಕಡೆ ಸುಮನಾಳನ್ನು ನೋಡಿ, 'ನೀವು ಯಡತೊರೆಯವರೋ... ಹಂಪಿ....' ಎಂದು ಪ್ರಾರಂಭಿಸಿ, ಅಷ್ಟಕ್ಕೆ ಎದ್ದು ನಿಂತರು. ಸುಮನಾ ಮನಸ್ಸಿಲ್ಲದೆ ಎದ್ದು, ನಮಸ್ಕಾರ ಮಾಡಿ ನಿರ್ಗಮಿಸಿದಳು.

ಸುಮನಾ ಅಮ್ಮ ಅವರ ವ್ಯಕ್ತಿತ್ವವನ್ನೆ ನೆನೆಯುತ್ತ ಮೆಲ್ಲಗೆ ಹೆಜ್ಜೆ ಹಾಕುತ್ತಿದ್ದಳು. ಈಕೆ ಕುಮಾರಿಯೇ, ವಿವಾಹಿತಳೇ? ವಿವಾಹಿತಳಾಗಿದ್ದರೆ ಆಕೆ ಪತಿ ಎಂಥ ಅದೃಷ್ಟಶಾಲಿ! ಈಕೆಯ ವಿಷಯದಲ್ಲಿ ನನಗೆ ಉಂಟಾಗಿರುವ ಆತ್ಮೀಯಭಾವದ ಅರ್ಥವೇನು? ಮಧ್ಯೆ ಒಂದು ವೈಯಕ್ತಿಕವಾದ ಒಂದು ಮಾತನ್ನು, 'ನೀವು ಯಡತೊರೆಯವರೋ.... ಹಂಪಿ' ಎಂದರಲ್ಲ! ಇವರ ನಮ್ಮ ಮನೆಯವರಿಗೆ ಗುರುತಿನವರೋ, ಸ್ನೇಹಿತರೋ ಇರಬಹುದೇ? ನನಗೆ ಆ ವಿಚಾರ ಏನೇನೂ ಗೊತ್ತಿಲ್ಲ. ಇತ್ಯಾದಿ ಚಿಂತಿಸುತ್ತ ಮನೆಯನ್ನು ಸೇರಿದಳು. ಸಂಜೆ ವೇಳೆಗೆ ಉಪೇಂದ್ರ ಮನೆಗೆ ಬಂದಾಗ, ''ಮಗುವನ್ನು ಶಾಲೆಗೆ ಸೇರಿಸಿದ್ದಾಯಿತೆ?'' ಎಂದು ವಿಚಾರಿಸಿಕೊಂಡ.

''ಆಯಿತು, ಒಂದು ದಿನ ತಡವಾಗಿದ್ದರೆ ಅಲ್ಲಿ ಅವನಿಗೆ ಸ್ಥಳ ದೊರೆಯುತ್ತಿರಲಿಲ್ಲ. ಬರಬೇಕಾದವರು ಬಾರದಿದ್ದರಿಂದ ಒಂದು ಸ್ಥಳ ಖಾಲಿಯಾಗಿತ್ತು'' ಎಂದು ಹೇಳಿದಳು.

''ಇಲ್ಲದಿದ್ದರೆ, ಬೇರೆ ಶಾಲೆಗಳೂ ಇಲ್ಲವೆ?''

''ಇರಬಹುದು, ಆದರೆ ಅಷ್ಟು ತೃಪ್ತಿಕರವಾದ ಶಾಲೆ ಮತ್ತೊಂದಿಲ್ಲ.''

''ಅವರಿವರು ಅಂದಿದ್ದನ್ನೇ ನೀನೂ ಅನ್ನುತ್ತಿದ್ದಿ.''

''ಹಾಗೇನೂ ಅಲ್ಲ; ಅವರು ಹೇಳಿದ್ದನ್ನೇ ಕಣ್ಣಾರೆ ಕಂಡೆ.''

''ಅದೇನು, ವಿವರಿಸು.''

''ಅಲ್ಲಿನ ಪರಿಸರ, ವಾತಾವರಣ ಋಷ್ಯಾಶ್ರಮದಂತಿದೆ. ಆಡಳಿತವೆಲ್ಲ ಸಮರ್ಥರೂ ಪವಿತ್ರರೂ ಆದ ಸ್ತ್ರೀಯರ ಕೈಲಿದೆ. ಅವರನ್ನೆಲ್ಲ ನಿಯಂತ್ರಿಸಿ, ನಿರ್ದೇಶಿಸುವ ಅಮ್ಮಾ ಅವರ ಅಧಿಕಾರ ಅವರ ಕೈಲಿದೆ. ಅವರನ್ನು ಸಂಘದವರೇ ಅಲ್ಲದೆ ಸಾರ್ವಜನಿಕರೂ ಗೌರವಿಸುತ್ತಿದ್ದಾರೆ. ಮಕ್ಕಳ ತರಬೇತಿಯನ್ನೂ ಕ್ಷೇಮವನ್ನೂ ನಿರ್ವಹಿಸುವುದರಲ್ಲಿ ಅವರಿಗೆ ಪ್ರಧಾನ ಸ್ಥಳವಿದೆ. ಅವರು ಎಲ್ಲರನ್ನೂ ಕೇವಲ ಪ್ರೇಮದಿಂದಲೇ ಆಳುತ್ತಿದ್ದಾರೆ. ಅವರು ಅತ್ಯಂತ ಸರಳ ಜೀವಿ. ಅವರನ್ನು ನೋಡಿದ ಮೇಲೆ ಅವರಿಂದ ಕಲಿಯಬೇಕಾದದ್ದೂ ಬಹಳವಿದೆ.''

''ಅವರ ಹೆಸರೇನು?''

''ಅದು ನನಗೆ ತಿಳಿಯದು. ಎಲ್ಲರೂ ಅವರನ್ನೂ ಅಮ್ಮ ಅವರೆಂದೇ ಕರೆಯುತ್ತಾರೆ.''

''ಅದೇನು, ಆಕೆಯ ಮೇಲೆ ನಿನಗೇಕೆ ಇಷ್ಟೊಂದು ಅಭಿಮಾನ?''

''ಅವರು ನನಗೆ ಮೊದಲನೇ ಭೇಟಿಯಲ್ಲಿ ತೋರಿಸಿದ ಆಸಕ್ತಿಯೇ ಕಾರಣ.'' ಅಲ್ಲಿಗೆ ಅವರ ಸಂಭಾಷಣೆ ಮುಗಿಯಿತು.

ಆರು ತಿಂಗಳು ಉರುಳಿದವು. ಬೊಂಬಾಯಿನಲ್ಲಿ ತನ್ನ ಹಿರಿಯ ಮಗನ ಜೊತೆಯಲ್ಲಿದ್ದ ಉಪೇಂದ್ರನ ತಾಯಿ ಬೆಂಗಳೂರಿಗೆ ಬರುವುದಾಗಿ ಪತ್ರ ಬರೆದಿದ್ದರು. ಅವರೊಡನೆ ಸಂಸಾರದ ಇತರ ಬಂಧುಗಳೂ ಬರುವ ನಿರೀಕ್ಷೆ ಇತ್ತು. ಗೊತ್ತಾದ ಕಾಲಕ್ಕೆ ಎಲ್ಲರೂ ಬಂದು ಸೇರಿದರು. ಅಂದಿನಿಂದ ಸುಮನಾಳಿಗೆ ದಿನವೆಲ್ಲ ಬಿಡುವಿಲ್ಲದ ಕೆಲಸ ಕಾದಿತ್ತು. ಮನೆಗೆ ಬಂದ ಬಂಧುಬಾಂಧವರನ್ನು ವಿಚಾರಿಸಿಕೊಂಡು ಆವರಾತಿಥ್ಯವನ್ನು ನೋಡಿಕೊಳ್ಳುವುದೆಲ್ಲ ಆಕೆಯ ಪಾಲಿನದಾಗಿತ್ತು. ಮನೆಯಲ್ಲಿ ಸಹಾಯಕರಾರೂ ಇರಲಿಲ್ಲ. ಬಂದವರೆಲ್ಲ ಮಗುವೆಲ್ಲಿ? ಮಗುವೆಲ್ಲಿ? ಎಂದು ಕೇಳುತ್ತಿದ್ದರು. ಮಗು ಶಾಲೆಗೆ ಹೋಗಿದ್ದವನು ಇಷ್ಟು ಹೊತ್ತಾದರೂ ಬಂದಿರಲಿಲ್ಲ. ಉಪೇಂದ್ರ, ತಾತ್ಸಾರದಿಂದ, 'ಅಲ್ಲೆಲ್ಲೋ ಆಡುತ್ತಿರಬೇಕು, ತಡವಾಗಿ ಬಂದಾನು,' ಎಂದು ಸಮಾಧಾನ ಹೇಳುತ್ತಿದ್ದ ಸುಮನಾ, ಗಡಿಯಾರದ ಕಡೆ ಕೈ ತೋರಿಸಿ, 'ಶಾಲೆ ಬಿಟ್ಟು ಎಷ್ಟೋ ಹೊತ್ತಾಗಿದೆ. ಅವನು ಬರಲಾರ, ನಾನೇ ಹೋಗಿಬರುತ್ತೇನೆ' ಎಂದಳು.

''ನೀನೇ ಹೋದರೆ ಹೇಗೆ? ಬೇರೆಯುವರಾದರೂ ಹೋದರಾಯಿತು, ಶಾಲೆ ಹತ್ತಿರವೇ ಇದೆ. ಅವನೇ ಬರುತ್ತಾನೆ. ಸಣ್ಣದುದನ್ನು ದೊಡ್ಡದು ಮಾಡುತ್ತೀ ನೀನು; ಇದೇ ನಿನ್ನ ಜಾಯಮಾನ,'' ಎಂದು ಸ್ವಲ್ಪ ಕಠಿಣವಾಗೀ ನುಡಿದ ಉಪೇಂದ್ರ.

''ಹಾಗಾದರೆ, ನೀವೇ ಹೋಗಿ ಬನ್ನಿ; ಇಲ್ಲದಿದ್ದರೆ ನಾನೇ ಹೋಗಬೇಕು. ಶಾಲೆಯವರಿಗೆ ಗುರುತಾದವರೇ ಹೋಗಿ ಕರೆತರಬೇಕು; ಇಲ್ಲದಿದ್ದರೆ ಮಗು ಬಂದವರನ್ನು ಗುರುತಿಸಬೇಕು; ಇಲ್ಲದಿದ್ದರೆ ಅವರು ಸಣ್ಣ ಮಕ್ಕಳನ್ನು ಕಳುಹಿಸುವುದೇ ಇಲ್ಲ. ಇದು ಶಾಲೆಯ ನಿಬಂಧನೆ. ಅದಕ್ಕೆ ಒಪ್ಪಿ ನಾನೇ ರುಜು ಹಾಕಿ ಕೊಟ್ಟಿರುತ್ತೇನೆ,'' ಎಂದಳು ಸುಮನಾ.

''ಎಲ್ಲಿದೆಯಪ್ಪ ಸ್ಕೂಲು, ನಾನೇ ಹೋಗಿ ಬರುತ್ತೇನೆ,'' ಎಂದರು ಉಪೇಂದ್ರನ ತಾಯಿ.

''ಇದೇ ರಸ್ತೆಯಲ್ಲಿ ಮೇಲಕ್ಕೆ ನೇರವಾಗಿ ಹೋದರೆ, ಎಡಕ್ಕೆ ಒಂದು ತೋಟದ ಬಂಗಲೆ

ಇದೆ. 'ಬಾಲಿಕಾ ಪಾಠಶಾಲೆ' ಎಂಬ ಕನ್ನಡದಲ್ಲೂ ಇಂಗ್ಲೀಷಿನಲ್ಲೂ ಬರೆದ ಬೋರ್ಡು ಕಾಣಿಸುತ್ತದೆ. ಅದೇ ಸ್ಕೂಲು. ಅಲ್ಲಿಯೇ ಮಕ್ಕಳ ಜೊತೆಯಲ್ಲಿ ಆಡುತ್ತಿರಬೇಕು,'' ಎಂದು ಉಪೇಂದ್ರ, ತಾಯಿಗೆ ದಾರಿ ಹೇಳಿದ. ವೃದ್ಧ ಮಾತೆ ಜಾನಕಮ್ಮ ಅದೇ ಮಾರ್ಗದಲ್ಲಿ ಹೊರಟರು.

ಶಾಲೆಯ ಮಹಾದ್ವಾರ ಮುಚ್ಚಿತ್ತು; ಬೀಗವನ್ನೂ ಹಾಕಿತ್ತು. ಅಲ್ಲಿ ಯಾವ ಮಕ್ಕಳೂ ಆಡುತ್ತಿರಲಿಲ್ಲ. ಬೋರ್ಡನ್ನು ಓದಿ ನೋಡಿಕೊಂಡು ಅದೇ ಶಾಲೆಯೆಂದು ಖಾತ್ರಿ ಮಾಡಿಕೊಂಡರು. ಏನೂ ತಿಳಿಯದೆ ಬಾಗಿಲಲ್ಲಿ ನಿಂತು ಕೊಂಡರು. ಸ್ವಲ್ಪ ಹೊತ್ತಿನ ಮೇಲೆ ಒಳಗಿನಿಂದ ಒಬ್ಬ ಹೆಂಗಸು, 'ಏನು ಬೇಕಾಗಿತ್ತು, ಈಗ ಶಾಲೆ ಮುಚ್ಚಿದೆ,' ಎಂದಳು. ಜಾನಕಮ್ಮನವರು ಅದಕ್ಕೆ ಉತ್ತರವಾಗಿ, 'ಮಗು ಮನೆಗೆ ಬರಲಿಲ್ಲ; ಅದಕ್ಕೇ ಅವನನ್ನು ಕರೆದುಕೊಂಡು ಹೋಗಲು ಬಂದಿದ್ದೇನೆ,' ಎಂದರು.

''ಮಗುವಿನ ಹೆಸರೇನು?''

''ಜಯವಂತ.''

''ಜಯವಂತನೇ, ಅವನ ತಾಯಿ ಬರಬೇಕಾಗಿತ್ತಲ್ಲ! ನೀವು ಯಾರು? ಮಗು ನಿಮಗೇನಾಗಬೇಕು?''

''ಮೊಮ್ಮಗ.''

ಆ ಹೆಂಗಸು ಬೀಗವನ್ನು ತೆಗೆದು ಜಾನಕಮ್ಮನವರನ್ನು ಒಳಗೆ ಕರೆದುಕೊಂಡು ಹೋದಳು. ಅಲ್ಲಿ, ಇನ್ನೊಬ್ಬ ಹೆಂಗಸು, ಮಗು ಜಯವಂತನನ್ನು ಮಂಚದ ಮೇಲೆ ಮಲಗಿಸಿ, ತಿನ್ನಲು ಬಿಸ್ಕಟ್ ಕೊಟ್ಟು ಅವನ ಮುಂದೆ ಆಟದ ಸಾಮಾನುಗಳನ್ನಿಟ್ಟು, ಒಂದು ಪುಸ್ತಕದಲ್ಲಿದ್ದ ಚಿತ್ರಗಳನ್ನು ತೋರಿಸುತ್ತ ಮಾತನಾಡಿಸುತ್ತಿದ್ದ ದೃಶ್ಯವನ್ನು ಅವರು ನೋಡಿದರು. ಆಗ ಅವರು ಅಂದುಕೊಂಡರು- ಇವರೆಷ್ಟು ಒಳ್ಳೆಯ ಜನರು, ಮಗುವನ್ನು ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ, ಮಕ್ಕಳನ್ನು ಮುದ್ದಿಸಿ ಮಾತನಾಡಿಸುತ್ತಾರೆ! ತಿಂಡಿ ತಿನಿಸುಗಳನ್ನೂ, ಅಷ್ಟೊಂದು ಆಟದ ಸಾಮಾನುಗಳನ್ನು ಕೊಟ್ಟಿರುತ್ತಾರೆ! ಸ್ಥಳವೂ ಸ್ವರ್ಗದಂತೆ ಪ್ರಶಾಂತವಾಗಿದೆ. ಮಕ್ಕಳು ತಪ್ಪಿಸಿಕೊಳ್ಳಲು ಅವಕಾಶವೇ ಇಲ್ಲ. ''ಮಗೂ, ಜಯವಂತ, ಯಾರೋ ಅಜ್ಜಿಯಂತೆ, ಬಂದಿದ್ದಾರೆ. ನಿನ್ನನ್ನು ಮನೆಗೆ ಕರೆದುಕೊಂಡು ಹೋಗಲು ಬಂದಿದ್ದಾರೆ. ಹೋಗುತ್ತೀಯಾ?'' ಎಂದು ಬಾಗಿಲು ತೆರೆದ ಹೆಂಗಸು ಕೇಳಿದಳು.

''ನಮ್ಮ ಮನೆಯಲ್ಲಿ ಅಜ್ಜೀನೇ ಇಲ್ಲ!''

''ಈ ಅಜ್ಜಿ ಕಡೆ ನೋಡು. ಇವರು ನಿನ್ನ ಅಜ್ಜಿ ಅಲ್ಲವೆ?''

''ಅಮ್ಮ ಯಾರ ಜೊತೇಲೂ ಹೋಗಬೇಡವೆಂದು ಹೇಳಿದ್ದಾಳೆ.''

''ಇವರ ಜೊತೆ ಹೋಗುವಿಯೋ ಇಲ್ಲವೋ?''

''ಉಹೂಂ, ಉಹೂಂ''

''ನೀವು ಯಾರೋ ನಮಗೆ ಗೊತ್ತಿಲ್ಲ, ಮಗು ನಿಮ್ಮನ್ನು ಗುರುತಿಸಲಿಲ್ಲ. ನೀವು ಈಗ ಅಮ್ಮ ಅವರನ್ನೇ ನೋಡಬೇಕು,'' ಎಂದು ಆ ಹೆಂಗಸು ಹೇಳಿದಳು.

''ಅಮ್ಮ ಅವರೆಂದರೆ ಯಾರು? ಅವರೆಲ್ಲಿರುತ್ತಾರೆ?'' ಜಾನಕಮ್ಮ ಕೇಳಿದರು.

''ಅಮ್ಮ ಅವರೇ ಈ ಶಾಲೆಯ ವ್ಯವಸ್ಥಾಪಕರು. ಈ ಸಂಸಾರವನ್ನೆಲ್ಲ ಅವರೇ ನಡೆಸುವವರು. ಅವರು ಹೇಳಿದಂತೆ ಮಾಡುವವರು ನಾವೆಲ್ಲ. ಅವರು ತುಂಬ ಒಳ್ಳೆಯವರು. ಅವರು ಕೈ ಕೆಳಗಿನವರನ್ನು ಎಂದೂ ಗದರಿಸಿ ಮಾತನಾಡುವವರಲ್ಲ; ನಾವು ಹೇಳಿದ್ದನೆಲ್ಲ ನಿಧಾನವಾಗಿ ಕೇಳಿ ಏನು ಬೇಕಾದರೂ ತರಿಸಿಕೊಡುವರು. ಒಟ್ಟಿನಲ್ಲಿ ಅವರೇ ಇಲ್ಲಿನವರಿಗೆಲ್ಲ ತಾಯಿ. ಅವರ ಕೈಕೆಳಗಿನವರು ಮಾತ್ರ ಅವರನ್ನು ಅಮ್ಮನವರು ಎಂದು ಕರೆಯು

ತ್ತಿಲ್ಲ. ಪಟ್ಟಣದಿಂದ ಬಂದು ಹೋಗುವ ಅಜ್ಜ-ಅಜ್ಜಿಯರೆಲ್ಲ ಅವರನ್ನು ಹಾಗೇ ಕರೆಯುತ್ತಿದ್ದಾರೆ. ಅಗೋ ಅಲ್ಲ ಕಾಣಿಸುವ ಪುಟ್ಟ ಮನೆಯಲ್ಲಿ ಇರುತ್ತಾರೆ. ಅವರು ಯಾವಾಗಲೂ ಏನನ್ನಾದರೂ ಮಾಡುತ್ತಲೇ ಇರುತ್ತಾರೆ. ಅವರು ತುಂಬ ಓದಿದವರು. ನೀವು ಹೋಗಿ; ನಾನೂ ಹಿಂದೆ ಬರುತ್ತೇನೆ.''

''ಅವರಿಗೆ ಮಕ್ಕಳು ಮರಿಗಳೂ ಇದ್ದಾರೋ?''

''ಮಕ್ಕಳೇನು, ಅಜ್ಜಿ, ನೂರಾರು ಮಕ್ಕಳಿ



ದ್ದಾರೆ, ಅನಾಥ ಮಕ್ಕಳು ಎಷ್ಟೋ; ನಾವೆಲ್ಲ ಅವರಿಗೆ ಮಕ್ಕಳೇ!''

ಜಾನಕಮ್ಮನವರಿಗೆ ಸೋಜಿಗವಾಯಿತು. ಅವರೆಂಥ ಅಮ್ಮನವರೋ ನೋಡೋಣ ಎಂದು ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತ ನಡೆದರು. ಆ ಚಿಕ್ಕ ಮನೆಯ ವಠಾರದಲ್ಲಿ ಅಮ್ಮನವರು ಇಬ್ಬರು ದೊಡ್ಡ ಮಕ್ಕಳಿಗೆ ಪಾಠ ಹೇಳಿಕೊಡುತ್ತಿದ್ದುದು ಕಾಣಿಸಿತು. ಅವರು ಒಮ್ಮೆ ಇಂಗ್ಲೀಷಿನಲ್ಲೂ ಒಮ್ಮೆ ಹಿಂದಿಯಲ್ಲೂ ಮಾತನಾಡುತ್ತಿದ್ದರು.

ಆಕೆಯ ಧ್ವನಿಯನ್ನು ಕೇಳಿದೊಡನೆಯೇ ಜಾನಕಮ್ಮನವರಿಗೆ ಸಿಡಿಲು ಬಡಿದಂತಾಗಿ ಅಲ್ಲಿಯೇ ನಿಂತುಬಿಟ್ಟರು. ಧ್ವನಿ ಚಿರಪರಿಚಿತವಾಗಿತ್ತು. ಇವರು ಯಾರೋ ನೆನಪಾಗದು ಎಂದುಕೊಂಡು ಕೊಠಡಿಯ ಹಜಾರದ ಕಡೆಗೆ ಅಡಿಯಿಟ್ಟರು. ಅಲ್ಲಿದ್ದ ವಿದ್ಯಾರ್ಥಿಗಳಿಬ್ಬರೂ ಎದ್ದು ಬಂದವರಿಗೆ ಆಸನ ಕೊಟ್ಟು, ಅವರು ಕುಳಿತುಕೊಂಡೊಡನೆಯೇ ಹೊರಟು ಹೋದರು. ಜಾನಕಮ್ಮನವರಿಗೆ ಎಚ್ಚರತಪ್ಪಿದಂತಾಗಿ ಮುಖಚರ್ಯೆ ಮಾತಿನ ಗಾಂಭೀರ್ಯ, ಧ್ವನಿಗಳೂ ಅವರೇ ಇವರು ಎಂದು ಸಾಕ್ಷಿ ಹೇಳುತ್ತಿವೆ ಎಂದುಕೊಂಡರು. ಅವರ ಮನಸ್ಸು ಆನೆಯ ಪಾದಾಕ್ರಾಂತದಿಂದ ಕದಡಿದ ಕೊಳದಂತೆ ಅಲ್ಲೋಲಕಲ್ಲೋಲವಾಯಿತು. ಬಾಯಿ ಬಿಡಲು ಯತ್ನಿಸಿದರೆ ಉಸಿರೇ ಅಡಗಿಹೋದಂತಾಯಿತು; ದೀರ್ಘ ಕಾಲದ ನೆನಪುಗಳು ನಾನು ಮುಂದೆ ತಾನು ಮುಂದೆ ಎಂದು ಎದ್ದು ನಿಂತು, ಆಕೆಯನ್ನು ಮುಗ್ಧೆಯನ್ನಾಗಿ ಮಾಡಿದವು. ಕಳ್ಳನು ಮಾಲು ಸಮೇತ ಮನೆಯಾತನ ಕೈಗೆ ಸಿಕ್ಕಿ ಹಾಕಿಕೊಂಡಂತೆ ಅನುಭವವಾಗಿ ಮೈಯಲ್ಲಿ ನಡುಕ ಹತ್ತಿತ್ತು. ಕಣ್ಣುಗಳಲ್ಲಿ ನೀರಾಡಿ ದೃಷ್ಟಿ ಮಂಜಾಯಿತು. ನಿಟ್ಟುಸಿರುಬಿಡುತ್ತ ಅವಳೇ ಇವಳು ಎಂದು ತೀರ್ಮಾನಿಸಿಕೊಂಡರು. ಹಿಂದಿನ ನೆನಪು ಅವರ ಮುಂದೆ ಮೈದಳೆದು ನಿಂತವು- ನೋಡಿ ಹದಿನಾರು ವರ್ಷಗಳಾದವು ಹಂಪಿಯಲ್ಲಿ, ಪಂಪಾಪತಿಯ ಸನ್ನಿಧಿಯಲ್ಲಿ; ಆಗ ಇವಳು ನವವಧು, ಪುನಃ ನೋಡಲೇ ಇಲ್ಲ- ತಪ್ಪು ಯಾರದು? ಯಜಮಾನರದ್ದು, ದುಡುಕಿ ಆಭರಣಗಳನ್ನೆಲ್ಲ ದತ್ತಾಪಹಾರ ಮಾಡಿ ಈಗ ಪರಲೋಕದಿಂದ ನಮ್ಮಿರ್ವರನ್ನೂ ನೋಡುತ್ತಿರಬಹುದೇ?

'ಯಾರು ಕೈ ಹಿಡಿದು ವಿವಾಹವಾದರೋ ಅವರು ಕರೆದರೆ ಮಾತ್ರ ಬರುತ್ತೇನೆಯೇ

ವಿನಾ ಯಾರೋ ಗುರುತಿಲ್ಲದ, ಬಂಧು ವೆಂದು ಕರೆದರೆ ಅವರ ಜೊತೆಯಲ್ಲಿ ಬರಲು ಪತಿವ್ರತೆ ನಿರಾಕರಿಸಿದ್ದು ತಪ್ಪೇ? ಅನಾಹುತ ವಂತೂ ನಡೆದುಹೋಯಿತು!' ಎಂದು ಕೊಂಡು ಸೆರಗಿನಿಂದ ಕಣ್ಣುಗಳನ್ನು ಒತ್ತುತ್ತ, 'ಇದು ಕನಸಲ್ಲ, ಎಚ್ಚರವಾಗಿದ್ದೇನೆ,' ಎಂದು ಕೊಂಡು, ನಡುಗುತ್ತಿದ್ದ ಸ್ವರದಿಂದ,

''ತಾಯಿ, ನಿನ್ನ ಹೆಸರೇನಮ್ಮ?'' ಎಂದು ಕೇಳಿದರು.

''ನಿಮಗೇ ಗೊತ್ತಿದೆ,'' ಉತ್ತರ ಬಂತು.

''ಹೌದು, ನೀನು ಲೋಕಾ ಲೋಕಾಂಬ.''

ಇಷ್ಟು ಹೊತ್ತೂ ಇಬ್ಬರೂ ಶಿಲಾಪ್ರತಿಮೆ ಗಳಂತೆ ಕುಳಿತಿದ್ದರೇ ವಿನಾ ಆಡಿದ್ದು ಒಂದೇ ಮಾತು! ಅಷ್ಟು ಹೊತ್ತಿಗೆ ನರಸಮ್ಮ ಬಂದಳು, ಹೇಳಿದಳು: ''ಜಯವಂತನ ತಾಯಿ ಮಗುವನ್ನು ಕರೆದುಕೊಂಡು ಹೋಗಲು ಬಂದಿಲ್ಲ; ಮಗುವನ್ನು ಇಲ್ಲಿಯೇ ಇರಿಸಿಕೊಂಡಿದ್ದೇವೆ. ಈ ಅಜ್ಜಿ ಮಗುವನ್ನು ಕರೆದುಕೊಂಡು ಹೋಗಲು ಈಗ ಬಂದಿದ್ದಾರೆ. ಮಗು ಅಜ್ಜಿಯನ್ನು ಗುರುತಿಸ ಲಿಲ್ಲ; ಇವರ ಜೊತೆಗೆ ಹೋಗಲು ನಿರಾಕರಿಸ ಲಿಲ್ಲ; ಇವರ ಜೊತೆಗೆ ಹೋಗಲು ನಿರಾಕರಿ ಸುತ್ತಾನೆ. ಏನು ಮಾಡಬೇಕು?'' ಎಂದು ಕೇಳಿದಳು.

''ಮಗುವನ್ನು ಕರೆದುಕೊಂಡು ಅಜ್ಜಿಯ ಜೊತೆಯಾಗಿ ನೀವೂ ಹೋಗಿ, ಮಗು ಸುಖ ವಾಗಿ ಮನೆ ಸೇರಿದುದಕ್ಕೆ, ತಾರೀಖು, ವೇಳೆ ಯನ್ನೂ ನಮೂದಿಸಿ ಮಗುವಿನ ತಾಯಿ ಯಿಂದ ಬರೆಸಿಕೊಂಡು ತಂದುಕೊಡಿ ಹೊತ್ತಾ ಗುತ್ತಿದೆ. ನೀವು ಹೋಗಿ,'' ಎಂದು ಅಮ್ಮ, ಅವರು ನರಸಮ್ಮನಿಗೆ ಸೂಚನೆ ಕೊಟ್ಟರು. ಎಲ್ಲರೂ ಎದ್ದು ನಿಂತರು. ಸಾಂಪ್ರದಾಯ ದಂತೆ ವಂದನೆ ಪ್ರತಿವಂದನೆಯ ಕ್ರಮ ನಡೆ ಯಲಿಲ್ಲ. ಎಲ್ಲವೂ ಮೂಕರು ಕಂಡ ಕನಸಿ ನಂತೆ ಆಗಿತ್ತು!

ಮನೆಯ ದಾರಿಯಲ್ಲಿ ಜಾನಕಮ್ಮನವರು ನರಸಮ್ಮನನ್ನು ಕೇಳಿದರು:

''ಅಮ್ಮ ಅವರು ಪಾಠ ಹೇಳಿಕೊಡುತ್ತಿದ್ದ ದೊಡ್ಡ ಹುಡುಗರು ಯಾರು?''

ಅವರೇನೂ ದೊಡ್ಡ ಹುಡುಗರಲ್ಲ; ಚಿಕ್ಕ ಮಕ್ಕಳೇ. ಅಮ್ಮ ಅವರು ಅವರಿಗೆ ನೀಡುವ ತುಪ್ಪಾನ್ನ ಉಂಡು ಚೆನ್ನಾಗಿ ಬೆಳೆದಿದ್ದಾರೆ. ಅವರಿಬ್ಬರೂ ತಬ್ಬಲಿ ಮಕ್ಕಳು. ಪಾಕಿಸ್ತಾನ ದಲ್ಲಿ ಅವರ ತಂದೆತಾಯಿಗಳನ್ನು ಅಲ್ಲಿನ ಮುಸಲ್ಮಾನರು ಕೊಂದುಹಾಕಿದರಂತೆ. ತ್ರಿಯಂಬಕ ಬಾಬಾ ಎಂಬ ಗೋಸಾಯಿ ಅವ ರನ್ನು ರಕ್ಷಿಸಿ, ಅವರ ಬಂಧುಗಳನ್ನು ಅರ ಸುತ್ತ ಕರ್ನಾಟಕಕ್ಕೆ ಬಂದಿದ್ದರು. ಅವರಿಗೆ ನಮ್ಮ ಮಾತು ತಿಳಿಯದು, ಈಗ ಕಲಿಯುತ್ತಿ ದ್ದಾರೆ. ಆ ಸಂನ್ಯಾಸಿ ಆ ಮಕ್ಕಳನ್ನು ಕರೆತಂ ದನು. ಅವರನ್ನು ಯಾವುದಾದರೂ ಅನಾಥಾ ಲಯಕ್ಕೆ ಸೇರಿಸಲು ವಿಫಲನಾದಾಗ ಅವರನ್ನು ಅಮ್ಮ ಅವರ ವಶಕ್ಕೆ ಒಪ್ಪಿಸಿ ರಾಮೇಶ್ವರದ ಯಾತ್ರೆಗೆ ಹೋಗಿದ್ದಾನೆ. ಮುಂದೆ ಹೇಗಾ ದೀತೋ ನೋಡಬೇಕು. ಅವರಿಬ್ಬರನ್ನೂ ಮನೆಯಲ್ಲಿ ಇಟ್ಟುಕೊಂಡು ಮಕ್ಕಳಂತೆ ಸಾಕು ತ್ತಿದ್ದಾರೆ. ಮಕ್ಕಳ ಜವಾಬ್ದಾರಿಯೆಲ್ಲ ಅವ ರದ್ದೆ. ಅವರೆದುರು ಯಾರೂ ಚಕಾರವನ್ನೂ ಎತ್ತುವುದಿಲ್ಲ. ಜನರೆಲ್ಲ ಅವರ ಮಡಿಲಿಗೆ ಬೇಕಾದಷ್ಟು ಹಣವನ್ನು ಸುರಿತ್ತಾರೆ. ಅವರ ಸೇವೆ ಧರ್ಮಾರ್ಥವಾದುದು. ಅವರು ಇತರ ರಂತೆ ಸಂಬಳ-ಗಿಂಬಳ ಮುಟ್ಟುವವರಲ್ಲ. ಸಮಾಜದವರೇ ಆಗಾಗ ಅವರಿಗೆ ಗೌರವಧನ ವನ್ನು ಅವರ ಜೀವನಾರ್ಥವಾಗಿ ಒಪ್ಪಿಸು ತ್ತಾರೆ.... ಇತ್ಯಾದಿ.''

ನರಸಮ್ಮ ತನಗೆ ನೇಮಕ ಮಾಡಿದ್ದ ಕೆಲಸ ವನ್ನು ಪೂರೈಸಿ ಮತ್ತೆ ಹಿಂದಿರುಗಿದಳು.

ಜಾನಕಮ್ಮನವರ ಮನಸ್ಸಿನ ಮೇಲೆ ಭಾರಿ ಪೆಟ್ಟು ಬಿದ್ದಂತಾಗಿ ಅಸ್ವಸ್ಥರಾದರು.

ಹಾಗೆಯೇ ಹಾಸುಗೆ ಹಿಡಿದು ಮಲಗಿದರು. ಇವರಿಗೆ ಹೀಗೆ ಅಕಸ್ಮಾತ್ತಾಗಿ ಅಸ್ವಸ್ಥರಾದ ಕಾರಣ ತಿಳಿಯದೆ ಎಲ್ಲರೂ ಮಿಡುಕಿದರು. ಅವರಿಗೆ ಅರ್ಧನಿದ್ರೆ, ಅರ್ಧ ಎಚ್ಚರದ ಸ್ಥಿತಿ. ಹತ್ತಿರದಲ್ಲಿದ್ದ ವೈದ್ಯರನ್ನು ಕರೆತಂದರು. ವೈದ್ಯರು ಪರೀಕ್ಷೆ ಮಾಡಿ ಅವರಿಗೆ 'ಎಕ್ಸೈಟ್‌ಮೆಂಟ್' ಆಗಿ ಆಯಾಸಾವಾಗಿದೆ; ಅವರಿಗೆ ವಿಶ್ರಾಂತಿ ಬೇಕು, ಏನೂ ಹೆದರಬೇಕಾದ್ದಿಲ್ಲ ಎಂದು ಹೇಳಿ ಔಷಧಿ ಕೊಟ್ಟರು. ಸ್ವಲ್ಪ ಹೊತ್ತಾದ ಮೇಲೆ, ಆಕೆ ಗೆಲುವಾಗಿ ಎದ್ದು ಮನೆಯಲ್ಲಿ ತಿರುಗಾಡಿದರು. ಮನೆಯವರು, ತಾಯಿ ವಯಸ್ಸಾದವರು, ಅವರಿಗೆ ಸ್ಕೂಲಿಗೆ ಹೋಗಿ ಬಂದುದರಿಂದ ಆಯಾಸವಾಗಿರಬಹುದೆಂದು ಬಗೆದರು. ತಾಯಿ, "ನಾನು ಹುಷಾರಾಗಿದ್ದೇನೆ, ನೀವು ಸ್ವಲ್ಪ ಹೊತ್ತು ಹೊರಗೆ ಹೋಗಿ ಸುತ್ತಾಡಿಕೊಂಡು ಬನ್ನಿ, ರಾಮೇಶ್ವರ ನನ್ನ ಹತ್ತಿರವೇ ಇರುತ್ತಾನೆ, ಅವನಿದ್ದರೆ ನನಗೂ ಹೊತ್ತು ಹೋಗುತ್ತೆ," ಎಂದು ಹೇಳಿದರು. ಅದರಂತೆ, ಬಂದಿದ್ದವರೊಡನೆ ಉಪೇಂದ್ರ ಮಗುವನ್ನೂ ಕರೆದುಕೊಂಡು ಹೊರಗೆ ಹೋದರು. ರಾಮೇಶ್ವರ, ಅವರ ಚಿಕ್ಕ ಮಗ ಮನೆಯಲ್ಲೆ ಉಳಿದುಕೊಂಡ.

ಜಾನಕಮ್ಮನವರಿಗೆ ಸ್ಕೂಲಿನಲ್ಲಿ ತನಗಾದ ಅನುಭವವನ್ನು ಮಗನೊಡನೆ ಹಂಚಿಕೊಳ್ಳುವ ಕುತೂಹಲವಿತ್ತು. ಅವರು ಅದಕ್ಕಾಗಿಯೇ ಎಲ್ಲರನ್ನೂ ಹೊರಗೆ ಹೋಗಲು ಅನುಮತಿ ಕೊಟ್ಟಿದ್ದರು. ಸುತ್ತಲೂ ನೋಡಿ, 'ನಿಮ್ಮ ಅತ್ತಿಗೆ ಎಲ್ಲಿದ್ದಾಳೆ?' ಎಂದು ಕೇಳಿದರು. ಅವರ ಇಂಗಿತವನ್ನು ಅರಿಯಲಾರದೆ, ರಾಮೇಶ್ವರ, ಅತ್ತಿಗೆ, ಅತ್ತಿಗೆ ಎಂದು ಕೂಗಿ ಕರೆದ. ಸುಮನಾ ಬಂದು ವಿಚಾರಿಸಿದಳು. ಅದಕ್ಕೆ ಅವರು, "ನೀನು ಇದ್ದೀಯೋ ಇಲ್ಲವೋ ಎಂದು ಮಾತ್ರ ಕೇಳಿದೆ, ಏನೂ ಇಲ್ಲ ನಿನ್ನ ಕೆಲಸಕ್ಕೆ ನೀನು ಹೋಗಮ್ಮ," ಎಂದು ಹೇಳಿದಳು.

ಸುಮನಾಳಿಗೆ ಸ್ವಲ್ಪ ಅನುಮಾನ ಮೂಡಿತ್ತು, ಇವರು ಮನೆಯವರನ್ನೆಲ್ಲಾ ಹೊರಕ್ಕೆ ಕಳುಹಿಸಿ, ಚಿಕ್ಕಮಗನೊಡನೆ ಏನಾದರೂ ಸಮಾಲೋಚನೆ ಮಾಡಬಹುದು. ಇವರು ಶಾಲೆಗೆ ಹೋಗಿ ಬಂದ ಮೇಲೆ ಅಸ್ವಸ್ಥರಾಗಿದ್ದಾರೆ. ಬಹುಶಃ ಇವರು ಅಲ್ಲಿ ಅಮ್ಮ ಅವರನ್ನು ಕಂಡು ಬಂದಿರಬೇಕು. ಅಮ್ಮ ಅವರು ಇವರಿಗೆ ಗುರುತಿನವರೋ ಬಂಧುಗಳೋ ಆಗಿದ್ದ ಪಕ್ಷದಲ್ಲಿ, ಬಹುದಿನ ಕಳೆದ ಮೇಲೆ, ಆದಾಗಿ ಬಂದ ಭೇಟಿ ಇವರಿಗೆ ಸಂತೋಷವನ್ನೇ ತರಬೇಕಾಗಿತ್ತು. ಮನೆಗೆ ಬಂದ ಮೇಲೆ ಆ ಸುದ್ದಿಯನ್ನೇ ಪ್ರಸ್ತಾಪಿಸಲಿಲ್ಲ, ಅಥವಾ ಒಬ್ಬರನ್ನೊಬ್ಬರು ಗುರುತಿಸದೇ ಇದ್ದರೂ ಇರಬಹುದು,- ಎಂದುಕೊಂಡು ಅಲ್ಲಿಂದ ಹೊರಟಳು.

ಜಾನಕಮ್ಮನವರು ರಾಮೇಶ್ವರನಿಗೆ ಹೇಳತೊಡಗಿದರು:

"ಮಗೂ, ನನಗಿನ್ನು ಯಾವ ಆಶೆಯು ಉಳಿದಿಲ್ಲ. ಯಾವಾಗಲಾದರೂ ಕಣ್ಣು ಮುಚ್ಚಿಕೊಳ್ಳಬಹುದು. ಅದಕ್ಕೆ ಮೊದಲೇ ಒಂದು ಸಲ ಎಡತೊಡೆಗೆ ಹೋಗಿ ಅರ್ಕೇಶ್ವರ ಮೀನಾಕ್ಷಮ್ಮನವರ ದರ್ಶನ ಮಾಡಬೇಕು. ಮತ್ತು ನಮ್ಮ ಕುಲದೇವರಾದ ಹಂಪಿಯಲ್ಲಿ ಶ್ರೀ ವಿರೂಪಾಕ್ಷೇಶ್ವರ, ಭುವನೇಶ್ವರ ತಾಯಿಯವರ ದರ್ಶನ ಮಾಡಬೇಕು. ಆದರೆ ಪಂಪಾಕ್ಷೇತ್ರವು ದೂರ. ನೀನು ಇಷ್ಟನ್ನು ನನಗಾಗಿ ನಡೆಸಿಕೊಡಬೇಕು."

ಎಡತೊರೆ-ಪಂಪಾಕ್ಷೇತ್ರ ಎಂಬೆರಡು ಶಬ್ದಗಳು ಸುಮನಾಳ ಕಿವಿಗಳನ್ನು ನೆಟ್ಟಗೆ ನಿಮಿರಿಸಿದವು. ಆಕೆ ಅಲ್ಲಿಯೇ ನಿಂತು ಆಲಿಸಿದಳು.

ಜಾನಕಮ್ಮ ಹೇಳತೊಡಗಿದರು.

"ಲೋಕಾ ಸತ್ತು ಹೋದ ಸುದ್ದಿ ನಿಜವಲ್ಲ. ಇದೆಲ್ಲ ನಿನ್ನ ಸೋದರಮಾವನ

ಕುಚೇಷ್ಟೆ. ಎಂಥ ಅನಾಹುತವಾಗಿ ಹೋಯಿತು!''

''ಲೋಕಾ ಎಂದರೆ ಯಾರಮ್ಮ?''

''ಲೋಕಾಂಬಾ ಗೊತ್ತಿಲ್ಲವೆ? ನಿನ್ನ ಚಿಕ್ಕ ಅತ್ತಿಗಿ, ಹಂಪಿಯಲ್ಲಿ ಮದುವೆಯಾದುದು ನೆನಪಿಲ್ಲವೆ?''

''ಹೌದೇನಮ್ಮ! ಹೌದೇನಮ್ಮ ನಿನಗೆ ಯಾರು ಹೇಳಿದರು?''

''ಯಾರೂ ಹೇಳಲಿಲ್ಲ, ನಾನೇ ಅವಳನ್ನು ಕಣ್ತುಂಬ ನೋಡಿ ಬಂದೆ.''

''ಅತ್ತಿಗೆ ಎಲ್ಲಿದ್ದಾರಮ್ಮ?''

''ಅವಳೇ ಈಗ 'ಅಮ್ಮ ಅವರಾಗಿದ್ದಾರೆ. ಹಾಗೇ ಕರೆಸಿಕೊಳ್ಳುತ್ತಿದ್ದಾಳೆ. ಅಲ್ಲದೆ ಸಮಾಜದವರಿಂದ ಪೂಜಿಸಿಕೊಳ್ಳುತ್ತಿದ್ದಾಳೆ.''

''ಶಿವ ಶಿವಾ, ಎಂಥ ಮೋಸವಾಯಿತು!''

''ಸದ್ಯ. ಇದು ಸುಮನಾಳಿಗೂ ಉಪೇಂದ್ರನಿಗೂ ತಿಳಿಯದಿರಲಿ.''

''ಹೌದು, ನಿಜ, ಅವರಿಗೆ ತಿಳಿಯಬಾರದು. ನಾನೊಮ್ಮೆ ಅವರನ್ನು ನೋಡಿ ಮಾತಾಡಿಸಬೇಕು.''

''ಬೇಡ, ಬೇಡ, ನೀನು ಖಂಡಿತವಾಗಿಯೂ ಹೋಗಬಾರದು. ಅಲ್ಲಿಗೆ ನೀನು ಹೋದದ್ದೇ ಆದರೆ ಅನಾಹುತವಾದೀತು, ಈಗ ಆಗಿರುವುದೇ ಸಾಕು, ನಾನು ಇನ್ನು ಏನೇನನ್ನು ನೋಡಬೇಕೋ, ಆ ಪಂಪಾಪತಿಯ ಆಣತಿ, ಅಯ್ಯೋ, ನಾನು ಸಾಯಬಾರದೇ....?''

''ಅತ್ತಿಗೆ ಏನಾದರೂ ಕೆಟ್ಟ ಮಾತನ್ನು ಆಡಿದರೆ? ಏನು ಅಂದರು? ನನಗೆ ತುಂಬ ಕುತೂಹಲವಾಗಿದೆ, ಅವರು ಮೊದಲಿದ್ದ ಹಾಗೇ ಇದ್ದಾರೋ ಬದಲಾಯಿಸಿದ್ದಾರೋ,'' ಎನ್ನುತ್ತ ಕಣ್ಣುಗಳನ್ನು ಒರೆಸಿಕೊಂಡ. ಗಂಟಲು ಕಟ್ಟಿಕೊಂಡಿತು.

''ಏನು ಹೇಳುತ್ತಾಳಪ್ಪ! ಇಬ್ಬರೂ ಎರಡು ಶಿಲಾ ಪ್ರತಿಮೆಗಳಂತೆ ಕುಳಿತಿದ್ದೆವು. ಅವಳಾಡಿದ್ದ ಒಂದೇ ಮಾತು!''

''ಅದು ಏನು?''

''ನಿನ್ನ ಹೆಸರೇನು ಅಂದೆ, ನಿಮಗೇ ಗೊತ್ತಿದೆ ಅಂದಳು. ಕಳ್ಳತನ ಮಾಡಿ, ಮಾಡಿದ ಕಳ್ಳಮಾಲು ಸಹಿತ ಮಾಲಿಕನ ಕೈಗೆ ಸಿಕ್ಕಿಹಾಕಿಕೊಂಡವನಿಗೆ ಯಾವ ಅನುಭವವಾಗುತ್ತದೋ ನನ್ನ ಸ್ಥಿತಿ ಹಾಗಿತ್ತು. ಆಕೆಯ ಕಣ್ಣಿನಲ್ಲೂ ನೀರಾಡಿತು, ಮಾತೂ ಹೊರಡಲಿಲ್ಲ. ಆಕೆಯು ಮೊದಲಿನಂತೆಯೇ ಇದ್ದಾಳೆ, ಮತ್ತೂ ಸೌಮ್ಯವಾಗಿ ಕಾಣಿಸುತ್ತಾಳೆ. ಆಕೆಯ



ಮುಖ ಭಾವ ವ್ಯತ್ಯಾಸವಾಗಲೇ ಇಲ್ಲ; ಕೋಪವನ್ನಾಗಲಿ ದುಃಖವನ್ನಾಗಲಿ ವ್ಯಕ್ತಪಡಿಸಲಿಲ್ಲ.''

''ಈಗ ಅವರಿಗೆ ವಯಸ್ಸೆಷ್ಟು?''

''ಹಂಪಿಯಲ್ಲಿ ಅವಳಿಗೆ ಮದುವೆಯಾದಾಗ, ಅವಳಿಗೆ ಹದಿನಾರು ವಯಸ್ಸು. ಮದುವೆಯಾಗಿ ಈಗ ವರ್ಷಗಳಾದವು.''

''ಹಿಂದಿನ ಚರಿತ್ರೆ ನನಗೆ ನೆನಪಿಲ್ಲ. ಆಗ ನಾನಿನ್ನೂ ಚಿಕ್ಕವ.''

''ಮದುವೆಯಾದ ತರುಣದಲ್ಲೇ,

ಹತ್ತಾರು ವರ್ಷಗಳಿಂದ ಬೆಳೆದು ಬಂದಿದ್ದ ಎರಡೂ ಮನೆಗಳಿಗೆ ಸಂಬಂಧಪಟ್ಟ ಏಕ ದೇಹನ್ಯಾಯದ ಸ್ನೇಹವನ್ನು ನಿನ್ನ ಸೋದರ ಮಾವ ಮುರಿದು ಹಾಕಿದ. ಅವನೇ ಹುಡುಗಿ ಯನ್ನು ಕರೆತರಲು ಅವರ ಮನೆಗೆ ಹೋಗಿದ್ದ. ಆಗ ಹುಡುಗಿ, ''ಯಾರು ಕೈ ಹಿಡಿದು ಮದುವೆಯಾದರೋ ಅವರೇ ಬಂದು ಕರೆದರೆ ಬರುತ್ತೇನೆ ವಿನಾ ಬೇರೆ ಯಾರೋ ಬಂಧುತ್ವ ಹೇಳಿಕೊಂಡು ಬಂದು ಕರೆದರೆ ಅವರ ಜೊತೆಯಲ್ಲಿ ಬರುವವಳಲ್ಲ'' ಎಂದಳಂತೆ. ಸರಿ, ಅದೇ ನೆಪ ಮಾಡಿಕೊಂಡು ಸುಳ್ಳು ಕಥೆ ಕಟ್ಟಿ ನಿಮ್ಮ ತಂದೆಯ ಮನಸ್ಸನ್ನು ಮುರಿದು, ಅವಳಿಗೆ ವಿವಾಹ ಕಾಲದಲ್ಲಿ ಕೊಟ್ಟಿದ್ದ ಆಭರಣಗಳನ್ನೆಲ್ಲ ವಾಪಸ್ ಮಾಡುವಂತೆ ಕೇಳಿದರಂತೆ. ಅವಳು ಮಾಂಗಲ್ಯ ಹೊರತಾಗಿ ಉಳಿದವುಗಳನ್ನೆಲ್ಲ ಕೊಟ್ಟುಬಿಟ್ಟಳು. ಇದಾದ ಎರಡೇ ತಿಂಗಳ ನಲ್ಲಿ ಅವಳ ತಂದೆತಾಯಿಗಳಿಬ್ಬರೂ ಕೊರಗಿ ಕೊರಗಿ ತೀರಿಕೊಂಡರಂತೆ. ಆಮೇಲೆ ಅವಳು ಅತ್ತಿಗೆಯ ಕೈಯಾಳಾದಳು. ಮುಂದೆ ನಡೆ ದದ್ದು ಏನೋ ನನಗೆ ತಿಳಿಯದು. ಈ ಮಧ್ಯೆ ಅವಳು ಆತ್ಮಹತ್ಯೆ ಮಾಡಿಕೊಂಡಳೆಂಬ ಸಮಾ ಚಾರವನ್ನು ನಂಬಿ, ವಿಚಾರಿಸದೆ ದುಡುಕಿ ಉಪೇಂದ್ರನಿಗೆ ಬೇರೆ ಮದುವೆ ಮಾಡಿ ಪತಿತ ರಾದರು. ಅವರೂ-ನಿಮ್ಮ ತಂದೆಯೂ ತೀರಿ ಕೊಂಡು ನನ್ನ ಪಾಲಿಗೆ ದುಃಖ ಮತ್ತು ಪಾಪದ ಹೊರೆಯನ್ನು ನನ್ನ ಮೇಲೆ ಹೇರಿ ಹೋಗಿದ್ದಾರೆ. ಲೋಕಾ ಸದ್ಗೃಹಸ್ಥರ ಮಗಳು. ಮುನಿದರೆ ಈ ನಮ್ಮ ವಂಶವನ್ನೇ ಸುಡಬಲ್ಲಳು. ಹಾಗೆ ಅವಳು ಮಾಡದೆ ಶಾಂತ ಳಾಗಿದ್ದಾಳೆ. ಈ ಪ್ರಸ್ತಾಪ ಇಲ್ಲಿಗೇ ನಿಲ್ಲಲಿ. ಇನ್ನು ಎಲ್ಲರೂ ಬರುವ ಹೊತ್ತಾಯಿತು. ಉಪೇಂದ್ರನಿಗಾಗಲಿ ಸುಮನಾಳಿಗಾಗಲಿ ಈ ವಿವರ ರಟ್ಟಾಗದಂತೆ ನೋಡಿಕೋ. ನೀನೂ ಹೊರಗೆ ಹೋಗಿ ಬಾ.''

ಸುಮನಾ ಇವರ ಸಂಭಾಷಣೆಯನ್ನೆಲ್ಲ ಆಮೂಲಾಗ್ರವಾಗಿ ಕೇಳಿಸಿಕೊಂಡು ಕಣ್ಣೀರಿ ಡುತ್ತ ತನ್ನ ಕೆಲಸಕ್ಕೆ ಹೋದಳು. ರಾತ್ರಿ ಎಲ್ಲರೂ ಮಲಗಿದರು. ಜಾನಕಮ್ಮ, ರಾಮೇ ಶ್ವರ ಮತ್ತು ಸುಮನಾಳಿಗೂ ನಿದ್ರೆ ಹತ್ತ ಲಿಲ್ಲ, ಏನೇನೋ ಚಿಂತೆಗಳು ಆಕ್ರಮಿಸಿದವು. ನಿದ್ದೆ ಬಂದಾಗ ಮೂವರಿಗೂ ಇದೇ ಕನಸು ಕಾಣಿಸಿಕೊಂಡಿತು, ಆದರೆ ಕನಸಿನ ರೀತಿಯೇ ಬೇರೆಯಾಗಿತ್ತು. ಜಾನಕಮ್ಮನವರಿಗೆ ಅಂದು ಲೋಕಾಂಬಾರವರೊಡನೆ ಆದ ಸಮಾಗಮದ ಪುನರಾವರ್ತನೆಯ ಕನಸು ಕಾಣಿಸಿಕೊಂ ಡಿತ್ತು. ಮಧ್ಯೆ ಮಧ್ಯೆ ಅವರು ಕನವರಿಸಿಕೊ ಳ್ಳುತ್ತಿದ್ದರು. ಒಮ್ಮೊಮ್ಮೆ ಎಲ್ಲರಿಗೂ ಕೇಳಿಸು ವಂತೆ, 'ಲೋಕಾ ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿ, ತ್ಯಾಗವನ್ನೇ ಭೋಗಿಸಿ ಹಿಗ್ಗು ತ್ತಿದ್ದಾಳೆ' ಎಂಬ ಅರ್ಥ ಬರುವ ಮಾತುಗ ಳನ್ನು ಅಂದುಕೊಳ್ಳುತ್ತಿದ್ದರು. ಅವರು ಹಾಗೆ ಆಡಿಕೊಳ್ಳುತ್ತಿದ್ದ ಮಾತುಗಳಿಂದ ಎಚ್ಚರ ಗೊಂಡು ಮಾತನಾಡಿಸಿದಾಗ, 'ಏನೂ ಇಲ್ಲ ಲೋಕ, ಲೋಕ, ಎಲ್ಲ ಕನಸು' ಎಂದು ಸಮಾಧಾನ ಹೇಳುವರು. ರಾಮೇಶ್ವರನಿಗೆ ಕನ ಸಿನಲ್ಲಿ ಲೋಕಾಂಬರವರನ್ನು ಕಂಡು ಮಾತ ನಾಡಿದಂತೆ ಅನುಭವವಾಯಿತು. ಸುಮನಾ ಳಿಗೆ ಎಲ್ಲವೂ ಯಥಾರ್ಥವಾಗಿ ತಿಳಿದಿದ್ದುದ ರಿಂದ ಎದೆ ಒಡೆದುಹೋದಂತಾಗಿ ಬಡಿದು ಕೊಳ್ಳುತ್ತಿತ್ತು. ಆಕೆ ಊಟವನ್ನೂ ಮಾಡದೆ, ನಿದ್ದೆ ಬಾರದೆ ಹೊರಳಾಡುತ್ತಿದ್ದಳು. ಆಲೋ ಚನೆ ಆಳವಾದಾಗ ಅಮ್ಮ ಅವರ ಸಂಬಂಧ ಇಷ್ಟೊಂದು ಹತ್ತಿರಕ್ಕೆ ಬಂದುದೇ ಆದರೆ ಇನ್ನೇನು ಗತಿ ಎಂದು ನಿಟ್ಟುಸಿರುಬಿಟ್ಟಳು. ಮರುಕ್ಷಣದಲ್ಲೇ ಅನುಗ್ರಹ ಗೌರೀದೇವಿ ಯಂತೆ ಕಾಣಿಸುವ ಆಕೆಗೆ ಇಂಥ ದುರವಸ್ಥೆ ಹೇಗೆ ಪ್ರಾಪ್ತವಾಯಿತೆಂದು ಆಶ್ಚರ್ಯಪಡು ವಳು. ರಾತ್ರಿಯೆನ್ನೆಲ್ಲ ಹೀಗೇ ಕಳೆದಳು.

ರಾಮೇಶ್ವರ ಎಲ್ಲರಿಗಿಂತಲೂ ಚಿಕ್ಕವನು.

ಹೊಸದಾಗಿ ಅವನು ಒಳ್ಳೆಯ ಕೆಲಸಕ್ಕೆ ಸೇರಿ ಹರಿಹರದಲ್ಲಿ ಇದ್ದನು. ಅವನಿನ್ನೂ ಸಂಸಾರದ ತೊಡಕಿನಲ್ಲಿ ಸಿಕ್ಕಿಲ್ಲ. ಅವನಿಗೆ ವ್ಯಾಕುಲವೂ ಕೋಪವೂ ಉಕ್ಕಿಬರುತ್ತಿತ್ತು. ಆದ್ದರಿಂದ ಲೋಕಾಂಬರವರನ್ನು ನೋಡಿ, ಮಾತನಾಡಿಯೇ ಹರಿಹರಕ್ಕೆ ವಾಪಸಾಗಬೇಕೆಂದು ಸಂಕಲ್ಪ ಮಾಡಿದ. ಬೆಳಗಾದ ಮೇಲೆ ಬಂದಿದ್ದವರೆಲ್ಲ ಬೊಂಬಾಯಿಗೆ ಹೊರಡಲು ನಿರ್ಧರಿಸಿದರು. ಆದರೆ ರಾಮೇಶ್ವರ ಬೇರೆ ಯೋಚನೆ ಮಾಡಿದ. ರೈಲಿಗೆ ಹೊರಡುವ ಮುನ್ನ ರಾಮೇಶ್ವರ ತಾಯಿಗೆ ನಮಸ್ಕರಿಸಿ ಆಶೀರ್ವಾದ ಪಡೆದು, ಆಕೆಯನ್ನು ತಾನೇ ಬಂದು ಹಂಪಿಗೂ ಎಡತೊರೆಗೂ ಕರೆದುಕೊಂಡು ಹೋಗಿ ದೇವರ ದರ್ಶನ ಮಾಡಿಸುವದಾಗಿ ಹೇಳಿದ. ರಾತ್ರಿಯೇ ಎಲ್ಲರೂ ಪ್ರಯಾಣ ಮಾಡಿದರು. ಮರುದಿನ ಮನೆ ಬರಿದಾಗಿತ್ತು. ಆ ದಿನ ಮಗು ಶಾಲೆಗೆ ಹೊರಡುವ ಮುನ್ನ ರಾಮೇಶ್ವರ ಅತ್ತಿಗೆಯನ್ನು ಕೇಳಿದ; "ಅತ್ತಿಗೆ, ಜಯವಂತನನ್ನು ನಾನೇ ಏಕೆ ಶಾಲೆಗೆ ಕರೆದುಕೊಂಡು ಹೋಗಬಾರದು? ಮಗುವನ್ನು ಮನೆಗೆ ಕರೆದುಕೊಂಡು ಬರುವಾಗ ಗುರುತಿದ್ದವರೇ ಬರಬೇಕೆಂಬ ನಿಯಮವಿರುವ ಹಾಗೆ, ಗುರುತಿರುವವರೇ ಸ್ಕೂಲಿಗೆ ಕರೆದುಕೊಂಡು ಹೋಗಬೇಕೆಂಬ ನಿಯಮವಿಲ್ಲವಷ್ಟೆ. ನಾನೇ ಈ ದಿನ ಅವನ ಜೊತೆಯಲ್ಲಿ ಸ್ಕೂಲಿನವರೆಗೂ ಹೋಗಬಾರದೇ? ಎಂದು ಪ್ರಶ್ನಿಸಿದ. ಇಂಗಿತಜ್ಞಳಾದ ಅತ್ತಿಗೆ ರಾಮೇಶ್ವರನ ಉದ್ದೇಶವನ್ನು ಊಹಿಸಿ, "ಈವತ್ತು ಬೇಡ, ಅಲ್ಲಿಗೆ ಇಂದು ಬಹು ಜನರು ಬಂದು ಹೋಗುತ್ತಾರೆ. ನಾಳೆ ಸ್ಕೂಲಿಗೆ ರಜವಿದೆ. ನೀನು ಹೋಗಿ ಬರಬಹುದು," ಎಂದಳು. "ಮಗುವಿಗೆ ರಜವಿರುವದರಿಂದ ನಾಳೆ ಅವನು ಸ್ಕೂಲಿಗೆ ಹೋಗುವದಿಲ್ಲ. ಅವನಿಲ್ಲದೇ ಹೋದರೆ ನನಗೆ ಮತ್ತೇನು ಕೆಲಸವಿದೆ ಅಲ್ಲಿ?" ಎಂದು ಸಂದೇಹಾಸ್ಪದವಾಗಿ ಕೇಳಿದ. "ರಜವಿದ್ದರೇನಂತೆ;? ಸ್ಥಳ ರಮ್ಯವಾಗಿದೆ. ಶಾಲೆಯನ್ನೂ ನೋಡಿದಂತಾಗುತ್ತದೆ. ಅಲ್ಲಿ ಒಳ್ಳೆಯ ಜನರಿದ್ದಾರೆ. ಅವರನ್ನೂ ಕಂಡು ಮಾತನಾಡಬಹುದು. ಯಾರ ಅಡ್ಡಿಯೂ ಅಡತಡೆಯೂ ಇಲ್ಲದೆ ಬೇಕಾದಷ್ಟು ಹೊತ್ತು ಅಲ್ಲಿರಬಹುದು. ನೀನು ಇಷ್ಟಪಟ್ಟರೆ ....ನಾನೂ ಬರುತ್ತೇನೆ ಹೋಗೋಣ. ಈ ಊರಿನಲ್ಲಿ ನಿನಗೆ ಎಷ್ಟೋ ಜನ ಸ್ನೇಹಿತರಿದ್ದಾರೆ. ಈವತ್ತು ಅವರನ್ನೆಲ್ಲ ನೋಡಿ, ಮಾತಾಡಿಸಿಕೊಂಡು ಬಾ," ಎಂದು ಸೂಚಿಸಿದಳು.

ಅತ್ತಿಗೆಯ ಜಾಣತನವನ್ನು ರಾಮೇಶ್ವರ ಮನಸ್ಸಿನಲ್ಲಿ ಮೆಚ್ಚಿಕೊಂಡಾಡಿದ. ಅತ್ತಿಗೆಗೆ ಹೇಗೋ ತನ್ನ ಉದ್ದೇಶ ತಿಳಿದು-ಹೋದಂತಿದೆ. ಮೊನ್ನೆ ಅಮ್ಮ ನನಗೆ ರಹಸ್ಯವಾಗಿ ಹೇಳಿದ ಮಾತನ್ನು ಅತ್ತಿಗೆ ಕೇಳಿಸಿಕೊಂಡಿರಬಹುದು; ಅಥವಾ ಆಕೆಗೆ ಈ ಮೊದಲು ಎಲ್ಲವೂ ತಿಳಿದಿರಬಹುದು ಎಂದು ತರ್ಕಿಸಿ, "ಹಾಗೆ ಮಾಡುತ್ತೇನೆ, ನಿಮ್ಮ ಸಲಹೆಯನ್ನು ಒಪ್ಪಿಕೊಂಡಿರುತ್ತೇನೆ" - ಎಂದು ಹೇಳಿಬಿಟ್ಟ.

ಮರುದಿನ ಬೆಳಿಗ್ಗೆ ಶಾಲೆಗೆ ಹೋಗಿಬರುವ ಕಾರ್ಯಕ್ರಮವನ್ನೇನೋ ಹಾಕಿಯಾಯಿತು. ಆದರೆ ಅಲ್ಲಿಗೆ ಹೇಗೆ ಹೋಗಬೇಕು? ಹೇಗೆ ಮಾತನಾಡಬೇಕು? ಏನು ಮಾತನಾಡಬೇಕು? ಎಂಬುದೊಂದೂ ರಾಮೇಶ್ವರನಿಗೆ ತೋರಲಿಲ್ಲ. ಅಲ್ಲದೆ ತಾನು ಇಷ್ಟಪಟ್ಟರೆ ಆಕೆಯೂ ಬರುವದಾಗಿ ಸುಮನಾ ಸೂಚಿಸಿದ್ದಳು. ಇದರ ಔಚಿತ್ಯವಾದರೂ ಏನು? ಆಕೆಯೂ ಬರುವುದರಿಂದ ವಾತಾವರಣ ಹಿತಕರವಾಗುವುದೋ ಇಲ್ಲವೋ ಯಾರು ಊಹಿಸಬಲ್ಲರು? ಹೆಂಗಸಾದ ಲೋಕಾಂಬ ತನ್ನ ಮನಸ್ಸನ್ನು ಸಡಲಿಸಿ ಜಿಗುಪ್ಸೆ ತೋರಿಸಿಕೊಳ್ಳುವ ಸಂಭವವಿಲ್ಲದಿಲ್ಲ. ಆಕೆ ದೇವತೆಯಲ್ಲ. ಮನುಷ್ಯಳೇ ಆಗಿ ಮನುಷ್ಯರಿಗೆ ಸಹ

ಜವಾದ ದೌರ್ಬಲ್ಯವನ್ನು ತೋರಿಸಿಕೊಳ್ಳಲಾರಳೆಂಬ ಭರವಸೆ ಇಲ್ಲ. ಅತ್ತಿಗೆ ಅವರ ಬಳಿಗೆ ಎರಡು ಮೂರು ಸಲ ಹೋಗಿರುತ್ತಾಳೆ. ಇದೇನು ಪ್ರಥಮ ಸಮಾಗಮವಲ್ಲ. ಆದರೂ ಆಗ ಎಲ್ಲರ ದೃಷ್ಟಿಯಲ್ಲಿ ಮಗುವಿನ ತಾಯಿಯಾಗಿ ಕಾಣಿಸಿಕೊಂಡಳೇ ವಿನಾ ಬೇರೆಯಾಗಿರಲಿಲ್ಲ. ಈಗಿನ ಪರಿಸ್ಥಿತಿಯೇ ಬೇರೆ. ಲೋಕಾ ಹಿಂದಿನ ದುರಂತ ದಿನಗಳು ಆಕೆಯ ನೆನಪಿನಲ್ಲಿ ಮರುಕಳಿಸಬಹುದು. ಆಗ ಆಕೆಗೆ ತಡೆಯಲಾರದಷ್ಟು ದುಃಖವೂ ಅದರೊಡನೆ ಕೋಪವೂ ಉಕ್ಕಿಬರಬಹುದು. ಇಂಥ ವಿಷಮ ಪರಿಸ್ಥಿಯನ್ನು ಉಂಟು ಮಾಡಿದ ಕಾರಣಿಗ ನಾನಾಗಿ, ಆಕೆಯ ಶಾಂತಿಯನ್ನು ಕದಡಿ, ಆಕೆಗೆ ನಾನು ಅನಿಷ್ಟವಾದ ಆಗಂತುಕನಾಗಿ ಕಂಡು ಬಂದು ರೊಚ್ಚಿಗೇಳಬಹುದು. ಆದುದರಿಂದ ಅಲ್ಲಿಗೆ ಹೋಗದಿರುವುದೇ ಲೇಸು. ಎಂದು ಮುಂತಾಗಿ ತರ್ಕಿಸಿದ. ಆದರೆ ಆಕೆಯ ಸ್ವರೂಪವನ್ನು ದೂರದಿಂದಲಾದರೂ ನೋಡಬೇಕೆಂಬ ಹಂಬಲ ಪೀಡಿಸುತ್ತಿತ್ತು. ಇವೆಲ್ಲ ಅವನಿಗೆ ಬಿಡಿಸಲಾರದ ಸಮಸ್ಯೆಯಾಯಿತು. ಹೀಗಾಗಿ ರಾತ್ರಿಯೆಲ್ಲ ಇದೇ ಯೋಚನೆಯಲ್ಲಿಯೇ ಮುಳುಗಿದ್ದನು.

ಈಚೆಗೆ ನಡೆದ ವಿದ್ಯಮಾನಗಳ ಅರಿವು ಪ್ರತ್ಯಕ್ಷವಾಗಿ ಆಗಲಿ ಅಪ್ರತ್ಯಕ್ಷವಾಗಿ ಆಗಲಿ ಉಪೇಂದ್ರನಿಗೆ ತಿಳಿದಿರಲಿಲ್ಲ. ಆದರೆ ಅತ್ತಿಗೆಗೆ ಅದರ ಸುಳಿವು ಸಿಕ್ಕಿರಬಹುದೆನಿಸುವಂತಿದೆ. ಅಣ್ಣನು ಅಭಿಮತವಿಲ್ಲದೆ ಲೋಕಾಂಬೆಯನ್ನು ಹೋಗಿ ನೋಡುವುದರಿಂದ ಮುಂದೆ ಯಾವ ತರದ ರಾದ್ಧಾಂತಕ್ಕಿಟ್ಟುಕೊಳ್ಳುವುದೋ ಎಂಬ ಭೀತಿಯೂ ಇತ್ತು. ಒಂದು ವೇಳೆ ತನ್ನ ಸಮಾಗಮವನ್ನು ಆಕೆ ಅನಿಷ್ಟವೆಂದು ಭಾವಿಸಿ ಅವಮಾನಗೊಳಿಸಿದರೂ ಅದು ತನ್ನಲ್ಲಿಯೇ ಉಳಿಯುವುದರಿಂದ ಇತರರ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಅದನ್ನು ನಾನು ಸಹಿಸಿಕೊಳ್ಳಬಲ್ಲೆ. ಆದುದರಿಂದ ಅತ್ತಿಗೆ ತನ್ನ ಜೊತೆಯಲ್ಲಿ ಬರಬಾರದೆಂದು ತರ್ಕಿಸಿ ತೀರ್ಮಾನಿಸಿಕೊಂಡ ರಾಮೇಶ್ವರ.

ಬೆಳಗಾದ ಮೇಲೆ ರಾಮೇಶ್ವರ ತಾನೊಬ್ಬನೇ ಶಾಲೆಯ ಕಡೆಗೆ ಹೊರಟ. ಅತ್ತಿಗೆ ಏನೂ ಹೇಳಲಿಲ್ಲ. ಶಾಲೆಯ ಮಹಾದ್ವಾರಕ್ಕೆ ಎಂದಿನಂತೆ ಬೀಗ ಹಾಕಿರಲಿಲ್ಲ. ಇಬ್ಬರು ಹೆಣ್ಣಾಳುಗಳು ಹೂವಿನ ಗಿಡಗಳಿಗೆ ನೀರೆರೆಯುತ್ತಿದ್ದರು. ಹಿಂದಿನಿಂದ ಜಯವಂತ ಓಡಿಬಂದ. ರಾಮೇಶ್ವರನಿಗೆ ದಿಗ್ಭ್ರಮೆಯಾಯಿತು. ''ನೀನೇಕೆ ಬಂದೆ, ಈವೊತ್ತು ಶಾಲೆಗೆ ರಜೆಯಲ್ಲವೆ,'' ಎಂದು ಕೇಳಿದ. ''ಚಿಕ್ಕಪ್ಪನ ಜೊತೆಯಲ್ಲಿ ನಾನೂ ಹೋಗಬೇಕೆಂದು ಅಮ್ಮನನ್ನು ಕೇಳಿದೆ. ಅಮ್ಮ ಹೋಗು ಎಂದರು,'' ಎಂದು ಮಗು ಹೇಳಿತು. ಮಗುವು ಜೊತೆಗೆ ಬಂದಿರುವುದು ಬಹುಶಃ ಲಾಭವೇ ಇರಬೇಕು. ಇದರಲ್ಲಿ ಅತ್ತಿಗೆಯ ಕೈವಾಡವೂ ಇರಬಹುದು ಎಂದು ರಾಮೇಶ್ವರ ಭಾವಿಸಿದ. ಅತ್ತಿಗೆಯ ಜಾಣತನವನ್ನು ಮೆಚ್ಚಿಕೊಂಡ.



ತೋಟದಲ್ಲಿ ಕೆಲಸ ಮಾಡುತ್ತಿದ್ದ ಹೆಣ್ಣಾಳುಗಳು ಬಂದು, ''ಏನು ಬೇಕಾಗಿತ್ತು? ಈಹೊತ್ತು ರಜೆ, ಮಕ್ಕಳು ಯಾರೂ ಇಲ್ಲ, ಏನು ಬೇಕು?'' ಎಂದು ಕೇಳಿದರು.

''ಅಮ್ಮ ಅವರನ್ನು ಕಾಣಬೇಕಾಗಿತ್ತು. ನನ್ನ ಹೆಸರು ರಾಮೇಶ್ವರ. ದಯವಿಟ್ಟು ಅವರಿಗೆ ತಿಳಿಸುವಿರಾ?''

''ಅಗೋ ನೋಡಿ, ಆ ಮರದ ಅಡಿಯಲ್ಲಿ ಪುಸ್ತಕವನ್ನು ಓದುತ್ತ ತಿರುಗಾಡುತ್ತಿದ್ದಾರೆ. ಅವರೇ ಅಮ್ಮ ಅವರು. ಸ್ವಲ್ಪ ಹೊತ್ತು ಇಲ್ಲೇ ಇರಿ. ಅವರಿಗೆ ತಿಳಿಸಿ ಬರುತ್ತೇನೆ.''

ಮಧ್ಯೆ ಮಧ್ಯೆ ಜಯವಂತ ಏನೇನೋ ಪ್ರಶ್ನೆ ಕೇಳುತ್ತಿದ್ದ. ರಾಮೇಶ್ವರ ಅನ್ಯಮನಸ್ಕನಾಗಿ ಹೂಂ ಹೌದು ಎಂದು ನುಡಿಯುತ್ತಿದ್ದ. ರಾಮೇಶ್ವರನಿಗೆ ಕಾಣಿಸುವಷ್ಟೇ ದೂರದಲ್ಲಿ ಒಂದು ಮರದ ನೆರಳಿನಲ್ಲಿ ಏನನ್ನೋ ಓದುತ್ತ ಮರವನ್ನು ಪ್ರದಕ್ಷಿಣೆ ಮಾಡುತ್ತಿದ್ದರು ಅಮ್ಮ. ಅವರು ಶುಭ್ರವಾದ ಬಿಳಿಯ ಸೀರೆಯುಟ್ಟು ಹಳದಿಯ ಶಾಲನ್ನು ಹೊದೆದಿದ್ದರು. ಹತ್ತಿರದಲ್ಲಿ ಯಾರೂ ಇರಲಿಲ್ಲ. ಕೆಲಸದಲ್ಲಿ ತೊಡಗಿದ್ದ ಹೆಂಗಸು ಅವರನ್ನು ಸಮೀಪಿಸಿ ರಾಮೇಶ್ವರನ ಸಮಾಚಾರ ತಿಳಿಸಿ ಬಂದು, ''ಅಲ್ಲಿಗೆ ಹೋಗಿ ಮಾತನಾಡಿ,'' ಎಂದು ಹೇಳಿ ತನ್ನ ಕೆಲಸದಲ್ಲಿ ತೊಡಗಿದಳು. ಈ ಮಾತನ್ನು ಕೇಳುತ್ತಲೇ ಮಗು ಮುಂದೆ ಮುಂದೆ ಓಡಿತು, ರಾಮೇಶ್ವರ ಅದನ್ನೇ ಅನುಸರಿಸಿದ. ಮಗು ನಿತ್ಯವೂ ಅಜ್ಜಿಗೆ ನಮಸ್ಕರಿಸುವಂತೆಯೇ ಅಮ್ಮ ಅವರ ಪಾದಗಳ ಮುಂದೆ ಮಲಗಿ, 'ನಮಸ್ತೆ' ಎಂದಿತು. ರಾಮೇಶ್ವರ ಮೌನವಾಗಿ ತಲೆ ಬಗ್ಗಿಸಿ ನಮಸ್ಕರಿಸಿದ. ಆಕೆಯೂ ಕೈಮುಗಿದು, ಅವನ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದರು. ರಾಮೇಶ್ವರನೇ ಮೊದಲು ಮಾತನಾಡಿದ.

''ನನ್ನ ಹೆಸರು ರಾಮೇಶ್ವರ, ತಮ್ಮ ದರ್ಶನಾರ್ಥವಾಗಿಯೇ ಬಂದಿದ್ದೇನೆ,'' ಎಂದು ವಿನೀತ ಭಾವದಿಂದ ನುಡಿದ.

''ನೀವು ಎಲ್ಲಿಂದ ಬಂದಿದ್ದೀರಿ?'' ಎಂದು ಆಶ್ಚರ್ಯದಿಂದ ಕೇಳಿದರು.

''ನಾನು ಹರಿಹರದಿಂದ ಬಂದಿದ್ದೇನೆ.''

''ಅಲ್ಲಿ ಏನು ಮಾಡಿಕೊಂಡಿದ್ದೀರಿ?''

''ಅಲ್ಲಿಯೇ ನನ್ನ ಕೆಲಸ, ನಾನೊಬ್ಬ ಎಂಜನಿಯರಾಗಿ ಕೆಲಸ ಮಾಡುತ್ತೇನೆ.''

''ನನ್ನ ಗುರುತು ನಿಮಗುಂಟೋ?''

''ಉಂಟು. ಆಗ ನಾನಿನ್ನೂ ಚಿಕ್ಕವನು, ಆಗ ನನಗೆ ಎಂಟು ವರ್ಷವಾಗಿತ್ತು.''

''ನೋಡಿದ್ದುದು ಎಲ್ಲಿ?''

''ಹಂಪಿಯಲ್ಲಿ, ಇಂದಿಗೆ ಹದಿನಾರು ವರ್ಷಗಳಾಗಿವೆ.''

''ಬನ್ನಿ, ಮನೆಗೆ ಹೋಗೋಣ,'' ಎಂದು ಮನೆಗೆ ನಡೆದರು. ರಾಮೇಶ್ವರ, ಮಗು ಹಿಂಬಾಲಿಸಿದರು. ಸಂಭಾಷಣೆ ನಡೆದಾಗ ಆಕೆಯ ಮುಖ ಭಾವದಲ್ಲಿ ಏನೂ ವ್ಯತ್ಯಾಸ ಕಾಣಲಿಲ್ಲ. ಮೂವರೂ ಮೇಜಿನ ಸುತ್ತ ಹಾಕಿದ್ದ ಆಸನಗಳಲ್ಲಿ ಕುಳಿತರು. ಲೋಕಾಂಬ ಒಳಗಿನಿಂದ ಹಣ್ಣಿನ ರಸವನ್ನು ಮೂರು ಗಾಜಿನ ಲೋಟಗಳಲ್ಲಿ ತಂದಿರಿಸಿ, ''ತೆಗೆದುಕೊಳ್ಳಿ,'' ಎಂದರು.

''ಈ ಮಗು ಸುಮನಾ ಮಗುವಲ್ಲವೆ?''

''ಹೌದು.''

''ಆಕೆ ನಿಮಗೆ ಹೇಗೆ ಸಂಬಂಧಿ?''

''ನನ್ನ ಅತ್ತಿಗೆ ಅವರು.''

''ಸಂತೋಷ, ನೀವು ಬಂದುದು ಒಳ್ಳೆಯದಾಯಿತು.''

''ನನ್ನ ಗುರುತು ತಮಗೆ ಸಿಕ್ಕಲಿಲ್ಲವೆಂದು ತೋರುತ್ತೆ.''

''ಜ್ಞಾಪಕವಿದೆ, ರಾಮೇಶ, ರಮೇಶ ಅಥವಾ ರಾಮು ಎಂದು ಕರೆಯು-ತ್ತಿದ್ದರಲ್ಲವೆ?''

''ಮನೆಯವರು ಹಾಗೇ ಕರೆಯು

ತ್ತಿದ್ದರು.''

''ಹಿಂದೆ ಬಹಳ ಹಿಂದೆ, ಒಂದು ದುಃಖದ ಸಮಾಚಾರವೆಂದು ಕೇಳಿದ್ದೆ. ಅದು ಸುಳ್ಳು ಸಮಾಚಾರ ಈಗ ಗೊತ್ತಾಯಿತು.''

''ಅದೇನು?''

''ನೀವು ಇನ್ನಿಲ್ಲ ಎಂಬುದಾಗಿ ಕೇಳಿದ್ದೆ, ನಂಬಿದ್ದೆ.''

''ಈಗ ನಿಜಾಂಶ ಹೇಗೆ ತಿಳಿಯಿತು?''

''ನೋಡಿ ಬಂದವರೇ ಹೇಳಿದರು.''

''ಏನು ಹೇಳಿದರು?''

''ಅವರು, ಲೋಕಾ..... ಸತ್ತಿದ್ದು .... ವರ್ತಮಾನ.... ಕೃತ್ರಿಮಸಂಧಾನ. ಅದು ನಿಜವಾಗಿದ್ದರೆ ಈ ಕಣ್ಣುಗಳು ಹೇಗೆ ಅವಳನ್ನು ನೋಡಿದವು ಎಂದು.''

''ಅವರು ಅಂದಿದ್ದು ಸರಿಯೇ?''

''ಇದರ ಯಾಥಾರ್ಥ್ಯ ಯಾರಿಗೂ ಗೊತ್ತಿಲ್ಲ. ಅತ್ತಿಗೆಗೆ ಸುಳಿವು ಆಗಿರಬಹುದು.''

''ಬೆಂಗಳೂರಿನಲ್ಲಿ ನಿಮಗೆ ಏನು ಕೆಲಸವಿತ್ತು?''

''ನನಗೆ ಇಲ್ಲಿ ಏನಾದರೂ ಆಫೀಸ್ ಕೆಲಸವಿರುತ್ತೆ. ನನ್ನ ಅತ್ತಿಗೆ-ಅಣ್ಣ ಇಲ್ಲಿಗೇ ಬಂದಿದ್ದಾರೆ. ಇಲ್ಲಿಗೆ ವರ್ಗವಾಗಿ ಎಂಟು ತಿಂಗಳಾಯಿತು; ಅದಕ್ಕೆ ಮೊದಲು ಅವರು ಬಳ್ಳಾರಿಯಲ್ಲಿದ್ದರು. ನಿಮ್ಮ ದರ್ಶನ ಮಾಡಬೇಕೆಂಬ ಆಶೆ ಈಗ ಪೂರ್ತಿಯಾಯಿತು. ನೀವು ದಯಮಾಡಿ ಹರಿಹರಕ್ಕೊಮ್ಮೆ ಬರಬೇಕು.''

''ನಿಮ್ಮ ಮನೆಯಲ್ಲಿ ಮತ್ತಾರಾರು ಇದ್ದಾರೆ?''


''ನಾನೊಬ್ಬನೇ ಇದ್ದೇನೆ; ಅಡುಗೆಯ ಹುಡುಗ ಇದ್ದಾನೆ.''

''ಆಗಲಿ, ನೋಡೋಣ. ಎಲ್ಲ ದೈವೇಚ್ಛೆ!''

''ನೀವು ನನ್ನನ್ನು ಬಹುವಚನದಲ್ಲಿ ಕರೆಯಬಾರದು, ಹಾಗೆ ಕರೆದರೆ ನನಗೆ ಹೀನಾಯವಾಗುತ್ತದೆ. ನನಗೆ ನೀವು ತಾಯಿ ಇದ್ದಂತೆ, ಆಶೀರ್ವಾದ ಮಾಡಬೇಕು. ನಾನಾಡಿದ ಮಾತುಗಳಲ್ಲಿ ತಪ್ಪಿದ್ದು, ಅಪರಾಧವಾಗಬಹುದು. ಅದನ್ನೆಲ್ಲ ಮನ್ನಿಸಬೇಕು.''

ಆಕೆ ಬಾಯಿ ತುಂಬ ನಕ್ಕರು. ''ನೀನು ವಿವೇಕಶಾಲಿಯೆಂಬುದು ನಿನ್ನ ಮಾತಿನಿಂದಲೇ ಅರ್ಥವಾಗುತ್ತಿದೆ. ನಿನ್ನನ್ನು ಕಂಡಿದ್ದರಿಂದ ಎಷ್ಟೋ ಸಮಾಧಾನವಾಗಿದೆ.... 'ಭಾವ'.... ಹೇಗಿದ್ದಾರೆ?''

''ಅವರಿಗೆ ನಾನು ಇಲ್ಲಿಗೆ ಬಂದ



ಸಮಾಚಾರವೇನೂ ತಿಳಿಯದು. ತಿಳಿದರೆ ತತ್‌ಕ್ಷಣವೇ ಹಾಸುಗೆ ಹಿಡಿದು ಮಲಗಿಯಾರೆಂದು ಯಾರಿಗೂ ತಿಳಿಯದಂತೆ ಬಂದಿದ್ದೇನೆ, ಮಗು ಹೇಗೋ ಹಿಂಬಾಲಿಸಿದೆ.''

''ಮಗು ತಾಯಿಯಂತೆ ಮುದ್ದಾಗಿದೆ, ಚುರುಕಾದ ಹುಡುಗ.''

''ನೀವು ದೊಡ್ಡವರು, ನನ್ನನ್ನೂ ಮಗುವನ್ನೂ, ಅವನ ತಾಯಿಯನ್ನೂ ಚೆನ್ನಾಗಿ ಆಶೀರ್ವದಿಸಬೇಕು. ನೀವು ಹರಿಹರಕ್ಕೆ ಬರಲೇಬೇಕು. ಬರುವುದು ಕಾರಣಾಂತರದಿಂದ

ತಡವಾದರೆ ಕಾಗದವನ್ನಾದರೂ ಬರೆಯಬೇಕು. ನಿಮ್ಮ ಪ್ರೀತಿ ನಮ್ಮ ಮೇಲಿರಬೇಕು. ಇಂದು ಮಹಾದಿನ, ನಿಮ್ಮ ದರ್ಶನವಾಯಿತು. ಪ್ರೀತಿಯ ಪ್ರಸಾದವನ್ನು ಶಿರಸ್ಸಿನಲ್ಲಿ ಧರಿಸುತ್ತೇನೆ. ನಾನೂ ನಿಮ್ಮ ಶಿಕ್ಷೆಗೆ ಒಳಪಟ್ಟವನೇ. ಇನ್ನು ನಿಮ್ಮ ಅಪ್ಪಣೆ ಪಡೆದು ಹೊರಡುತ್ತೇನೆ ಈ ರಾತ್ರಿ ರೈಲಿನಲ್ಲಿ. ನನ್ನ ಎಲ್ಲ ಸೇವೆಯನ್ನೂ ಒಪ್ಪಿಕೊಳ್ಳಬೇಕು. ನೂರಾರು ಮಕ್ಕಳಿಗೆ ತಾಯಿಯಾಗಿರುವಂತೆ ನನ್ನನ್ನೂ ಆ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕು. ಇದೇ ನನ್ನ ವಿಳಾಸ, ನಮಸ್ಕರಿಸುತ್ತೇನೆ,'' ಎಂದು ವಿಳಾಸದ ಚೀಟಿಯನ್ನು ಕೊಟ್ಟ. ರಾಮೇಶ್ವರ ಅವರ ಪಾದಗಳನ್ನು ಹಣೆಯಿಂದ ಮುಟ್ಟಿ ಮಗುವಿನಂತೆ ಅತ್ತು ಬಿಟ್ಟ. ಆಕೆಯ ಕಣ್ಣುಗಳಲ್ಲಿಯೂ ನೀರು ಬಂತು. ಮಗು ಅಡ್ಡಬಿದ್ದು ಕೈಜೋಡಿಸಿ ನಿಂತಿತ್ತು. ಆಕೆ ಅವನನ್ನು ಮುದ್ದಿಸಿ. ಬಾಗಿಲವರೆಗೂ ಬಂದು ಕಳುಹಿಸಿಕೊಟ್ಟರು.

ಸುಮನಾ ರಾಮೇಶ್ವರನ ಬರುವನ್ನೇ ನಿರೀಕ್ಷಿಸುತ್ತಿದ್ದಳು. ಅವಳಿಗೆ ಲೋಕಾಂಬನ ವಿಷಯದಲ್ಲಿ ವಿಶೇಷವಾದ ಗೌರವವಿತ್ತು. ಆಕೆಯ ಜೀವನದಲ್ಲಿ ಉಂಟಾಗಿದ್ದ ನಿರಾಶೆ, ನೋವು, ಸಂಕಟ ಮತ್ತು ಅನ್ಯಾಯಗಳನ್ನು, ಪ್ರೇಮ-ಸ್ನೇಹಗಳಿಂದ ಪರಿಹರಿಸಬೇಕೆಂಬ ಉತ್ಕಟಾಕಾಂಕ್ಷೆ ಬಾಧಿಸುತ್ತಿತ್ತು. ರಾಮೇಶ್ವರನ ಅನಿರೀಕ್ಷಿತವಾದ ರಾಯಭಾರ ಸಫಲವಾಗಲೆಂದು ಪ್ರಾರ್ಥಿಸುತ್ತಿದ್ದಳು.

ರಾಮೇಶ್ವರನು ಮಗುವಿನೊಡನೆ ಮನೆಗೆ ಬಂದಾಗ ಅರ್ಥಪೂರ್ಣವಾಗಿ ಅವನ ಮುಖಭಾವಗಳಿಂದ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದಳೇ ವಿನಾ ತಾನಾಗಿಯೆ ಏನನ್ನೂ ವಿಚಾರಿಸಲಿಲ್ಲ. ಏಕೆಂದರೆ ಹೇಳಬೇಕಾದುದು ಏನಾದರೂ ಇದ್ದರೆ ಅದು ಅವನ ಬಾಯಿಂದಲೇ ಬರಬೇಕೆಂದು ಬಗೆದಿದ್ದಳು. ಬಂದೊಡನೆ ರಾಮೇಶ್ವರ ಅತ್ತಿಗೆಗೆ ವರದಿ ಒಪ್ಪಿಸಿದ:

''ಅತ್ತಿಗೆ, ಲೋಕಾಂಬಾರವರನ್ನು ಕಂಡು ಮಾತನಾಡಿದೆ. ನಾನು ಯಾರೆಂಬುದನ್ನು ನಾನೇ ಹೇಳಿಕೊಳ್ಳದೆ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಅದು ವ್ಯಕ್ತವಾಯಿತು. ಮಗು ಅವನ ಅಜ್ಜಿಗೆ ಅಡ್ಡಬಿದ್ದು ನಮಸ್ಕರಿಸುವಂತೆಯೇ ನಮಸ್ಕರಿಸಿತು. ಅವರು ಅವನನ್ನು ಮುದ್ದಿಸಿದರಲ್ಲದೆ 'ಚುರುಕಾದ ಹುಡುಗ' ಎಂದು ಹೊಗಳಿದರು. ಎಲ್ಲಕ್ಕಿಂತಲೂ ಹೆಚ್ಚಾಗಿ 'ಭಾವ' ಹೇಗಿದ್ದಾರೆ ಎಂದು ವಿಚಾರಿಸಿದರು. ಅವರ ಮಾತಿನಲ್ಲಿ 'ಭಾವ' ಎಂದರೆ ಉಪೇಂದ್ರ. ಬಾಲ್ಯದಿಂದಲೂ ಉಪೇಂದ್ರನನ್ನು ಹಾಗೇ ಕರೆಯುತ್ತಿದ್ದುದು. ಅವರಿಬ್ಬರೂ ಜೊತೆಯಾಗಿ ಸ್ಕೂಲಿಗೆ ಹೋಗುತ್ತಿದ್ದುನ್ನು ನಾನೇ ನೋಡಿದ್ದೇನೆ.''

''ಆಕೆ ಇನ್ನೂ ಜೀವಂತಳಾಗಿರುವ ವಿಷಯವೇ ಉಪೇಂದ್ರನ ಕಿವಿಗೆ ಬಿದ್ದಿಲ್ಲವೆಂಬ ಅಂಶವನ್ನು ಸ್ಪಷ್ಟಪಡಿಸಿದ್ದೇನೆ. ನಮ್ಮಿಬ್ಬರಿಗೂ ಅವರು ನಗುನಗುತ್ತಲೇ ಹಣ್ಣಿನ ರಸವನ್ನು ಕುಡಿಯಲು ಕೊಟ್ಟರು; ಆದರಿಸಿದ್ದರು. ಅವರು ಅವಕಾಶಮಾಡಿಕೊಂಡು ಹರಿಹರಕ್ಕೆ ಬರಬೇಕೆಂದು ಆಹ್ವಾನಿಸಿ ನನ್ನ ವಿಳಾಸವನ್ನು ಕೊಟ್ಟಿರುತ್ತೇನೆ. ಕಾಗದವನ್ನು ಬರೆಯಬೇಕೆಂದು ಒತ್ತಾಯಪಡಿಸಿರುತ್ತೇನೆ. ಅಲ್ಲದೆ, ಅವರು ನೂರಾರು ಮಕ್ಕಳಿಗೆ ತಾಯಿಯಾಗಿರುವಂತೆಯೇ ನನಗೂ ತಾಯಿಯಾಗಬೇಕೆಂದೂ ನನ್ನನ್ನೂ ಮಗುವನ್ನೂ ನಿಮ್ಮನ್ನೂ ಆಶೀರ್ವದಿಸಬೇಕೆಂದು ಕೇಳಿಕೊಂಡೆ. ಅವರ ಪಾದಗಳನ್ನು ನನ್ನ ಹಣೆಯಿಂದ ಮುಟ್ಟಿ ನಮಸ್ಕರಿಸಿದ್ದೇನೆ. ಅವರು ಸಂತೋಷದಿಂದ ನಗುತ್ತ ಆಶೀರ್ವದಿಸಿದರು.''

''ಅದಕ್ಕೆ ಅವರೇನೆಂದರು?''

''ಬಾಯಿ ತುಂಬ ನಕ್ಕರು.''

''ನಾನು ಈ ರಾತ್ರಿ ರೈಲಿನಲ್ಲಿ ಹೊರಡು

ತ್ತೇನೆ.'' ಸುಮನಾ ಹೇಳಿದಳು: ''ಅಮ್ಮ ಗುಟ್ಟಾಗಿ ನಿನಗೆ ಹೇಳಿದ ಕತೆಯನ್ನೆಲ್ಲ ನಾನು ಆಮೂಲಾಗ್ರವಾಗಿ ಕೇಳಿರುತ್ತೇನೆ. ಹೊರಡುವ ಮುನ್ನ ನಿನಗೆ ಹೇಳಬೇಕೆಂದಿದ್ದೆ, ಅದೂ ಆಯಿತು,'' ಎಂದಳು. ರಾಮೇಶ್ವರ ಹೊರಟು ಹೋದ ನಂತರ ಒಂದು ದಿನ ಉಪೇಂದ್ರ, ಉತ್ಸಾಹ ಸಂತೋಷದಿಂದಿರುವಾಗ ಸುಮನಾ ಅವನಿಗೆ ಹೇಳಿದಳು: ''ನಿಮಗೆ ಒಂದು ಸಮಾಚಾರ ತಿಳಿಸತಕ್ಕದ್ದಿದೆ. ಅದು ಬಹಳ ವರ್ಷಗಳ ಹಿಂದೆ ನಡೆದುದು. ಅದು ನಿಮಗೆ ಗೊತ್ತಿಲ್ಲ. ವಿಷಯ ತಿಳಿದಾಗ ಸ್ವಲ್ಪ ಉದ್ವೇಗ, ಕ್ರೋಧ, ಜಿಗುಪ್ಸೆಗಳಾಗುವ ಸಂಭವವುಂಟು. ನಾನು ಆಲೋಚಿಸಿ, ಆಲೋಚಿಸಿ ನಿಮಗೂ ತಿಳಿಸಬೇಕೆಂದಿದ್ದೇನೆ. ಆದರೆ ನೀವು ಅದರಿಂದ ಸಹಜವಾಗಿ ಕಾಣಿಸಿಕೊಳ್ಳಬಹುದಾದ ಮನೋವಿಕಲ್ಪಗಳನ್ನು ಬಿಟ್ಟುಕೊಡುವ ಮನಸ್ಸು ಮಾಡಬೇಕು. ಮೂರು ದಿವಸಗಳ ಅವಧಿಯನ್ನು ತೆಗೆದುಕೊಳ್ಳಿ, ಅದಕ್ಕಾಗಿ ಅದು ಸಾಧ್ಯವಾಗದೆಂದು ನೀವು ಭಾವಿಸುವುದಾದರೆ, ನಾನು ಪುನಃ ಆ ಮಾತನ್ನು ಎತ್ತುವುದೇ ಇಲ್ಲ. ಮೂರು ದಿವಸಗಳ ನಂತರ ನೀವು ಕೇಳಿದರೆ ಹೇಳುತ್ತೇನೆ. ನಾನಾಗಿಯೇ ಹೇಳಲಾರೆ.''

''ಉಪೇಂದ್ರನಿಗೆ ಕತ್ತರಿಯ ಮಧ್ಯೆ ಸಿಕ್ಕಿ ಹಾಕಿಕೊಂಡಂತೆ ಅನುಭವವಾಯಿತು. ಎಂದೋ ನಡೆದುಹೋದ ವಿದ್ಯಮಾನಕ್ಕೆ ಇಂದು ಹೇಗೆ ಮನೋವಿಕಲ್ಪವಾದೀತೆಂಬ ಅವಳ ಮಾತಿನ ರಹಸ್ಯ ಅರ್ಥವಾಗದೆ ಒಗಟಾಗಿತ್ತು ಅವನಿಗೆ. ಮೂರು ದಿವಸಗಳು ನಾಲ್ಕಾರು ಸಲ ಕಳೆದು ಹೋದರೂ ಇಬ್ಬರೂ ಅದನ್ನು ಪ್ರಸ್ತಾಪಿಸಲೇ ಇಲ್ಲ, ಮರೆತೇ ಹೋಯಿತು. ಆದಾದ ಅನೇಕ ದಿನಗಳ ನಂತರ ಅವಳು ಅಂದಿದ್ದ ಮಾತು ಅವನ ಸ್ಮರಣೆಗೆ ಬಂದು ಕೇಳಿದ:

''ನೀನು ಹಿಂದೆ ಒಂದು ದಿನ, ಉದ್ವೇಗ ಹುಟ್ಟುವ, ಕಳೆದುಹೋದ ಸಮಾಚಾರವನ್ನು ಬಚ್ಚಿಟ್ಟಿರುವುದಾಗಿ ಹೇಳಿದ್ದೆ. ನೀನು ಕಟ್ಟುಮಾಡಿದ ಗಡುವೂ ಕಳೆದುಹೋಗಿದೆ, ಈಗಲಾದರೂ ಹೇಳಬಹುದಲ್ಲ?''

''ಆದರೆ ನೀವು ನಿಮ್ಮ ಮನಸ್ಸನ್ನು ಸಡಿಲಿಸುವುದಿಲ್ಲವೆಂದು ಹೇಳಲೇ ಇಲ್ಲ.''

''ನೀನು ಹೇಳಿಬಿಡು, ಎಂದೋ ಆಗಿ ಹೋದ ಘಟನೆಗೆ ಇಂದು ನಾನು ಜಿಗುಪ್ಸೆ ಹೊಂದುವುದಿಲ್ಲ.''

''ಹಾಗಾದರೆ ಹೇಳುತ್ತೇನೆ ಕೇಳಿ. ನಿಮ್ಮ ಲೋಕಾಂಬ ಜೀವಂತರಾಗಿದ್ದಾರೆ. ಆತ್ಮಹತ್ಯೆ ಮಾಡಿಕೊಂಡರೆಂಬ ಅಂದಿನ ವದಂತಿ ಅಪ್ಪಟ ಸುಳ್ಳು. ಈ ವದಂತಿ ಕೃತ್ರಿಮ ಸಂಧಾನಿಗಳ ಕೃತ್ಯ.''

''ನಿಮ್ಮ ಲೋಕಾಂಬ! ಯಾವ ಲೋಕಾಂಬ?''

''ಯಾರು ನಿಮ್ಮನ್ನು ಭಾವ, ಭಾವ ಎಂದು ಕರೆಯುತ್ತಿದ್ದರೋ, ಯಾರ ಕೈಯನ್ನು ನೀವು ಅಗ್ನಿಸಾಕ್ಷಿಯಾಗಿ ಪಂಪಾಪತಿ ವಿರೂಪಾಕ್ಷೇಶ್ವರನ ಸನ್ನಿಧಿಯಲ್ಲಿ ಹಿಡಿದಿದ್ದಿರೋ ಅದೇ ಲೋಕಾಂಬ!''

''ಶಿವ, ಶಿವಾ! ಇದೆಂಥ ಮಾತು! ಅವಳು ತೀರಿಕೊಂಡಳಲ್ಲವೆ?''

''ಇಲ್ಲ, ಅದೆಲ್ಲ ಕಟ್ಟುಕತೆ.''

''ಈ ಮಾತನ್ನು ಯಾರ ಬಾಯಿಂದ ಕೇಳಿದೆ?''

''ಅಮ್ಮನ ಬಾಯಿಂದ!''

''ನನ್ನ ಅಮ್ಮನ ಬಾಯಿಂದಲೇ?''

''ಹೌದು.''

''ಅವರಿಗೆ ಯಾರು ಹೇಳಿದರು?''

''ಯಾರೂ ಹೇಳಲಿಲ್ಲ, ಅವರು ಅವರ ಸ್ವಂತ ಕಣ್ಣುಗಳಿಂದ ನೋಡಿದ್ದಾರೆ.''

''ಅದಕ್ಕೆ ಬೇರೆ ಸಾಕ್ಷಿ ಇದೆಯೆ, ಪ್ರತ್ಯಕ್ಷವಾದರೂ ಪ್ರಮಾಣಿಸಿ ತಿಳಿಯಬೇಕಲ್ಲವೆ?''

''ಸಾಕ್ಷಿಯೂ ಇದೆ, ನಿಮ್ಮ ತಮ್ಮ ರಾಮೇ

ಶ್ವರ ಮಾತನಾಡಿಸಿ ಬಂದಿದ್ದಾನೆ.''

''ಯಾರ ಪೋಷಣೆಯಲ್ಲಿ? ಎಲ್ಲಿ ಇದ್ದಾಳೆ?''

''ಆಕೆ ಅನಾಥಳಂತೆ ಯಾರ ಪೋಷಣೆಗೂ ಒಳಪಟ್ಟಿಲ್ಲ. ಅವರು ಸ್ವತಂತ್ರವಾಗಿ ಇಬ್ಬರು ಅನಾಥ ಮಕ್ಕಳನ್ನು ಪೋಷಿಸುತ್ತಿದ್ದಾರೆ.''

''ಆ ಮಕ್ಕಳು ಯಾರು?''

''ದೇಶವು ಒಡೆದು ಪಾಕಿಸ್ತಾನವು ಹುಟ್ಟಿದಾಗ ಆ ಮಕ್ಕಳ ತಂದೆ ತಾಯಿಗಳನ್ನು ಅಲ್ಲಿ ಮುಸಲ್ಮಾನರು ಕೊಂದುಹಾಕಿದ್ದರು. ತ್ರಿಯಂ



ಬಕ ಬಾಬಾ ಎಂಬ ಗೋಸಾಯಿ ಅವರನ್ನು ತಂದು ಇವರಿಗೆ ಒಪ್ಪಿಸಿರುತ್ತಾರೆ. ಆ ಮಕ್ಕಳ ತಂದೆ ತಾಯಿಗಳು ಕನ್ನಡಿಗರೆಂದು ಬಾಬಾರವರಿಗೆ ತಿಳಿದಿತ್ತು, ಅವರ ಪರಿಚಯವೂ ಬಾಬಾ ಅವರಿಗಿತ್ತು. ಆ ಮಕ್ಕಳು ತಮ್ಮ ಸರ್ವಸ್ವವನ್ನೂ ಕಳೆದುಕೊಂಡ ಮೇಲೆ ಬಾಬಾರವರು ಹೇಗೋ ಅವರನ್ನು ಜೀವಂತರಾಗಿ ಇಲ್ಲಿಗೆ ತಂದರು. ಮಕ್ಕಳನ್ನು ಕ್ರೈಸ್ತ ಪಾದ್ರಿಗಳ ವಶದಿಂದ ತಪ್ಪಿಸಿ ತಂದು ಲೋಕಾಂಬಾರವರ ವಶಕ್ಕೆ ಒಪ್ಪಿಸಿ, ಆ ಸಾಧು ರಾಮೇಶ್ವರದ ಯಾತ್ರೆಗೆ ಹೋಗಿದ್ದಾರೆ. ಮಕ್ಕಳು ಲೋಕಾಂಬಾರವರ ಪೋಷಣೆಯಲ್ಲಿ ಎರಡು ವರ್ಷದಿಂದ ಇದ್ದಾರೆ.''

''ಹಾಗಾದರೆ, ಲೋಕಾ ಎಲ್ಲಿದ್ದಾಳೆ?''

''ನಮ್ಮ ಬೀದಿಯಲ್ಲೇ ಇದ್ದಾರೆ.''

''ನಿನಗೂ ಅವಳು ಗೊತ್ತೆ?''

''ಚೆನ್ನಾಗಿ ಗೊತ್ತು, ಅವರು ಗೌರವಾನ್ವಿತ ಗಣ್ಯವ್ಯಕ್ತಿಯಾಗಿದ್ದಾರೆ.''

''ಅವಳು ಎಂಥ ಉದ್ಯೋಗ ಮಾಡುತ್ತಾರೆ?''

''ಅವರು ನಮ್ಮ ಸ್ತ್ರೀಸಮಾಜದ ಕಾರ್ಯದರ್ಶಿನಿ, ಮತ್ತು ಬಾಲಿಕಾ ಪಾಠಶಾಲೆಗೆ ಮುಖ್ಯೋಪಾಧ್ಯಾಯಿನಿ. ಜಯವಂತನು ಅವರಿಗೆ ನಿತ್ಯವೂ ಅಡ್ಡಬಿದ್ದು ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾನೆ. ಅವನಿಂದಲೇ ಅವರು ನನಗೆ ಗುರುತಾದರು. ಅವರೇ ಅಮ್ಮನವರು!''

''ಅಮ್ಮ ಅವಳಲ್ಲಿಗೆ ಹೇಗೆ ಹೋದರು?''

''ಅದೆಲ್ಲ ನಿಮಗೂ ಗೊತ್ತು. ಮಗುವನ್ನು ಶಾಲೆಯಿಂದ ಕರೆತರಲು ಅಮ್ಮ ಅಲ್ಲಿಗೆ ಹೋಗಿದ್ದರು. ಅಲ್ಲೇ ಅವರಿಬ್ಬರ ಸಮಾಗಮ.''

''ಅವರಿಬ್ಬರು ಮಾತನಾಡಿದರೆ?''

''ಅಮ್ಮ, ಅವರ ಗುರುತು ಹಿಡಿದು 'ನಿನ್ನ ಹೆಸರೇನು?' ಅಂದರಂತೆ, ಅದಕ್ಕೆ ಉತ್ತರವಾಗಿ 'ನಿಮಗೇ ಗೊತ್ತು' ಎಂಬುದಾಗಿತ್ತು, ಇಷ್ಟೇ ಮಾತು!''

''ಅಮ್ಮ ಏಕೆ ಯಾರಿಗೂ ತಿಳಿಸಲಿಲ್ಲ?''

''ರಾಮೇಶ್ವರನಿಗೆ ಮಾತ್ರ ಹೇಳಿದರು. ನಾನು ಕೇಳಿಸಿಕೊಂಡೆ. ಬಹುಶಃ ಅಮ್ಮನ ಮನಸ್ಸಿನಲ್ಲಿ ಕಳವಳವಾಗಿ ಅಸ್ವಸ್ಥರಾಗಿರಬಹುದು.''

''ಮುಂದೇನು?''

''ಗೊತ್ತಿಲ್ಲ. ನಿಮ್ಮ ಅವರ ಬಾಲ್ಯದ ಗೆಳೆ

ತನವನ್ನು ಕೇಳಲು ಅಪೇಕ್ಷಿಸುತ್ತೇನೆ. ರಾಮೇಶ್ವರ ಸ್ವಲ್ಪ ಹೇಳಿದ.''

''ಅವನೇನು ಹೇಳಿದ?''

''ಲೋಕಾಂಬಾ 'ಭಾವ' ಹೇಗಿದ್ದಾರೆಂದು ರಾಮೇಶ್ವರನನ್ನು ವಿಚಾರಿಸಿದರಂತೆ. ಭಾವ ಎಂದರೆ ಯಾರು ಎಂಬುದನ್ನು ಮಾತ್ರ ಅವನು ನನಗೆ ವಿವರಿಸಿದ.''

''ಏನು ವಿವರಿಸಿದ?''

''ನೀವಿಬ್ಬರೂ ಚಿಕ್ಕ ಮಕ್ಕಳಾಗಿದ್ದಾಗ ಜೊತೆಯಾಗಿ ಶಾಲೆಗೆ ಹೋಗಿ ಬರುತ್ತಿದ್ದಿರಂತೆ. ಆಗಿನಿಂದಲೂ ಅವರು ಭಾವ ಎಂದೇ ಕರೆಯುತ್ತಾರೆ ಅಂದ.''

''ಆ ಚರಿತ್ರೆಯನ್ನು ಇನ್ನೊಂದು ದಿನ ಕೇಳುವೆಯಂತೆ. ಈಗ ನನಗೆ ತುಂಬ ಆಯಾಸವಾಗುತ್ತಿದೆ. ಉದ್ವೇಗ, ಕ್ರೋಧ, ಜಿಗುಪ್ಸೆ ನಿಜವಾಗಿಯೂ ಆಗಿಲ್ಲ. ನಾನೀಗ ಮಲಗಬೇಕು.''

''ಮಲಗಿಕೊಳ್ಳಿ, ನಿಮಗೆ ಆಯಾಸವಾಗಿದೆ. ನನಗನಿಸುವುದೇನೆಂದರೆ:

''ಗುಣವಂತೆಯಾದ ಮಹಿಳೆ ಕರ್ಪೂರದಂತೆ ತಾನಿರುವ ಸ್ಥಳದಿಂದಲೇ ಪರಿಮಳವನ್ನು ಬೀರುತ್ತಾಳೆ. ಅಂತ್ಯದಲ್ಲಿ ಕರಗಿ ಹೋದ ಮೇಲೂ ಪರಿಮಳವನ್ನು ಬಿಟ್ಟು ಹೋಗುವಳು. ಅದು ಅವಳ ನೈಜ ಭಾವ. ಲೋಕಾಂಬ ನಮ್ಮಿಂದ ಅಪೇಕ್ಷಿಸುವುದು ಕೇವಲ ಸ್ನೇಹ, ಪ್ರೇಮ.''

''ಹೋಲಿಕೆ ಚೆನ್ನಾಗಿದೆ.''

ಅಂದಿನಿಂದ ಉಪೇಂದ್ರ, ಅನ್ಯಮನಸ್ಕನಾಗಿಯೇ ಏನನ್ನೋ ಚಿಂತಿಸುತ್ತಲೇ ಇರುತ್ತಿದ್ದ. ಆಗಾಗ ಹೊಡೆದವನಂತೆ ಸ್ತಬ್ಧನಾಗಿರುತ್ತಿದ್ದ. ಆಡಿದ ಮಾತನ್ನೇ ಪುನಃ ಪುನಃ ಆಡಿಕೊಳ್ಳುತ್ತಿದ್ದ. ಈ ತೆರನಾದ ಮನೋರೋಗದಿಂದ ನರಳುತ್ತಿದ್ದ ಗಂಡನ ಸ್ಥಿತಿಯನ್ನು ಕಂಡು ಸುಮನಾಳಿಗೆ ಅನ್ನ, ನೀರು ಬೇಡವಾಯಿತು. ಅದೊಂದು ದಿನ ಉಪೇಂದ್ರ, ಸುಮನಾಳನ್ನು

ಕರೆದು, ಹಿಂದೆ ನಾನೂ ಲೋಕಾ ಬಾಲ್ಯದಲ್ಲಿ ಜೊತೆಯಾಗಿ ಹರಿಪುರದಲ್ಲಿ ಶಾಲೆಗೆ ಹೋಗಿ ಬರುತ್ತಿದ್ದ ದಿನಗಳ ನೆನಪಾಗುತ್ತಿದೆ. ಆ ನೆನಪುಗಳನ್ನು ನಿನ್ನೊಡನೆ ಹಂಚಿಕೊಳ್ಳಬೇಕೆಂದೂ ಆಸೆಯಾಗುತ್ತಿದೆ ಎಂದು ಹೇಳಿದ. ಅದಕ್ಕೇ ತನಗೂ ಅದನ್ನೆಲ್ಲ ಕೇಳಬೇಕೆನಿಸುತ್ತಿದೆ. ಅದನ್ನು ಮುಂದೆ ಎಂದಾದರೊಂದು ದಿನ ನೀವು ಹೇಳಲೇಬೇಕಾಗುತ್ತದೆ. ಹರಿಹರದಿಂದ ರಾಮೇಶ್ವರ ನನಗೆ ಕಾಗದ ಬರೆದಿದ್ದಾನೆ. ಅವನ ಪ್ರಾರ್ಥನೆಯಂತೆ ಲೋಕಾಂಬಾ ಅವನಿಗೆ, ನನಗೆ ಮತ್ತು ಮಗುವಿಗೆ ಆಶೀರ್ವಾದಗಳನ್ನು ಕಳುಹಿಸಿದ್ದಾರೆ. 'ಭಾವ'ನ ಆರೋಗ್ಯವನ್ನು ವಿಚಾರಿಸಿದ್ದಾರೆ. ಅವರ ಪತ್ರದಲ್ಲಿ ಆಕೆ ನಿಮ್ಮಿಂದ ಅಪೇಕ್ಷಿಸುವುದು, ಬಾಲ್ಯದಲ್ಲಿದ್ದ ಉಭಯತ್ರರ ಸಂಪ್ರೀತಿ, ಸ್ನೇಹವನ್ನು ಮಾತ್ರ ಎಂದು ಸ್ಪಷ್ಟಪಡಿಸಿದ್ದಾರಂತೆ. ಈಗ ನಿಮಗೆ ಬೇಕಾಗಿರುವುದು ವಿಶ್ರಾಂತಿ. ನಿಮ್ಮ ಕತೆಯನ್ನು ಎಂದಾದರೂ ಹೇಳಬಹುದು,'' ಎಂದು ಸಮಾಪ್ತಗೊಳಿಸಿದಳು.

ಭಾಗ 2

ಲೋಕಾಂಬ ರಾಮೇಶ್ವರನಿಗೆ ಬರೆದಿದ್ದ ಕಾಗದದ ವಿಷಯ ಉಪೇಂದ್ರನ ಮನಸ್ಸಿಗೆ ಸ್ವಲ್ಪ ಮಟ್ಟಿಗೆ ನೆಮ್ಮದಿಯನ್ನು ತಂದಿತ್ತಾದರೂ, ಆಕೆಯ ಕಷ್ಟಕಾರ್ಪಣ್ಯಗಳಿಗೆಲ್ಲ ತಾನೇ ಕಾರಣನೆಂಬ ಭಾವನೆ ಹೋಗಿರಲಿಲ್ಲ. 'ಭಾವ' ಬಂದು ಕರೆದರೆ ಸೌಜನ್ಯ ಸೂಚಕವಾಗಿ ಒಂದು ದಿನ ಅವರ ಮನೆಗೆ ಹೋಗಿಬರಬಹುದು' ಎಂಬ ಮಾತು ಅವನನ್ನು ಕಾಡುತ್ತಿತ್ತು. ಅದು ತನಗೆ ಒಂದು ಸಾಹಸದ ಕೆಲಸವೆಂದೇ ತಿಳಿದಿದ್ದ. ಈ ಕಾರಣದಿಂದ ಅವನ ಕಛೇರಿಯ ಕೆಲಸಗಳೂ ತಡವಾಗುತ್ತಿದ್ದವು. ಆದುದರಿಂದ ವಿಶ್ರಾಂತಿಗಾಗಿ ರಜೆ ಪಡೆದು, ಬಹಳ ಮೊದಲೇ ಮನೆಗೆ ಬಂದು, ಮಂಚದ ಮೇಲೆ ಮಲಗಿ ಹೊರಳಾಡುತ್ತಿದ್ದ. ಸುಮನಾ ಕಳವಳದಿಂದ ಬಂದು ಅವನ ಹಣೆ ಮತ್ತು ಎದೆಯ ಮೇಲೆ ಕೈಯಾಡಿಸಿ, ''ಏನಾಗುತ್ತಿದೆ?'' ಎಂದು ಕೇಳಿದಳು.

''ನನಗೇನೂ ಆಗಿಲ್ಲ, ಸುಖವಾಗಿಯೇ ಇದ್ದೇನೆ. ಏನೋ ಬೇಜಾರಾಗಿ ಬಂದುಬಿಟ್ಟೆ.''

''ಇಂದು ಮನೆಯಲ್ಲಿ ಒಳ್ಳೆಯ ಮಾದಳದ ಹಣ್ಣುಗಳಿವೆ. ಅವು ಬಹಳ ಅಪರೂಪದ ಹಣ್ಣುಗಳು, ಮಾರಾಟಕ್ಕೆ ಬರುವುದೇ ಇಲ್ಲ, ಅದರ ರುಚಿಯನ್ನಾದರೂ ನೋಡಿದರೆ ಮನಸ್ಸು ಹಗುರವಾಗಬಹುದು. ತರಲೆ....'' ಎಂದು ಕೇಳಿ, ಒಳಗೆ ಹೋಗಿ ಎರಡು ಹಣ್ಣುಗಳನ್ನು ತಂದು ಕೊಟ್ಟಳು. ಉಪೇಂದ್ರ, ಅವುಗಳನ್ನು ಕೈಗೆ ತೆಗೆದುಕೊಂಡು, ''ನಿಜವಾಗಿಯೂ ಇವು ದೇವಲೋಕದ ಹಣ್ಣುಗಳಂತಿವೆ, ವಾಸನೆಯೂ ಆಕರ್ಷಕವಾಗಿದೆ. ಎಲ್ಲಿಂದ ತಂದೆ?'' ಎಂದು ಎದ್ದು ಕುಳಿತ. ''ಇವು ಮಾರಾಟಕ್ಕೆ ಬರುವುದೇ ಇಲ್ಲ. ಅನೇಕರಿಗೆ ಇದರ ಹೆಸರೇ ತಿಳಿಯದು. ಒಬ್ಬ ವೃದ್ಧನು ನಿಮಗಾಗಿಯೇ ತಂದು ಕೊಟ್ಟಿದ್ದಾನೆ.''

''ನನಗಾಗಿ ತಂದಿದ್ದೇ ಇವು! ಆ ವೃದ್ಧರು ಯಾರು, ಎಲ್ಲಿಂದ ಬಂದಿದ್ದರು. ಅವರ ಹೆಸರೇನು?''

''ಅವರು ಹೆಚ್ಚು ಹೊತ್ತು ಇರಲಿಲ್ಲ. ಅವರು ಹರಿಪುರದಿಂದ ಮಗಳ ಮನೆಗೆ ಬಂದಿದ್ದರಂತೆ. ಈ ಮನೆಯ ವಿಳಾಸವನ್ನು ಕೇಳಿಕೊಂಡು ಮೊಮ್ಮಗನ ಜೊತೆಯಲ್ಲಿ ಬಂದಿದ್ದರು. ಅವರ ಹೆಸರು ಕೊಂಡಯ್ಯನೆಂದು. ಹಿರಿಯರ ಹೆಸರನ್ನೂ ಹೇಳಿದರು.''

''ಹಿರಿಯರೆಂದರೆ ಯಾರು?''

''ಹಿರಿಯರೆಂದರೆ ನಿಮ್ಮ ತಂದೆ ಶೇಷಗಿರಿರಾಯರು. ಆತ ನಿಮ್ಮ ತಂದೆಯವರ ಕೈಕೆಳಗೆ

ನೌಕರನಾಗಿದ್ದು ಚಾಕರಿಯಿಂದ ನಿವೃತ್ತಿ ಹೊಂದಿದ್ದಾನಂತೆ. ಆಗ ಶೇಷಗಿರಿರಾಯರು ರೈಲು ಮೇಷ್ಟ್ರು. ಉಪೇಂದ್ರಪ್ಪ ಇನ್ನೂ ಹಸುಮಗು. ಈ ಮಾದಳದ ಸಸಿಯನ್ನು ನಾನೇ ತಂದುಕೊಟ್ಟೆ, ಅವರೇ ಬೆಳೆಸಿದರು. ಈಗ ಫಲಕ್ಕೆ ಬಂದಿದೆ. ಅವರು ನೆಟ್ಟು ನೀರೆರೆದು ಬೆಳೆಸಿದ ಗಿಡದ ಫಲವನ್ನು ಅವರೇ ರುಚಿ ನೋಡಲಿ ಎಂದು ತಂದಿದ್ದೇನೆ.... ಇತ್ಯಾದಿ.''

ಉಪೇಂದ್ರನಿಗೆ ಜನ್ಮಾಂತರದ ನೆನಪಾದಂತೆ ಕಂಡಿತು! ಬಾಲ್ಯದ ದಿನಗಳು ಮರುಕಳಿಸಿ ಸುಳಿದಾಡಿದವು. ಹರಿಪುರ ! ಎಂಥ ಹೆಸರು. ಅಂದಿನ ವಾತಾವರಣ, ಸಂಗ-ಸಹವಾಸ, ಎಲ್ಲವೂ ನಾನು ಮುಂದೆ ತಾನು ಮುಂದೆ ಎಂದು ನುಗ್ಗುತ್ತಿದ್ದವು. ಸ್ವಲ್ಪ ಹೊತ್ತು ಮೈಮರೆತು ಕುಳಿತಿದ್ದ. ಅವನಿಗಾದ ಹಿಂದಿನ ದಿನಗಳ ಅನುಭವವೆಲ್ಲ ಕ್ಷಿಪ್ರವಾಗಿ ಮೈದೋರಿ ಮರೆಯಾದವು. ಉಪೇಂದ್ರನ ಕಣ್ಣುಗಳಲ್ಲಿ ನೀರಾಡಿ ದೃಷ್ಟಿ ಮಂಜಾಯಿತು. ಉಪೇಂದ್ರ ಕಷ್ಟದಿಂದ ತಲೆಯೆತ್ತಿ ಹೆಂಡತಿಯ ಮುಖವನ್ನು ದೃಷ್ಟಿಸಿ ನೋಡುತ್ತ - ''ಹರಿಪುರದಿಂದ ಬಂದಿದ್ದ ಕೊಂಡಯ್ಯನನ್ನು ಉಪಚರಿಸಲಿಲ್ಲವೆ?'' ಎಂದು ಕೇಳಿದ.

''ಹಿರಿಯರ ಹೆಸರನ್ನು ಕೇಳಿಕೊಂಡು ಬಂದವರಿಗೆ ಉಪಚರಿಸದಿರಲು ಯಾರಿಗೆ ಸಾಧ್ಯ? ಊಟ ಮಾಡುವಂತೆ ಇಬ್ಬರನ್ನೂ ಕೇಳಿಕೊಂಡೆ. ಆದರೆ ಅವರು ಊಟ ಮಾಡಲಿಲ್ಲ. ಕೈಕಾಲು ತೊಳೆದುಕೊಂಡು, ಉಪಾಹಾರ ತೀರಿಸಿಕೊಂಡು, ಪಾನಕ ಕುಡಿದು, ದೇವರ ದಯವಿದ್ದರೆ ಮತ್ತೆ ಬಂದು ನೋಡೇನು ಎಂದು ಹೇಳಿ ಹೊರಟೇ ಹೋದರು.''

''ಈ ಎರಡು ಹಣ್ಣುಗಳನ್ನು ಕೊಡಲು ಆತ ಹರಿಪುರದಿಂದ ಬಂದಿದ್ದನೆ?''

''ಇಲ್ಲ, ಆತ ತನ್ನ ಮಗಳ ಮನೆಗೆ ಬಂದಿದ್ದನಂತೆ. ಹರಿಪುರದ ಆಫೀಸಿನಲ್ಲಿ ನಿಮ್ಮ ವಿಳಾಸ ಪಡೆದು, ಮನೆಯನ್ನು ವಿಚಾರಿಸಿಕೊಂಡು ಬಂದಿದ್ದ. ಇನ್ನೂ ಹಣ್ಣುಗಳಿವೆ, - ಕಿತ್ತಳೆ, ಚಕೋತ, ಸೀಬೆ, ಎಲ್ಲವೂ ಸೇರಿ ಒಂದು ಮೂಟೆಯಷ್ಟಿವೆ. ಮಾದಳದ ಹಣ್ಣು ಬಹು ದಿನಗಳ ಮೇಲೆ ಮಾಗುವದರಿಂದ ಎರಡನ್ನು ಮಾತ್ರ ತಂದಿದ್ದನಂತೆ. ಅವುಗಳನ್ನು ಬಹಳವಾಗಿ ಹೊಗಳಿದ. ಆ ಗಿಡಗಳನ್ನೆಲ್ಲ ನೀವೇ ಬೆಳೆಸಿದಿರಂತೆ!''

''ಅದೊಂದು ಮಾತನ್ನು ಮಾತ್ರ ತಪ್ಪಾಗಿ ಹೇಳಿದ್ದಾನೆ, ಅವನು ಮರೆತಿರಬಹುದು. ಅವು ನನ್ನವಲ್ಲ.''

''ಅಂದರೆ?''

''ಅವುಗಳನ್ನೆಲ್ಲ ನೆಟ್ಟು ಬೆಳೆಸಿದವಳು ಲೋಕಾ, ನಾನಲ್ಲ! ನಾನು ಹೂವಿನ ಗಿಡಗಳನ್ನು ಮಾತ್ರ ಬೆಳೆಸಿದರೆ, ಲೋಕಾ ಹಣ್ಣಿನ ಗಿಡಗಳನ್ನೇ ನೆಟ್ಟು ಬೆಳೆಸಿದಳು. ಅವೆಲ್ಲ ಈಗ ಫಲಕ್ಕೆ ಬಂದಿವೆ. ಹೂವಿನ ಬಳ್ಳಿಗಳೆಲ್ಲ ಒಣಗಿ ಹೋಗಿರಬೇಕು. ಈ ಫಲಗಳೆಲ್ಲ ಅವಳಿಗೇ ಸೇರಬೇಕು.''

''ಲೋಕಾ?'' ಲೋಕಾಂಬಾ?''

ಹೌದು, ಅವರೇ ನಿಮ್ಮ ಅಮ್ಮನವರು.''

''ನಮ್ಮ ಅಮ್ಮವರು, ನೀವು ಬಾಲ್ಯದ ಸಹಪಾಠಿಗಳಾಗಿದ್ದ ವಿಷಯ ನನಗೆ ತಿಳಿದಿತ್ತು. ಅದರ ವಿವರಗಳನ್ನು ಎಂದಾದರೊಂದು ದಿನ ಹೇಳುವುದಾಗಿ ಮಾತು ಕೊಟ್ಟಿದ್ದಿರಿ. ಹೇಳಬಹುದಾದರೆ ಹೇಳಬಹುದಲ್ಲ.''

ಉಪೇಂದ್ರ, ಹೇಳಲು ಉಪಕ್ರಮಿಸಿದ. ಆದರೆ ಸಾಧ್ಯವಾಗಲಿಲ್ಲ, ಗಂಟಲು ಕಟ್ಟಿಕೊಂಡಿತು. ಬಾಯಿ ಒಣಗಿತು, ಮಾತುಗಳು ಸ್ಪಷ್ಟವಾಗಿ ಹೊರಡಲಿಲ್ಲ. ಅವನಿಗೆ ಎಲ್ಲವೂ ಕನಸಿನಲ್ಲಿ ಕಂಡ ದೃಶ್ಯಗಳಂತೆ ತೋರಿದವು. ಮಧ್ಯೆ ಮಧ್ಯೆ ಕಣ್ಣುಗಳನ್ನು ಒರೆಸಿಕೊಂಡನು.

ಗಂಡನ ಸ್ಥಿತಿಯನ್ನು ನೋಡಿದ ಸುಮನಾ, ''ಹೇಳಬಹುದಾದರೆ ಹೇಳಿ, ಕಷ್ಟವಾದರೆ

ಬೇಡ''- ಎಂದಳು. ಉಪೇಂದ್ರ ಹೇಳಿದ:

''ಮುಂದೆ ಎಂದಿಗೂ ಹೇಳಲಾರೆ; ನಿನಗೆ ಮಾತು ಕೊಟ್ಟಿರುವುದು ನಿಜ. ಸಂಕ್ಷೇಪವಾಗಿ ಹೇಳಿ ಮುಗಿಸುತ್ತೇನೆ. ಈಗ ಬಂದಿರುವ ಸದವಕಾಶವನ್ನು ಕಳೆದುಕೊಂಡರೆ ಅದು ಮುಂದೆ ಎಂದೆಂದಿಗೂ ಬರಲಾರದು.

''ಆಗ ತಾನೆ ಬೇಸಿಗೆ ರಜೆ ಮುಗಿದು ಮಳೆಗಾಲ ಸುಳಿದಿತ್ತು. ನಮ್ಮಿಬ್ಬರ ಸಂಪ್ರೀತಿಯ ಹೊಳೆಯು ತಿಳಿಯಾಗಿ ಹರಿಯುತ್ತಿತ್ತು. ನಮ್ಮ ಪ್ರಪಂಚದಲ್ಲಿ ನಾವಿಬ್ಬರಲ್ಲದೆ ಮತ್ತಾರೂ ಇರಲೇ ಇಲ್ಲ. ಕೊಂಡಯ್ಯ ನಮಗಾಗಿ ಪುಟ್ಟದಾದ ಎರಡು ಕೈದೋಟಗಳನ್ನು ಮಾಡಿಕೊಟ್ಟಿದ್ದ. ಸ್ಕೂಲಿನ ವೇಳೆಯಲ್ಲದೆ, ಉಳಿದ ಕಾಲವನ್ನೆಲ್ಲ ನಾವು ತೋಟದಲ್ಲಿಯೇ ಕಳೆಯುತ್ತಿದ್ದೆವು. ಕೊಂಡಯ್ಯನೇ ನಮಗೆ ಬೇಕಾದ ಎಲ್ಲ ಸಲಕರಣೆಗಳನ್ನೂ ಸಸಿಗಳನ್ನೂ ಒದಗಿಸುತ್ತಿದ್ದನಲ್ಲದೆ, ಮಾರ್ಗದರ್ಶಿಯೂ ಆಗಿದ್ದ. ನಾನು ಕೇವಲ ಹೂವಿನ ಬಳ್ಳಿಗಳು ಮತ್ತು ಸಸಿಗಳನ್ನು ನೆಟ್ಟು ಬೆಳೆಸುವುದರಲ್ಲಿ ಆಸಕ್ತನಾಗಿದ್ದರೆ ಲೋಕಾ ಹಣ್ಣಿನ ಸಸಿಗಳನ್ನು ತರಿಸಿ ಸಾಕುತ್ತಿದ್ದಳು. ನನ್ನ ಬಳ್ಳಿಗಳೆಲ್ಲ ಈಗ ಒಣಗಿ ಹೋಗಿರಬಹುದು; ಆದರೆ ಲೋಕಾ ಬೆಳೆಸಿದ ಗಿಡಗಳೆಲ್ಲ ಈಗ ಫಲಕ್ಕೆ ಬಂದಿವೆ. ಮುಂದೂ ಫಲಗಳನ್ನು ಕೊಡಬಹುದು.

''ಹರಿಪುರದ ಸಮೀಪದಲ್ಲಿ ರೈಲುದಾರಿ ಹೋಗುತ್ತಿದೆ. ಆಗ ಅಲ್ಲಿ ಹೊಸದಾಗಿ ಒಂದು ಪುಟ್ಟ ರೈಲುನಿಲ್ದಾಣ ಏರ್ಪಟ್ಟಿತ್ತು. ಈ ನಿಲ್ದಾಣ ಊರಿಗೆ ಸ್ವಲ್ಪ ದೂರದಲ್ಲೇ ಇತ್ತು. ನೌಕರರ ವಾಸಕ್ಕಾಗಿ ನಿಲ್ದಾಣಕ್ಕೆ ಸೇರಿದಂತೆ ಕೆಲವು ಮನೆಗಳನ್ನೂ ಕಟ್ಟಿಸಿದ್ದರು. ನನ್ನ ತಂದೆಯೇ ಅಲ್ಲಿಗೆ ಅಧಿಕಾರಿಯಾಗಿದ್ದರು. ಪಕ್ಕದಲ್ಲೇ ಅಂಚೆ ಕಛೇರಿ ಮತ್ತು ಮನೆಗಳಿದ್ದವು. ಅಂಚೆ ಕಛೇರಿಗೆ ಲೋಕಾಂಬನ ತಂದೆಯೇ ಅಧಿಕಾರಿಯಾಗಿದ್ದರು. ನಾವಿ

ಬ್ಬರೂ ಚಿಕ್ಕವರಾಗಿದ್ದು ಬೇರೆಯವರ ಸಹವಾಸವಿರಲಿಲ್ಲವಾದ್ದರಿಂದ ನಾವಿಬ್ಬರೂ ಒಡನಾಡಿಗಳಾದೆವು. ನಾವು ಅಲ್ಲಿಂದ ಹರಿಪುರದ ಶಾಲೆಗೆ ಹೋಗಬೇಕಾದರೆ ಹೊಲಗಳನ್ನು ದಾಟಿಕೊಂಡೇ ಹೋಗಬೇಕಾಗಿತ್ತು. ಈ ದಾರಿಯ ಮಧ್ಯೆ ಹೊಲದಲ್ಲಿ ಕೊಂಡಯ್ಯನ ಮನೆ ಇತ್ತು. ಇಬ್ಬರೂ ಜೊತೆಯಾಗಿ ಶಾಲೆಗೆ ಹೋಗಿ ಬರುತ್ತಿದ್ದೆವು.

''ಅವಳ ತಲೆಯ ಕೂದಲು ಉದ್ದವಾಗಿತ್ತು. ಅವಳ ತಾಯಿ ಅವಳಿಗೆ ಜಡೆ ಮುಡಿ ಹಾಕುವಾಗ ಇವಳ ಜಡೆಯಲ್ಲಿ ಕಾಲುಗಳು ಹೇಗೆ ಹೆಣೆದುಕೊಂಡಿವೆಯೋ ಹಾಗೆ ನಿಮ್ಮಿಬ್ಬರ ಸ್ನೇಹವು ಹೆಣೆದುಕೊಂಡಿರಲಿ ಎನ್ನುತ್ತಿದ್ದರು. ಆಗ ಅವರ ಅರ್ಥ ನಮಗೆ ತಿಳಿಯುತ್ತಿರಲಿಲ್ಲ. ಅಲ್ಲಿ ಬೇರೇ ಮಕ್ಕಳೇ ಇರಲಿಲ್ಲವಾದ್ದರಿಂದ, ಒಬ್ಬರನ್ನೊಬ್ಬರು ಅರೆಗಳಿಗೆಯಾದರೂ ಅಗಲುತ್ತಿರಲಿಲ್ಲ. ಶಾಲೆಗೆ ಹೊರಟಾಗ ಅವಳು ನಮ್ಮ ಮನೆಗೆ ಬರುತ್ತಿದ್ದಳು. ನನ್ನ ತಾಯಿ ಇಬ್ಬರನ್ನೂ ಜೊತೆಯಾಗಿ ನಿಲ್ಲಿಸಿ ನೋಡುತ್ತಿದ್ದರು. ನಮ್ಮಿಬ್ಬರ ಗೆಳೆತನ ಹೇಗೆ ಬೆಳೆಯುತ್ತ ಬಂದಿತೆಂದರೆ ಒಬ್ಬರನ್ನೊಬ್ಬರು ಬಿಟ್ಟು ಊಟ ಮಾಡುತ್ತಿರಲಿಲ್ಲ. ಅದಕ್ಕಾಗಿ, ಅವರ ಮನೆಯಲ್ಲಿ ಹಗಲು ಹೊತ್ತು, ರಾತ್ರಿಯವೇಳೆ ನಮ್ಮ ಮನೆಯಲ್ಲಿ ಊಟ ಮಾಡುವ ವ್ಯವಸ್ಥೆ ಮಾಡಿಕೊಂಡಿದ್ದೆವು. ಆಗ ಅವಳು ನನ್ನನ್ನು 'ಭಾವ' ಎಂದು ಕರೆಯುತ್ತಿದ್ದಳು. ಹಾಗೆ ಕರೆಯಬೇಕೆಂದು ಅವಳಿಗೆ ಯಾರು ಹೇಳಿಕೊಟ್ಟಿದ್ದರೋ ಗೊತ್ತಿಲ್ಲ.

''ರೈಲು ನಿಲ್ದಾಣದಿಂದ ಶಾಲೆಗೆ ಹೋಗುವಾಗ ಹೊಲಗಳನ್ನು ಹಾಯ್ದು ಹೋಗಬೇಕಾಗಿತ್ತು. ಆ ಮಾರ್ಗದಲ್ಲೇ ಕೊಂಡಯ್ಯನ ಮನೆಯೂ ಇತ್ತು; ಅವನಿಗೆ ನನ್ನ ತಂದೆ ರೈಲು ಇಲಾಖೆಯಲ್ಲಿ ನೌಕರಿ ಕೊಡಿಸಿದ್ದರು. ಆತ ನಮ್ಮಿಬ್ಬರನ್ನೂ ಅತಿಯಾಗಿ ಮುದ್ದಿಸುತ್ತಿದ್ದ. ಹೊಲಗಳ ಮಧ್ಯೆ ಒಂದು ಸಣ್ಣ ಗುಡ್ಡವಿತ್ತು. ಆಗಾಗ ನಾವಿಬ್ಬರೂ ಅಲ್ಲಿಗೆ ಆಡಲು ಹೋಗುತ್ತಿದ್ದೆವು. ಗುಡ್ಡವು ನೆಲದಿಂದ ಒಂದು ಕಡಿದಾದ ದೊಡ್ಡ ಬಂಡೆಯಿಂದ ಆಗಿತ್ತು. ಲೋಕಾ ಆ ಬಂಡೆಯನ್ನು, ಕೈಗಳಿಂದ ಮುಟ್ಟದೆ ವೇಗವಾಗಿ ಹತ್ತಿ ಹೋಗುತ್ತಿದ್ದಳು. ಹಾಗೆ ಹತ್ತಿ ಹೋಗುವುದು ನನಗೆ ಕಷ್ಟವಾಗಿತ್ತು. ಒಂದು ದಿನ ಬೆಳಿಗ್ಗೆ ಶಾಲೆಗೆ ಹೋಗುವಾಗ ಹೊಲದ ಮಧ್ಯೆ ಎರಡು ಗೂಳಿಗಳು ಭೀಕರವಾಗಿ ಕಾದಾಡುತ್ತ ವೇಗವಾಗಿ ನಮ್ಮ ಕಡೆಗೇ ಬರುತ್ತಿದ್ದವು. ಆಗ ಏನು ಮಾಡಬೇಕೆಂಬುದೇ ತೋರದೆ ಭಯದಿಂದ ನಾನು ನಿಂತುಬಿಟ್ಟೆ. ಆದರೆ ಲೋಕಾ ಹೆದರದೆ ನನ್ನ ಕೈಹಿಡಿದು ಗುಡ್ಡದ ಕಡೆಗೆ ಎಳೆತಂದಳು. ಆಮೇಲೆ ಅವಳು ಬಂಡೆಯನ್ನೇರಿ, ನನ್ನ ಕೈಗಳನ್ನು ಹಿಡಿದು ಮೇಲಕ್ಕೆ ಎಳೆದುಕೊಂಡಳು. ಗೂಳಿಗಳಿಗೆ ಏನೂ ತೋಚದೆ ಬೇರೆ ಕಡೆಗೆ ತಿರುಗಿದವು. ಅಲ್ಲಿ ಆಗ ನಮ್ಮ ಸಹಾಯಕ್ಕೆ ಬರುವವರು ಯಾರೂ ಇರಲಿಲ್ಲ. ಮನೆಗೆ ಬಂದಾಗ ಲೋಕಾಂಬೆಯ ಧೈರ್ಯ, ಸಾಹಸ, ಮನೋಸ್ಥೈರ್ಯಗಳನ್ನು ಹಿರಿಯರೆಲ್ಲ ಹೊಗಳಿದರು. ಅವಳು ಹೇಗೋ ಗಂಡಾಂತರದಿಂದ ಪಾರು ಮಾಡಿದಳು. ಅಂದಿನ ನೆನಪು ನನ್ನ ಮನಸ್ಸಿನಲ್ಲಿ ಇನ್ನೂ ಅಳಿಸಿ ಹೋಗಿಲ್ಲ.

''ಹೀಗೆ ಹರಿಪುರದಲ್ಲಿ ಏಳು ವರ್ಷಗಳನ್ನು ಕಳೆದವು. ಕೈದೋಟದಲ್ಲಿ ಹೂಗಳು ಬೇಕಾದಷ್ಟು ಅರಳಿದವು, ಹಣ್ಣಿನ ಗಿಡಗಳಲ್ಲಿ ಮಾತ್ರ ಮೊಗ್ಗು ಮತ್ತು ಹೂಗಳು ಕಾಣಿಸಿಕೊಂಡವು. ಒಂದು ಕಾರ್ಮೋಡದ ದಿನ, ಸುದ್ದಿ ಬಂತು, ಲೋಕಾಂಬಾಳ ತಂದೆಗೆ ಹೊಸಪೇಟೆಗೆ ವರ್ಗವಾಗಿದೆ ಎಂದು. ಅವರು ಹರಿಪುರವನ್ನು ಬಿಟ್ಟುಹೋಗಲು ಕೇವಲ ಎರಡು ವಾರ ಉಳಿದಿತ್ತು. ನಾವಿಬ್ಬರೂ ಬೇರೆಯಾಗುವೆವೆಂಬ ಚಿಂತೆ ಕಾಡುತ್ತಿತ್ತು.

''ಅದೊಂದು ದಿನ ಬೆಳಗ್ಗೆ ಹೊಂಬಿಸಿಲು,

ಹಸಿರು ಹುಲ್ಲಿನ ಮೇಲೆ ಮುತ್ತಿನ ಮಣಿಗಳಂತೆ, ಮಂಜಿನ ಹನಿಗಳನ್ನು ಆವರಿಸಿ, ಹಾಸಿದ ಚಿನ್ನದ ತಗಡಿನಂತೆ ಕಂಡ ದಿನ. ಅವರು ಹರಿಪುರವನ್ನು ಬಿಡಬೇಕಾಯಿತು.

''ರೈಲುಗಾಡಿ ಬರುವುದಕ್ಕೆ ಮುಂಚೆ, ಅವಳ ತಾಯಿ ಲೋಕಾಂಬೆಯನ್ನು ಸಿಂಗರಿಸಿದರು. ಆಗ ನಾನು ಕಂಡ ಅವಳ ನಿಲುವು ಚೆಲುವನ್ನು ಮತ್ತೆ ನಾನು ಯಾರಲ್ಲೂ ಕಂಡಿಲ್ಲ. ಅವಳ ಕಣ್ಣುಗಳು ಅರಳಿರಲಿಲ್ಲವಾದರೂ ಗಂಭೀರವಾಗಿದ್ದವು. ಆಗ ಅವಳು ಕೊಂಡಯ್ಯನಿಗೂ ನನಗೂ ಒಂದೊಂದು ಕೇಳಿಕೆಯನ್ನು ಕೇಳಿದಳು. ತನ್ನ ತೋಟದಲ್ಲಿ ಬೆಳೆಸಿ ಸಾಕಿದ್ದ ಗಿಡಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಕೊಂಡಯ್ಯನನ್ನು ಕೇಳಿಕೊಂಡಳು. ನಾನು ನಿತ್ಯವೂ ಸಕ್ಕರೆ-ರವೆ-ಎಳ್ಳು ಬೆರಸಿದ ಊಟವನ್ನು ಇರುವೆ ಗೂಡಿಗೆ ಕೊಡಬೇಕೆಂದು ನನಗೊಂದು ಆದೇಶವಿತ್ತಳು. ಅವಳು ಅದುವರೆಗೂ ಇರುವೆಗಳ ಊಟದ ವ್ಯವಸ್ಥೆಯನ್ನು ಉತ್ಸಾಹದಿಂದ ಮಾಡಿದ್ದಳು.

ರೈಲು ಗಾಡಿ ಬಂದಾಗ ಎಲ್ಲರೂ ನಿಲ್ದಾಣದಲ್ಲಿ ಸೇರಿದ್ದೆವು. ಗಾಡಿ ಬಂದೇ ಬಿಟ್ಟಿತು. ದೊಡ್ಡವರೆಲ್ಲ ಎಲ್ಲರನ್ನೂ ಬೀಳ್ಕೊಟ್ಟರು. ಲೋಕಾ ಗಾಡಿಯಲ್ಲಿ ಕುಳಿತು, ಕಿಟಕಿಯಿಂದ ಬಗ್ಗಿ ನೋಡುತ್ತಿದ್ದಳು. ನಾನು ಹತ್ತಿರವೇ ಇದ್ದೆ. ಅವಳ ತುಟಿಗಳು ನಡುಗುತ್ತಿದ್ದವು, ಮಾತನಾಡಲಿಲ್ಲ. ಗಾಡಿ ನಿಧಾನವಾಗಿ ಸಾಗಿತ್ತು, ಲೋಕಾ, ಗಟ್ಟಿಯಾಗಿ 'ಭಾವಾ' ಎಂದು ಅರಚಿದಳು! ಗಾಡಿ ಮರೆಯಾಯಿತು.

''ಲೋಕಾ ಹರಿಪುರವನ್ನು ಬಿಟ್ಟ ಮೇಲೆ, ಊರು ಉಪ್ಪಿಲ್ಲದ ಅಡುಗೆಯಂತೆ ಸಪ್ಪೆಯಾಗಿತ್ತು. ಒಂದು ವರ್ಷದಲ್ಲಿಯೇ ನನ್ನ ತಂದೆಗೂ ಅಲ್ಲಿಂದ ವರ್ಗವಾಯಿತು. ವರ್ಷಗಳು ಕಳೆದನಂತರ ದೇವರ ದರ್ಶನಕ್ಕಾಗಿ ಹಂಪಿಗೆ ಎಲ್ಲರೂ ಹೋಗಿದ್ದೆವು. ಅದು ಏನೋ ಒಂದು ಶುಭ ದಿನ. ನನ್ನ ತಾಯಿ ನದಿಗೆ ಸ್ನಾನಕ್ಕಾಗಿ ಹೋಗಿದ್ದಾಗ ಅಲ್ಲಿ ಲೋಕಾ ಇದ್ದುದನ್ನು ಕಂಡು ಗುರುತಿಸಿದರು. ಹೊಸಪೇಟೆಯಿಂದ ಅವರ ಮನೆಯವರೆಲ್ಲ ಹಂಪಿಗೆ ಬಂದಿದ್ದರು. ಹಿರಿಯರೆಲ್ಲ ಸೇರಿ ತೀರ್ಮಾನಿಸಿದಂತೆ ಎರಡೇ ವಾರದಲ್ಲಿ ನಮ್ಮಿಬ್ಬರನ್ನೂ ವಿವಾಹ ಬಂಧನದಲ್ಲಿ ತೊಡಗಿಸಿದರು. ಅಲ್ಲಿದ್ದುದು ಎರಡೇ ದಿವಸ. ಆಗ ಒಂದು ಮಾತನ್ನೂ ಆಡಲಿಲ್ಲ. ಮತ್ತೆ ಅವಳನ್ನು ನೋಡಲೇ ಇಲ್ಲ. ಮುಂದಿನ ಕತೆ ಅತಿ ವಿಷಾದಕರವಾಯಿತು; ಅದರ ವಿವರಗಳು ನನಗೆ ಗೊತ್ತಿಲ್ಲ.'' ಎಂದು, ವಿಷಯವನ್ನು ಸಮಾಪ್ತಗೊಳಿಸಿದನು.

ಸುಮನಾ, ಉಪೇಂದ್ರನ ಬಾಯಿಯಿಂದ ಅವರ ಬಾಲ್ಯದ ವೃತ್ತಾಂತವನ್ನೆಲ್ಲ ಕೇಳಿ ಮೌನವಾಗಿ ಕುಳಿತಳು. ಬಹಳ ಹೊತ್ತು ಯಾರೂ ಉಸಿರೆತ್ತಲಿಲ್ಲ. ಕಡೆಗೆ ಅವನೇ, ''ಇಲ್ಲಿಗೆ ಬಂದ ಮೇಲೆ ನನ್ನ ಆರೋಗ್ಯ ಕೆಡುತ್ತಿದೆ. ಬೇರೆ ಕಡೆಗೆ ವರ್ಗಮಾಡಿಸಿಕೊಳ್ಳಲು ಯೋಚಿಸುತ್ತಿದ್ದೇನೆ,'' ಎಂದು ರಾಗವಾಗಿ ಉಸುರಿದ. ಸುಮನಾ ನಸುನಗುತ್ತ, ''ಇಲ್ಲಿಯೇ ಲೋಕಾಂಬಾರವರು ಇರುವುದರಿಂದ ಹಾಗಾಗಿರಬಹುದು. ಆದರೆ, ಈಚಿನ ಸುದ್ದಿ ಹರಡಿರುವಂತೆ ಲೋಕಾಂಬಾ ಇನ್ನು ಬಹಳ ದಿವಸ ಇಲ್ಲ ಇರುವಂತಿಲ್ಲ. ಸಮಾಜದಲ್ಲಿ ಎಲ್ಲರ ಬಾಯಲ್ಲೂ ಇದೇ ಮಾತು. ಎಲ್ಲರಿಗೂ ಆತಂಕವಾದಂತಿದೆ. ಅದು ನಿಜವೇ ಆದರೆ ನಿಮ್ಮ ಆರೋಗ್ಯವೂ ನೆಟ್ಟಗಾಗಬಹುದಲ್ಲವೆ?''

''ಯಾವ ಲೋಕಾಂಬಾ?''

''ಅವರೇ ನಿಮ್ಮ 'ಲೋಕಾ', ನಮ್ಮ ಅಮ್ಮನವರು!''

''ಅದು ಹೇಗೆ, ಎಲ್ಲಿಗೆ ಹೋಗುತ್ತಾರಂತೆ?''

''ಅದು ನನಗೆ ಸರಿಯಾಗಿ ತಿಳಿಯದು, ಜನರು ಆಡಿಕೊಳ್ಳುವಂತೆ, ಉತ್ತರ ದೇಶದ

ಲ್ಲಿರುವ ಗಿರಿಧಾಮ ಆಶ್ರಮದಲ್ಲಿ ಯಶೋಧಾಮಾ ಎಂಬ ವೃದ್ಧ ವಿರಾಗಿಣಿ ಇದ್ದಾರಂತೆ. ಅಲ್ಲಿ ಅನಾಥಾಶ್ರಮ, ಪಾಠಶಾಲೆ ಎಲ್ಲ ಇವೆಯಂತೆ. ಆ ಮಾತೆ ವೃದ್ಧಳಾಗಿರುವುದರಿಂದ, ಆಸ್ಥಾನದಲ್ಲಿ ಬೇರೊಬ್ಬ ಯೋಗ್ಯ ಮಹಿಳೆಯನ್ನು ತರಲು ವರ್ಷಗಳಿಂದ ದೇಶದಾದ್ಯಂತವೂ ಹುಡುಕುತ್ತಿದ್ದರಂತೆ. ಈಗ ಆ ಮಾತೆಯೇ ಅಮ್ಮ ಅವರನ್ನು ಆಹ್ವಾನಿಸಿದ್ದಾರಂತೆ.''

''ಆ ಮಾತೆಗೆ ನಿಮ್ಮ ಅಮ್ಮ ಅವರ ಪರಿಚಯವುಂಟೇ?''

''ಜನರು ಹೇಳುವಂತೆ ಎಷ್ಟೋ ಜನ ಸಾಧುಸತ್ಪುರುಷರು ಆಗಾಗ ಬಂದು ಅವರ ದರ್ಶನ ಮಾಡುತ್ತಿದ್ದಾರಂತೆ. ಅವರ ಮೂಲಕ ತಿಳಿದಿರಬಹುದು. ಆ ಮಾತೆಯ ಪೀಠದಲ್ಲಿ ಮಂಡಿಸುವವರಿಗೆ ನನ್ನದು, ತನ್ನದು ಎಂಬ ಯಾವ ಬಗೆಯ ಬಂಧನವೂ ಇರಬಾರದಂತೆ. ಅಂಥವರ ಮನೋವೃತ್ತಿಯು ಕೇವಲ ಈಶ್ವರನ ಸೇವೆಗೇ ಮುಡುಪಾಗಿದ್ದು ವಿಶ್ವಪ್ರೇಮಿಯಾಗಿರಬೇಕಂತೆ. ನಮ್ಮಂಥವರು ಈಗಾಗಲೇ ಅವರ ವಿಯೋಗ ವ್ಯಥೆಯನ್ನು ಅನುಭವಿಸುತ್ತಿದ್ದಾರೆ.''

''ಹಾಗಾದರೆ ಲೋಕಾ ಸಂನ್ಯಾಸಿನಿಯಾಗುವಳೆ?''

''ಅವರಾಗಲೇ ಸಂನ್ಯಾಸಿನಿಯಾಗಿದ್ದಾರೆ. ಎಂಥ ಹಿರಿಯರೂ ಅವರೊಡನೆ ಈ ವಿಷಯವನ್ನು ಎತ್ತಲು ಅಂಜುತ್ತಾರೆ.''


''ಅಂದರೆ?''

''ಅವರು ಇತರರ ಹಾಗೆ ಸಂಬಳಗಿಂಬಳಕ್ಕಾಗಿ ಬಂದವರಲ್ಲ. ಸಂಸ್ಥೆಯವರೇ ಆಗಾಗ ಗೌರವಧನವನ್ನು ಅರ್ಪಿಸುತ್ತಾರೆ. ಆ ಹಣ ಅವರಿಗೆ ಜಾಸ್ತಿ ಎಂದು ಕಂಡು ಬಂದರೆ ಜಾಸ್ತಿ ಹಣವನ್ನು ಸಂಸ್ಥೆಯ ಮೂಲಧನಕ್ಕೆ ಕಟ್ಟಿಬಿಡುತ್ತಾರೆ. ಇದು ಎಲ್ಲರಿಗೂ ಗೊತ್ತು.

''ಆಕೆಗೆ ಈ ಮಾರ್ಗದಲ್ಲಿ ಅನುಭವವೇನಿದೆ?''

''ಅವರ ಪೂರ್ವೋತ್ತರವನ್ನು ಬಲ್ಲವರು ಯಾರೂ ಇಲ್ಲ. ಆಕೆಯ ಜೀವನವೇ ಆರಾಧನೆಯಾಗಿದೆ.''

''ನಾವು ಇಲ್ಲಿಗೆ ಬಂದು ಆರೇಳು ವರ್ಷಗಳಾದರೂ, ಆಕೆ ನಮ್ಮ ನಿವಾಸಕ್ಕೆ ಅನತಿದೂರದಲ್ಲಿ ವಾಸವಾಗಿದ್ದರೂ, ಅಕಸ್ಮಾತ್ತಾಗಿ



ಆದರೂ, ದೂರದಿಂದಲಾದರೂ ಒಂದು ಸಲವೂ ನೋಡಲಿಲ್ಲ. ನೀನಾದರೂ ಹೋಗಿ ಬರುತ್ತಿರುವೆ.''

''ಹೌದು, ಆಗಾಗ ನೋಡುತ್ತೇನೆ. ವಂದನೆ, ಪ್ರತಿವಂದನೆಗಳ ವಿನಿಮಯ ಮಾತ್ರ; ಮಾತುಗಳಿಗೆ ಅವಕಾಶವೇ ಇಲ್ಲ. ಇನ್ನು ಮುಂದೆ ಅದೂ ಇಲ್ಲ!''

''ಏತಕ್ಕೆ, ಆಕೆ ಇಲ್ಲಿರುವುದಿಲ್ಲವೆಂದೇ ಅರ್ಥ?''

''ಅಲ್ಲ. ಇನ್ನು ವಿದ್ಯಾಮಂದಿರದ ಕಡೆಗೆ ಹೋಗುವ ಅವಕಾಶವೇ ಇಲ್ಲ. ಜಯವಂತ ನಿಗೆ ಬೇರೆ ಗಂಡು ಮಕ್ಕಳ ಶಾಲೆಗೆ ಸೇರಿ ಕೊಳ್ಳಲು ಅನುಮತಿಕೊಟ್ಟಿರುತ್ತಾರೆ. ಹನ್ನೆರಡು ವರ್ಷ ವಯಸ್ಸು ತುಂಬಿದ ಮೇಲೆ ಗಂಡು ಮಕ್ಕಳನ್ನು ಅಲ್ಲಿ ಉಳಿಸಿಕೊಳ್ಳುವುದಿಲ್ಲ. ಇದು ನಿಯಮ. ಮಗುವಿನ ನೆಪದಿಂದ ಲಾದರೂ ಆಗಾಗ ಅಮ್ಮ ಅವರ ದರ್ಶನ ಸಿಕ್ಕುತ್ತಿತ್ತು. ಇನ್ನು ಮೇಲೆ ಅದೂ ಇಲ್ಲವಾಯಿತು.''

''ಎಂದಿನಿಂದ?''

''ಇವತ್ತಿನಿಂದ, ನಿನ್ನೆ ದಿನ ಅಲ್ಲಿಗೆ ಕರೆಸಿಕೊಂಡಿದ್ದರು.''

''ಏನು ಹೇಳಿದರು?''

''ಹೇಳುವುದು, ಕೇಳುವುದು ಏನೂ ಇರಲಿಲ್ಲ. ಎಲ್ಲವನ್ನೂ ಲಿಖಿತ ಮೂಲಕ ತಿಳಿಸುತ್ತಾರೆ. ಅಲ್ಲಿ ಬೇರೊಂದು ಕಾರ್ಯಕ್ರಮವಿತ್ತು. ಅದು ಶಾಲೆಗೆ ಸಂಬಂಧಪಟ್ಟುದಲ್ಲ. ಅದು ಒಬ್ಬ ಸಾಧುಗಳ ಸಮಾಗಮ. ಇಷ್ಟಪಡುವವರೆಲ್ಲರೂ ಸಹಭಾಗಿಗಳಾಗಬಹುದೆಂದು ನೋಟೀಸ್ ಹಾಕಲಾಗಿತ್ತು. ಒಂದು ಘಂಟೆ ಸಮಯವನ್ನು ಅಲ್ಲಿಯೇ ಕಳೆದೆ.''

''ಅಲ್ಲಿ ಏನು ಕಾರ್ಯಕ್ರಮವಿತ್ತು?''

''ಶ್ರೀ ತ್ರಿಯಂಬಕ ಬಾಬಾ ಎಂಬ ವೃದ್ಧ ಸಾಧುಗಳು ಬಂದಿದ್ದರು. ಅವರು ಉತ್ತರ ದೇಶದ ಗೋಸಾಯಿ. ಅವರು ಪಾಕಿಸ್ತಾನದಿಂದ ಬಂದವರು. ದೇಶವು ಇಬ್ಭಾಗವಾದಾಗ ಆದ ಗಲಭೆಗಳಲ್ಲಿ ಪ್ರಾಣಾರ್ಪಣೆ ಮಾಡಿದ ದಂಪತಿ ಗಳ ಇಬ್ಬರು ಗಂಡುಮಕ್ಕಳನ್ನು ರಕ್ಷಿಸಿಕೊಂಡು ಬಂದವರು ಅವರು. ಕೊಲೆಯಾದ ದಂಪತಿಗಳು ಕನ್ನಡ ದೇಶದವರಾದ್ದರಿಂದ ಆ ಮಕ್ಕಳನ್ನು ಈ ಪ್ರಾಂತ್ಯಕ್ಕೆ ತಂದು, ಅವರ ಬಂಧುಗಳನ್ನು ಹುಡುಕುತ್ತ ಬೆಂಗಳೂರನ್ನು ಸೇರಿದರಂತೆ. ಇಲ್ಲಿರುವ ಅನಾಥಾಲಯಗಳಲ್ಲಿ ಅವರನ್ನು ಸೇರಿಸಿಕೊಳ್ಳಲು ಯಾರೂ ಒಪ್ಪಿಕೊಳ್ಳದಿದ್ದುದರಿಂದ, ಅವರಿಬ್ಬರನ್ನೂ ಅಮ್ಮ ಅವರಿಗೆ ಒಪ್ಪಿಸಿ, ಮಕ್ಕಳ ಬಂಧುಗಳನ್ನು ಅರಸುತ್ತ ಕರ್ನಾಟಕದಲ್ಲಿ ಆರು ವರ್ಷಗಳನ್ನೂ ಕಳೆದರು. ಹಾಗೆಯೆ ಅವರು ರಾಮೇಶ್ವರ ಸೇತುತೀರ್ಥಗಳನ್ನೂ ಸಂದರ್ಶಿಸಿ ಬಂದಿದ್ದಾರೆ. ಆ ಮಕ್ಕಳ ಬಂಧುಗಳು ಪತ್ತೆಯಾಗಿರುವುದರಿಂದ ಆ ಮಕ್ಕಳನ್ನು ಕರೆದುಕೊಂಡು ಹೋಗಲು ಬಂದಿದ್ದಾರೆ. ಸಂಸ್ಥೆಯ ಹಿರಿಯರು ಆ ಗೋಸಾಯಿಯವರನ್ನು ಕಂಡು ಕೆಲವು ಹಿತವಚನಗಳನ್ನು ಹೇಳಲು ಪ್ರಾರ್ಥಿಸಿದ್ದರು. ಇದೇ ಆ ಸಮಾರಂಭ.

''ಅಲ್ಲಿ ಏನು ನಡೆಯಿತು?''

''ಆ ಗೋಸಾಯಿ ಒಬ್ಬ ಭಿಕ್ಷು; ಯಾವುದೋ ಧರ್ಮಶಾಲೆಯಲ್ಲಿ ತಂಗಿದ್ದಾರೆ. ಅವರು ಯಾವ ಗೃಹಸ್ಥರ ಮನೆಯಲ್ಲೂ ತಂಗುವುದಿಲ್ಲ. ಸಂಘದ ಹಜಾರದಲ್ಲಿ ಅವರನ್ನು ಬರಮಾಡಿಕೊಂಡರು.

ಅವರ ಇಕ್ಕೆಲದಲ್ಲಿ ಹರಿ, ಗಿರಿ ಎಂಬ ಇಬ್ಬರು ತಬ್ಬಲಿ ಮಕ್ಕಳು ಕೂತಿದ್ದರು. ಅಲ್ಲಿ ಕೇವಲ ಇಪ್ಪತ್ತು ಮೂವತ್ತು ಮಂದಿ ಮಹಿಳೆಯರು ಮಾತ್ರ ಸೇರಿದ್ದರು. ಅಲ್ಲಿ ಯಾವ ಆಡಂಬರವೂ ಇರಲಿಲ್ಲ. ಸಾಧುಗಳು ಮೊದಲು ಎಲ್ಲರಿಗೂ ನಮಸ್ಕರಿಸಿದರು. ಒಬ್ಬರು ತಟ್ಟೆಯಲ್ಲಿ ಕೆಲವು ಹಣ್ಣುಗಳನ್ನು ತಂದಿಟ್ಟು ಕೆಲವು ಹಿತವ



ಚನಗಳನ್ನು ಹೇಳಬೇಕೆಂದು ಕೇಳಿದರು.''

''ಆರೇಳು ವರ್ಷ ಕನ್ನಡ ನಾಡಿನಲ್ಲಿದ್ದುದರಿಂದ ಕನ್ನಡದಲ್ಲಿ ಮಾತನಾಡಿದರು. ಮುಂದಿದ್ದ ಒಂದು ಕಿತ್ತಳೇ ಹಣ್ಣನ್ನು ಕೈಗೆ ಎತ್ತಿಕೊಂಡು ಎಲ್ಲರಿಗೂ ತೋರಿಸುತ್ತ ಆ ಹಣ್ಣಿನ ಸೊಬಗನ್ನು ಗಮನವಿಟ್ಟು ನೋಡಬೇಕೆಂದು ಎಲ್ಲರನ್ನೂ ಕೇಳಿಕೊಂಡರು. ಹಣ್ಣು ನೋಡುವುದಕ್ಕೆ ಸುಂದರವಾಗಿಯೂ, ಸುವಾಸನೆಯುಳ್ಳದ್ದಾಗಿಯೂ ಇರುವುದನ್ನೂ ಗಮನಿಸಿ ಎಂದು ಕೇಳಿಕೊಂಡರು. ಅನಂತರ ಆ ಹಣ್ಣನ್ನು ಸುಲಿದು ಹೊರ ಸಿಪ್ಪೆ, ಅದರಲ್ಲಿ ಅಡಕವಾಗಿರುವ ಒಳಪೊರೆಯಲ್ಲಿ ಕಾಣುತ್ತಿದ್ದ ಮೃದುವಾದ ಹತ್ತಿಯಂಥ ಬಿಳಿಯ ವಸ್ತುವನ್ನು ತೋರಿಸಿದರು. ಅನಂತರ ತೊಳೆಗಳನ್ನು ಬಿಡಿಸಿ ಅದರ ರಕ್ಷಣೆಗಾಗಿ ಹೊದಿಸಿದ್ದ ಜೇಡನ ಪೊರೆಯಂಥ ಬಿಳಿಯ ವಸ್ತುವನ್ನು ತೋರಿಸಿದರು. ಅದರ ಒಳಗೆ ಅಡಕವಾಗಿದ್ದ ಚಿನ್ನದ ಕುಸುಮಗಳನ್ನು ತೋರಿಸಿದರು.'' ಈ ಕುಸುಮಗಳಲ್ಲಿ 'ರಸ' ತುಂಬಿರುವುದನ್ನು ನೆನೆದುಕೊಳ್ಳಿ. ರಸದ ರಕ್ಷಣೆಗಾಗಿ ಪ್ರಕೃತಿಮಾತೆ ಎಷ್ಟೊಂದು ರಕ್ಷಾಕವಚಗಳನ್ನು ನಿರ್ಮಿಸಿದ್ದಾಳೆ! ಇದನ್ನು ಗಮನಿಸಿರಿ. ರಸದ ಉಪಯೋಗ ಎಲ್ಲರಿಗೂ ತಿಳಿದೇ ಇದೆ. ಹೊರಗಿನ ರಕ್ಷಾಕವಚಗಳಿಲ್ಲದೆ ರಸವು ನಿಲ್ಲಲಾರದು. ಆದರೆ ನಾವು ಈ ರಕ್ಷಾಕವಚಗಳನ್ನು ಎಸೆದು ರಸವನ್ನು ಮಾತ್ರ ಸ್ವೀಕರಿಸುತ್ತೇವೆ. ಅದು ಅಷ್ಟು ಅಮೂಲ್ಯ ವಸ್ತು.

''ಹೀಗೆಯೆ ಪ್ರಾಣಿಗಳು ಜೀವರಸದಂತೆ ಅಮೂಲ್ಯ. ಹೀಗೆ ಒಳಗೆ ಅಡಗಿರುವ ಚೈತನ್ಯವೇ ರಸ; ಅದೇ ಸದ್ಭಾವ, ಸದ್ಗುಣ ರೂಪದಿಂದ ಆಗಿದೆ. ಇದೇ ಶಿವಸ್ವರೂಪ; ಅಂತರಂಗದ ಈಶ್ವರ ತತ್ವವೂ ಅದೇ. ಎಲ್ಲ ಜೀವಗಳೂ ಪವಿತ್ರ, ಪರಮಾತ್ಮ. ಸದ್ಭಾವ ಪ್ರೇಮಗಳಿಂದ ಅದನ್ನು ಆರಾಧಿಸುವುದನ್ನು ಮರೆಯಬಾರದು.

ಹಣ್ಣನ್ನು ತಿನ್ನುವ ಎಷ್ಟು ಜನ ಈ ರಸರೂಪವಾದ ಪ್ರಕೃತಿ ಮಾತೆಯ ಕಲಾಕೃತಿಯನ್ನು ಅರ್ಥಮಾಡಿಕೊಂಡು ಚಿಂತಿಸುತ್ತಾರೆ? ಮಾತೆ ಸುವರ್ಣ ಕುಸುಮಗಳ ಮಧ್ಯೆ ಎರಡು ಬೀಜಗಳನ್ನು ಇಡುವುದನ್ನು ಮರೆಯುವುದೇ ಇಲ್ಲ. ತನ್ನ ಸೃಷ್ಟಿಯು ಚಿರಕಾಲವೂ ವರ್ಧಿಸುತ್ತಿರಲೆಂಬುದೇ ಮಾತೆಯ ಆಶಯ, ಲೀಲೆ! ಇದು ರಹಸ್ಯ. ಹೊರಗಿನ ಕವಚವೇ ಪ್ರಪಂಚ, ರಸವೇ ಮಾತೆ.

''ನೀವೆಲ್ಲ ಮಾತೆಯರು, ಮಾತೆಯ ಸ್ವರೂಪವೇ. ನಿಮ್ಮ ಕಂದಮ್ಮಗಳಲ್ಲಿ ನಿಮಗಿರುವ ಪ್ರೇಮ, ಮಮತೆ, ತ್ಯಾಗ ಬುದ್ಧಿಗಳೆಲ್ಲ, ಪ್ರಕೃತಿಮಾತೆ, ತನ್ನ ಅಪಾರವಾದ ಮಾತೃಪ್ರೇಮದಿಂದ ಒಂದೊಂದು ಹನಿಯನ್ನು ಅನುಗ್ರಹಿಸಿರುವ ಫಲವೇ. ಇದರ ಆಧಾರದಿಂದಲೇ ಮಾತೆಯರು ಸಮಸ್ತ ಜೀವರಾಶಿಗಳನ್ನು ಸಂರಕ್ಷಿಸುತ್ತಿದ್ದಾರೆ.

''ಹಾಗೆಯೇ ಪ್ರಕೃತಿಮಾತೆ ನನ್ನದು, ತನ್ನದು ಎಂಬ ಮಮಕಾರವನ್ನೂ ಇಟ್ಟಿದ್ದಾಳೆ. ನಿಮ್ಮ ಮಕ್ಕಳನ್ನು ನೀವು ಪ್ರೀತಿಸುವಷ್ಟು ಬೇರೆಯವರ ಮಕ್ಕಳನ್ನೂ ಪ್ರೀತಿಸಲಾರಿರಿ. ಇದೇ ಮಮಕಾರ. ತನ್ನದು ಎಂದು ಪರಿಗಣಿಸದ, ಯಾರದೋ ಆದ ಮಕ್ಕಳನ್ನು ತನ್ನವೇ ಎಂಬ ಭಾವನೆಯಿಂದ ಪ್ರೀತಿಸಿ ಸೇವಿಸುವುದೇ ಯಜ್ಞ. ಅಂಥವರು ಕೆಲವರೇ ಇರಬಹುದು, ನಿಮ್ಮ ಸಮೂಹದಲ್ಲೂ ಇರಬಹುದು. ಅವರಿಗೆ ತನ್ನದೆಂಬ ಕುಟುಂಬವಿಲ್ಲ, ಬಂಧನದ ಮಮಕಾರವಿಲ್ಲ. ಅವರಿಗೆ ಎಲ್ಲರೂ ತನ್ನ ಕುಟುಂಬದವರೇ ಆಗಿರುತ್ತಾರೆ. ಅವರು ವಿಶ್ವ ಕುಟುಂಬಿನಿ. ಅವರದು ವಿಶ್ವಪ್ರೇಮ. ನೀವೆಲ್ಲರೂ ನನ್ನನ್ನು ಆಶೀರ್ವದಿಸಿ, ಅಪ್ಪಣೆ ಕೊಡಿ. ನಾನು ಬರುತ್ತೇನೆ.''



ಸಾಧುಗಳು ಕೊನೆಯ ವಾಕ್ಯಗಳನ್ನು ಹೇಳಿದಾಗ ಎಲ್ಲರೂ ಒಂದು ಮೂಲೆಯಲ್ಲಿ ಕುಳಿತಿದ್ದ ಅಮ್ಮ ಅವರ ಕಡೆ ನೋಡಿದರು. ಅಂದು ಆ ಸಾಧುಗಳು ಹೇಳಿದ ಮಾತುಗಳನ್ನೆಲ್ಲ ನಾನು ಹೇಳುತ್ತಿಲ್ಲ. ಅವರಂದ ಮಾತುಗಳಲ್ಲಿ ನನಗೆ ಅರ್ಥವಾದಷ್ಟನ್ನು ನನ್ನ ಭಾಷೆಯಲ್ಲಿ ಹೇಳಿದ್ದೇನೆ. ಅಂತೂ ಇಂದಿನಿಂದ ಅತ್ತ ಕಡೆ ಹೋಗಿ ಬರುವ ಕರ್ತವ್ಯ ಕೊನೆಗೊಂಡಿತು.''

ಉಪೇಂದ್ರ, ನೀಳವಾದ ಉಸಿರುಬಿಟ್ಟು ಮತ್ತೆ ನುಡಿದ: ''ಇದ್ದ ಒಂದೇ ಒಂದು ಆಶೆ ಏನೆಂದರೆ, ಆಕೆಯನ್ನು ದೂರದಿಂದಲಾದರೂ ಒಂದು ಸಲ ನೋಡಬೇಕೆಂಬುದು. ಆಗಿನ ಲೋಕಾ ಈಗ ಹೇಗೆ ಇದ್ದಾಳೆಂಬ ಕಲ್ಪನೆಗೂ ಅವಕಾಶವಿಲ್ಲವಾಯಿತು. ಆಕೆ ರಾಮೇಶ್ವರನಿಗೆ ಬರೆದ ಕಾಗದದಲ್ಲಿ ವ್ಯಕ್ತಪಡಿಸಿದ್ದಂತೆ ಈಗ ಮಾಡುವುದು ಕಷ್ಟದ ಕೆಲಸ,'' ಎಂದು ಕೊರಗಿದ.

★

ದಿನಗಳು ಉರುಳಿದಂತೆ ಲೋಕಾಂಬೆಯ ನೆನಪು ಅವರ ಸ್ಮೃತಿ ಪಥದಿಂದ ಪೂರ್ತಿಯಾಗಿ ಜಾರಿಹೋಯಿತು. ಅಣ್ಣ ಮತ್ತು ತಾಯಿಯ ಹತ್ತಿರವೇ ಇರಬೇಕೆಂದು ಮಾಡಿದ ಸತತ ಪ್ರಯತ್ನದಿಂದ ಉಪೇಂದ್ರನಿಗೆ ಬೊಂಬಾಯಿಗೆ ವರ್ಗವಾಯಿತು. ಆದರೆ ಅದೇ ಸಮಯದಲ್ಲಿ ಅಣ್ಣನಿಗೂ ದೂರದ ಬೇರೆ ಸ್ಥಳಕ್ಕೆ ಬೊಂಬಾಯಿನಿಂದ ವರ್ಗವಾಗಿತ್ತು. ಉಪೇಂದ್ರನ ಕನಸು ನನಸಾಗಲಿಲ್ಲ. ತಾಯಿ ಜಾನಕಮ್ಮನವರಿಗೆ ವಯಸ್ಸಾಗುತ್ತ ನಿಃಶಕ್ತರಾಗುತ್ತಿದ್ದರು. ಅವರು ಆಗಾಗ ಭೀತಿಯಿಂದ ಅಸ್ವಸ್ಥರಾಗುತ್ತಿದ್ದರು. ತನ್ನವರು ಅನ್ಯಾಯವಾಗಿ ಏನೂ ಅರಿಯದ ಬಾಲೆ ಲೋಕಾಂಬೆಗೆ ಮಾಡಿದ ಅಪರಾಧಗಳು, ತಪಸ್ವಿನಿಯಂತಿರುವ ಅವಳ ಶಾಪಗಳು ತನ್ನ ಸಂಸಾರವನ್ನು ಆಗಲೇ ಅಸ್ಥಿರಗೊಳಿಸಿ ಅಲ್ಲೋಲ ಕಲ್ಲೋಲ ಮಾಡದೆ ಬಿಡುವುದಿಲ್ಲ; ಅದಕ್ಕಾಗಿ ಮಾಡಿಕೊಳ್ಳುವ ಯಾವ ಪ್ರಾಯಶ್ಚಿತ್ತವೂ ಇಲ್ಲ;



ಇತ್ಯಾದಿ ಅವರ ನಂಬಿಕೆಯಾಗಿತ್ತು. ತನ್ನ ಇಬ್ಬರು ಮಕ್ಕಳಿಗೂ ಏಕಕಾಲದಲ್ಲಿ ಸ್ಥಳ ಪಲ್ಲಟವಾದದ್ದೂ ಆ ನಂಬಿಕೆಯನ್ನು ಬಲಪಡಿಸುವಂತೆ ತೋರಿತು. ಅನೇಕ ಕಾರಣಗಳಿಂದ ಪಂಪಾಯಾತ್ರೆಯೂ ನೆರವೇರಲೇ ಇಲ್ಲ. ರಾತ್ರಿಯೆಲ್ಲ ಚಿಂತಿಸಿ, ಚಿಂತಿಸಿ ಬೆಳಿಗ್ಗೆ ತನ್ನ ಕಳವಳವನ್ನು ಮನೆಯ ಎಲ್ಲರಿಗೂ ವ್ಯಕ್ತಪಡಿಸಿದರು. ಆ ವೇಳೆಗೆ ಉಪೇಂದ್ರನೂ ಬೊಂಬಾಯಿಗೆ ಬಂದಿದ್ದನು. ತಾಯಿಯು, ''ಇನ್ನು ಮುಂದೆ ತಾನು ಒಂದು ಕ್ಷಣವೂ ಜೀವಿಸಿರಲಾರೆ. ಸಾಯುವ ಮುನ್ನ ತನ್ನ ಏಕೈಕ ಇಚ್ಛೆಯನ್ನು ಪೂರೈಸಬೇಕು,'' ಎಂದು ಇಬ್ಬರು ಮಕ್ಕಳಿಗೂ ಸೂಚನೆ ಕೊಟ್ಟರು. ಆದ್ದರಿಂದ ತಡಮಾಡದೆ ಕಾಶೀ ಯಾತ್ರೆಯ ದಿನವನ್ನು ಗೊತ್ತುಮಾಡಿದರು.

ಎಲ್ಲ ನಗರಗಳಂತೆಯೇ ಕಾಶೀ ಪಟ್ಟಣವು ಗಡಿಬಿಡಿಯ ಬೀಡು. ಆದುದರಿಂದ ಅವರು ಗಂಗೆಯ ಆಚೆಯ ದಡದಲ್ಲಿ ಪ್ರಶಾಂತವಾಗಿದ್ದ ಒಂದು ನಿವಾಸವನ್ನು ಗೊತ್ತು ಮಾಡಿಕೊಂಡರು. ಅಲ್ಲಿ ಜಾನಕಮ್ಮನವರ ಕುಟುಂಬದವರೆಲ್ಲ ಬಂದು ಸೇರಿದರು. ಪ್ರತಿದಿನವೂ ಗಂಗೆಯಲ್ಲಿ ಮಿಂದು, ದೋಣಿಗಳಲ್ಲಿ ನದಿಯನ್ನು ದಾಟಿ, ದೇವರ ದರ್ಶನಾದಿಗಳನ್ನು ತೀರಿಸಿಕೊಂಡು ತಮ್ಮ ನಿವಾಸಕ್ಕೆ ಹಿಂದುರುಗಿ ಹೋಗುತ್ತಿದ್ದರು. ಯಾತ್ರೆಯ ಶ್ರಮವೆಲ್ಲ ಯಥಾವತ್ತಾಗಿ ನೆರವೇರಿತು. ಜಾನಕಮ್ಮನವರು ಗಂಗಾಮಾತೆಯನ್ನು ವಿಧಿಪೂರ್ವಕವಾಗಿ ಪೂಜಿಸಿ, ಬಹಳ ಕಾಲವನ್ನು ಗಂಗೆಯ ಸನ್ನಿಧಿಯಲ್ಲೇ ಕಳೆದು ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು. ಅವರು ಏಕಾಂತದಲ್ಲಿ ದೇವಿಯೊಡನೆ ಮಾತನಾಡುತ್ತಿದ್ದುದನ್ನು ಸುಮನಾ ಗಮನಿಸಿ, ಅವರ ಎಲ್ಲ ಸೇವಾ ಶುಶ್ರೂಷೆಯನ್ನೂ ಮಾಡುತ್ತಿದ್ದಳು. ಬಡವರಿಗೂ ಸಾಧುಸಂತರಿಗೂ ದಾನಧರ್ಮಗಳನ್ನೂ ನೆರವೇರಿಸಿದರು. ಪವಿತ್ರಸ್ಥಳಗಳಿಗೆಲ್ಲ ನಡೆದೇ ಹೋಗಿ ತಮ್ಮ ಭಕ್ತಿಯನ್ನು ಸಮರ್ಪಿಸಿ ದೇವತೆಗಳೆಲ್ಲ ಸುಪ್ರಸನ್ನರಾದರೆಂದು ಭಾವಿಸಿದರು. ಸಾಧುದರ್ಶನವೆಂಬ ಕಾರ್ಯ ಉಳಿದಿತ್ತು. ಅದಕ್ಕಾಗಿಯೇ ಒಂದು ಶುಭದಿನವನ್ನೇ ನಿರೀಕ್ಷಿಸಿದರು. ಆದಿನ ಅನೇಕ ಜನರು ಅಲ್ಲಿಗೆ ಬರುವ ನಿರೀಕ್ಷೆಯೂ ಇತ್ತು.

ಆ ಪ್ರಾಂತ್ಯದ ಗಂಗಾತೀರದ ಒಂದು ತೋಟದಲ್ಲಿ ವೃದ್ಧರೂ ಜ್ಞಾನಿಗಳೂ ಆದ ಒಬ್ಬ ತಪಸ್ವಿಗಳು ಬಹುದಿನಗಳಿಂದ ತಪಸ್ಸು ಮಾಡಿಕೊಂಡಿದ್ದ ಮಹಾತ್ಮರಿದ್ದರು. ಅವರ ದರ್ಶನ ಮಾಡಬೇಕೆಂದು ತಾಯಿ ಜಾನಕಮ್ಮನವರಿಗೆ ಉತ್ಕಟಾಪೇಕ್ಷೆ ಇತ್ತು. ಆ ಮಹಾತ್ಮರು ಭಕ್ತರಿಗೆ ದರ್ಶನ ಕೊಡುವುದಕ್ಕಾಗಿಯೇ ಗೊತ್ತಾದ ದಿನ-ಕಾಲಕ್ಕೆ ಹೊರಕ್ಕೆ ಬರುತ್ತಿದ್ದರು. ಅವರು ನಿತ್ಯಮೌನಿಗಳು. ಯಾವಾಗಲೂ ತಪಸ್ಸಿನಲ್ಲಿ ಮಗ್ನರಾಗಿರುತ್ತಿದ್ದುದರಿಂದ ಜನರು ಅವರನ್ನು 'ಮಗ್ನಿ ಬಾಬಾ' ಎಂದು ಕರೆಯುತ್ತಿದ್ದರು.

ಆ ದಿನ ಪುಣ್ಯ ಕಾಲವಾಗಿತ್ತು. ಬಹುಜನ ಭಕ್ತರೂ ಆಸ್ತಿಕರೂ ಕಾಶೀಪಟ್ಟಣವನ್ನು ಮುತ್ತುತ್ತಿದ್ದರು. ನದಿಯ ಆಚೆ ಕಡೆಯಿಂದ ದೋಣಿಗಳಲ್ಲಿ ದೇವಾಲಯದ ಕಡೆಗೆ ಬಂದು ಹೋಗಬೇಕಾಗಿತ್ತು. ಅಂಬಿಗರು ನದಿಯನ್ನು ದಾಟಿ ದೇವಾಲಯದ ಬಳಿ ಜನರನ್ನು ಇಳಿಸಿ ಆಚೆ ಕಡೆಗೆ ಹೋಗುವ ಜನರನ್ನು ತುಂಬಿ ಕೊಂಡು ಹೋಗುತ್ತಿದ್ದರು. ಹೀಗೇ ದೋಣಿ ಗಳ ಪ್ರವಾಹ ಸಾಗಿತ್ತು. ಜಾನಕಮ್ಮನವರು ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ಅವರ ಕುಟುಂಬದವರೊಡನೆ ದೋಣಿಯನ್ನು ನಿರೀಕ್ಷಿಸುತ್ತ ಆಚೆಯ ಕಡೆ ನಿಂತಿದ್ದರು; ಮಕ್ಕಳೂ ಸೇರಿ ಇವರ ಪರಿವಾರ ಜಾಸ್ತಿಯೇ ಆಗಿತ್ತು. ವಿಚಾರಿಸಿದರೂ ಬಾಡಿಗೆ ದೋಣಿ ಸಿಕ್ಕಲಿಲ್ಲ. ಹೋಗಿ ಬರುವ ದೋಣಿಯಲ್ಲೇ ಹೋಗಬೇಕಾಗಿತ್ತು.

ನಿರೀಕ್ಷಿಸುತ್ತಿದ್ದ ದೋಣಿ ಬೇರೆಯವರಿಗಾಗಿ ಮರಳಿ ಹಿಂದಿರುಗಿ ಬಾರದೆ ಬೇರೆಯ ದಿಕ್ಕಿಗೆ ಸಾಗಿತ್ತು. ಆದುದರಿಂದ ಎಲ್ಲವೂ ತಡವಾಗುವುದೆಂದು ತವಕಪಟ್ಟರು. ಸ್ವಲ್ಪ ಹೊತ್ತಾದ ಮೇಲೆ ಮತ್ತೊಂದು ದೋಣಿ ಇವರ ಕಡೆಗೇ ಬರುತ್ತಿರುವುದರಿಂದ ಅದನ್ನೇ ನಿರೀಕ್ಷಿಸಿದರು. ದೋಣಿಯೇನೋ ಬಂತು. ಜಾನಕಮ್ಮನವರ ಕುಟುಂಬದವರು ಆತುರ ದಿಂದ ಹತ್ತಿ ಕುಳಿತರು. ಅಷ್ಟು ಹೊತ್ತಿಗೆ ಸರಿಯಾಗಿ ಬಂದು ಸೇರಿದ ಹಳ್ಳಿಗರು ನೂಕು ನುಗ್ಗಲಲ್ಲಿ ಮೇಲೇರಿ ಕುಳಿತೇಬಿಟ್ಟರು. ಆದರೆ ವೃದ್ಧರಾದ ಜಾನಕಮ್ಮನವರಿಗೂ ಅವರಿಗೆ ಸಹಾಯಕರಾಗಿದ್ದ ಉಪೇಂದ್ರ, ಸುಮನಾರಿಗೂ ಹತ್ತಲು ಆಗದೆ ಉಳಿದುಬಿಟ್ಟರು. ಈಗಾಗಲೇ ದೋಣಿ ಭರ್ತಿಯಾಗಿದ್ದುದರಿಂದ ಅಂಬಿಗರು ಆ ಮೂವರನ್ನೂ ಅಲ್ಲಿಯೇ ಬಿಟ್ಟು ಹೊರಟುಹೋದರು. ಅವರು ಮತ್ತೊಂದು ದೋಣಿಯನ್ನು ನಿರೀಕ್ಷಿಸಬೇಕಾಯಿತು. ತಾಯಿಗೆ ಆಶಾಭಂಗವಾಗಿತ್ತು. ಹೊತ್ತು ಮೀರುತ್ತಿದ್ದುದರಿಂದ, ಅವರಿಗೆ ಕಳವಳವೂ ಆಗಿತ್ತು.

ಸ್ವಲ್ಪ ಹೊತ್ತಿನಲ್ಲೇ ಹಳ್ಳಿಗರಂತೆ ಕಾಣಿಸುತ್ತಿದ್ದ ಇಬ್ಬರು ಅಲ್ಲಿಗೆ ಬಂದರು. ಅವರೂ ದೇವಾಲಯದ ಕಡೆ ಹೋಗುವವರಿದ್ದರು. ಹತ್ತಿರದ ಮರವೊಂದಕ್ಕೆ ಅಂಬಿಗರು ಒಂದು ಸಣ್ಣ ದೋಣಿಯನ್ನು ಹಗ್ಗದಿಂದ ಬಿಗಿದು ಕಟ್ಟಿಹೋಗಿದ್ದರು. ಆಗ ತಾನೇ ಬಂದಿದ್ದ ಇಬ್ಬರು ಹಳ್ಳಿಗರು ದೋಣಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿ ಅದನ್ನು ನೀರಿನೊಳಕ್ಕೆ ಎಳೆತಂದರು. ಉಪೇಂದ್ರ ಅವರ ಅನುಮತಿಯನ್ನು ಪಡೆದು, ಮೂವರೂ ನಾವೆಯನ್ನು ಹತ್ತಿದರು. ಸಣ್ಣ ದೋಣಿಯನ್ನು ಬಿಟ್ಟು ಹೋಗಿದ್ದ ಅಂಬಿಗರು ಹುಟ್ಟುಗಳನ್ನು ಅಲ್ಲಿ ಬಿಟ್ಟಿರಲಿಲ್ಲ. ಅಲ್ಲಿ ಬಿದಿರಿನ ಬೊಂಬು (ಜಲ್ಲೆ)ಗಳನ್ನು ಮಾತ್ರ ಬಿಟ್ಟಿದ್ದರು. ಬೊಂಬುಗಳ ಸಹಾಯದಿಂದ ಅವರಿಬ್ಬರೂ ದೋಣಿಯನ್ನು ತಳ್ಳುತ್ತಿದ್ದರು. ನಾವೆಯು ಮೀನಿನಂತೆ ತೀವ್ರವಾಗಿ ಸಾಗಿತು. ನಾವೆಯು ಹೇಗೋ ಸುರಕ್ಷಿತವಾಗಿ ನದಿಯ ಮಧ್ಯ ಪ್ರದೇಶದ ವರೆಗೆ ಸಾಗಿತ್ತು. ಆ ಚಿಕ್ಕ ದೋಣಿ ಪ್ರಯಾಣಕ್ಕೆ ಯೋಗ್ಯವಲ್ಲವಾದುದರಿಂದ ಅಂಬಿಗರು ಅದನ್ನು ಅಲ್ಲಿ ಬಿಟ್ಟಿದ್ದರೆಂಬುದು ಯಾರಿಗೂ ಗೊತ್ತಾಗಲಿಲ್ಲ. ಅಲ್ಲದೆ ಪ್ರವಾಹದ ಮಧ್ಯೆ ಬಂದಾಗ ಹಳ್ಳಿಗರ ಕೈಲಿದ್ದ ಬಿದಿರು ಬೊಂಬು ಮುರಿದು ಚೂರಾಯಿತು! ದೋಣಿಯನ್ನು ನಡೆಸುತ್ತಿದ್ದವರು ಏನೂ ತೋಚದೆ, ಸಹಾಯಕ್ಕಾಗಿ ಕೂಗಿಕೊಂಡು ನೀರೊಳಗೆ ಧುಮುಕಿ ಈಜಿಕೊಂಡು ಹೋಗುತ್ತಿದ್ದರು. ನಾವೆಯು ಗಿರ್ರನೆ ಸುತ್ತಲು ಪ್ರಾರಂಭಿಸಿತು. ಎಲ್ಲರೂ ಸಹಾಯಕ್ಕಾಗಿ ಕೂಗಿಕೊಂಡರು. ನಾವೆ ಕೊಚ್ಚಿಹೋಗುತ್ತಿತ್ತು.

ಬೇರೆ ದಿಕ್ಕಿಗೆ ಹೋಗುತ್ತಿದ್ದ ದೊಡ್ಡ ದೋಣಿಯೊಂದು ಮಿಂಚಿನ ವೇಗದಲ್ಲಿ

ಹಿಂದಿರುಗಿ ಆಪತ್ತಿಗೆ ಸಿಕ್ಕಿದ್ದ ದೋಣಿಯ ಮಾರ್ಗದಲ್ಲಿ ಅಡ್ಡಲಾಗಿ ಬಂದು ಅದನ್ನು ತಡೆದು ನಿಲ್ಲಿಸಿತು. ರಕ್ಷಣೆಗಾಗಿ ಬಂದ ದೋಣಿಯ ಚಾಲಕರೆಲ್ಲ ಕಾವೀಬಟ್ಟೆಯ ನ್ನುಟ್ಟ ಸಾಧುಗಳು. ಅದರಲ್ಲಿ ಮೂವರು ಹೆಂಗಸರು ಸಾಹಸದಿಂದ ಆ ಮೂವರನ್ನೂ ಎಳೆದುಕೊಂಡರು. ಸಣ್ಣ ದೋಣಿ ಪ್ರವಾಹ ದಲ್ಲಿ ಕೊಚ್ಚಿಹೋಯಿತು. ಮೂವರನ್ನೂ ಸಾಧುಗಳ ನಾವೆಯಲ್ಲಿದ್ದ ಹೆಂಗಸರು ಪ್ರಾಣಾಪಾಯದಿಂದ ರಕ್ಷಿಸಿದರು.

ದೋಣಿಯಲ್ಲಿದ್ದವರಿಗೆ ಹೋಗಿದ್ದ ಪ್ರಾಣ ಬಂದಿತ್ತು. ಮಾತನಾಡಲು ಯಾರಿಗೂ ಉಸಿರೇ ಹೊರಡದೆ ಮೌನವಾಗಿದ್ದರು. ಸಾಧುಗಳ ದೋಣಿ ಕ್ಷಣಮಾತ್ರದಲ್ಲಿ ಸ್ನಾನ ಘಟ್ಟವನ್ನು ಸೇರಿ, ರಕ್ಷಿಸಲ್ಪಟ್ಟ ಮೂವರೂ ಇಳಿದೊಡನೆಯೇ ಸಾಧುಗಳು ತಮ್ಮ ಪಾಡಿಗೆ ತಾವು ನದಿಯಲ್ಲಿ ಬೇರೆ ದಿಕ್ಕಿಗೆ ಹೊರಟು ಹೋದರು. ದಿಗ್ಭ್ರಮೆಯಿಂದ ನರಳುತ್ತಿದ್ದ ಮೂವರೂ ಸಾಧುಗಳಿಗೆ ತಮ್ಮ ಕೃತಜ್ಞತೆ ಯನ್ನು ಹೇಳಲೂ ಅವಕಾಶವಿರಲಿಲ್ಲ.

ಜಾನಕಮ್ಮನವರ ಕುಟುಂಬದವರೆಲ್ಲ ದೇವರ ದಯೆಯಿಂದ ಒಗ್ಗೂಡಿದರು. ಸುಮನಾ ಮಾತ್ರ ಚಿಂತಾಕ್ರಾಂತಳಾಗಿದ್ದಳು. ''ತಮ್ಮ ಜೀವನವನ್ನು ರಕ್ಷಿಸಿದವರಲ್ಲಿ ಒಬ್ಬ ರಿಗೆ ಕನ್ನಡ ಗೊತ್ತಿದೆ; ಅವರು ಶುಭ್ರವಾದ ಬಿಳಿಯ ವಸ್ತ್ರವನ್ನುಟ್ಟು ಹಳದಿಯ ಶಾಲನ್ನು ಹೊದ್ದಿದ್ದರು,'' ಎಂದು ಹೇಳಿದರು. ಅವರು ಯಾರಿರಬಹುದೆಂಬುದನ್ನು ಆಕೆ ವಿವರಿಸಲೂ ಇಲ್ಲ. ಉಳಿದವರಿಗೆ ಅದನ್ನೆಲ್ಲ ವಿಚಾರಿಸಲೂ ಬೇಕಾಗಿರಲಿಲ್ಲ.

ಆ ದಿನ ಬಾಬಾರವರಿದ್ದ ತೋಟದಲ್ಲಿ ಒಂದು ಮಹಾ ದಿನ. ಭಕ್ತರು ಗುಂಪು ಗುಂಪಾಗಿ ಬಂದು ಸೇರುತ್ತಿದ್ದರು. ಆ ವೃದ್ಧ ರಾದ ಬಾಬಾರವರನ್ನು ಎತ್ತರವಾದ ವೇದಿ ಕೆಯ ಮೇಲೆ ಕುಳ್ಳಿರಿಸಿದ್ದರು. ಬಂದವರು ಅವರ ದರ್ಶನ ಪಡೆದು, ವಂದಿಸಿ ಮುಂದೆ ಸಾಗುತ್ತಿದ್ದರು. ಬೆಳಗಿನಿಂದ ಮಧ್ಯಾಹ್ನದ ವರೆಗೂ ಜನರು ಬಂದು ಮಹಾತ್ಮರ ದರ್ಶನ ಪಡೆದುಹೋದರು. ದೋಣಿಯ ತೊಂದರೆ ಯಿಂದ ತಡವಾಗಿ ಬಂದ ಜಾನಕಮ್ಮನವರ ಕುಟುಂಬದವರು ದೂರದಿಂದಲೇ ಮಹಾತ್ಮರ ದರ್ಶನವಾಯಿತು. ಮಹಾತ್ಮರಿಗೆ ಪ್ರಣಾಮ ಮಾಡಲು ಹತ್ತಿರಕ್ಕೆ ಸಾಗುತ್ತಿದ್ದರು. ಆಗ ಬೇರೆ ದಿಕ್ಕಿನಿಂದ, ಗಿರಿಧಾಮದವರಾದ ಸಾಧು ಸಂತರು ತೋಟವನ್ನು ಪ್ರವೇಶಿಸಿದರು. ಅವ



ರಲ್ಲಿ ಮೂವರು ಸಾಧ್ವೀಮಣಿಯರೂ ಇದ್ದರು. ಬಂದವರು ಮಹಾತ್ಮರಿಗೆ ವಂದಿಸಿ ಕುಳಿತರು. ಸುಮನಾಳ ಸೂಕ್ಷ್ಮ ದೃಷ್ಟಿಯು ತಾನು ಬೆಂಗಳೂರಿನಲ್ಲಿ ನೋಡಿದ್ದ ತ್ರಿಯಂಬಕಜೀಯವರನ್ನು ಗುರು ತಿಸಿತು.

ಸುಮನಾ, ದೋಣಿಯಲ್ಲಿ ನಮ್ಮನ್ನು ರಕ್ಷಿ ಸಿದ ಹೆಂಗಸರಲ್ಲಿ ಕನ್ನಡವನ್ನು ತಿಳಿದವರೊ ಬ್ಬರು ಇದ್ದಾರೆಂದು ಹೇಳಿದ್ದಳಲ್ಲವೆ? ಆಗ ಅವರನ್ನು ನೋಡಲೇ ಇಲ್ಲ ಎಂದು ಎಲ್ಲ

ರಿಗೂ ಹೇಳಿದಳು. ಆದರೆ ಅವರಲ್ಲಿ ಏನೂ ವಿಶೇಷವಿಲ್ಲವೆಂದೇ ಭಾವಿಸಿದರು. ಆದ್ದರಿಂದ ಆಕೆ ತನ್ನ ಗಂಡನೊಡನೆ ಹೀಗೆ ಹೇಳಿದಳು:

''ಹಿಂದೊಂದು ದಿನ ಯಾವ ಪುಟ್ಟ ಕೈಗಳು ಗೂಳಿಗಳ ತುಳಿತದಿಂದ ರಕ್ಷಿಸಿದ್ದವೋ ಅದೇ ಕೈಗಳು ಈ ದಿನ ನೀರಿನಲ್ಲಿ ಜಲಸಮಾಧಿಯಾಗಲಿದ್ದ ನಿಮ್ಮನ್ನು ರಕ್ಷಿಸಿದವು.''

''ಅವು ಲೋಕಾಂಬನ ಕೈಗಳು.''

''ಅವೇ ಹರಿಪುರದಿಂದ ಕಾಶಿಗೆ ನಿಮ್ಮನ್ನು ರಕ್ಷಿಸಲು ಬಂದಿವೆ!''

''ಹಾಗಾದರೆ.....''

''ನೀವು ಈಗ ದೂರದಿಂದ ನೋಡಬೇಕೆಂಬ ಅಭಿಲಾಷೆಯನ್ನು ತೀರಿಸಿಕೊಳ್ಳಬಹುದು.''

''ಲೋಕಾಂಬಾ ಹೀಗಿರಲಿಲ್ಲ; ಬೇರೆಯಿದ್ದಂತಿದೆ.''

''ಹೌದು, ಆಗ ಅವರು ಮಾನವರಂತಿದ್ದರು, ಈಗ ದೇವತೆಯಾಗಿ ಕಾಣಿಸುತ್ತಾರೆ.''

''ದೋಣಿಯಲ್ಲಿ ನಮ್ಮನ್ನು ರಕ್ಷಿಸಿದವರು ಇವರೇ ಇರಬಹುದೆ?''

''ನಾನವರನ್ನು ಚೆನ್ನಾಗಿ ಬಲ್ಲೆ, ಅಲ್ಲಿಯೇ ಅವರ ಪಾದಸ್ಪರ್ಶಮಾಡಿದ್ದೇನೆ.''

ಇವರ ಸಂಭಾಷಣೆಯನ್ನು ಕೇಳಿಸಿಕೊಂಡ ಜಾನಕಮ್ಮನವರು ಕೇಳಿದರು.

''ಸುಮನಾ, ನೀನೊಬ್ಬಳೇ ಬಲ್ಲೆ; ಅಲ್ಲಿ ನಿಂತು ಮಹಾತ್ಮರೊಡನೆ ಮಾತನಾಡುತ್ತಿರುವಾಕೆ ಯಾರು? ಅವರನ್ನು ಬೆಂಗಳೂರಿನಲ್ಲಿ ನೋಡಿದಂತಿದೆ; ಯಾರಿರಬಹುದು ಆಕೆ?''

''ನೀವು ಬೆಂಗಳೂರಿನ ಶಾಲೆಯಲ್ಲಿ ಕಂಡ ಅಮ್ಮ ಅವರು; ಅವರೇ ಲೋಕಾಂಬಾ. ಅವರು ಗಿರಿಧಾಮದ ಅನಾಥಾಶ್ರಮದ ಶಾಲೆಗೆ ಅವರ ಜೀವಿತವನ್ನೇ ಮುಡುಪಾಗಿಟ್ಟಿರುವ ಸಂಕಲ್ಪ ಮಾಡಿರುತ್ತಾರೆಂಬ ವದಂತಿ ಅಕ್ಷರಶಃ ಪ್ರತ್ಯಕ್ಷವಾಯಿತು.''

''ಅವರನ್ನು ಹೋಗಿ ನಮಸ್ಕರಿಸಲೆ?'' ಎಂದು ಹೇಳುತ್ತಿರುವಾಗಲೇ ಅವರ ಕಾಲುಗಳು ಅತ್ತ ಸಾಗಿದವು. ಎಲ್ಲರೂ ನೋಡುತ್ತಿರುವಂತೆ ಆ ವೃದ್ಧ ಮಾತೆ ಮುಂದೆ ಹೋಗಿ, ''ನನ್ನ ಪುಟ್ಟ ತಾಯಿ, ಸರ್ವಾಪರಾಧವಾಯಿತು. ಪಾಪದಿಂದ ವಿಮುಕ್ತಿಗೊಳಿಸು,'' ಎಂದು ಆಕೆಯ ಪಾದಗಳನ್ನು ಮುಟ್ಟಿದರು.

''ಇಲ್ಲಿ ಯಾರು ಯಾರಿಗೆ ಮಾಡಿದ ಪ್ರಣಾಮಗಳೆಲ್ಲ ಬಾಬಾಜಿಯವರಿಗೇ ಸಮರ್ಪಣೆಯಾದೀತು; ಇಲ್ಲಿ ಅವರಿಗಿಂತ ಪವಿತ್ರರೂ ಪೂಜ್ಯರೂ ಯಾರೂ ಇಲ್ಲ,'' ಎಂದರು ಲೋಕಾಂಬಾ.

ಬಾಬಾಜಿಯವರ ಸನ್ನಿಧಿಯಲ್ಲಿ ಅವರು ನಿಂತು ಸುತ್ತಲೂ ನೋಡಿದರು. ಅವರ ಆ ನೋಟದಲ್ಲಿ ಶೂನ್ಯತೆ ಇತ್ತು. ಎಲ್ಲ ಭಾವನೆಗಳೂ ನಿರ್ಮೂಲವಾಗಿದ್ದವು. ಉಪೇಂದ್ರ ಕೈ ಕಟ್ಟಿಕೊಂಡು ನಿಂತಿದ್ದ. ಸುಮನಾ, ಅವರಿಗೂ ಬಾಬಾಜಿಯವರಿಗೂ ವಂದಿಸಿದಳು. ಲೋಕಾಂಬಾ ಆಕೆಯ ಮೇಲೆ ಅನುಗ್ರಹದ ದೃಷ್ಟಿ ಬೀರಿದಳು.

ಇದೇ ಅಲ್ಲವೇ ಪ್ರೀತಿಯ ಪ್ರಸಾದ?

Printed and Published by V.G.VAIDYA on behalf of Loka Shikshana Trust at "Samyukta Karnataka Press", Koppikar Road Hubli-580020. Phone:64303 - No. 2 Residency Road, Bangalore - 560025, Phone:213265 Managing Editor: K.SHAMA RAO, Representatives: Bombay - V.Satyamurthy, Phone: 5510592, Madras: S.K.Murthi, Phone: 414870, New Delhi: V.K.Chopra, Phone: 7114785

Registered with the Registrar of Newspapers for India under No. 35/3957.

